ಭಾನುವಾರ, ಡಿಸೆಂಬರ್ 17, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 347 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ದೊಡ್ಡ ಮನೆಯಿಂದ ಬೆಚ್ಚಗಿನ ಚಿಕ್ಕ ಅಪಾರ್ಟ್‌ಮೆಂಟ್‌ಗೆ 'ಡೌನ್‌ಸೈಜಿಂಗ್' ಮಾಡತೊಡಗಿದ್ದಾರೆ ಹಿರಿಯರು.



ಸಂಸದರ ಅಮಾನತು: ಸ್ಪೀಕರ್ ಸಮರ್ಥನೆ 9
ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್
ಎಥೆನಾಲ್: ಕಬ್ಬಿನ ಹಾಲು ಬಳಕೆಗೆ ಕೇಂದ್ರ ಒಪ್ಪಿಗೆ 14
ಕೋವಿಡ್: ಆಸ್ಪತ್ರೆಗಳಲ್ಲಿ ಸನ್ನದ್ಧತೆ 7

ಒಳ ಪುಟಗಳು

ಮಗಳ ನೆನಪು: ಮೇಣದ ಪ್ರತಿಮೆ ನಿರ್ಮಾಣ 8

ಗಾಜಾ: ಇಂಟರ್‌ನೆಟ್, ಮೊಬೈಲ್ ಸಂಪರ್ಕ ನಿರ್ಬಂಧ 15

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶೈಶವಾವಸ್ಥೆಯಲ್ಲಿ ಶೈತ್ಯಾಗಾರ

• ಗಾಣಧಾಳು ಶ್ರೀಕಂಠ

ಬೆಂಗಳೂರು: ವಿಜಯಪುರದಲ್ಲಿ ವಾರ್ಷಿಕ ಅಂದಾಜು ಒಂದೂವರೆ ಲಕ್ಷ ಟನ್ ಒಣದ್ರಾಕ್ಷಿ ಉತ್ಪಾದನೆಯಾಗುತ್ತದೆ. ಆದರೆ ಸೂಕ್ತ ಮಾರುಕಟ್ಟೆಯಿಲ್ಲ, ದೀರ್ಘಕಾಲ ಇಟ್ಟು ಮಾರಾಟ ಮಾಡಲು ಅಗತ್ಯ ಕೋಲ್ಡ್‌ಸ್ಟೋರೇಜ್ ಇಲ್ಲದೆ, ಬೆಳೆಗಾರರು 60 ಕಿ.ಮೀ. ದೂರದ ಮಹಾರಾಷ್ಟ್ರಕ್ಕೆ ಸೇರಿದ ಸಾಂಗ್ಲಿ– ತಾಸ್‌ಗಾವ್‌ನಲ್ಲಿರುವ ಕೋಲ್ಡ್ ಸ್ಟೋರೇಜ್‌ಗಳಲ್ಲಿ ದ್ರಾಕ್ಷಿ ರಕ್ಷಿಸಿಟ್ಟು ಯೋಗ್ಯ ಬೆಲೆ ಸಿಕ್ಕಾಗ ಮಾರಾಟ ಮಾಡುತ್ತಾರೆ!

ತುಮಕೂರು ಸುತ್ತಮುತ್ತಲಿನ ಹಳ್ಳಿಗಳಲ್ಲಿ ನೂರಾರು ಎಕರೆಯಲ್ಲಿ ಹುಣಸೆ ಮರಗಳಿವೆ. ಪ್ರತಿ ವರ್ಷ ಟನ್‌ಗಟ್ಟಲೆ ಹಣ್ಣು ಉತ್ಪಾದನೆಯಾಗುತ್ತದೆ. ಬೆಲೆಯ ಏರಿಳಿತ ಕಾಯಂ. ದೀರ್ಘಕಾಲ ಕಾಪಿಟ್ಟು ಮಾರಾಟ ಮಾಡಲು ಕೋಲ್ಡ್‌ಸ್ಟೋರೇಜ್‌ಗಳ ವ್ಯವಸ್ಥೆ ಸಮರ್ಪಕವಾಗಿಲ್ಲ. ಅದಕ್ಕಾಗಿ ರೈತರು ಮತ್ತು ವರ್ತಕರು ಇಲ್ಲಿ ಬೆಳೆದ ಹುಣಸೆಹಣ್ಣನ್ನು ಪಕ್ಕದ ಆಂಧ್ರ ಪ್ರದೇಶದ ಹಿಂದೂಪುರದಲ್ಲಿರುವ ಕೋಲ್ಡ್‌ಸ್ಟೋರೇಜ್‌ಗಳಲ್ಲಿ ಇಟ್ಟು, ಒಳ್ಳೆಯ ಬೆಲೆ ಬಂದ ಮೇಲೆ ಅಲ್ಲೇ ಮಾರಾಟ ಮಾಡಿ, ತಮಗೆ ಬೇಕಾದ ಕೃಷಿ ಪರಿಕರಗಳನ್ನು ಅಲ್ಲಿಂದಲೇ ಖರೀದಿಸಿಕೊಂಡು ಬರುತ್ತಾರೆ. ಕೆ.ಜಿಗೆ ಇಂತಿಷ್ಟು ಬಾಡಿಗೆ ಕಟ್ಟುತ್ತಾರೆ. ಅಲ್ಲಿ 20ಕ್ಕೂ ಹೆಚ್ಚು ಕೋಲ್ಡ್ ಸ್ಟೋರೇಜ್‌ಗಳಿವೆ.

ರಾಜ್ಯದಲ್ಲಿ ಶೀತಲಗೃಹಗಳ (ಕೋಲ್ಡ್ ಸ್ಟೋರೇಜ್/ಶೈತ್ಯಾಗಾರ) ಕೊರತೆಯಿಂದ ಎದುರಾಗುವ ಸ್ಥಿತಿಗತಿಯನ್ನು ಈ ಎರಡು ಘಟನೆಗಳು ತೆರೆದಿಡುತ್ತವೆ.

ಸರ್ಕಾರಿ, ಸಾರ್ವಜನಿಕ ಖಾಸಗಿ ಸಹಭಾಗಿತ್ವ, ಖಾಸಗಿ ಕಂಪನಿಗಳು ಹಾಗೂ ರಾಷ್ಟ್ರೀಯ ತೋಟಗಾರಿಕಾ ಮಿಷನ್ ಸಹಾಯಧನದ ನೆರವಿನೊಂದಿಗೆ ಕಾರ್ಯನಿರ್ವಹಿಸುತ್ತಿರುವ ನೂರಾರು ಕೋಲ್ಡ್ ಸ್ಟೋರೇಜ್‌ಗಳು ರಾಜ್ಯದಲ್ಲಿವೆ. ಆದರೆ ಇವುಗಳ ಸಂಖ್ಯೆ ಬೆಳೆ ಉತ್ಪಾದನೆ ಪ್ರಮಾಣಕ್ಕೆ ತಕ್ಕಂತೆ ಇಲ್ಲ. ಈ ಶೀತಲ ಗೃಹಗಳ ಬಳಕೆ ಬಗ್ಗೆ ಬಳಕೆದಾರರಲ್ಲಿ (ರೈತರಲ್ಲಿ) ಜಾಗೃತಿಯೂ ಮೂಡಿಲ್ಲ. ಕೋಲ್ಡ್ ಸ್ಟೋರೇಜ್ ಸ್ಥಾಪನೆಗೆ ತೋಟಗಾರಿಕೆ, ಕೃಷಿ ಇಲಾಖೆಯಲ್ಲಿ (ಕೇಂದ್ರ/ರಾಜ್ಯ ಸರ್ಕಾರದ) ಯೋಜನೆಗಳಿವೆ.

ಒಳನೋಟ

6-8 ಡಿಗ್ರಿ ಸೆಂ. ಉಷ್ಣತೆಯಲ್ಲಿ ಒಣ ಮೆಣಸಿನಕಾಯಿ, ಒಣ ಶುಂಠಿ, ಅರಿಶಿಣ, ಹುಣಸೆಹಣ್ಣು, ಹೆಸರು, ಅಲಸಂದಿ, ಗೋವಿನಜೋಳ ಸಂಗ್ರಹಿಸಲು ಕೋಲ್ಡ್ ಸ್ಟೋರೇಜ್‌ಗಳಲ್ಲಿ ಅವಕಾಶವಿದೆ.
ವಿ.ಎಸ್. ಮೋರಿಗೇರಿ, ಗೌರವ ಕಾರ್ಯದರ್ಶಿ, ವರ್ತಕರ ಸಂಘ ಬ್ಯಾಡಗಿ

6ನೇ ಪುಟ ನೋಡಿ

ಒಣ ದ್ರಾಕ್ಷಿಯನ್ನು ಕೋಲ್ಡ್‌ಸ್ಟೋರೇಜ್ ಒಳಗೆ ಬಾಕ್ಸ್‌ಗಳಲ್ಲಿಟ್ಟು ಜೋಡಿಸಿರುವುದು

'ಸೌರ' ಆಧಾರಿತ ಕೋಲ್ಡ್‌ಸ್ಟೋರೇಜ್

ತೆಲಂಗಾಣ, ಒಡಿಶಾ, ಮಹಾರಾಷ್ಟ್ರ ರಾಜ್ಯಗಳಲ್ಲಿ, ಅಲ್ಲಿನ ಸರ್ಕಾರಗಳು 'ಸೌರ ಆಧಾರಿತ' ಕೋಲ್ಡ್ ಸ್ಟೋರೇಜ್ ಅಳವಡಿಕೆಯನ್ನು ಪ್ರೋತ್ಸಾಹಿಸುತ್ತಿವೆ. ಇನ್ನೊಂದೆಡೆ ಕರ್ನಾಟಕ ಸೇರಿದಂತೆ ಬೇರೆ ಬೇರೆ ರಾಜ್ಯಗಳ ರೈತ ಉತ್ಪಾದಕ ಸಂಸ್ಥೆ/ಕಂಪನಿಗಳೂ (ಎಫ್‌ಪಿಒ/ಎಫ್‌ಪಿಸಿ) ಸಣ್ಣ ಗಾತ್ರದ ಸೌರಶಕ್ತಿ ಮತ್ತು ವಿದ್ಯುತ್ ಆಧಾರಿತ ಕೋಲ್ಡ್‌ಸ್ಟೋರೇಜ್ ಅಳವಡಿಸಿಕೊಂಡಿವೆ. ಬೆಂಗಳೂರಿನ ಸೆಲ್ಕೊ ಸಂಸ್ಥೆ, ಇಂಥ ಕೋಲ್ಡ್‌ಸ್ಟೋರೇಜ್‌ಗಳ ಅನುಷ್ಠಾನಕ್ಕೆ ತಾಂತ್ರಿಕ ಹಾಗೂ ಆರ್ಥಿಕ ಬೆಂಬಲ ನೀಡುತ್ತಿದೆ. ಸೆಲ್ಕೊ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನ ಸಹಜ ಆರ್ಗ್ಯಾನಿಕ್ಸ್ – ರೈತ ಉತ್ಪಾದಕ ಕಂಪನಿ, ತನ್ನ ಕಚೇರಿಯ ಆವರಣದಲ್ಲಿ ಸುಮಾರು ₹ 25 ಲಕ್ಷ ವೆಚ್ಚದ, 10 ಟನ್ ಸಾಮರ್ಥ್ಯದ ಮೂರು ಕೋಣೆಗಳ ಕೋಲ್ಡ್‌ಸ್ಟೋರೇಜ್ ಅಳವಡಿಸಿದೆ. 'ಒಂದೊಂದು ಉತ್ಪನ್ನಕ್ಕೆ ಒಂದೊಂದು ತಾಪಮಾನ ಅಗತ್ಯ. ಅದಕ್ಕೆ ಮೂರು ಕೋಣೆಗಳನ್ನು ಮಾಡಿಸಿದ್ದೇವೆ. 6 ಡಿಗ್ರಿಯಲ್ಲಿ ಆಲೂಗೆಡ್ಡೆ, 8 ರಿಂದ 12 ಡಿಗ್ರಿಯಲ್ಲಿ ಧಾನ್ಯಗಳನ್ನು ಇಡುತ್ತೇವೆ. ಸೀಸನ್‌ನಲ್ಲಿ ಆಲೂಗೆಡ್ಡೆ ಖರೀದಿಸಿ, ಆರು ತಿಂಗಳವರೆಗೂ ಇಡುತ್ತೇವೆ. ಹುಳು ಬಾಧೆ ತಡೆಯಲು ಧಾನ್ಯ, ಹುಣಸೆಹಣ್ಣು ಇಡುತ್ತೇವೆ. ತರಕಾರಿ ಇಟ್ಟು ಬಳಸುವುದು ಕಷ್ಟ' ಎನ್ನುತ್ತಾರೆ ಕಂಪನಿಯ ಸಿಇಒ ಸೋಮೇಶ್.

6ನೇ ಪುಟ ನೋಡಿ

ಹೊಸ ವಂಟಮೂರಿ ಪ್ರಕರಣ: ಹೈಕೋರ್ಟ್ ಆದೇಶ

ಸಂತ್ರಸ್ತೆಯ ಭೇಟಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿ ಜಿಲ್ಲೆಯ ಹೊಸ ವಂಟಮೂರಿ ಗ್ರಾಮದಲ್ಲಿ ಥಳಿತಕ್ಕೆ ಒಳಗಾದ ಸಂತ್ರಸ್ತೆಯನ್ನು ಸಂದರ್ಶಕರು ವಿನಾಕಾರಣ ಭೇಟಿ ಮಾಡಬಾರದು ಎಂದು ಹೈಕೋರ್ಟ್ ನಿರ್ಬಂಧ ವಿಧಿಸಿದೆ.



'ಯಾವುದೇ ವ್ಯಕ್ತಿ, ಗುಂಪುಗಳು, ಸಂಘಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸಂತ್ರಸ್ತೆಯನ್ನು ಭೇಟಿ ಮಾಡಬಾರದು' ಎಂದು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಆದೇಶಿಸಿದೆ.

ಮುಖ್ಯಾಂಶಗಳು

- ಸಂತ್ರಸ್ತೆಯ ಭೇಟಿಗೆ ವೈದ್ಯಾಧಿಕಾರಿ ಲಿಖಿತ ಅನುಮತಿ ಬೇಕು
- ಚಿಕಿತ್ಸೆ ನೀಡುತ್ತಿರುವ ವೈದ್ಯರು ಕೂಡ ಲಿಖಿತ ಅನುಮತಿ ನೀಡಬಹುದು
- ಕುಟುಂಬ ಸದಸ್ಯರಿಗೆ ಕೂಡ ಅಗತ್ಯ ಇದ್ದರಷ್ಟೇ ಭೇಟಿಗೆ ಅವಕಾಶ

ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣವನ್ನು ಹೈಕೋರ್ಟ್ ಈಗಾಗಲೇ ದಾಖಲಿಸಿಕೊಂಡಿದೆ. ಇಂಗ್ಲಿಷ್ ಸುದ್ದಿ ವಾಹಿನಿಯೊಂದರಲ್ಲಿ ಈ ಪ್ರಕರಣ ಕುರಿತಂಥೆ ಶನಿವಾರ ಪ್ರಸಾರವಾದ ಸನ್ನಿವೇಶವನ್ನು ವೀಕ್ಷಿಸಿದ ಬೆನ್ನಲ್ಲೇ ಪ್ರಕರಣದ ತುರ್ತು ವಿಚಾರಣೆಯನ್ನು ತನ್ನ ಚೇಂಬರ್‌ನಲ್ಲಿ ನಡೆಸಿತು.

ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

8ನೇ ಪುಟ ನೋಡಿ

ಮಲದ ಗುಂಡಿಗೆ ಮಕ್ಕಳ ಇಳಿಸಿ ಸ್ವಚ್ಛತೆ

ಮಾಲೂರು: ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಘಟನೆ

• ಕೆ.ಓಂಕಾರ ಮೂರ್ತಿ

ಕೋಲಾರ: ಜಿಲ್ಲೆಯ ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳನ್ನು ಮಲದ ಗುಂಡಿಯೊಳಗೆ ಇಳಿಸಿ ಸ್ವಚ್ಛಗೊಳಿಸಲಾಗಿದೆ. ಗುಂಡಿಗೆ ಇಳಿಸಿದ ಎಲ್ಲಾ ಮಕ್ಕಳೂ ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಎಂದು ತಿಳಿದು ಬಂದಿದೆ.

'ಅದು ಮಲದ ಗುಂಡಿ ಅಲ್ಲ; ಸ್ವಚ್ಛತಾ ಆಂದೋಲನ ಅಂಗವಾಗಿ ಚೇಂಬರ್ ಒಳಗೆ ಇಳಿಸಿ ಸ್ವಚ್ಛಗೊಳಿಸಲಾಗಿದೆ' ಎಂದು ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ.

8ನೇ ಪುಟ ನೋಡಿ

ಮಾಲೂರು ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳಿಂದ ಮಲದ ಗುಂಡಿ ಸ್ವಚ್ಛಗೊಳಿಸಿದ ದೃಶ್ಯ

ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆ (ರಿ), ಟಮಕ, ಕೋಲಾರ

2ನೇ ವರ್ಷದ ಪುಣ್ಯಸ್ಮರಣೆ

ನಾಡು ಕಂಡ ಮುತ್ಸದ್ಧಿ ರಾಜಕಾರಣಿ,
ಶ್ರೀ ದೇವರಾಜ್ ಅರಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು
ಹಾಗೂ ಮಾಜಿ ಕೇಂದ್ರ ಮತ್ತು ರಾಜ್ಯ ಸಚಿವರಾದ
ಶ್ರೀ ಆರ್.ಎಲ್.ಜಾಲಪ್ಪ ಅವರ ಪುಣ್ಯಸ್ಮರಣೆಯ ದಿನದಂದು
ಅವರಿಗೆ ನಮ್ಮ ಗೌರವ ನಮನ

ನಿಮ್ಮ ವಸ್ತುನಿಷ್ಠ ಆಲೋಚನೆ, ಸಾಮಾಜಿಕ ಕಾಳಜಿ, ಮಾನವೀಯ ಅಂತಃಕರಣ ಹಾಗೂ ಅನನ್ಯ ಮಾರ್ಗದರ್ಶನಗಳೇ ನಮಗೆ ಸ್ಫೂರ್ತಿ, ನಿಮ್ಮ ಗುಣಾತ್ಮಕ ಚಿಂತನೆಗಳ ಸಾಕಾರ ನಮ್ಮ ಗುರಿ

ನೆನಪಿನ ನುಡಿನಮನ

ಶ್ರೀ ಜಿ.ಎಚ್.ನಾಗರಾಜ	ಶ್ರೀ ಜೆ.ರಾಜೇಂದ್ರ	ಶ್ರೀ ಕೆ.ಜಿ.ಹನುಮಂತರಾಜು
ಅಧ್ಯಕ್ಷರು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)	ಉಪಾಧ್ಯಕ್ಷರು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)	ಕಾರ್ಯದರ್ಶಿ, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ)

ಎಲ್ಲಾ ಟ್ರಸ್ಟಿಗಳು, ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ (ರಿ.), ಟಮಕ, ಕೋಲಾರ.
ಮತ್ತು ಎಲ್ಲಾ ಶೈಕ್ಷಣಿಕ ಘಟಕಗಳ ಮುಖ್ಯಸ್ಥರು, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು

ಶ್ರೀ ದೇವರಾಜ್ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಕೋಲಾರ
ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು ಕ್ಯಾಂಪಸ್, ಕೋಲಾರ
ಶ್ರೀ ಆರ್.ಎಲ್.ಜಾಲಪ್ಪ ಸಮೂಹ ಶಿಕ್ಷಣ ಸಂಸ್ಥೆಗಳು, ದೊಡ್ಡಬಳ್ಳಾಪುರ.

ಶ್ರೀ ಆರ್.ಎಲ್.ಜಾಲಪ್ಪ
19-10-1925 17-12-2021

ಥ್ರಿಲ್ಲಿಂಗ್ ರೈಡ್ಸ್ । ಲೈವ್ ಷೋಗಳು । ಫನ್ ಗೇಮ್ಸ್
ಫುಡ್ ಫೆಸ್ಟ್ । ಡಿ ಜೆ ಮತ್ತು ಇನ್ನಷ್ಟು

ಜನ್ಮದಿನದ ಕೊಡುಗೆ

1+1*

ವಂಡರ್ಲಾದಲ್ಲಿ ನಿಮ್ಮ ಜನ್ಮದಿನವನ್ನು ಆಚರಿಸಿ ಮತ್ತು ನಿಮ್ಮ ಜನ್ಮದಿನದಂದು FREE ಟಿಕೆಟ್ ಪಡೆಯಿರಿ

ವಿದ್ಯಾರ್ಥಿಗಳ ಐಡಿ ಆಫರ್

20%* OFF

ನಿಮ್ಮ ಅಸಲಿ ವಿದ್ಯಾರ್ಥಿಗಳ ಐಡಿ ತೋರಿಸಿ 20% ವರೆಗೂ ರಿಯಾಯಿತಿ ಪಡೆಯಿರಿ
(between the ages of 16 - 24 yrs.)

ಆನ್‌ಲೈನ್ ಬುಕಿಂಗ್ ಕೊಡುಗೆ

10%* OFF

ಆನ್‌ಲೈನ್‌ನಲ್ಲಿ 3 ದಿನಗಳ ಮೊದಲು ಬುಕ್ ಮಾಡಿ, 10% ರಿಯಾಯಿತಿ ಪಡೆಯಿರಿ

TO BOOK, SCAN THE QR CODE

COME TO WONDERLA AND EXPERIENCE THE MAGIC OF FUN LIKE NEVER BEFORE!

080 37230333 / 99455 57777 www.wonderla.com

For group bookings & offers, call: • Bengaluru: 91487 04747 | 97401 85334 | 90356 71855 98800 60224 | 88613 33959 | 70220 41127 | 95911 24268 • Hassan: 96060 36823 • Kolar & Tumkur: 88613 33959 • Hosur & Krishnagiri: 94884 39624

ವಂಡರ್ಲಾ ರೆಸಾರ್ಟ್ ಬೆಂಗಳೂರಿನಲ್ಲಿ ತಂಗುವ ಮೂಲಕ,
ನೀವು ವಂಡರ್ಲಾ ಬೆಂಗಳೂರು ಪಾರ್ಕ್‌ಗೆ 2 ಉಚಿತ ಟಿಕೆಟ್‌ಗಳನ್ನು ಸ್ವೀಕರಿಸುತ್ತೀರಿ.

ಎಕೊ, ಎಕ್ಸ್–ರೇ ಸೇರಿ ವಿವಿಧ ಪರೀಕ್ಷೆಗಳು ಉಚಿತ

ಸಂಚಾರಿ ಆರೋಗ್ಯ ಕೇಂದ್ರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶ ಹಾಗೂ ಕೊಳೆಗೇರಿ ಪ್ರದೇಶದ ಜನರ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆಗೆ ಆರೋಗ್ಯ ಇಲಾಖೆ ರೂಪಿಸಿರುವ ಸಂಚಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಶನಿವಾರ ಚಾಲನೆ ದೊರೆಯಿತು.

ಈ ಮೊಬೈಲ್ ವಾಹನವು ರಾಜ್ಯದಾದ್ಯಂತ ಸಂಚರಿಸಿ, ವೈದ್ಯಕೀಯ ಸೇವೆ ನೀಡಲಿದೆ. ₹ 2 ಕೋಟಿ ಮೌಲ್ಯದ ವಾಹನವನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ವೋಲ್ವೊ ಕಂಪನಿ ಇಲಾಖೆಗೆ ನೀಡಿದೆ. ಇದರ ವಾರ್ಷಿಕ ನಿರ್ವಹಣೆಗೆ ತಗಲುವ ಅಂದಾಜು ₹ 70 ಲಕ್ಷ ವೆಚ್ಚವನ್ನು ಕಂಪನಿಯೇ ಭರಿಸಲಿದೆ. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ನಾರಾಯಣ ಹೆಲ್ತ್ ಒದಗಿಸಲಿದೆ.

ಚಾಲನೆ ನೀಡಲಾದ ಸಂಚಾರಿ ಸಮುದಾಯ ಆರೋಗ್ಯ ಕೇಂದ್ರ –ಪ್ರಜಾವಾಣಿ ಚಿತ್ರ

ಸಂಚಾರಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಾಲನೆ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಈ ಮೊಬೈಲ್ ವಾಹನ 42 ಅಡಿ ಉದ್ದವಿದೆ. ಇದರಲ್ಲಿ ಉಚಿತವಾಗಿ ವಿವಿಧ ತಪಾಸಣೆ ನಡೆಸಿ, ಚಿಕಿತ್ಸೆ ಒದಗಿಸಲಾಗುತ್ತದೆ. ಕೇಂದ್ರದಲ್ಲಿ ನಡೆಸಲಾಗುವ ಎಕ್ಸ್–ರೇ, ಇಸಿಜಿ ವಿವಿಧ ಪರೀಕ್ಷೆಗಳ ವರದಿಯನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ನಾರಾಯಣ ಹೆಲ್ತ್‌ನ ತಜ್ಞ ವೈದ್ಯರು ಪರಿಶೀಲಿಸಿ, ಅಗತ್ಯ ಸಲಹೆ ಸೂಚನೆ ನೀಡುತ್ತಾರೆ. ಈ ಕೇಂದ್ರದ ನೆರವಿನಿಂದ ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲು ಸಾಧ್ಯ' ಎಂದು ಹೇಳಿದರು.

ಲಭ್ಯ ಸೌಲಭ್ಯಗಳು

- ಎಕೊ
- ಎಕ್ಸ್–ರೇ ಅಲ್ಟ್ರಾಸೌಂಡ್
- ಮ್ಯಾಮೋಗ್ರಾಮ್
- ವೈದ್ಯರ ಸಮಾಲೋಚನೆ
- ವೈದ್ಯಕೀಯ ಚಿಕಿತ್ಸೆ
- ಕ್ಯಾನ್ಸರ್ ತಪಾಸಣೆ
- ಹೃದಯ ಸಂಬಂಧಿ ಕಾಯಿಲೆ ಪತ್ತೆಗೆ ತಪಾಸಣೆ

ಇನ್ನಷ್ಟು ಕೇಂದ್ರ: 'ಈ ಕೇಂದ್ರವು ನಿಗದಿತ ದಿನಾಂಕಗಳಂದು ಸೇವೆ ನೀಡಲಿದೆ. ಸಂಪೂರ್ಣ ಹವಾನಿಯಂತ್ರಿತವಾಗಿದ್ದು, ಇಂಟರ್ನೆಟ್ ಸೌಲಭ್ಯ ಹೊಂದಿದೆ. ರಕ್ತ ಹಾಗೂ ವಿವಿಧ ಪರೀಕ್ಷೆಗಳ ಪ್ರಯೋಗಾಲಯವು ಇರಲಿದೆ. ರಾಸಾಯನಿಕ ಶೌಚಾಲಯ ಸೇರಿ ಹಲವು ವ್ಯವಸ್ಥೆಯಿದೆ. ಕ್ಯಾನ್ಸರ್ ಹಾಗೂ ಹೃದಯ ಸಂಬಂಧಿ ಸಮಸ್ಯೆ ಪತ್ತೆಗೆ ಆದ್ಯತೆ ನೀಡಲಾಗುತ್ತದೆ. ಈ ಕೇಂದ್ರ ಯಶಸ್ವಿಯಾದರೆ ಇನ್ನಷ್ಟು ಕೇಂದ್ರಗಳನ್ನು ಪ್ರಾರಂಭಿಸಲಾಗುವುದು' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ, 'ತಡವಾಗಿ ರೋಗ ಪತ್ತೆಯಾದಲ್ಲಿ ಚಿಕಿತ್ಸೆ ಫಲಕಾರಿಯಾಗುವುದು ಕಷ್ಟ. ಆದ್ದರಿಂದ ಆರಂಭಿಕ ಹಂತದಲ್ಲಿಯೇ ರೋಗ ನಿರ್ಣಯ ಮಾಡಿ, ಚಿಕಿತ್ಸೆ ಒದಗಿಸಬೇಕು. ಸಂಚಾರಿ ಚಿಕಿತ್ಸಾ ಕೇಂದ್ರವು ಆರ್ಥಿಕವಾಗಿ ದುರ್ಬಲರಾಗಿರುವವರಿಗೆ ಚಿಕಿತ್ಸೆಗೆ ಸಹಕಾರಿಯಾಗಲಿದೆ. ಇದು ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಒಳಗೊಂಡಿದೆ' ಎಂದರು.

ವೋಲ್ವೊ ಸಮೂಹದ ಅಧ್ಯಕ್ಷ ಕಮಲ್ ಬಾಲಿ, 'ಗ್ರಾಮೀಣ ಪ್ರದೇಶದ ಜನರಿಗೆ ಇದ್ದಲ್ಲಿಯೇ ಆರೋಗ್ಯ ತಪಾಸಣೆಗೆ ಈ ಕೇಂದ್ರ ಸಹಕಾರಿಯಾಗಲಿದೆ' ಎಂದು ಅವರು ತಿಳಿಸಿದರು.

'ರಾಜಕೀಯ ವಾತಾವರಣ ಪೂರಕವಾಗಿಲ್ಲ'

ರಾಜಕೀಯ ಪ್ರವೇಶದ ಬಗ್ಗೆ ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪ್ರವೇಶದ ಅಭಿಲಾಷೆ ಇದ್ದರೂ ವಾತಾವರಣ ಅದಕ್ಕೆ ಪೂರಕವಾಗಿಲ್ಲ. ಸದಾ ಜನಸಂಪರ್ಕವನ್ನು ಇಟ್ಟುಕೊಂಡು ಸಮಾಜಕ್ಕೆ ಒಳಿತನ್ನು ಮಾಡುವ ಪ್ರಯತ್ನವನ್ನು ಮಾಡುತ್ತಿದ್ದೇನೆ' ಎಂದು ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನಗರದಲ್ಲಿ ಶನಿವಾರ ಹಮ್ಮಿಕೊಂಡ 'ಕನ್ನಡದ ಧ್ರುವತಾರೆ' ಸಾಧಕರೊಂದಿಗೆ ಮಾತು–ಕತೆ ಕಾರ್ಯಕ್ರಮದಲ್ಲಿ ತಮ್ಮ ಮನದಾಳವನ್ನು ಹಂಚಿಕೊಂಡರು.

'ಸಾಮಾಜಿಕ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಗೆ ಬರಲು ಸಮಾಜ ಜಾಗೃತವಾಗಬೇಕು. ಬದಲಾವಣೆಯು ಹೆದರಿಕೆ ಬೆದರಿಕೆಯಿಂದ ಆಗುವುದಿಲ್ಲ.

ಕಾರ್ಯಕ್ರಮದಲ್ಲಿ ಶಂಕರ ಬಿದರಿ ಮಾತನಾಡಿದರು. ಮಹೇಶ ಜೋಶಿ ಭಾಗವಹಿಸಿದ್ದಾರೆ

ಬದಲಾಗಿ, ದಾರ್ಶನಿಕರಿಂದ ಆಗುತ್ತದೆ. ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರವನ್ನು ಸಮಷ್ಟಿಯಾಗಿ ಗ್ರಹಿಸಬೇಕು. ನಾನು ಎಂದಿಗೂ ರಾಜಕಾರಣಿಗಳ ಋಣದಲ್ಲಿ ಇರಲಿಲ್ಲ' ಎಂದು ಹೇಳಿದರು.

ವೀರಪ್ಪನ್ ಪ್ರಕರಣದ ಬಗ್ಗೆ ವಿವರಿಸಿದ ಅವರು, ಗಂಧದ ಕಳ್ಳನಾದ ಆತ ದಂತ ಕಳ್ಳನಾಗಿ ಹಾಗೂ ಅಪಹರಣಕಾರನಾಗಿ ಬೆಳೆದ ಪರಿಯನ್ನು ತಿಳಿಸಿದರು. 200ರಷ್ಟಿದ್ದ ವೀರಪ್ಪನ್ ತಂಡ, ಐದಕ್ಕೆ ಇಳಿಸಿದ ಪರಿಯನ್ನು ಹಂಚಿಕೊಂಡರು.

ಕಸಾಪ ಅಧ್ಯಕ್ಷ ಮಹೇಶ ಜೋಶಿ, 'ಬುದ್ಧಿ ಬಲ ಮತ್ತು ದೈವ ಬಲದಿಂದ ಶಂಕರ ಬಿದರಿಯವರು ಮಹತ್ವದ ಸಾಧನೆಯನ್ನು ಮಾಡಿದ್ದಾರೆ. ಸರಳತೆ ಮತ್ತು ದಕ್ಷತೆಗೆ ಹೆಸರಾಗಿದ್ದ ಅವರು, ಜೀವನದಲ್ಲಿ ಎದುರಾದ ಸವಾಲುಗಳನ್ನು ಮೆಟ್ಟಿನಿಂತು ಮಾದರಿಯಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು ಹಾಗೂ ಕೋಶಾಧ್ಯಕ್ಷ ಪಟೇಲ್ ಪಾಂಡು ಇದ್ದರು.

ನಿಮ್ಹಾನ್ಸ್: ನಾಳೆ 'ನಮನ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಮಟ್ಟದಲ್ಲಿ ಸರ್ವಾಂಗೀಣ ಮಾನಸಿಕ ಆರೋಗ್ಯ ವೃದ್ಧಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಮ್ಮಿಕೊಂಡಿರುವ 'ನಮನ್' ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ಸಿಗಲಿದೆ.

ಹಸ್ತ ಟ್ರಸ್ಟ್ ಸಂಸ್ಥೆಯ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಪ್ರಾಯೋಗಿಕವಾಗಿ ದೇಶದ ಎರಡು ತಾಲ್ಲೂಕುಗಳಲ್ಲಿ ಕಾರ್ಯಕ್ರಮವನ್ನು ಜಾರಿ ಮಾಡಲಾಗುತ್ತಿದೆ. ಕರ್ನಾಟಕದ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಹಾಗೂ ಉತ್ತರಾಖಂಡದ ಪಿಥೋರಘರ್ ಜಿಲ್ಲೆಯ ಮುನ್ಸಿಯಾರಿ ತಾಲ್ಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಜನನದಿಂದ ಮರಣದವರೆಗೆ ಎಲ್ಲ ವಯೋಮಾನದವರ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಗಮನದಲ್ಲಿರಿಸಿಕೊಂಡು ಈ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಸಂಸ್ಥೆ ಹೇಳಿದೆ.

'ಈ ಕಾರ್ಯಕ್ರಮವು ಮೂರು ವರ್ಷಗಳಲ್ಲಿ ಸಂಪೂರ್ಣಗೊಳ್ಳಲಿದ್ದು, ಕರ್ನಾಟಕ ಹಾಗೂ ಉತ್ತರಾಖಂಡ ಸರ್ಕಾರದ ಆರೋಗ್ಯ ಇಲಾಖೆಯ ಸಹಕಾರ ಪಡೆದುಕೊಳ್ಳಲಾಗಿದೆ. ಮಾನಸಿಕ ಅನಾರೋಗ್ಯ ಸಮಸ್ಯೆಗಳ ಕುರಿತು ಜಾಗೃತಿ, ಚಿಕಿತ್ಸೆ ಹಾಗೂ ಪುನರ್ವಸತಿಗೆ ಈ ಕಾರ್ಯಕ್ರಮದಲ್ಲಿ ಆದ್ಯತೆ ನೀಡಲಾಗುತ್ತದೆ' ಎಂದು ಪ್ರಕಟಣೆ ತಿಳಿಸಿದೆ.

ಸಿದ್ಧಾಂತ ಆಧಾರದ ಪಠ್ಯಕ್ಕೆ ಬ್ರೇಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕೀಯ ಕಾರಣಗಳಿಗಾಗಿ ಯಾವುದೇ ಸಿದ್ಧಾಂತದ ಆಧಾರದಲ್ಲಿ ಪಾಠಗಳನ್ನು ಕಿತ್ತು ಹಾಕದೇ, ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚುವ, ನೈಜತೆಗೆ ಹತ್ತಿರವಾದ ಪಾಠಗಳನ್ನು ಬರೆಸಬೇಕು ಎಂದು ಮಂಜುನಾಥ ಜಿ. ಹೆಗಡೆ ಸಂಯೋಜಕರಾಗಿರುವ ರಾಜ್ಯ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಲಿದೆ.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಬದಲಾಯಿಸಿದ್ದ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳನ್ನು ಬದಲಾಯಿಸುವುದಾಗಿ ಕಾಂಗ್ರೆಸ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಪಠ್ಯ ಪರಿಷ್ಕರಿಸಲು ಇದೇ ವರ್ಷದ ಸೆ.26ರಂದು ಐದು ಸಮಿತಿಗಳನ್ನು ರಚಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿತ್ತು. ಐದೂ ಸಮಿತಿಗಳಿಗೆ ಮಂಜುನಾಥ ಜಿ. ಹೆಗಡೆ ಅವರನ್ನು ಸಂಯೋಜಕರನ್ನಾಗಿ ನೇಮಿಸಿತ್ತು. ಸಮಿತಿಯ ಬಹುತೇಕ ಕಾರ್ಯಪೂರ್ಣಗೊಂಡಿದ್ದು, ಜನವರಿ (2024) ಮೂರನೇ ವಾರದಲ್ಲೇ ಸಮಿತಿ ತನ್ನ ವರದಿಯನ್ನು ಸಲ್ಲಿಸಲಿದೆ ಎಂದು ಮೂಲಗಳು ಖಚಿತಪಡಿಸಿವೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ, ರೋಹಿತ್ ಚಕ್ರತೀರ್ಥ ಸಮಿತಿ ಮಾಡಿದ್ದ ಬದಲಾವಣೆಗಳಲ್ಲಿ ಬಹುಮುಖ್ಯವಾದವುಗಳನ್ನು ಕೈಬಿಟ್ಟು ಹಿಂದಿನ ಪಠ್ಯಕ್ರಮವನ್ನೇ ಬೋಧಿಸುವಂತೆ ಆದೇಶಿಸಿತ್ತು. ರದ್ದಾದ ವಿಷಯಗಳ ಬದಲಿಗೆ ಅನುಸರಿಸಲು ಸೂಚಿಸಿದ್ದ ಪಾಠಗಳನ್ನು ಪ್ರತ್ಯೇಕವಾಗಿ ಮುದ್ರಿಸಿ ಶಾಲೆಗಳಿಗೆ ಕಳುಹಿಸಿತ್ತು. ಆದರೆ, ಸಂಪೂರ್ಣ ಪರಿಷ್ಕರಣೆ ಮಾಡಿರಲಿಲ್ಲ. ಮೂಲಗಳ ಪ್ರಕಾರ, ಹೊಸ ಪಠ್ಯಪರಿಷ್ಕರಣಾ ಸಮಿತಿಯು ರೋಹಿತ್ ಚಕ್ರತೀರ್ಥ ಮಾರ್ಪಾಡಿಸಿದ ಕೆಲ ವಿಷಯಗಳನ್ನು ಉಳಿಸಿಕೊಂಡಿದೆ. ಆದರೆ, ವ್ಯಕ್ತಿ ವೈಭವೀಕರಣಕ್ಕೆ ಅವಕಾಶ ನೀಡಿಲ್ಲ.

'ಪರಿಷ್ಕರಣೆ ಎಂದರೆ ಆರ್‌ಎಸ್‌ಎಸ್ ಸಂಸ್ಥಾಪಕ ಕೆ.ಬಿ.ಹೆಡಗೇವಾರ್, ಮೈಸೂರು ಆಳಿದ ಟಿಪ್ಪು ಸುಲ್ತಾನ್ ಕುರಿತ ಪಾಠಗಳನ್ನು ಕೈಬಿಡುವುದಲ್ಲ. ಬಿಜೆಪಿ ಅವಧಿಯಲ್ಲೂ ಟಿಪ್ಪುಸುಲ್ತಾನರ ವೈಭವೀಕರಣವನ್ನು ತಡೆಯಲಾಗಿತ್ತು. ಅದೇ ಮಾದರಿಯನ್ನು ನಾವು ಹೊಸ ಪಠ್ಯಕ್ರಮದಲ್ಲಿ ಅಳವಡಿಸಲು ಶಿಫಾರಸು ಮಾಡುತ್ತಿದ್ದೇವೆ' ಎಂದು ಸಮಿತಿಯ ಪ್ರಮುಖರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಶಾಲಾ ಪಠ್ಯಪುಸ್ತಕಗಳನ್ನು ಪುನರ್ ಬರೆಸಬೇಕು ಎನ್ನುವುದು ಸಮಿತಿಯ ಪ್ರಮುಖ ಶಿಫಾರಸುಗಳಲ್ಲಿ ಒಂದು. ಅದನ್ನೇ ಪ್ರಧಾನವಾಗಿ ಅನುಸರಿಸಬೇಕು ಎಂದು ಸಮಿತಿ ಬಲವಾಗಿ ಪ್ರತಿಪಾದಿಸಿದೆ.

'ಈಗ ಬೋಧಿಸುತ್ತಿರುವ ಪಠ್ಯಪುಸ್ತಕಗಳು ಕನಿಷ್ಠ ಒಂದು ದಶಕದಷ್ಟು ಹಳೆಯವು, ಸರ್ಕಾರಗಳು ಬದಲಾದಾಗಲೆಲ್ಲ ಅದೇ ಪಾಠಗಳಿಗೆ ಒಂದಷ್ಟು ಸೇರಿಸುವ, ತೆಗೆದುಹಾಕುವ ಕೆಲಸ ಮಾಡಲಾಗುತ್ತಿದೆ. ಆದರೆ, ಪಠ್ಯಪುಸ್ತಕಗಳನ್ನು ತಕ್ಷಣವೇ ಮರು ಬರೆಸಲು ಕ್ರಮ ಕೈಗೊಳ್ಳಬೇಕು' ಎಂದು ಸಮಿತಿ ಶಿಫಾರಸು ಮಾಡುತ್ತಿದೆ.

ವಿಷ್ಣುವರ್ಧನ್ ಸ್ಮಾರಕ: 18ರಿಂದ ಅನಿರ್ದಿಷ್ಟಾವಧಿ ಧರಣಿ

ವಿಷ್ಣುವರ್ಧನ್

ಬೆಂಗಳೂರು: 'ಅಭಿಮಾನ್ ಸ್ಟುಡಿಯೋದಲ್ಲಿ ನಟ ವಿಷ್ಣುವರ್ಧನ್ ಸ್ಮಾರಕ ನಿರ್ಮಿಸಲು 10 ಗುಂಟೆ ಭೂಮಿ ನೀಡುವಂತೆ ಆಗ್ರಹಿಸಿ ಇದೇ 18ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು' ಎಂದು ಡಾ. ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್‌ನ ಅಧ್ಯಕ್ಷ ರಾಜುಗೌಡ, 'ಅಭಿಮಾನ್ ಸ್ಟುಡಿಯೋದಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕೆ 10 ಗುಂಟೆ ಭೂಮಿ ಒದಗಿಸುವಂತೆ ಈಗಾಗಲೇ ಹೈಕೋರ್ಟ್ ಹೇಳಿದೆ. ಆದರೆ, ರಾಜ್ಯ ಸರ್ಕಾರ ವಿಷ್ಣುವರ್ಧನ್ ಅವರ ಸಮಾಧಿ ವಿಷಯದಲ್ಲಿ ಅನ್ಯಾಯ ಮಾಡುತ್ತಲೇ ಬಂದಿವೆ. ಡಿ.30ರಂದು ವಿಷ್ಣುವರ್ಧನ್ ಅವರ ಪುಣ್ಯಸ್ಮರಣೆ ನಡೆಯಲಿದೆ. ಇದೇ ಸಂದರ್ಭದಲ್ಲಿ ಭೂಮಿ ವಿವಾದವನ್ನು ಇತ್ಯರ್ಥಪಡಿಸಬೇಕು' ಎಂದು ಆಗ್ರಹಿಸಿದರು.

'ವಿಷ್ಣುವರ್ಧನ್ ಸಮಾಧಿಯ ಭೂಮಿಗೆ ಸಂಬಂಧಿಸಿದ ಪ್ರಕರಣವನ್ನು 2023ರ ಆ. 21ರಂದು ಹೈಕೋರ್ಟ್ ವಜಾಗೊಳಿಸಿದೆ. ಆದ್ದರಿಂದ, ಸರ್ಕಾರ ಕೂಡಲೇ ಅಭಿಮಾನ್ ಸ್ಟುಡಿಯೋದ ಮಾಲೀಕರೊಂದಿಗೆ ಸಭೆ ನಡೆಸಿ ವಿಷ್ಣುವರ್ಧನ್ ಸಮಾಧಿಯ 10 ಗುಂಟೆ ಜಾಗದ ಪ್ರಕರಣವನ್ನು ಇತ್ಯರ್ಥಪಡಿಸಬೇಕು' ಎಂದು ಆಗ್ರಹಿಸಿದರು.

ಶ್ರೀಧರ್ ಮೂರ್ತಿ, ವಕೀಲರಾದ ಅರುಣ್ ಕುಮಾರ್, ಸಮಾಜ ಸೇವಕ ಬಿ.ವೈ. ರಮೇಶ್, ವಿಷ್ಣು ನಾರಾಯಣ್ ಕಟ್ಟೆ ಭಾಗವಹಿಸಿದ್ದರು.

'ಗ್ಯಾರಂಟಿ: 4.30 ಕೋಟಿ ಫಲಾನುಭವಿಗಳಿಗೆ ಲಾಭ'

ರಣದೀಪ್‌ಸಿಂಗ್ ಸುರ್ಜೇವಾಲ

ಬೆಂಗಳೂರು: ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಪಕ್ಷ ನೀಡಿದ್ದ ಐದು 'ಗ್ಯಾರಂಟಿ' ಯೋಜನೆ ಗಳ ಪೈಕಿ ನಾಲ್ಕು ಅನುಷ್ಠಾನಗೊಂಡಿದ್ದು, ಅದರಿಂದ 4.30 ಕೋಟಿ ಫಲಾನುಭವಿಗಳು ಲಾಭಪಡೆದುಕೊಂಡಿದ್ದಾರೆ. ಐದನೇ ಗ್ಯಾರಂಟಿ 'ಯುವನಿಧಿ'ಗೆ ಇದೇ ತಿಂಗಳು ನೋಂದಣಿ ಆರಂಭವಾಗಲಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದ್ದಾರೆ.

'ಯುವನಿಧಿ' ಯೋಜನೆಯಡಿ ನಿರುದ್ಯೋಗಿ ಪದವೀಧರರಿಗೆ ಮತ್ತು ಡಿಪ್ಲೊಮಾ ಪಡೆದವರಿಗೆ ಪ್ರೋತ್ಸಾಹ ಧನ ನೀಡಲಾಗುವುದು. ಸರ್ಕಾರ ವಾಗ್ದಾನ ನೀಡಿದಂತೆ ಯೋಜನೆಗಳನ್ನು ಜಾರಿಗೊಳಿಸಲಿದೆ' ಎಂದರು.

'ರಾಜ್ಯದ ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಸೌಲಭ್ಯದ 'ಶಕ್ತಿ' ಯೋಜನೆಯ ಲಾಭವನ್ನು 114.54 ಕೋಟಿ ಮಹಿಳೆಯರು ಪಡೆದುಕೊಂಡಿದ್ದಾರೆ. ಅದಕ್ಕೆ ₹ 2,700 ಕೋಟಿ ವೆಚ್ಚವಾಗಿದೆ. 'ಗೃಹ ಜ್ಯೋತಿ'ಗೆ ತಿಂಗಳಿಗೆ ₹ 800 ಕೋಟಿ, 'ಗೃಹಲಕ್ಷ್ಮಿ'ಗೆ ತಿಂಗಳಿಗೆ ₹ 2,300 ಕೋಟಿ, 'ಅನ್ನ ಭಾಗ್ಯ'ದಡಿ ತಲಾ ₹ 170ರಂತೆ ನೀಡಲು ಪ್ರತಿ ತಿಂಗಳು ₹ 656 ಕೋಟಿ ಹಣ ಬೇಕಾಗಿದೆ. ಪ್ರಸಕ್ತ ಸಾಲಿನಲ್ಲಿ ಎಲ್ಲ 5 ಗ್ಯಾರಂಟಿ ಯೋಜನೆಗಳಿಗೆ ಬೇಕಾದ ₹ 38 ಸಾವಿರ ಕೋಟಿಯನ್ನು ರಾಜ್ಯ ಸರ್ಕಾರ ಕಾಯ್ದಿರಿಸಿದೆ' ಎಂದೂ ವಿವರಿಸಿದ್ದಾರೆ.

ಘಾಟಿ: ಇದೇ 25ರಿಂದ ದನಗಳ ಜಾತ್ರೆ



ಬೆಂಗಳೂರು: ದೊಡ್ಡಬಳ್ಳಾಪುರ ತಾಲ್ಲೂಕು ಘಾಟಿ ಸುಬ್ರಮಣ್ಯಸ್ವಾಮಿ ಕ್ಷೇತ್ರದಲ್ಲಿ ಇದೇ 25ರಿಂದ 10 ದಿನಗಳವರೆಗೆ ಅಂತರರಾಜ್ಯ ಮಟ್ಟದ ದನಗಳ ಜಾತ್ರೆ ನಡೆಯಲಿದೆ ಎಂದು ನವ ಕರ್ನಾಟಕ ಯುವ ಶಕ್ತಿ ವೇದಿಕೆ ತಿಳಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ಅಂಬರೀಶ್, 'ದನಗಳ ಜಾತ್ರೆಯಲ್ಲಿ ವಿವಿಧ ತಳಿಗಳ ಜಾನುವಾರು ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಜಾತ್ರೆಗೆ ಉಚಿತ ಪ್ರವೇಶವಿದ್ದು, ನೀರು, ಮೇವು ಸೌಲಭ್ಯವನ್ನು ಕಲ್ಪಿಸಲಾಗಿದೆ. 3 ಲಕ್ಷಕ್ಕೂ ಹೆಚ್ಚು ಜಾನುವಾರುಗಳು ಭಾಗವಹಿಸುವ ನಿರೀಕ್ಷೆ ಇದೆ' ಎಂದು ಮಾಹಿತಿ ನೀಡಿದರು.

40 ಎಕರೆ ವಿಸ್ತೀರ್ಣದಲ್ಲಿ ಜಾತ್ರೆಗೆ ವ್ಯವಸ್ಥೆ ಮಾಡಿದ್ದು, ರೈತರಿಗೆ ತಂಗುದಾಣದ ವ್ಯವಸ್ಥೆ, ಸೂಕ್ತ ಭದ್ರತೆ ಒದಗಿಸಲಾಗುವುದು. ಹೈದರಾಬಾದ್ ಕರ್ನಾಟಕ, ಮಂಡ್ಯ, ಮೈಸೂರು, ರಾಮನಗರ, ಚಿಕ್ಕಬಳ್ಳಾಪುರ, ತಮಿಳುನಾಡಿನ ಹೊಸೂರು, ಆಂಧ್ರಪ್ರದೇಶದ ರೈತರು ಜಾನುವಾರುಗಳ ಖರೀದಿ ಮತ್ತು ಮಾರಾಟದಲ್ಲಿ ಪಾಲ್ಗೊಳ್ಳಲಿದ್ದಾರೆ. ರೈತರು ಮತ್ತು ರಾಸುಗಳಿಗೆ ಘಾಟಿ ಸುಬ್ರಹ್ಮಣ್ಯ ದೇವಸ್ಥಾನ ಆಡಳಿತ ಮಂಡಳಿಯಿಂದ ಸೌಕರ್ಯ ಕಲ್ಪಿಸಲಾಗುತ್ತಿದೆ. ತಾತ್ಕಾಲಿಕವಾಗಿ ಪಶು ಆಸ್ಪತ್ರೆ ತೆರೆದು ಜಾನುವಾರುಗಳಿಗೆ ಲಸಿಕೆಗಳನ್ನು ನೀಡುವ ವ್ಯವಸ್ಥೆ ಇದೆ ಎಂದರು.

ಪ್ರಧಾನ ಕಾರ್ಯದರ್ಶಿ ಉದಯಾರಾಧ್ಯ ಪಾಲ್ಗೊಂಡಿದ್ದರು.

ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ (ರಿ)

148, "ನಾಡಪ್ರಭು ಕಂಪೇಗೌಡ ಭವನ", ಕೆ.ಆರ್.ರಸ್ತೆ, ವಿಶ್ವೇಶ್ವರಪುರಂ, ಬೆಂಗಳೂರು–560004

ಸಾರ್ವಜನಿಕ ತಿಳುವಳಿಕೆ ಪತ್ರ

ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್(ರಿ), ಕೆ.ಆರ್.ರಸ್ತೆ, ಬೆಂಗಳೂರು–560004, ರವರು ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಸಜ್ಜೇಪಾಳ್ಯದ ಸರ್ವೆ ನಂ.15 ರ 44–00 ಎಕರೆ 33 ಗುಂಟೆ ವಿಸ್ತೀರ್ಣದ ಆಸ್ತಿಗೆ ಸಂಪೂರ್ಣ ಒಡೆಯರಾಗಿದ್ದು, ಅದರ ಹಕ್ಕುಗಳನ್ನು ಹಾಗೂ ಸ್ವಾಧೀನತೆಯನ್ನು ಹೊಂದಿರುತ್ತಾರೆ. ಇದರ ವಿವರವನ್ನು ಸಂಪೂರ್ಣವಾಗಿ ಈ ಕೆಳಕಂಡ **ಅನುಸೂಚಿ–ಎ** ನಲ್ಲಿ ವಿವರಿಸಲಾಗಿದೆ. ಸರ್ವೆ ನಂ.8ರಲ್ಲಿ ವಿಸ್ತೀರ್ಣ 17 ಎಕರೆ 1 ಗುಂಟೆ, ಸರ್ವೆ ನಂ.9 ರಲ್ಲಿ ವಿಸ್ತೀರ್ಣ 5 ಎಕರೆ 39 ಗುಂಟೆಗಳು, ಸರ್ವೆ ನಂ.10 ರಲ್ಲಿ ವಿಸ್ತೀರ್ಣ 7 ಎಕರೆ 1 ಗುಂಟೆ, ಸರ್ವೆ ನಂ.13 ರಲ್ಲಿ ವಿಸ್ತೀರ್ಣ 13 ಎಕರೆ 16 ಗುಂಟೆ, ಹಾಗೂ ಮಾಳಗಾಳದ ಸರ್ವೆ ನಂ.43 ರಲ್ಲಿ ವಿಸ್ತೀರ್ಣ 2 ಎಕರೆ 20 ಗುಂಟೆ, ಮಾಳಗಾಳದ ಸರ್ವೆ ನಂ.44 ರಲ್ಲಿ ವಿಸ್ತೀರ್ಣ 7 ಎಕರೆ 1 ಗುಂಟೆ, ಇವುಗಳು ಸಜ್ಜೇಪಾಳ್ಯ ಮತ್ತು ಮಾಳಗಾಳ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ ಸ್ವತ್ತುಗಳೂ ಕೂಡ **ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್(ರಿ),** ನ ಒಡೆತನಕ್ಕೆ ಒಳಪಟ್ಟಿರುತ್ತವೆ. ಇವುಗಳ ಸಂಪೂರ್ಣ ವಿವರಗಳನ್ನು ಈ ಕೆಳಕಂಡ **ಅನುಸೂಚಿ–ಬಿ** ಸ್ವತ್ತಿನಡಿಯಲ್ಲಿ ವಿವರಿಸಲಾಗಿದೆ. ಇವುಗಳನ್ನು ಇನ್ನು ಮುಂದೆ ಅನುಸೂಚಿ ಸ್ವತ್ತುಗಳೆಂದು ಸಂಭೋದಿಸುವುದು. ಈ ಮೇಲ್ಕಂಡ ಸ್ವತ್ತುಗಳ ಒಟ್ಟು ವಿಸ್ತೀರ್ಣ 96 ಎಕರೆ 35 ಗುಂಟೆಗಳಾಗಿರುತ್ತದೆ.

ಈ ಮೂಲಕ ನಾವು ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ ಈ ಕೆಳಕಂಡ ಅನುಸೂಚಿ ಸ್ವತ್ತುಗಳು ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಭಾಗಾಂಶಗಳನ್ನು ಮೂರನೇ ವ್ಯಕ್ತಿಗಳು ಮಾರಾಟ ಮಾಡುವುದಕ್ಕಾಗಲೀ, ಆಧಾರಕ್ಕಾಗಲೀ, ವರ್ಗಾವಣೆಗಾಗಲೀ, ಅಥವಾ ಯಾವುದೇ ಭಾಗವಾಗಲೀ, ಯಾವುದೇ ರೀತಿಯ ನಿರ್ವಹಣೆಯನ್ನು ಮಾಡಲು ಅಧಿಕಾರ ಹೊಂದಿರುವುದಿಲ್ಲ. ಅದಾಗಿ, ಯಾರಾದರೂ ಈ ಕೆಳಕಂಡ ಅನುಸೂಚಿ ಸ್ವತ್ತುಗಳನ್ನು ಅಥವಾ ಯಾವುದೇ ಭಾಗವನ್ನು ಕೊಂಡುಕೊಳ್ಳುವ, ರಾಜಿಯಾಗುವ ಬಗ್ಗೆ ಪ್ರಚೋದಿಸಿದಲ್ಲಿ, ಅವುಗಳನ್ನು ಯಾರಾದರೂ ಕೊಂಡುಕೊಂಡಲ್ಲಿ, ಅದು ಕಾನೂನುಬಾಹಿರ ಕ್ರಮವಾಗಿದ್ದು ಅವರವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.

ಅನುಸೂಚಿ–ಎ

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿಯಲ್ಲಿನ ಸಜ್ಜೇಪಾಳ್ಯದ ಸರ್ವೆ ನಂ. 15 ರ ವಿಸ್ತೀರ್ಣ 44 ಎಕರೆ 33 ಗುಂಟೆಗಳು ಸೇರಿದಂತೆ ಈ ಕೆಳಕಂಡ **ಚಕ್ಕುಬಂದಿ:– ಪೂರ್ವಕ್ಕೆ** :ಸರ್ವೆ ನ.10 ರ ಸ್ವತ್ತು, **ಪಶ್ಚಿಮಕ್ಕೆ** : ಸರ್ವೆ ನಂ. 8 ರ ಸ್ವತ್ತು ಹಾಗೂ ವೃಷಭಾವತಿ ನಾಲೆ, **ಉತ್ತರಕ್ಕೆ** : ಸರ್ವೆ ನಂ.9 ರ ಸ್ವತ್ತು ಹಾಗೂ ರಸ್ತೆ, **ದಕ್ಷಿಣಕ್ಕೆ** : ಸರ್ವೆ ನಂ.13 ರ ಸ್ವತ್ತು.

ಅನುಸೂಚಿ–ಬಿ

ಬೆಂಗಳೂರು ಉತ್ತರ ತಾಲ್ಲೂಕು, ಶ್ರೀಗಂಧಕಾವಲಿನಲ್ಲಿರುವ ಸಜ್ಜೇಪಾಳ್ಯದ ಸರ್ವೆ ನಂ.8ರ ವಿಸ್ತೀರ್ಣ 17 ಎಕರೆ 1 ಗುಂಟೆ, ಸರ್ವೆ ನಂ.9 ರ ವಿಸ್ತೀರ್ಣ 5 ಎಕರೆ 39 ಗುಂಟೆ, ಸರ್ವೆ ನಂ.10 ರ ವಿಸ್ತೀರ್ಣ 7 ಎಕರೆ 1 ಗುಂಟೆ, ಸರ್ವೆ ನಂ.13 ರ ವಿಸ್ತೀರ್ಣ 13 ಎಕರೆ 16 ಗುಂಟೆ, ಹಾಗೂ ಮಾಳಗಾಳದ ಸರ್ವೆ ನಂ.43 ರ ವಿಸ್ತೀರ್ಣ 2 ಎಕರೆ 20 ಗುಂಟೆ ಮತ್ತು ಮಾಳಗಾಳದ ಸರ್ವೆ ನಂ. 44 ರ ವಿಸ್ತೀರ್ಣ 7 ಎಕರೆ 1 ಗುಂಟೆಗಳಿದ್ದು, ಇವುಗಳ ಒಟ್ಟು ವಿಸ್ತೀರ್ಣ 52 ಎಕರೆ 37 ಗುಂಟೆಗಳಾಗಿದ್ದು, ಇವುಗಳಲ್ಲಿ 35 ಗುಂಟೆ ಖರಾಬಾಗಿದ್ದು, ಉಳಿಕೆ ಜಮೀನುಗಳ ವಿಸ್ತೀರ್ಣ 52 ಎಕರೆ 2 ಗುಂಟೆ ವಿಸ್ತೀರ್ಣವುಳ್ಳ ಜಮೀನಿಗೆ **ಚಕ್ಕುಬಂದಿ: ಪೂರ್ವಕ್ಕೆ** :ಬಾಲಯ್ಯನ ಕೆರೆ ಹಾಗೂ ಕಾಮಾಕ್ಷಿಪಾಳ್ಯದ ಹನುಮಂತಪ್ಪ, ಚಿಕ್ಕನರಸಯ್ಯ, ಭದ್ರಯ್ಯ ಹಾಗೂ ಇತರರ ಜಮೀನುಗಳು, **ಪಶ್ಚಿಮಕ್ಕೆ:** ವೃಷಭಾವತಿ ನದಿ, **ಉತ್ತರಕ್ಕೆ:** ಕಾಮಾಕ್ಷಿಪಾಳ್ಯದ ಹನುಮಂತಪ್ಪ, ಚಿಕ್ಕನರಸಯ್ಯ ಹಾಗೂ ಪೇಟೆ ಚೆನ್ನಪ್ಪನವರ ಜಮೀನುಗಳು, **ದಕ್ಷಿಣಕ್ಕೆ:** ಅಕ್ಕಿಪೇಟೆಯ ಶಂಕರಪ್ಪನವರ ಜಮೀನು, ಮಲ್ಲೇಶ್ವರದ ಗರುಡಾಚಾರ್, ಅಂಕಪ್ಪ, ರಾಮಯ್ಯ ಮತ್ತು ರುದ್ರಯ್ಯರವರುಗಳು, ಕಾಮಾಕ್ಷಿಪಾಳ್ಯದ ನಿವಾಸಿಗಳ ಜಮೀನುಗಳು.

ಸಹಿ/–
ಅಧ್ಯಕ್ಷರು
ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ (ರಿ)
ಬೆಂಗಳೂರು –04

ಸ್ಥಳ : ಬೆಂಗಳೂರು
ದಿನಾಂಕ : 16.12.2023

ನಗರದಲ್ಲಿ ಶನಿವಾರ ನಡೆದ 'ಮಹಿಳಾ ಸಾಹಿತ್ಯ–ಸಂಸ್ಕೃತಿ ಸಮಾವೇಶ'ದಲ್ಲಿ (ಕುಳಿತವರು ಎಡದಿಂದ) ಸಂಗೀತ ನಿರ್ದೇಶಕಿ ಪಾಮಡಿ ನಾಗಮಣಿ ಮನೋಹರ್, ಸಮಾವೇಶದ ಸರ್ವಾಧ್ಯಕ್ಷೆ ಬಿ.ಆರ್. ಉಮಾ ಅವರಿಗೆ 'ಕರ್ನಾಟಕದ ಮದರ್ ತೆರೆಸಾ ಡಾ.ಎಸ್.ಜಿ. ಸುಶೀಲಮ್ಮ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ಎಡದಿಂದ) ವೂಡೇ ಪಿ. ಕೃಷ್ಣ, ಕೆ.ಆರ್. ಸಂಧ್ಯಾರೆಡ್ಡಿ, ಎಸ್. ರಾಮಲಿಂಗೇಶ್ವರ, ಎಸ್.ಜಿ. ಸುಶೀಲಮ್ಮ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

'ಸಾಹಿತ್ಯದ ಉಳಿದ ಪ್ರಕಾರಗಳ ಕಡೆಗಣನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತ್ಯವನ್ನು ಕಥೆ-ಕಾದಂಬರಿಗಳಿಗೆ ಮಾತ್ರ ಸೀಮಿತಗೊಳಿಸಿ ಉಳಿದ ಪ್ರಕಾರಗಳನ್ನು ಕಡೆಗಣಿಸಲಾಗುತ್ತಿದೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಮಾಜಿ ಅಧ್ಯಕ್ಷೆ ಕೆ.ಆರ್. ಸಂಧ್ಯಾರೆಡ್ಡಿ ಹೇಳಿದರು.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸುಮಂಗಲಿ ಸೇವಾ ಆಶ್ರಮ ಹಾಗೂ ಬಿ. ಕೃಷ್ಣಪ್ಪ ಟ್ರಸ್ಟ್ ಶನಿವಾರ ಆಯೋಜಿಸಿದ್ದ 'ಮಹಿಳಾ ಸಾಹಿತ್ಯ-ಸಂಸ್ಕೃತಿ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಸಾಹಿತ್ಯ ಪ್ರಕಾರಗಳಾದ ಜಾನಪದ, ವೈದ್ಯಕೀಯ, ಅನುವಾದ ಕ್ಷೇತ್ರಗಳಲ್ಲಿ ಹೆಚ್ಚು ಸಾಹಿತ್ಯ ರೂಪಿಸಬೇಕಿದೆ. ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಥೆ, ಗಾದೆ, ಗೀತೆಗಳನ್ನು ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಕೆಲಸವನ್ನು ಮಹಿಳೆಯರು ಮಾಡಬೇಕು. ಶ್ರೇಷ್ಠ ಸಾಹಿತ್ಯ, ಅಡುಗೆ ಮನೆ ಸಾಹಿತ್ಯ ಎಂದು ವಿಂಗಡಿಸುವ ಮೂಲಕ ಮಹಿಳೆಯರ ನಿಜವಾದ ಕೊಡುಗೆಗಳನ್ನು ಗಮನಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸಮಾವೇಶದ ಸರ್ವಾಧ್ಯಕ್ಷತೆ ವಹಿಸಿದ್ದ ಬಿ.ಆರ್. ಉಮಾ, 'ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಯರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ. ಲೈಂಗಿಕ ಹಾಗೂ ಮಾನಸಿಕ ಕಿರುಕುಳವನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ಮರ್ಯಾದೆಗೇಡು ಹತ್ಯೆಗಳು ಘಟಿಸುತ್ತಿದ್ದರೂ ಕಂಡು ಕಾಣದಂತೆ ಇದ್ದೇವೆ. ಈ ನಿಟ್ಟಿನಲ್ಲಿ ಸಾಮಾಜಿಕ ಹೋರಾಟಗಳು ಕ್ಷೀಣಿಸುತ್ತಿವೆ' ಎಂದರು.

ಬಿ.ಆರ್. ಉಮಾ ಹಾಗೂ ಪಾಮಡಿ ನಾಗಮಣಿ ಮನೋಹರ್ ಅವರಿಗೆ 'ಕರ್ನಾಟಕದ ಮದರ್ ತೆರೆಸಾ ಡಾ.ಎಸ್.ಜಿ. ಸುಶೀಲಮ್ಮ ದತ್ತಿ ಪ್ರಶಸ್ತಿ'ಯನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ. ಕೃಷ್ಣ ಅವರು ಪ್ರದಾನ ಮಾಡಿದರು.

ಸುಮಂಗಲಿ ಸೇವಾ ಆಶ್ರಮದ ಅಧ್ಯಕ್ಷತೆ ಎಸ್.ಜಿ. ಸುಶೀಲಮ್ಮ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ ಪಾಲ್ಗೊಂಡಿದ್ದರು.

ಸರ್ಕಾರವೇ ಬೆತ್ತಲೆಯಾಗಿದೆ: ಬಿ.ಸಿ. ಪಾಟೀಲ

ಪ್ರಜಾವಾಣಿ ವಾರ್ತೆ

ಹಾವೇರಿ: ಬೆಳಗಾವಿ ಜಿಲ್ಲೆಯಲ್ಲಿ ಮಹಿಳೆ ಬೆತ್ತಲೆ ಆಗಿಲ್ಲ, ಇಡೀ ಕಾಂಗ್ರೆಸ್ ಸರ್ಕಾರವೇ ಬೆತ್ತಲೆಯಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಎಲ್ಲಿದೆ? ಪೊಲೀಸ್ ಇಲಾಖೆ ಏನು ಮಾಡುತ್ತಿದೆ? ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿವೆ. ಮಹಿಳೆಯರ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ. ಆದರೂ ಕಾಂಗ್ರೆಸ್ ಸರ್ಕಾರ ಕಠಿಣ ಕ್ರಮ ಕೈಗೊಂಡಿಲ್ಲ. ಭ್ರಷ್ಟಾಚಾರ ಮಿತಿಮೀರಿದೆ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಲೂಟಿ ಹೊಡೆಯುವಲ್ಲಿ ಪೈಪೋಟಿಗಿಳಿದಿದ್ದಾರೆ. ಅಭಿವೃದ್ಧಿಯಂತೂ ರಾಜ್ಯದಲ್ಲಿ ಶೂನ್ಯವಾಗಿದೆ. ಇಂಥ ಸರ್ಕಾರಕ್ಕೆ ಧಿಕ್ಕಾರ ಹಾಕಿ ಬಿಜೆಪಿಯಿಂದ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ ಎಂದರು.

'ಭ್ರೂಣ ಲಿಂಗ ಪತ್ತೆ: ಕಠಿಣ ಕಾನೂನು ಜಾರಿಗೊಳಿಸಿ'

ಬೆಂಗಳೂರು: 'ಭ್ರೂಣ ಲಿಂಗ ಪತ್ತೆ ತಡೆಗೆ ಸಂಬಂಧಿಸಿದಂತೆ ಕಠಿಣ ಕಾನೂನನ್ನು ಜಾರಿಗೊಳಿಸಬೇಕು. ಈ ರೀತಿಯ ಕಾನೂನು ಬಾಹಿರ ಪದ್ಧತಿಗಳು ಸಮಾಜಕ್ಕೆ ಹಾಗೂ ವೈದ್ಯಕೀಯ ವೃತ್ತಿಗೆ ಹಾನಿಕರ' ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಕರ್ನಾಟಕ ರಾಜ್ಯ ಶಾಖೆ ಕಳವಳ ವ್ಯಕ್ತಪಡಿಸಿದೆ.

ಸಂಘದ ಅಧ್ಯಕ್ಷ ಡಾ.ಎಸ್. ಶ್ರೀನಿವಾಸ್, 'ಮೈಸೂರು, ಮಂಡ್ಯ, ಹೊಸಕೋಟೆ ಮತ್ತು ಬೆಂಗಳೂರಿನಲ್ಲಿ ನಡೆದ ಭ್ರೂಣ ಲಿಂಗ ಪತ್ತೆ ಮತ್ತು ಹೆಣ್ಣು ಭ್ರೂಣ ಹತ್ಯೆಯ ಪ್ರಕರಣಗಳು ವೈದ್ಯಕೀಯ ಕ್ಷೇತ್ರದ ವ್ಯಾಪಕ ಕೊಳಕು ದುಷ್ಕೃತ್ಯಗಳನ್ನು ಬಹಿರಂಗಪಡಿಸಿದೆ. ವೈದ್ಯರು ಹಾಗೂ ಆರೋಗ್ಯ ಕಾರ್ಯಕರ್ತರು ಇಂತಹ ಕೃತ್ಯಗಳಲ್ಲಿ ತೊಡಗುವುದನ್ನು ಎಂದಿಗೂ ನಾವೂ ಬೆಂಬಲಿಸುವುದಿಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಭ್ರೂಣ ಲಿಂಗ ಪತ್ತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಕೂಲಂಕಷವಾಗಿ ತನಿಖೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಬೇಕು. ಕೆಪಿಎಂಇ ಕಾಯ್ದೆಯಡಿ (ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ನಿಯಂತ್ರಣ ಕಾಯ್ದೆ) ನಕಲಿ ವೈದ್ಯರನ್ನು ಗುರುತಿಸಿ, ಅವರ ಮೇಲೂ ಕಾನೂನಿನ ಅಡಿ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

'ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಾನೂನು ಕ್ರಮಗಳ ಜತೆಗೆ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕು. ಹೆಣ್ಣು-ಗಂಡು ಸಮಾನ ಎಂದು ಸಾರಿ, ಮಹಿಳೆಯರನ್ನು ಗೌರವಿಸಬೇಕು' ಎಂದರು.

'ಉದ್ಯೋಗಿಗಳಿಂದ ಸಂಚಾರ ನಿಯಮ ಉಲ್ಲಂಘನೆ'

ಬೆಂಗಳೂರು: ನಗರದಲ್ಲಿ ಸಂಚಾರ ನಿಯಮ ಉಲ್ಲಂಘಿಸುವ ಉದ್ಯೋಗಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುತ್ತಿರುವ ಪೊಲೀಸರು, ಅವರು ಕೆಲಸ ಮಾಡುವ ಕಂಪನಿಗಳಿಗೆ ಮಾಹಿತಿ ರವಾನಿಸುತ್ತಿದ್ದಾರೆ.

'ಹೊರವರ್ತುಲ ರಸ್ತೆ ಹಾಗೂ ಪ್ರಮುಖ ರಸ್ತೆಗಳಲ್ಲಿ ಸಂಚರಿಸುತ್ತಿರುವ ಉದ್ಯೋಗಿಗಳು, ಪದೇ ಪದೇ ನಿಯಮ ಉಲ್ಲಂಘಿಸುತ್ತಿದ್ದಾರೆ. ಇವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಅದರ ಮಾಹಿತಿಯನ್ನು ಕಂಪನಿಗೆ ಕಳುಹಿಸಲಾಗುತ್ತಿದೆ' ಎಂದು ಡಿಸಿಪಿ ಕುಲದೀಪ್‌ಕುಮಾರ್ ಜೈನ್ ತಿಳಿಸಿದ್ದಾರೆ.

'ಸಾಫ್ಟ್‌ವೇರ್ ಹಾಗೂ ಇತರೆ ಕಂಪನಿಗಳು ಹೆಚ್ಚಿರುವ ಪ್ರದೇಶಗಳ ರಸ್ತೆಗಳಲ್ಲಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳು ಹೆಚ್ಚಾಗುತ್ತಿವೆ. ಕಂಪನಿಗಳ ಎಂಜಿನಿಯರ್‌ಗಳೂ ಹಾಗೂ ಇತರೆ ವಿಭಾಗದ ಉದ್ಯೋಗಿಗಳು ಹೆಚ್ಚಿನ ಪ್ರಮಾಣದಲ್ಲಿ ನಿಯಮ ಉಲ್ಲಂಘಿಸುತ್ತಿದ್ದಾರೆ. ಇದೇ ಕಾರಣಕ್ಕೆ ಪೂರ್ವ ವಿಭಾಗದಲ್ಲಿ ಪ್ರಾಯೋಗಿಕವಾಗಿ ಹೊಸ ವಿಧಾನವನ್ನು ಅನುಸರಿಸಲಾಗುತ್ತಿದೆ. ಯಶಸ್ವಿಯಾದರೆ, ನಗರದ ಎಲ್ಲ ಕಡೆಯೂ ವಿಸ್ತರಿಸಲಾಗುವುದು' ಎಂದಿದ್ದಾರೆ.

'ಉದ್ಯೋಗಿಗಳ ನಿಯಮ ಉಲ್ಲಂಘನೆ ಮಾಹಿತಿಯನ್ನು ಪುರಾವೆಗಳ ಸಮೇತ ಸಂಬಂಧಪಟ್ಟ ಕಂಪನಿಯವರಿಗೆ ಇ- ಮೇಲ್ ಅಥವಾ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಲಾಗುವುದು. ಜೊತೆಗೆ, ಉದ್ಯೋಗಿಗಳಿಗೆ ತಿಳಿವಳಿಕೆ ಮೂಡಿಸುವಂತೆಯೂ ಕೋರಲಾಗುವುದು' ಎಂದಿದ್ದಾರೆ.

ವಿವಿಧೆಡೆ ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಗರದ ವಿವಿಧ ಸ್ಥಳಗಳಲ್ಲಿ ಡಿ.17ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಸಲಾರ್‌ಪುರಿ, ಟಿಮ್‌ಕಿನ್, ಕೊನಾರ್, ಲಕ್ಷ್ಮಿ ಲೇಔಟ್, ರಾಘವೇಂದ್ರ ಲೇಔಟ್, ನ್ಯೂ ಮೈಕೊ ಲೇಔಟ್, ವಾಜಪೇಯಿನಗರ, ಹೊಸೂರು ಮುಖ್ಯ ರಸ್ತೆ, ಹೊಂಗಸಂದ್ರ, ಬೇಗೂರು ಮುಖ್ಯ ರಸ್ತೆ, ಶ್ರೀರಾಮ ನಗರ, ವೇಲಂಕಿನಿ, ಎಚ್.ಪಿ. ಸೂರ್ಯ, ಅರವಿಂದ ಮಿಲ್ಸ್, ದೊಡ್ಡ ತೋಗೂರು, ವಿನಾಯಕ ಲೇಔಟ್, ಸೆಲಿಬ್ರಿಟಿ ಹೌಸಿಂಗ್ ಲೇಔಟ್, ಕೋನಪ್ಪನ ಅಗ್ರಹಾರ, ಗುಲ್ಬರ್ಗ ಕಾಲೊನಿ, ಸಿಲ್ಕ್ ಬೋರ್ಡ್ ಜಂಕ್ಷನ್, ಬೊಮ್ಮನಹಳ್ಳಿ, ಆಕ್ಸ್‌ಫರ್ಡ್ ಡೆಂಟಲ್ ಕಾಲೇಜು, ಎಂಆರ್‌ಓ ಟೆಕ್, ಲಾರ್ಡ್ ಪ್ಲಾಜಾದ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ನಶಾ ಸ್ಕ್ವೇರ್, ಟೆಕ್‌ನಿಕ್, ಕೆಎಸ್‌ಎಸ್‌ಡಿಸಿ ಕಾಂಪ್ಲೆಕ್ಸ್ ಇ-ಸಿಟಿ ಫೇಸ್-1, ಸೈಬರ್ ಪಾರ್ಕ್, ಐಎಫ್‌ಐಎಂ ಕಾಲೇಜು, ಇನ್ಫೊಸಿಸ್ ಕಾರ್ ಪಾರ್ಕಿಂಗ್, ರಾಮಕೃಷ್ಣ ಆಸ್ಪತ್ರೆ, ವಿಪ್ರೊ ಇ-ಸಿಟಿ ಫೇಸ್-2, ಭಾರತ್ ಪೆಟ್ರೋಲ್ ಬಂಕ್, ಎನ್‌ಟಿಟಿಎಫ್, ನೀಲಾದ್ರಿ ರಸ್ತೆ, ಪಂಜಾಬ್ ಬ್ಯಾಂಕ್, ಮಹಾವೀರ್ ಅಪಾರ್ಟ್‌ಮೆಂಟ್, ಎಚ್‌ಸಿಎಲ್, ಇನ್ಫೊಸಿಸ್ ಇಎಚ್‌ಟಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್ ಚಿಕಿತ್ಸೆಯಲ್ಲಿ ಪ್ರಗತಿ

ರೊಬೊಟಿಕ್ ಹಿಪ್ ಬದಲಿಕೆ ರೋಗಿಗಳಿಗೆ ಆಶಾಕಿರಣ

ತಿರುಚ್ಚಿಯ 63 ವರ್ಷದ ಶ್ರೀ ರಾಮಕೃಷ್ಣ ಅವರಿಗೆ 2 ವರ್ಷಗಳ ಹಿಂದೆ ಸೊಂಟದ ಕೀಲುಗಳಲ್ಲಿ ನೋವು ಹೆಚ್ಚಾಗಿ, ಸೊಂಟ ಮತ್ತು ಬೆನ್ನುಮೂಳೆಯಲ್ಲಿ ಬಿಗಿತ ಪ್ರಾರಂಭವಾಯಿತು. ಕಳೆದ 6 ತಿಂಗಳ ಅವಧಿಯಲ್ಲಿ ನೋವು ಎಷ್ಟರ ಮಟ್ಟಿಗೆ ಹೆಚ್ಚಾಯಿತು ಎಂದರೆ, ಅವರಿಗೆ ಕೆಲವು ಹೆಜ್ಜೆ ನಡೆಯಲು ಕೂಡಾ ಸಾಧ್ಯವಾಗಲಿಲ್ಲ. ಬಾಗಿದ ಬೆನ್ನುಮೂಳೆಯ ಕಾರಣದಿಂದ ಅವರ ಭಂಗಿಯು ಬಾಗಿತು ಮತ್ತು ಜನರನ್ನು ಭೇಟಿಯಾದಾಗ ಅವರಿಗೆ ನಮಸ್ಕಾರ ಮಾಡಲು ತಲೆಯೆತ್ತಿ ನೋಡುವುದು ಕೂಡಾ ಕಷ್ಟಕರವಾಗಿತ್ತು. ಅವರು ಕೀಲುಗಳನ್ನು ಒಳಗೊಂಡಿರುವ ಸೋರಿಯಾಸಿಸ್ ಎಂಬ ಚರ್ಮದ ರೋಗದಿಂದ ಕೂಡ ಬಳಲುತ್ತಿದ್ದರು.

ರಕ್ತಪರೀಕ್ಷೆಗಳು ಮತ್ತು ರೇಡಿಯೋಗ್ರಾಫ್‌ಗಳನ್ನು ಮಾಡಿದಾಗ ಅವರಿಗೆ ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್ (AS) ಎಂಬ ಅಪರೂಪದ ಸ್ವಯಂ ನಿರೋಧಕ ಸ್ಥಿತಿಯಿರುವುದು ದೃಢವಾಯಿತು, ಇದು ಪ್ರಾಥಮಿಕವಾಗಿ ಸೊಂಟ ಮತ್ತು ಬೆನ್ನುಮೂಳೆಯ ಮೇಲೆ ಪರಿಣಾಮ ಬೀರುವ ದೀರ್ಘಕಾಲದ ಉರಿಯೂತದ ಕಾಯಿಲೆಯಾಗಿದ್ದು, ಮತ್ತು ಇದು ಭಾರತದಲ್ಲಿ ಪ್ರತಿ 100 ಯುವಕರಲ್ಲಿ ಒಬ್ಬರಿಗೆ ಪರಿಣಾಮ ಬೀರುತ್ತದೆ.

ಈ ಸ್ಥಿತಿಯು ಮಹಿಳೆಯರಿಗಿಂತಲೂ ಪುರುಷರ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುವ ಸಾಧ್ಯತೆ 2-3 ಪಟ್ಟು ಹೆಚ್ಚು ಎಂದು ಸಂಶೋಧನಾ ಅಧ್ಯಯನಗಳು ತೋರಿಸುತ್ತವೆ ಮತ್ತು 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಕಾಣಿಸಿಕೊಳ್ಳುತ್ತದೆ ಹಾಗೂ ಸಾಮಾನ್ಯವಾಗಿ 20 ಮತ್ತು 30 ವರ್ಷ ವಯಸ್ಸಿನ ನಡುವೆ ರೋಗಲಕ್ಷಣಗಳು ಶುರುವಾಗಲು ಪ್ರಾರಂಭವಾಗುತ್ತದೆ. AS ಬಗ್ಗೆ ಜನರಲ್ಲಿ ಕಡಿಮೆ ಅರಿವಿನ ಕಾರಣ, ಭಾರತದಲ್ಲಿ ಅತ್ಯಂತ ಕಡಿಮೆ ರೋಗನಿರ್ಣಯ ಮಾಡುವ ಪರಿಸ್ಥಿತಿಗಳಲ್ಲಿ ಒಂದಾಗಿದೆ ಮತ್ತು ಇದನ್ನು ಹೆಚ್ಚಾಗಿ 'ಸಾಧಾರಣ ಬೆನ್ನುನೋವು' ಎಂದು ತಪ್ಪಾಗಿ ಗ್ರಹಿಸಲಾಗುತ್ತದೆ.

ಈ ಸ್ಥಿತಿಯು ನೋವು ಮತ್ತು ಬಿಗಿತದಿಂದ ಪ್ರಾರಂಭವಾಗುತ್ತದೆ ಮತ್ತು ಅಂತಿಮವಾಗಿ ಫ್ಯೂಶನ್‌ಗೆ ಒಳಗಾಗುವ ಮೊದಲು ಸೊಂಟ ಮತ್ತು ಬೆನ್ನುಮೂಳೆಯ ಚಲನೆಗಳು ನಿಧಾನವಾಗಿ ಕಡಿಮೆಯಾಗುತ್ತವೆ. ಆರಂಭಿಕ ಚಿಕಿತ್ಸೆಯನ್ನು ನೀಡುವ ಮೂಲಕ AS ನಿಂದ ಉಂಟಾಗುವ ರಚನಾತ್ಮಕ ಹಾನಿಯನ್ನು ತಡೆಯಬಹುದು / ನಿಧಾನಗೊಳಿಸಬಹುದು, ಇದು ಮೂಳೆಗಳನ್ನು ಒಂದಾಗಿಸುವ ಶಸ್ತ್ರಚಿಕಿತ್ಸೆ ಮಾಡುವ ಅಗತ್ಯವನ್ನು ತಡೆಯುತ್ತದೆ ಮತ್ತು ಅನೇಕ ಸಂದರ್ಭಗಳಲ್ಲಿ ಹೊಸ ಮೂಳೆ ರಚನೆಯನ್ನು ತಡೆಯುತ್ತದೆ. ಒಮ್ಮೆ ಕೀಲುಗಳು ಹಾನಿಗೊಳಗಾದರೆ ಅವುಗಳಿಗೆ ಕೀಲು ಬದಲಿ ಶಸ್ತ್ರಚಿಕಿತ್ಸೆಯ ಅಗತ್ಯವಿದೆ ಎನ್ನುತ್ತಾರೆ ಹಳೆ ಏರ್‌ಪೋರ್ಟ್ ರಸ್ತೆಯ ಮಣಿಪಾಲ್ ಆಸ್ಪತ್ರೆಗಳ ಹಿರಿಯ ಕನ್ಸಲ್ಟೆಂಟ್ ಆದ ಆರ್ಥೋಪೆಡಿಕ್ ಮತ್ತು ರೊಬೊಟಿಕ್ ಜಾಯಿಂಟ್ ರಿಪ್ಲೇಸ್‌ಮೆಂಟ್ ಸರ್ಜನ್ ಡಾ. ಸುನಿಲ್ ಕಿಣಿ.

ರಾಮಕೃಷ್ಣ

ಹಾಗೆಯೆ ಡಾ ಕಿಣಿ ಅವರು, 'ತಿರುಗಾಡುವ ನೋವುರಹಿತ ಸೊಂಟವನ್ನು ಪಡೆಯಲು ಹಿಪ್ ರಿಪ್ಲೇಸ್‌ಮೆಂಟ್ ಶಸ್ತ್ರಚಿಕಿತ್ಸೆಯೊಂದೇ ದಾರಿ ಎಂದು ನಾವು ಶ್ರೀ ರಾಮಕೃಷ್ಣ ಅವರಿಗೆ ವಿವರಿಸಿದೆವು' ಎಂದು ಹೇಳುತ್ತಾ, ಕಪ್ ಸ್ಥಾನವು ಸ್ಥಿರವಾಗಿರುವ ಸಾಮಾನ್ಯವಾದ ಹಿಪ್ ರಿಪ್ಲೇಸ್‌ಮೆಂಟ್‌ಗೆ ವ್ಯತಿರಿಕ್ತವಾಗಿ, ಸಮ್ಮಿಲನಗೊಂಡ ಹಿಪ್ ಹೊಂದಿರುವ ರೋಗಿಗಳಲ್ಲಿ, ಬೆನ್ನುಮೂಳೆಯ ನಿಯತಾಂಕಗಳನ್ನು ಒಳಗೊಂಡಂತೆ ಹಲವಾರು ಇತರ ಅಂಶಗಳನ್ನು ಅವಲಂಬಿಸಿ ಕಪ್ ಪ್ಲೇಸ್‌ಮೆಂಟ್ ಹೆಚ್ಚು ನಿಖರವಾಗಿ ಮತ್ತು ವೈಯಕ್ತಿಕವಾಗಿರಬೇಕು ಎಂದು ಅನುಮೋದಿಸಿದರು.

ಈ ಸಂದರ್ಭಗಳಲ್ಲಿ ರೊಬೊಟಿಕ್ ತಂತ್ರಜ್ಞಾನವು ಹೆಚ್ಚು ಉಪಯುಕ್ತವಾಗುತ್ತದೆ. ಇದು ಶಸ್ತ್ರಚಿಕಿತ್ಸೆಗೆ ಮುನ್ನ ರೋಗಿಯ 3D CT ಸ್ಕ್ಯಾನ್‌ಗಳ ಆಧಾರದ ಮೇಲೆ ಆ ರೋಗಿಗೆ ಸೂಕ್ತವಾದ ಕಪ್ ಸ್ಥಾನವನ್ನು ನಿಖರವಾಗಿ ಲೆಕ್ಕ ಹಾಕುತ್ತದೆ. ಇದು ಕಪ್‌ನ ಅಸಮರ್ಪಕ ಸ್ಥಾನದಿಂದ ಉಂಟಾಗುವ ಅಡಚಣೆ ಮತ್ತು ಡಿಸ್ಲೊಕೇಶನ್‌ಗಳಂತಹ ತೊಡಕುಗಳನ್ನು ತಡೆಯುತ್ತದೆ. ಸೊಂಟ ಬದಲಿ ಶಸ್ತ್ರಚಿಕಿತ್ಸೆಯ ನಂತರ ರೋಗಿಯು ಮರುದಿನವೇ ನಡೆಯಬಹುದು ಮತ್ತು ಶಸ್ತ್ರಚಿಕಿತ್ಸೆಯ 6 ವಾರಗಳ ನಂತರ ಯಾವುದೇ ಸಹಾಯವಿಲ್ಲದೆ ಆರಾಮವಾಗಿ ನಡೆಯಬಹುದು.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮಣಿಪಾಲ್ ಆಸ್ಪತ್ರೆಗಳು, ಹಳೆಯ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು
ಹೆಚ್ಚಿನ ಮಾಹಿತಿಗಾಗಿ: 1800 203 2999

ಕಾರ್ಯವಿಧಾನಗಳ ಬಗೆಗಿನ ಮೂಢನಂಬಿಕೆಗಳು ಮತ್ತು ಸತ್ಯ ರೊಬೊಟಿಕ್ ಜಾಯಿಂಟ್ ರೀಪ್ಲೇಸ್‌ಮೆಂಟ್

ಮೂಢನಂಬಿಕೆ 1: ಶಸ್ತ್ರಚಿಕಿತ್ಸೆಯನ್ನು ಸಂಪೂರ್ಣವಾಗಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (AI) ಮೂಲಕ ನಡೆಸಲಾಗುತ್ತದೆ.
ಸತ್ಯ: ಶಸ್ತ್ರಚಿಕಿತ್ಸೆಯನ್ನು ಕೇವಲ AI ಮೂಲಕ ನಡೆಸಲಾಗುವುದಿಲ್ಲ. ಪ್ರತಿಯೊಬ್ಬ ರೋಗಿಗೆ ಸೂಕ್ತವಾದ ಇಂಪ್ಲಾಂಟ್‌ಗಳ ನಿಖರವಾದ ಪ್ಲೇಸ್‌ಮೆಂಟ್ ಅನ್ನು ಖಚಿತಪಡಿಸಿಕೊಳ್ಳಲು ಶಸ್ತ್ರಚಿಕಿತ್ಸಕರು ರೊಬೊಟಿಕ್ ಕೈಗೆ ಮಾರ್ಗದರ್ಶನ ನೀಡುತ್ತಾರೆ.
ಮೂಢನಂಬಿಕೆ 2: ರೊಬೊಟ್ ನೆರವಿನಿಂದ ಮಾಡುವ ಶಸ್ತ್ರಚಿಕಿತ್ಸೆಗಿಂತ ಸಾಂಪ್ರದಾಯಿಕ ಕೀಲು ಬದಲಿ ಚಿಕಿತ್ಸೆ ಸುರಕ್ಷಿತವಾಗಿದೆ.
ಸತ್ಯ: ಆಧುನಿಕ ರೊಬೊಟಿಕ್ ಕಾರ್ಯವಿಧಾನಗಳು ಆರೋಗ್ಯಕರ ಅಂಗಾಂಶಗಳಿಗೆ ಯಾವುದೇ ಹಾನಿಯನ್ನು ಉಂಟುಮಾಡುವುದಿಲ್ಲ, ಅಗತ್ಯವಿರುವ ಕಡೆ ಮಾತ್ರ ಶಸ್ತ್ರಚಿಕಿತ್ಸೆಗೆ ಬೇಕಾಗುವ ಕಟ್ ಅನ್ನು ಮಾಡುತ್ತವೆ, ಇದು ತ್ವರಿತಗತಿಯಲ್ಲಿ ಚೇತರಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ ಮತ್ತು ರಕ್ತದ ಕನಿಷ್ಠ ನಷ್ಟಕ್ಕೆ ಕಾರಣವಾಗುತ್ತವೆ. ಆಧುನಿಕ ಕಾರ್ಯವಿಧಾನವು ಸಾಂಪ್ರದಾಯಿಕ ವಿಧಾನಕ್ಕಿಂತ ಹೆಚ್ಚಲ್ಲದಿದ್ದರೂ ಅದರಷ್ಟೇ ಸುರಕ್ಷಿತವಾಗಿದೆ.
ಮೂಢನಂಬಿಕೆ 3: ರೊಬೊಟಿಕ್ ಶಸ್ತ್ರಚಿಕಿತ್ಸೆ ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತಲೂ ಹೆಚ್ಚು ಸಂಕೀರ್ಣವಾಗಿದೆ.
ಸತ್ಯ: ರೊಬೊಟಿಕ್ ಕೀಲು ಬದಲಿ ಶಸ್ತ್ರಚಿಕಿತ್ಸೆಯು ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಿಂತ ಸರಳವಾಗಿದೆ. ಗಮನವು ಕೀಲು ಸವೆದ ಭಾಗದ ಮೇಲೆ ಮಾತ್ರ ಇರುತ್ತದೆ, ಮತ್ತು ಆರೋಗ್ಯಕರ ಭಾಗವನ್ನು ಮುಟ್ಟುವುದಿಲ್ಲ. ಈ ವಿಧಾನವು ಶಸ್ತ್ರಚಿಕಿತ್ಸಕರಿಗೆ ಶಸ್ತ್ರಚಿಕಿತ್ಸೆಯ ಪೂರ್ವ-ಯೋಜನೆಯನ್ನು ಮಾಡಲು ಸಹಾಯ ಮಾಡುತ್ತದೆ, ಆ ಮೂಲಕ ಆಪರೇಟಿಂಗ್ ಟೇಬಲ್ ಮೇಲೆ ಪರಿಸ್ಥಿತಿಯನ್ನು ವಿಶ್ಲೇಷಿಸುವ ಅಗತ್ಯವನ್ನು ತೆಗೆದುಹಾಕುತ್ತದೆ.
ಮೂಢನಂಬಿಕೆ 4: ಎಲ್ಲಾ ರೋಗಿಗಳಿಗೆ ರೊಬೊಟಿಕ್ ಕೀಲು ಬದಲಿ ಶಸ್ತ್ರಚಿಕಿತ್ಸೆ ಸೂಕ್ತವಾಗುವುದಿಲ್ಲ.
ಸತ್ಯ: ಸಾಂಪ್ರದಾಯಿಕ ಶಸ್ತ್ರಚಿಕಿತ್ಸಾ ವಿಧಾನಕ್ಕೆ ಅರ್ಹರಾಗಿರುವ ಬಹುತೇಕ ಎಲ್ಲಾ ರೋಗಿಗಳು ಆಧುನಿಕ ರೊಬೊಟಿಕ್ ವಿಧಾನಕ್ಕೆ ಒಳಗಾಗಲು ಅರ್ಹರಾಗಿರುತ್ತಾರೆ. ಈ ಕಾರ್ಯವಿಧಾನದ ಹೆಚ್ಚಿನ ಯಶಸ್ಸಿನ ಪ್ರಮಾಣವು ವಯಸ್ಸಾದ ರೋಗಿಗಳಿಗೆ ಸೂಕ್ತವಾದ ಪರಿಣಾಮಕಾರಿ ಆಯ್ಕೆಗಳಲ್ಲಿ ಉತ್ತಮ ಪ್ರಯೋಜನವನ್ನು ನೀಡುತ್ತದೆ.

ಆಂಕೈಲೋಸಿಂಗ್ ಸ್ಪಾಂಡಿಲೈಟಿಸ್ ಚಿಕಿತ್ಸೆಗೆ ಬಳಸುವ ಪರಿಕರ

ಮುಂದುವರಿದ ಸ್ಥಿತಿಯ ಸಂಧಿವಾತಕ್ಕಾಗಿ ರೊಬೊಟಿಕ್ ಕೀಲು ಬದಲಿ ಪ್ರಯೋಜನಗಳು

ಶಸ್ತ್ರಚಿಕಿತ್ಸೆಯ ನಂತರದ ನೋವು ಕಡಿಮೆಯಾಗುತ್ತದೆ: ರೊಬೊಟಿಕ್ ಶಸ್ತ್ರಚಿಕಿತ್ಸೆಯ ನಿಖರವಾದ ಕಾರ್ಯವು ಕೀಲಿನ ಸುತ್ತಲಿನ ಅಂಗಾಂಶಗಳಿಗೆ ಹಾನಿಯನ್ನು ಕಡಿಮೆ ಮಾಡುತ್ತದೆ, ಮತ್ತು ಇದರ ಪರಿಣಾಮವಾಗಿ ಶಸ್ತ್ರಚಿಕಿತ್ಸೆಯ ನಂತರದ ನೋವು ಕಡಿಮೆಯಾಗುತ್ತದೆ.
ಹೆಚ್ಚಿನ ನಿಖರತೆ: ರೊಬೊಟಿಕ್ ಸಹಾಯವು ಹೆಚ್ಚಿನ ಮಟ್ಟದ ನಿಖರತೆಯನ್ನು ಖಾತ್ರಿಗೊಳಿಸುವ ಮೂಲಕ ರೋಗಿಗಳು ಹೆಚ್ಚು ವೇಗವಾಗಿ ಚಲನಶೀಲತೆಯನ್ನು ಮರಳಿ ಪಡೆಯಲು ಅನುವು ಮಾಡಿಕೊಡುತ್ತದೆ. ಇದು ಶಸ್ತ್ರಚಿಕಿತ್ಸೆಯ ನಂತರ ಆಸ್ಪತ್ರೆಯಲ್ಲಿ ಕಳೆಯುವ ಸಮಯವನ್ನು ಕಡಿಮೆ ಮಾಡುತ್ತದೆ.
ಕಡಿಮೆ ತೊಡಕುಗಳು: ರೊಬೊಟಿಕ್ ತಂತ್ರಜ್ಞಾನದ ಸಹಾಯದಿಂದ, ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಉಂಟಾಗುವ ಮತ್ತು ನಂತರದ ತೊಡಕುಗಳ ಅಪಾಯವನ್ನು ರಕ್ತದ ಕಡಿಮೆ ನಷ್ಟ, ಕಡಿಮೆ ಎಂಬೋಲಿಸಮ್ ನ ಸಾಧ್ಯತೆಗಳು, ಕಡಿಮೆ ನೋವು ಮತ್ತು ಆರಂಭಿಕ ಚೇತರಿಕೆಯೊಂದಿಗೆ ಕಡಿಮೆ ಮಾಡಬಹುದು.
ದೀರ್ಘಕಾಲೀನ ಕಾರ್ಯನಿರ್ವಹಣೆಯನ್ನು ಸುಧಾರಿಸುತ್ತದೆ: ಸೂಕ್ತವಾದ ಇಂಪ್ಲಾಂಟ್ ಜೋಡಣೆ ಮತ್ತು ಸ್ಥಿರತೆಯನ್ನು ಸಾಧಿಸುವ ಮೂಲಕ, ರೊಬೊಟಿಕ್ ಜಾಯಿಂಟ್ ರಿಪ್ಲೇಸ್‌ಮೆಂಟ್ ಬದಲಿ ಕೀಲಿನ ದೀರ್ಘಕಾಲೀನ ಕ್ರಿಯಾತ್ಮಕ ಚಟುವಟಿಕೆಯನ್ನು ಹೆಚ್ಚಿಸುತ್ತದೆ.
ರೋಗಿಯ ಆರೋಗ್ಯವು ವರ್ಧಿತಗೊಳ್ಳುತ್ತದೆ: ಸುಧಾರಿತ ನಿಖರತೆ, ವೇಗವಾಗಿ ಚೇತರಿಕೆ ಮತ್ತು ಕಡಿಮೆ ತೊಡಕುಗಳಂತಹ ರೊಬೊಟಿಕ್ ಕೀಲು ಬದಲಾವಣೆಯ ಪ್ರಯೋಜನಗಳು ಹೆಚ್ಚಿನ ರೋಗಿಗಳಿಗೆ ತೃಪ್ತಿಕರ ಅನುಭವ ನೀಡಬಹುದು. ಅಲ್ಲದೆ, ರೊಬೊಟಿಕ್ ಕ್ರಿಯಾವಿಧಾನಗಳಿಗೆ ಒಳಗಾಗುವ ರೋಗಿಗಳು ಹೆಚ್ಚು ನೈಸರ್ಗಿಕ ಕೀಲಿನ ಅನುಭವ ನೀಡುತ್ತದೆ ಎಂಬ ಪ್ರತಿಕ್ರಿಯೆಯನ್ನು ನೀಡುತ್ತಾರೆ.

ಹಳೆ ಏರ್‌ಪೋರ್ಟ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗಳಲ್ಲಿ ಬಳಸಲಾಗುತ್ತಿರುವ MAKO ರೊಬೊಟ್ ಭಾರತದಲ್ಲಿ ಈ ಸಮಯದಲ್ಲಿ ಲಭ್ಯವಿರುವ ಏಕೈಕ ರೊಬೊಟ್ ಆಗಿದೆ. ಇದನ್ನು ಪೂರ್ತಿ ಮೊಣಕಾಲು ಮತ್ತು ಭಾಗಶಃ ಮೊಣಕಾಲು ಬದಲಿಗಳ ಜೊತೆಗೆ ಹಿಪ್ ಬದಲಿ ಮಾಡಲು ಬಳಸಬಹುದಾಗಿದೆ.

ಈಗಿನ ಸಂದರ್ಭದಲ್ಲಿ, ಸೊಂಟ ಮತ್ತು ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಗಳನ್ನು ರೊಬೊಟಿಕ್ ತಂತ್ರಜ್ಞಾನದಿಂದ ಮಾಡಬಹುದು. ಭವಿಷ್ಯದಲ್ಲಿ, ಈ ತಂತ್ರಜ್ಞಾನವನ್ನು ಇತರ ಕೀಲುಗಳಿಗೆ ಕೂಡ ಉಪಯೋಗಿಸಬಹುದು ಎಂಬ ನಿರೀಕ್ಷೆ ಇದೆ.

ಡಾ. ಸುನಿಲ್ ಜಿ. ಕಿಣಿ

ಡಾ.ಸುನೀಲ್ ಗುರ್ಪುರ್ ಕಿಣಿ
MBBS, MS(Orth), DNB(Orth), MCH(Orth), MRCS(Glasg), MRCS(Edin), MNAMS, Dip. SICOT(ಬೆಲ್ಜಿಯಂ)
ಹಿರಿಯ ಕನ್ಸಲ್ಟೆಂಟ್ - ಆರ್ಥೋಪೆಡಿಕ್ ಮತ್ತು ರೊಬೊಟಿಕ್ ಜಾಯಿಂಟ್ ರಿಪ್ಲೇಸ್‌ಮೆಂಟ್ ಸರ್ಜನ್

ಪ್ರಜಾವಾಣಿ ಕ್ವಿಜ್ ವಿಜೇತರು...

ಪರಿಶ್ರಮ ಪಿಯು ಕಾಲೇಜು ಹಾಗೂ ಭೀಮಾ ಗೋಲ್ಡ್ ಸಹಯೋಗದಲ್ಲಿ 'ಪ್ರಜಾವಾಣಿ' ಬೆಂಗಳೂರಿನಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ವಲಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ರಾಜರಾಜೇಶ್ವರಿನಗರದ ಜ್ಞಾನಾಕ್ಷಿ ವಿದ್ಯಾನಿಕೇತನ ಶಾಲೆಯ ಆರ್ಯನ್ ಸುಬ್ರಹ್ಮಣ್ಯ ಹಾಗೂ ಅಕ್ಷಯ್ ರಾವ್ ತಂಡವು ಜಯಗಳಿಸಿತು
ಪ್ರಜಾವಾಣಿ ಚಿತ್ರ/ ರಂಜು ಪಿ

276 ಹುದ್ದೆ ನೇಮಕಾತಿಗಷ್ಟೇ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸಿದ್ಧತೆ • ಆಕಾಂಕ್ಷಿಗಳ ಆಕ್ರೋಶ

656 ಹುದ್ದೆಗೆ ಕೋರಿಕೆ; 504 ಭರ್ತಿಗೆ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ 16 ಇಲಾಖೆಗಳು ಖಾಲಿ ಇರುವ ಕೆಎಎಸ್ ಸೇರಿದಂತೆ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ 656 ಹುದ್ದೆಗಳ ನೇರ ನೇಮಕಾತಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿವೆ. ಆದರೆ, ಈ ಪೈಕಿ 504 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲು ಆರ್ಥಿಕ ಇಲಾಖೆ ಸಮ್ಮತಿ ನೀಡಿದೆ.

ಆದರೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) 2023- 24ನೇ ಸಾಲಿಗೆ 276 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸುವಂತೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಪ್ರಸ್ತಾವ ಸಲ್ಲಿಸಲು ಮುಂದಾಗಿದೆ. ಆರ್ಥಿಕ ಇಲಾಖೆ ಹೆಚ್ಚು ಹುದ್ದೆಗಳ ಭರ್ತಿಗೆ ಸಹಮತಿ ಸೂಚಿಸಿದರೂ ನೇಮಕಾತಿಗೆ ಡಿಪಿಎಆರ್ ಹಿಂದೇಟು ಹಾಕುತ್ತಿದೆ ಎಂದು ಹುದ್ದೆ ಆಕಾಂಕ್ಷಿಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

3 ವರ್ಷಗಳಲ್ಲಿ ಕೆಎಎಸ್ 15 ಹುದ್ದೆ ಭರ್ತಿ: ಕಳೆದ ಮೂರು ವರ್ಷಗಳಲ್ಲಿ 15 ಅಭ್ಯರ್ಥಿಗಳನ್ನು (2011ನೇ ಸಾಲಿನ ಅಧಿಸೂಚನೆ) ಕೆಎಎಸ್ (ಕಿರಿಯ ಶ್ರೇಣಿ) ಹುದ್ದೆಗೆ ಹಾಗೂ 80 ಅಭ್ಯರ್ಥಿಗಳನ್ನು (2020ನೇ ಸಾಲಿನ ಅಧಿಸೂಚನೆ) ತಹಶೀಲ್ದಾರ್ ಗ್ರೇಡ್‌-2 ಹುದ್ದೆಗೆ ನೇಮಕಾತಿ ಮಾಡಲಾಗಿದೆ. ಸದ್ಯ ಖಾಲಿ ಇರುವ ಕೆಎಎಸ್ (ಕಿರಿಯ ಶ್ರೇಣಿ) ಹುದ್ದೆಗಳನ್ನು ಮತ್ತು ತಹಶೀಲ್ದಾರ್ ಗ್ರೇಡ್‌-2 ವೃಂದದ ಖಾಲಿ ಹುದ್ದೆಗಳ ಪೈಕಿ ಒಟ್ಟು 76 ಹುದ್ದೆಗಳನ್ನು ಮುಂದಿನ ಮೂರು ವರ್ಷಗಳಲ್ಲಿ (2023–24, 2024–25 ಮತ್ತು 2025–26) ತಲಾ 25 ಹುದ್ದೆಗಳಂತೆ ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದೆ. ಅದರ ಅನ್ವಯ ಡಿಪಿಎಆರ್‌ಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ವಿಧಾನಸಭೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಒಟ್ಟು 143 ಅಧಿಕಾರಿಗಳಿಗೆ ತಹಶೀಲ್ದಾರ್ ಗ್ರೇಡ್‌-2 ವೃಂದದಿಂದ ತಹಶೀಲ್ದಾರ್ ಗ್ರೇಡ್‌-1 ವೃಂದಕ್ಕೆ ಮುಂಬಡ್ತಿ ನೀಡಲಾಗಿದೆ. ಅಲ್ಲದೆ, 248 ಶಿರಸ್ತೇದಾರ್ (ಉಪ ತಹಶೀಲ್ದಾರ್) ವೃಂದದ ಅಧಿಕಾರಿಗಳಿಗೆ ತಹಶೀಲ್ದಾರ್ ಗ್ರೇಡ್‌-2 ವೃಂದಕ್ಕೆ ಮುಂಬಡ್ತಿ ನೀಡಲಾಗಿದೆ.

ಆರ್‌ಡಿಪಿಆರ್‌ನಿಂದ ಕೆಪಿಎಸ್‌ಸಿಗೆ ಪ್ರಸ್ತಾವ: 'ಗ್ರಾಮೀಣಾಭಿವೃದ್ಧಿ ಇಲಾಖೆಯ (ಆರ್‌ಡಿಪಿಆರ್) ಗ್ರಾಮ ಪಂಚಾಯಿತಿಗಳಲ್ಲಿ ಒಟ್ಟು 832 ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ವೃಂದದ ಹುದ್ದೆಗಳು ಖಾಲಿ ಇದ್ದು, 256 ಹುದ್ದೆಗಳನ್ನು ಭರ್ತಿ ಮಾಡಲು ಕೆಪಿಎಸ್‌ಸಿಗೆ ಪ್ರಸ್ತಾವ ಸಲ್ಲಿಕೆ ಆಗಿದೆ. ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್‌–1 ವೃಂದದ 584 ಹುದ್ದೆಗಳು ಖಾಲಿ ಇದ್ದು, 220 ಹುದ್ದೆಗಳ ಭರ್ತಿಗೆ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್‌–2 ವೃಂದದ 687 ಹುದ್ದೆಗಳು ಖಾಲಿ ಇದ್ದು, 343 ಹುದ್ದೆಗಳ ಭರ್ತಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ 299 ಖಾಲಿ ಹುದ್ದೆಗಳ ಪೈಕಿ 105 ಹುದ್ದೆಗಳಿಗೆ ನೇಮಕಾತಿಗೂ ಕೆಪಿಎಸ್‌ಸಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ವಿಧಾನಪರಿಷತ್ತಿಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

'ಸದ್ಯ, ಖಾಲಿ ಇರುವ ಪಿಡಿಒ ಹುದ್ದೆಗೆ ಸಮೀಪದಲ್ಲಿರುವ ಗ್ರಾಮ ಪಂಚಾಯಿತಿಯ ಪಿಡಿಒ ಅಥವಾ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್‌–1 ವೃಂದದ ಅಧಿಕಾರಿಗೆ ಹೆಚ್ಚುವರಿ ಪ್ರಭಾರ ವಹಿಸಲು ನಿರ್ದೇಶನ ನೀಡಲಾಗಿದೆ. ಅಲ್ಲದೆ, ಪಿಡಿಒ ವೃಂದಕ್ಕೆ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್‌–1 ವೃಂದದ ಅರ್ಹ ನೌಕರರು ಲಭ್ಯವಾಗುವ ವರೆಗೆ ಜ್ಯೇಷ್ಠತೆ ಮತ್ತು ಅರ್ಹತೆ ಮೇಲೆ ಮುಂಬಡ್ತಿ ನೀಡಲಾಗುತ್ತಿದೆ' ಎಂದೂ ಅವರು ವಿವರಿಸಿದ್ದಾರೆ.

ಇಲಾಖೆ	ಭರ್ತಿ ಕೋರಿದ ಹುದ್ದೆಗಳ ಸಂಖ್ಯೆ	ಆರ್ಥಿಕ ಇಲಾಖೆ ಒಪ್ಪಿದ ಸಂಖ್ಯೆ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ	97	85
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್	59	55
ಕಂದಾಯ	129	76
ಪೊಲೀಸ್	12	10
ಕಾರಾಗೃಹ	09	03
ವಾಣಿಜ್ಯ ತೆರಿಗೆ	143	140
ಖಜಾನೆ	69	48
ಅಬಕಾರಿ	13	10
ಸಹಕಾರ	26	21
ಸಮಾಜಕಲ್ಯಾಣ	54	27
ಹಿಂದುಳಿದ ವರ್ಗಗಳ ಕಲ್ಯಾಣ	13	07
ಕಾರ್ಮಿಕ	11	04
ಕೌಶಲಾಭಿವೃದ್ಧಿ	11	03
ಪ್ರವಾಸೋದ್ಯಮ	02	02
ಆಹಾರ ಮತ್ತು ನಾಗರಿಕ ಸರಬರಾಜು	09	09
ಯುವ ಸಬಲೀಕರಣ ಮತ್ತು ಕ್ರೀಡೆ	04	04
ಒಟ್ಟು	656	504

ಜೆಡಿಎಸ್‌ಗೆ ರಾಜ್ಯ ಪಕ್ಷದ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ, ಕಾಂಗ್ರೆಸ್, ಆಮ್ ಆದ್ಮಿ ಪಕ್ಷ ಸೇರಿದಂತೆ ಆರು ಪಕ್ಷಗಳು ಮಾತ್ರ ರಾಷ್ಟ್ರೀಯ ಸ್ಥಾನಮಾನ ಹೊಂದಿವೆ ಎಂದು ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದೆ.

ಜೆಡಿಎಸ್ ರಾಜ್ಯ ಪಕ್ಷದ ಸ್ಥಾನಮಾನವನ್ನು ಮಾತ್ರ ಹೊಂದಿದೆ. ಕಲ್ಯಾಣ ರಾಜ್ಯ ಪ್ರಗತಿ ಪಕ್ಷ, ಕರ್ನಾಟಕ ರಾಷ್ಟ್ರ ಸಮಿತಿ, ಕನ್ನಡ ಚಳವಳಿ ವಾಟಾಳ್ ಸೇರಿದಂತೆ 110 ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳು ರಾಜ್ಯದಲ್ಲಿವೆ. 190 ಮುಕ್ತ ಚಿಹ್ನೆಗಳೂ ಲಭ್ಯವಿವೆ ಎಂದು ಆಯೋಗ ತಿಳಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ನಿಯಮಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಚುನಾವಣಾ ನಿಯಮಗಳ ಅಡಿಯಲ್ಲಿ ಶುಕ್ರವಾರ ಅಧಿಸೂಚನೆ ಹೊರಡಿಸಿದೆ. ಸಿಪಿಎಂ, ಬಹುಜನ ಸಮಾಜ ಪಕ್ಷ ಹಾಗೂ ನ್ಯಾಷನಲ್ ಪೀಪಲ್ಸ್ ಪಾರ್ಟಿಗಳು ರಾಷ್ಟ್ರೀಯ ಪಕ್ಷಗಳೆಂದು ಘೋಷಿಸಿದೆ.

'ಜಾತಿ ಗಣತಿಗೆ 60 ಲಿಂಗಾಯತ ಶಾಸಕರ ವಿರೋಧ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಗೆ ಲಿಂಗಾಯತ ಸಮುದಾಯದ 60ಕ್ಕೂ ಹೆಚ್ಚು ಶಾಸಕರ ವಿರೋಧವಿದೆ' ಎಂದು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದರು.

'ಈ ವರದಿ ಅವೈಜ್ಞಾನಿಕ. ಇದನ್ನು ಅಂಗೀಕರಿಸದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದೇವೆ. ಆ ಪತ್ರಕ್ಕೆ 60ಕ್ಕೂ ಹೆಚ್ಚು ಶಾಸಕರು ಸಹಿ ಮಾಡಿದ್ದಾರೆ. ನಾನೇ ವರದಿ ನೋಡಿಲ್ಲ. ನೀವು ಈಗಲೇ ವಿರೋಧಿಸುತ್ತಿದ್ದೀರಲ್ಲ ಎಂದು ಮುಖ್ಯಮಂತ್ರಿ ಪ್ರತಿಕ್ರಿಯಿಸಿದ್ದಾರೆ' ಎಂದು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಚಿತ್ರದುರ್ಗದಲ್ಲಿ ಸಿದ್ದರಾಮಯ್ಯ ಅಹಿಂದ ಶಕ್ತಿ ಪ್ರದರ್ಶಿಸಲು ಹೊರಟಿದ್ದಾರಲ್ಲ ಎಂಬ ಪ್ರಶ್ನೆಗೆ, 'ನಾವು ಲಿಂಗಾಯತ ಶಕ್ತಿ ಪ್ರದರ್ಶನ ಮಾಡುತ್ತೇವೆ' ಎಂದರು.

ಪತಿಗೆ ಜೀವಾವಧಿ ಶಿಕ್ಷೆ

ಬೆತ್ತಲುಗೊಳಿಸಿ, ಕುತ್ತಿಗೆ ಹಿಸುಕಿ ಪತ್ನಿಯ ಹತ್ಯೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯನ್ನು ಬೆತ್ತಲುಗೊಳಿಸಿ ಕುತ್ತಿಗೆ ಹಿಸುಕಿ ಹತ್ಯೆ ಮಾಡಿದ್ದ ಆಕೆಯ ಪತಿ ಚುನ್ನು ಹನ್ಸದ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 9ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಒಡಿಶಾದ ಮಯೂರ್‌ಬಂಜ್ ಜಿಲ್ಲೆಯ ಚುನ್ನು ಹನ್ಸದ್ ಶಿಕ್ಷೆಗೆ ಗುರಿಯಾದ ಅಪರಾಧಿ. ಹೊಸಕೋಟೆ ಠಾಣೆ ವ್ಯಾಪ್ತಿಯಲ್ಲಿ 2020ರ ಜುಲೈ 22ರಂದು ನಡೆದಿದ್ದ ಕೊಲೆ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ಎಸ್. ಶ್ರೀಧರ್ ಅವರು ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾದ ರಾಜ ಹಾಗೂ ಮಹಾದೇವ ಗಡದ ಪ್ರಕರಣದಲ್ಲಿ ವಾದ ಮಂಡಿಸಿದ್ದರು.

'ಚುನ್ನು ಹನ್ಸದ್ ವಿರುದ್ಧ ದಾಖಲಾಗಿದ್ದ ಕೊಲೆ (ಐಪಿಸಿ 302) ಪ್ರಕರಣದಲ್ಲಿ ನ್ಯಾಯಾಲಯ, ಪುರಾವೆಗಳು ಹಾಗೂ ಸಾಕ್ಷಿದಾರರ ವಿಚಾರಣೆ ನಡೆಸಿತ್ತು. ಚುನ್ನು ಅಪರಾಧಿ ಎಂಬುದು ಸಾಬೀತಾಗಿದ್ದರಿಂದ ನ್ಯಾಯಾಲಯ, ಜೀವಾವಧಿ ಶಿಕ್ಷೆ ಹಾಗೂ ₹ 25 ಸಾವಿರ ದಂಡ ವಿಧಿಸಿದೆ' ಎಂದು ಮಹಾದೇವ ಗಡದ ತಿಳಿಸಿದ್ದಾರೆ.

ಶೀಲದ ಬಗ್ಗೆ ಶಂಕಿಸಿ ಹತ್ಯೆ

ಕಾರ್ಮಿಕರ ಶೆಡ್‌ನಲ್ಲಿ ದಂಪತಿ ವಾಸವಿದ್ದರು. ಕೆಲಸದ ಸ್ಥಳದಲ್ಲಿ ಸಹೋದ್ಯೋಗಿ ಯುವಕರ ಜೊತೆ ಪತ್ನಿ ಮಾತನಾಡುತ್ತಿದ್ದರು. ಇದನ್ನು ನೋಡಿದ್ದ ಚುನ್ನು ಹನ್ಸದ್, ಪತ್ನಿಯ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸಿ ಜಗಳ ಮಾಡಲಾರಂಭಿಸಿದ್ದ.

2020ರ ಜುಲೈ 22ರಂದು ರಾತ್ರಿ ದಂಪತಿ ನಡುವೆ ಏಕಾಏಕಿ ಜಗಳ ಶುರುವಾಗಿತ್ತು. ಪತ್ನಿ ಮೇಲೆ ಹಲ್ಲೆ ಮಾಡಿದ್ದ ಚುನ್ನು ಹನ್ಸದ್, ಬಟ್ಟೆಗಳನ್ನು ಬಿಚ್ಚಿ ಬೆತ್ತಲು ಮಾಡಿದ್ದ. ನಂತರ, ಎದೆ ಹಾಗೂ ದೇಹದ ಹಲವು ಭಾಗಗಳಿಗೆ ಹಲ್ಲಿನಿಂದ ಕಚ್ಚಿ ರಕ್ತ ಸೋರುವಂತೆ ಗಾಯಗೊಳಿಸಿದ್ದ. ಬಳಿಕ, ಪತ್ನಿಯ ಕತ್ತು ಹಿಸುಕಿ ಕೊಂದಿದ್ದ. ನಂತರ, ಶೆಡ್ ಛಾವಣಿಯಲ್ಲಿದ್ದ ಗಾಜು ಒಡೆದು, ಕಿಂಡಿ ಮಾಡಿಕೊಂಡು ಸ್ಥಳದಿಂದ ಪರಾರಿಯಾಗಿದ್ದ.

ಕೊಲೆ ಸಂಬಂಧ ಮಹಿಳೆಯ ಸಹೋದರಿ ಹೊಸಕೋಟೆ ಠಾಣೆಗೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಅಂದಿನ ಇನ್‌ಸ್ಪೆಕ್ಟರ್ ವಿ.ಡಿ. ಶಿವರಾಜು ಅವರು ಚನ್ನು ಹನ್ಸದ್‌ನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಕೆಲಸಕ್ಕೆ ಬಂದಿದ್ದ ದಂಪತಿ

ಚುನ್ನು ಹನ್ಸದ್, ತಮ್ಮೂರಿನ 25 ವರ್ಷದ ಮಹಿಳೆಯನ್ನು ಎರಡನೇ ಮದುವೆಯಾಗಿದ್ದ. ಮಹಿಳೆಗೂ ಅದು ಎರಡನೇ ಮದುವೆಯಾಗಿತ್ತು. ಕೆಲಸ ಹುಡುಕಿಕೊಂಡು ಇಬ್ಬರೂ ಬೆಂಗಳೂರಿಗೆ ಬಂದು ದೊಡ್ಡ ಹುಲ್ಲೂರು ಗ್ರಾಮದಲ್ಲಿ ನೆಲೆಸಿದ್ದರು. ಇಬ್ಬರೂ ಕೂಲಿ ಕೆಲಸ ಮಾಡುತ್ತಿದ್ದರು.

ಅದ್ಧೂರಿ ಪುರಮೆರವಣಿಗೆ: ಶ್ರೀಗಳಿಗೆ ಸುವರ್ಣಾಭಿಷೇಕ, ಪುಷ್ಪಾಭಿಷೇಕ

ಪೇಜಾವರ ಶ್ರೀಗಳ ಷಷ್ಟ್ಯಬ್ಧ ಅಭಿವಂದನೆ

ಪ್ರಜಾವಾಣಿ ವಾರ್ತೆ

ಉಡುಪಿ: ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳ ಷಷ್ಟ್ಯಬ್ಧದ ಪ್ರಯುಕ್ತ ಶನಿವಾರ ಸಂಜೆ ರಥಬೀದಿಯ ಪೇಜಾವರ ಮಠದ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ಅಭಿವಂದನಾ ಸಮಾರಂಭ ಅದ್ಧೂರಿಯಾಗಿ ನೆರವೇರಿತು.

ನಗರದ ಜೋಡುಕಟ್ಟೆಯಿಂದ ಭವ್ಯ ಶೋಭಾಯಾತ್ರೆಯ ಮೂಲಕ ಶ್ರೀಗಳನ್ನು ರಥಬೀದಿಗೆ ಕರೆತರಲಾಯಿತು. ಕುಣಿತ ಭಜನೆ, ಸಾಂಪ್ರದಾಯಿಕ ಬಿರುದಾವಳಿ, ಚಂಡೆ, ಬಣ್ಣದ ಕೊಡೆ, ಕೀಲು ಕುದುರೆ ಸಹಿತ ಸಾಲಂಕೃತ ವಾಹನಗಳಲ್ಲಿ ಪುರ ಮೆರವಣಿಗೆ ನಡೆಯಿತು.

ಬಳಿಕ ನಡೆದ ಅಭಿವಂದನಾ ಸಮಾರಂಭದಲ್ಲಿ ಶ್ರೀಗಳಿಗೆ ಸುವರ್ಣಾಭಿಷೇಕ, ಪುಷ್ಪಾಭಿಷೇಕ ಹಾಗೂ ಕಪ್ಪ ಕಾಣಿಕೆ ಸಲ್ಲಿಸಲಾಯಿತು. ಕೃಷ್ಣಮಠದಲ್ಲಿ ಶ್ರೀಕೃಷ್ಣಮಂತ್ರ ಯಾಗ, ಗೋಸೂಕ್ತ ಯಾಗ, ಅನ್ನ ಸಂತರ್ಪಣೆ ನಡೆಯಿತು.

ಅಭಿವಂದನೆ ಸ್ವೀಕರಿಸಿ ಮಾತನಾಡಿದ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, 'ಹಿಂದೂಗಳು ಹಿಂದೂಗಳಾಗಿ ಉಳಿದರೆ ಮಾತ್ರ ಶತಮಾನಗಳ ಹೋರಾಟದಿಂದ ನಿರ್ಮಾಣಗೊಂಡಿರುವ ರಾಮಮಂದಿರ ಶಾಶ್ವತವಾಗಿ ಉಳಿಯುತ್ತದೆ' ಎಂದರು.

'ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗುತ್ತಿದ್ದಂತೆ ಅಪಸ್ವರಗಳು ಕೇಳಿಬರುತ್ತಿದ್ದು ಮೋದಿ, ಯೋಗಿ ಅಧಿಕಾರದಿಂದ ಕೆಳಗಿಳಿಯುತ್ತಿದ್ದಂತೆ ಮಂದಿರ ಕಿತ್ತೊಗೆಯುವುದಾಗಿ ಭಂಡ ಧೈರ್ಯದ ಹೇಳಿಕೆ ನೀಡಲಾಗುತ್ತಿದೆ. ಈ ಬಗ್ಗೆ ಹಿಂದೂಗಳೆಲ್ಲ ಜಾಗೃತರಾಗಿರಬೇಕು' ಎಂದು ಕರೆ ನೀಡಿದರು.

ಪರ್ಯಾಯ ಕೃಷ್ಣಾಪುರ ಮಠದ ವಿದ್ಯಾಸಾಗರ ತೀರ್ಥ ಸ್ವಾಮೀಜಿ, ಪಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ, ಕಾಣಿಯೂರು ಮಠದ ವಿದ್ಯಾವಲ್ಲಭ ತೀರ್ಥ ಸ್ವಾಮೀಜಿ, ಶಾಸಕರಾದ ಯಶ್‌ಪಾಲ್ ಸುವರ್ಣ, ಕಿರಣ್ ಕೊಡ್ಗಿ, ಗುರ್ಮೆ ಸುರೇಶ್ ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಕೋಟ ಶ್ರೀನಿವಾಸ ಪೂಜಾರಿ ಉಪಸ್ಥಿತರಿದ್ದರು.

ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿಗಳ ಷಷ್ಟ್ಯಬ್ಧದ ಅಂಗವಾಗಿ ಶನಿವಾರ ಸಂಜೆ ರಥಬೀದಿಯ ಪೇಜಾವರ ಮಠದ ಮುಂಭಾಗದಲ್ಲಿ ಶ್ರೀಗಳಿಗೆ ಅಭಿವಂದನೆ ಸಲ್ಲಿಸಲಾಯಿತು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

COLDWELL BANKER VALUE ADD REALTY #1 REAL ESTATE AGENCY IN BANGALORE. Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here. Act fast and secure your corner of success. 99165 92400

BANASHANKARI 6TH STAGE, 4th BLOCK BDA SITE FOR SALE 40x60, NEAR KANAKAPURA ROAD METRO STATION Call:9606226222 9632173601

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

BDA SITE 30x40 BSK 6th stage 11th block South facing 12500/-. Nego, 9448063661, 9611001011

3250 SQFT S/E CORNER BDA SITE CLEAR TITLES CK ACHKUT OPP VENKATADRI KALYAN MANTAP 9591566166

BDA SITE Sale Banashankari 6th Stage,4th T' Block 20x30,E/F, 30'Road Near Metro Station: 9972327777

Anjanapura

BDA SITE 20'X30' FOR IMMEDIATE SALE IN ANJANAPURA 5TH 'G' BLOCK,HAVING KAVERI WATER, 49 LAKHS,OWNER: 9008716584

Anekal

PLOT FOR SALE 60X40, GATED COMMUNITY, ANEKAL, RS. 56 LAKHS, CONTACT: 9739024512

Gnanabharathi

20X30 BDA SITE SALE GNANABHARATHI LAYOUT 1st Block, VALAGEREHALLI, near Sirke Appartment,Rs.55 Lakhs. 9742681666

Indiranagar

WEST FACING 60x40 site for sale near Domlur Club Indiranagar. Quiet and Calm Location. Price 8 cr. 9945323691.

Chikkaballapura

SITES: SALE Chikkaballapura Apranje Times Square DC Converted Covid Investment / Immediate Construction 1200sq EF Broker Excuse: 9886006491

Jayanagar

JAYANAGAR 2ND Block SITE SALE 62×53 W/S Corner and Byrasandra 40×45 North. Contact: 9448684258

BDA Site SALE 2400sq.ft 2 minutes drive from Vajrahalli metro, 10 minutes to Jayanagar Complex. Vajramuni-Nagar. Contact: Krishnappa 6366482171. Ravikumar: 7760417584.

JAYANAGAR 4TH Block. Prime Property. 40x52 North Facing. Beautiful Location. Call:- 8147953827 Brokers Excuse

J P Nagar

SALE 30X40 Residential Site North Facing Shreyas Colony J.P.Nagar 7th Phase Call: Shivakumar 9880425607

AVAILABLE 20X30 30X40 40X60 BDA SITES FOR SALE ANJANAPURA, JP NAGAR 9th BSK 6th STAGE: 9483494764

Kengeri

30X40 NORTH, BBMP A katha, Kengeri Metro Station, Uttarahalli Road, (BGS Global) 7,000/- Negotiable. 9148914809, 9740075563.

Koramangala

KORAMANGALA 30X37, 30x40, 30x80, 40x60, 50x80 Residencial/ Commercial Sites, genuine byers call us 7019770736/ 8951614989.

Kanakapura Road

SITE SALE 30×40 Balaji Layout, 35×45 Bikashipura, 20×30 Duplex J.P. Nagar 8th Phase. Contact: 9448684258

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotioble: 9538680364/ 9986146147

JAYANAGAR HOUSING Society BDA Site Sale,30x40,West 10.950/- Negotioble Near 80" Road: 9538680364 / 9740150364

KAGGALIPURA SITE Sale 60x90, East Face BMRDA, Approved Gated Community, 2950/-Psft Negotioble: 8884707773, 9513004587

K R Puram

MEDAHALLI SITE_FOR Sale 50x32 North West Corner Near Royal Residency Hotel Medahalli (K.R.Puram) Call: 97311-11120

Kempegowda Layout

FOR SALE Nada Prabhu Kempegowda layout 8th block. BDA. NOC. size. 163/100. feet Road side. 163. feet. face west. Conversion land. Legal document. Rate Rs. 4500. Ph no. 9686469799

COMMERCIAL SiteFor Sale, Kempegowda Layout 8th Block,Size:163X100, West Face, BDA,NOC,NNA, Conversion Land, Leagal Documents, Price:4500/-Sq.Ft. Ph:9448793428, 9632227878

Nelamangala



60X40 SITE SALE Premium Location 100 Meter Golden Palms Resort, Near-to Unibic Factory Husukur Road,Alur Bangalore. 2050/-Sqft Genuine`Buyers Contact:9632330007 9986420007

SITES: SALE Nelamangala Snehamayee Housing Society Panchayat Converted Sites 1000, 1200, 1500 SQFT Brokers Excuse: 9886006491

Multiple Locations

SADHASHIVNAGAR RMV, Judicial Layout, Manyata, Nandhini layout, North county Dodaballapura.50x80, 60x90, 120x200, 44000sft. 2% commission. 9380586105.

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

Rajarajeshwari Nagar

R.R.NAGAR IDEALHOMES 40x60, 50x80, 72X96, 90X105 BEML 30x45, 40x60, 50x80- Houses, Banashankari 6th- 30x40, 40x60, 50x80. 94484-83699

RAJARAJESHWARINAGAR BEML LAYOUT 5th Stage,30x45,North Facing Owner Meeting Contact: 9448508410, 9844216344, Brokers Excuse

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

Intl Airport Road

30x40 Converted Plots @ 1,70,000/- 142/- per sq.ft, 90 minutes Journey from Yelahanka Ready for Registration 9343510635

Sadashiva Nagar

***SADASHIVANAGAR* RESIDENCIAL** PRIMELOCATION 54x86 SITE FOR SALE. Contact: 9945079777

Vasanth Nagar

NW CORNER 60x40 site with 4 k sqft old house at Chakravarthy Layout, behind KIA Motors on Palace Road. Price 8 cr. 9945323691

Hosur Road

1350 SQFT North Facing Site at Begur. Fully Compounded with Security Gate. A Khatha. 1.5KM from Hosur Road Metro. Rs. 5400/- Psft. 9008930130

Out-Station

INDUSTRIAL PLOT FOR SALE 20 Guntas & 2000 sqft shed available with all facilities like water & electricity @ Prajavani Road, Belur Industrial Area, Dharwad, Karnataka. Clear documents, Tax cleared till date. Call: 9538866931

Vishweshwariah Layout

"AVAILABLE BDA-SITE Vishveshwaraiah Layout 6th Block 50x80 South 60'feet Road & 4th Block 50x80 West 80'feet Road. 9632788913"

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

DIRECT OWNER 40x60 E/F BDA #2194 Site Sale VISHVESWARAIAH LAYOUT 1st Block, 60ft-Road, Rs.10800/-. Contact:9886634578

"28X40 W/S Corner Residential BDA Site sale, near 100 Feet Road 1st Block Vishveshwaraiah Layout- 9845143579"

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

"BDA COMMERCIAL Site For-sale 20x60 North Face, Vishveshwaraiah 4th-Block, 80 Feet Road, opp.BDA Complex. 8618934679"

SITE FOR sale 30×40 West facing BDA Sir M Vishweshvaraiah 2nd block 9448617696 LOKESH

BDA SITE SALE 20x30 WF, 30x40 EF, SRMV 30x50 EF, Annapoorneshwari Nagar: 7760623953

Flat

Banashankari

KATHRIGUPPE MAIN Road 2nd-floor Two Bedroom FLAT SALE 900sft west-facing 50,00,000/- negotiable. ABHILASHA CONSULTANT.9480565758

Basaveshwaranagar

"MAGADI MAIN-ROAD 2BHK one year old-Flat 1165.sft occupancy certificate A-katha covered Car park, ₹80 Lakhs "Sri.Ganesh Estates" 9845286505"

1300 SFT Fully Furnished 3BHK Flats with Smart Marble Flooring Sharada Colony Basaveshwara Nagar: 9591785454

Chandra Layout

CHANDRA LAYOUT Near Incometax Sona Apartment 2nd Floor 2 Bedroom 600Sqft 45 Lacks: 9448045601/ 9535811626

Hanumanthnagar

SALE 3BHK Flat 1050 Sqft 4th floor 726, 6th cross, near Webster School Ashokanagar 145 Lakhs (Fixed) call: 9945455503

Kumaraswamy Layout

3-BHK E/F A-Khata Flat 2250Sqft FullyTeak Wood Italian Marbles 2-Carpark 1.6Cr Kumaraswamy Layout 15F Bustand 9611144096

Kanakapura Road

3-BHK FLAT Sale 1575 Sq.Ft N/F Full Interiors 70 Lakhs Off Kanakpura Road, Konankunte Near Junior Delhi Public School: 9343722162

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Outer Ring Road

FLAT FOR SALE, 3 BHK at Tin Factory /ORR, Gated Community, Pool, Gym, Near Metro. 1.17 Cr. 9008588333, 080-40930707 MULTICITY CONSULTANTS. Brokers Welcome.

House

Magadi Road

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

Uttarahalli

3 BHK HOUSE for sale in Maruti Layout Vasantapura, Uttarahalli. For details Contact owner- 9591299944.

Mysore

40X60, 3 BHK duplex House for sale Opp Lalitha Mahal, KC Layout, Mysuru, contact: 9448040401

Agricultural Land Converted

Nelamangala

SALE: 73ACRES @ Nelamangala. 45000 and 22000sqft @ Nagadevanalli, East, 80feet Ring Road adjacent. Suitable for Schools, Apartments. Call: 8310333808

Commercial Land

Bommasandra

KIADB INDUSTRIAL land NE Facing 60000 sqft with Building Bommasandra call 8431659271 or 9901115611

Mysore Road

COMMERCIAL LAND Outright Sale- 5 Acres on Mysore Road , Mayaganahalli, Brokers Excuse. Ph:7259785149, 8123999299

Vishweshwariah Layout

SITES SALE- Commercial 50x80, 80 Feet Road, Visveshwaraiah Layout 4th Block & NGEF Malathalli 30x40 West, 40 Feet Road-9886784539

Commerical

J P Nagar

J.P.NAGAR 60X90 Commercial, Ring Road, Jayanagar Residential 80x120 (old house) genuine buyers, Suraj Realtors -9845232711

WEEKEND CORNER

ಕ್ಲಾಸಿಫೈಡ್ಸ್

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ ಹತ್ತಿರ ನಾಗೇನಹಳ್ಳಿ 20x30
ರೂ.4 ಲಕ್ಷದಿಂದ ಪ್ರಾರಂಭ
ಹೊಸ APMC YARD ಹತ್ತಿರ ಮಾಕಳಿ DC CONVERTION ಸೈಟ್‌ಗಳು
ಚಿಕ್ಕಬಾಣಾವರ ಹತ್ತಿರ ತೊರೆನಾಗಸಂದ್ರ
ಮಾದನಾಯಕನಹಳ್ಳಿ NH–4 ಇಂದ 1.5 ಕಿ.ಮಿ.
ನಗರ ಸಭೆ ಲಿಮಿಟ್ಸ್
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 7406994547

ವೆಡ್ಡಿಂಗ್ ಸೀಸನ್ ಸ್ಪೆಷಲ್
ಸಾಂಪ್ರದಾಯಿಕ & ಜೀವನಶೈಲಿ ಆಧಾರಿತ
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ಪ್ರದರ್ಶನ ಮತ್ತು ಮಾರಾಟ
ಭಾರತದ 100+ ನುರಿತ ನೇಕಾರರು ಮತ್ತು ಅತ್ಯುತ್ತಮ ವಿನ್ಯಾಸಕಾರರು
16 ರಿಂದ 25 Dec.
ಸಮಯ: ಬೆಳಿಗ್ಗೆ 11 ರಿಂದ ರಾತ್ರಿ 9 ರವರೆಗೆ
ಸ್ಥಳ: ಶಿಲ್ಪ ಕಲಾ ಮಂಟಪ
9ನೇ ಅಡ್ಡ ರಸ್ತೆ, ಜೆಪಿ ನಗರ, 3ನೇ ಹಂತ ಬನ್ನೇರುಘಟ್ಟ ಮುಖ್ಯರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಸಮೀಪ, ಬೆಂಗಳೂರು
ದೇಶಾದ್ಯಂದತ ಕೈಮಗ್ಗ ರೇಷ್ಮೆ ಸೀರೆಗಳು ಮತ್ತು ಕಾಟನ್ ಸೀರೆಗಳು, ಆಕರ್ಷಕ ವಿನ್ಯಾಸ, ಸಾಂಪ್ರದಾಯಕ, ಪಾಶ್ಚಿಮಾತ್ಯ ಉಡುಪುಗಳು, ಫ್ಯಾಷನ್ ಜ್ಯುವೆಲ್ಲರಿ, ಹೋಮ್ ಲಿನೆನ್ ಮತ್ತು ಇನ್ನೂ ಅನೇಕ ಉತ್ಪನ್ನಗಳು ಲಭ್ಯ.

M: 9441987009 | ALL DEBIT & CREDIT CARDS ACCEPTED | ENTRY FREE

Jayanagar

SALE 80X120 Commercial North Facing on 100feet Road Jayanagar 8th Block Excellent Location Contact: 9066399102 9844134068.

Kalasipalya

RUNNING LODGE with 43 ROOMS in KALASIPALYAM Bangalore for sale. For details Contact owner- 9591299944.

Mysore Road

MYSORE ROAD Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

Industrial & Factory

General

SALE, KIADB, One Acre Industrial Land at Kumbalgodu/ Peenya. East facing. Clear Titles. Contact: 9844039416

Mysore Road

MYSORE ROAD Kumbalagodu Bangalore prime Industrial area 11600 sqft land area, 16000 sqft Built up area garments manufacturing unit Sedex approved with 150 HP power available for sale. Contact :9945156100.

Residential/ Commercial

Anjanapura

SALE 50 X 80 site at Anjanapura. Suitable for factory setup. Phone: 08023613333

East

KYALASANAHALLI,NEAR EXPRESS Highway, Biocon, 3003sft,East Facing, plot 28 At JP Lakeview,Jigini hobli, Anekal for sale.ph:09848417154/0789 3860416

Jayanagar

AVAILABLE 2400 sqft prime property for sale near Madhavan park. South Facing. Immediate possession. Brokers Excuse. Contact 7760110114

Villas/Bunglows

Nagarabhavi

50X60 SITE S/F with Posh Bungalow in Bairaveshwar Nagar, Nagarabhavi Main Road. Bangalore. 9341989867.

REAL ESTATE BUYING

Joint Development

Joint Venture

"URGENTLY REQUIRED Property any-dimensions in & around Bangalore for Builders (Joint Venture or Individual). genuine Parties-Call: 9019533999/ 9731379933"

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

Jayanagar

WANTED SITE or Old house 30x40, 40x60 in Jayanagar/ Jayanagar 'T' Block. Agents Excuse. 8971013882.

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweshwaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

RENTAL PROPERTIES

Accommodation Available

Commercial

WAREHOUSE FOR Rent at KIADB Anthranshalli Industrial. Area, 2nd phase Tumkur Available 2Acre's open space with Compound party can build their own additional Temporary Shed in open Space. Contact 9820070829, 9036468995.

COMMERCIAL SPACE FOR LEASE 60X100,Prime Location, SAVALANGA ROAD, SHIMOGA CITY. Serious persons only contact: 9611899009(Brokers & Time passers Excuse)

Industrial And Factory

RENT, PEENYA, 1,10,000 sqft building, E/f, each floor 20000 sqft suitable; Software/ Pharma/ Garments: 9141326819

Flats

AVAILABLE APARTMENT 3 BHK furnished spacious flat Mysore road for lease rupees 25L. PH 9738223432.

Guest House

INDIRANAGAR 80 Feet Road fully furnished A/C 4BHK Suitable: Guesthouse, 2Halls, 2Servant Rooms, 2Carpark Rent Rs.1.50 Lacs pm Call: 9901778787/ 9343728200

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PUBLIC NOTICE

KARNATAKA REDDYJANA SANGHA
No.1, Mahayogi Vemana Road
3rd Block, Koramangala
Bangalore - 34

TENDER NOTICE

Tenders are invited from reputed Civil Contractors / Suppliers for following works.

a) Providing Additional Toilet to Old Girls Hostel Building Est. Amount Rs.16.90 Lakh.

b) Construction of Proposed Arch at School Entrance KRJS, Roopena Agrahara, Bengaluru Est. Amount Rs.8.23 Lakh

Last date for submitting sealed Tenders 22.12.2023 at 3.00pm. for more details, visit our website www.reddyjanasangha.org Contact : 080-25534194 9945500943

President General Secretary

SOCIAL SERVICES

Old Age Home

BANGALORE-SHELTER HOME with Free Food, Education for Destitute Women Children, Old Age. 7411049247/ 8884572149.

MATRIMONIAL

Brides Wanted

Muslim

MUSLIM BOY 35 Years / 5'10/ Working in UK (as a Senior Data Analyst) father Businessman Resident of Bangalore is looking for a suitable match from a good family (9164400029)

SUNNI MUSLIM Boy 31 Years Born 5'11 (Working in USA) Doctor is looking for a educated and liberal family Only serious seekers can contact (080-69144008)

SUNNI MUSLIM Boy 1994 Born /5'11/ Working in America well established Family of Bangalore is looking for match for early marriage (9749993002)

Christian

BRIDE WANTED

Keralite, Catholic parents of single child settled in Bengaluru, invites alliance for their son, 23 yrs, completed 10th, job courses, Not working. Interested Catholic families may apply with details of disability if any to the email: infantj333@yahoo.com

WANTED BDA SITES

BSK 5th & 6th STAGE ANJANAPURA VISHVESHWARAIAH LAYOUT KEMPE GOWDA ARKAVATHY JP NAGAR 8th & 9th PHASE HSR JAYNAGARA BTM 4TH STAGE

GENUINE SELLERS ONLY. NRI BUYER'S DIRECT REGISTRATION WITHIN 15 DAYS

SURYA PROPERTIES:- 9880659555 9916759939

PERSONAL

Change of Name

I,NIKITA N RAMADURG Residing at Flat No.101, Vishwotama Enclave, Sarvobhagam Nagar, Arekere, BG Road, Bengaluru-560076 have changed-my name-to NIKITA RAMDURG Vide affidavit dtd:16.12.2023 sworn before Notary Deepa.M,Bengaluru

CHANGE OF NAME

I, **KRISHNAPPA B,** R/at # 232, 18th Cross, 31st Main, Siddalingeshwara Theatre, JP Nagar 6th Phase, Bengaluru-560078, have changed my name to **RAMAKRISHNA** vide affidavit dt:16-12-2023, before Notary C V Earappa, Bengaluru. Henceforth I shall be called **RAMAKRISHNA** only.

RENUKADAS MAHENDRA DAS, D/o Mahendra Das, R/o No.B-004, Shebang Basapura Village, Electronics City, Bangalore - 560100, have permanently changed my name from RENUKADAS MAHENDRA DAS to RENUKA DAS SINGH, vide affidavit dated 15/12/2023, sworn before notary L.Puttaraju, Bangalore.

CHANGE OF NAME

I, **AR MANJUNATH,** Alias **R MANJUNATH,** R/at # Ramandhpuram, Ramandhapuram, Venkatagirikota, Chittoor, Andhra Pradesh, will henceforth be know as **A R MANJUNATH** vide affidavit dt:16-12-2023, before Notary K V Mani, Bengaluru.

I, NIKHIL M PAREKH (old name) residing at RAJ OPAL, No.206, 2nd Floor, 24th Main, J.P.Nagar, 6th Phase, BENGALURU- 560078 have changed MY name from NIKHIL M PAREKH to NIKKHHIL M PAREKH vide affidavit dated 15.12.2023 before notary Mr.Arvind Patil, BENGALURU.

CHANGE OF NAME

I, **ANITA KUMARI,** W/o Shyam Sundar Jaishwal, R/at # 35, 1st Main, 1st Cross, Kumaraswamy Layout, 2nd Stage, Bengaluru- 560111 have changed my name to **ANITA SHYAM SUNDAR JAISHWAL** vide affidavit dt:11-12-2023, before Notary L. Puttaraju, Bengaluru. Henceforth I shall be called **ANITA SHYAM SUNDAR JAISHWAL** only.

I, CLINT SPARROW S/o Rodney Sparrow R/o #66, 4th B cross, Yagappa Layout, Vishwanath Naganahalli, Bengaluru-560032 have changed my Name to CLINT MARK SPARROW vide affidavit dated: 9.12.2023 sworn before Notary Sivakumara M.N. Bengaluru

I, ASHA .B.R. D/o Ramakrishnappa.S, aged about 23 years residing at Mathapitha Nilaya, Kanaka Convention Hall Road, 11 Cross V-V-Extension, Hosakote Town Bangalore Rural District. Have changed my name to Monvitha .B.R vide affidavit dated 07.12.2023 before Notary A. Muralidhara Srinivasapur. Henceforth I shall be called as Monvitha .B.R. only.

BUSINESS

Business to Business

Skill Development

LIFE SKILLS/ Motivational Techniques for Students/ Sales Executives. Dr. Swamy, Master Trainer Winning Skills:- 9342247637.

Business

HOW TO Start Real Estate Business with Legal Support and Liasion work Bangalore 9448181912

Services

PLASTIC JERRY CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

Business Offers

Machinery & Tools

POWDER COATING PLANT FOR SALE Conveyorised line with branded PC Booth and Automatic Reciprocator in Excellent Condition. Ct: 98402 09905

KAMCO JAPAN VSI 100-TPH cresher mechanic for sale. Location Kerala. Contact: Mob- 9656002897

Finance

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

DH DECCAN HERALD ಪ್ರಜಾವಾಣಿ
Classifieds More value, more impact
REAL ESTATE
The 1st thing to do when Selling/Buying your Property
#1 PLACE YOUR AD HERE

www.dhclassifieds.com BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9731810277 | +91 9900428036 | 080-45557163/164

‘ಪ್ರಜಾವಾಣಿ’ ಬೆಂಗಳೂರು ವಲಯಮಟ್ಟದ ರಸಪ್ರಶ್ನೆ • ಆರ್ಯನ್– ಅಕ್ಷಯ್ ‘ಕಮಾಲ್’ • ವಿದ್ಯಾರ್ಥಿಗಳನ್ನು ಹುರಿದುಂಬಿಸಿದ ಶಾಸಕ ಪ್ರದೀಪ್ ಈಶ್ವರ್

ಕೊನೇ ಪ್ರಶ್ನೆಗೆ ‘ಸಿಕ್ಸರ್’ ಹೊಡೆದ ‘ಜ್ಞಾನಾಕ್ಷಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಕೆಟ್‌ನಲ್ಲಿ ಕೊನೇ ಬಾಲ್‌ಗೆ ಸಿಕ್ಸ್ ಹೊಡೆದು ಪಂದ್ಯ ಗೆಲ್ಲಿಸಿದಂತೆ ಕೊನೇ ಪ್ರಶ್ನೆಗೆ ‘ಸ್ಟೆಪ್ ಅಪ್’ ತೆಗೆದುಕೊಂಡು ಉತ್ತರಿಸಿ, 15 ಅಂಕ ಬಾಚುವ ಮೂಲಕ ರಾಜರಾಜೇಶ್ವರಿ ನಗರದ ಜ್ಞಾನಾಕ್ಷಿ ವಿದ್ಯಾನಿಕೇತನ ಪ್ರೌಢಶಾಲೆಯ ಆರ್ಯನ್ ಸುಬ್ರಹ್ಮಣ್ಯ ಹಾಗೂ ಅಕ್ಷಯ್ ರಾವ್ ತಂಡವು ‘ಪ್ರಜಾವಾಣಿ’ ರಸಪ್ರಶ್ನೆಯಲ್ಲಿ ಬೆಂಗಳೂರು ವಲಯ ಮಟ್ಟದ ಚಾಂಪಿಯನ್ ಆಗಿ ಹೊರ ಹೊಮ್ಮಿತು.

ಪರಿಶ್ರಮ ಪಿಯು ಕಾಲೇಜು ಮತ್ತು ಭೀಮಾ ಗೋಲ್ಡ್ ಸಹಯೋಗದಲ್ಲಿ ಶನಿವಾರ ಜಯನಗರದ ವಿವೇಕ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ರಸಪ್ರಶ್ನೆ ಈ ರೋಚಕ ಕ್ಷಣಕ್ಕೆ ಸಾಕ್ಷಿಯಾಯಿತು.

ಬೆಂಗಳೂರು ಸಿಟಿ ಕೊ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಡ್ಯುಕ್ಸ್ ವೆಫಿ, ಎಂಎಸ್‌ಐಎಲ್ ವಿದ್ಯಾ ಆ್ಯಂಡ್ ಲೇಖಕ್ ಸಹಕಾರ ನೀಡಿದರು. ಟಿವಿ ಸಹಯೋಗವನ್ನು ಏಷ್ಯಾನೆಟ್ ಸುವರ್ಣ ನ್ಯೂಸ್ ಮತ್ತು ಜ್ಞಾನ ಸಹಯೋಗವನ್ನು ಕ್ಯೂರಿಯೊಸಿಟಿ ಸೊಲ್ಯುಷನ್ಸ್ ಸಂಸ್ಥೆಗಳು ನೀಡಿದವು.

ವಲಯಮಟ್ಟದ ಅಂತಿಮ ಸುತ್ತಿನ ಕೊನೆಯ ಪ್ರಶ್ನೆಗಿಂತ ಮೊದಲು ಆರ್ಯನ್– ಅಕ್ಷಯ್ ತಂಡವು 30 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿತ್ತು. ಜ್ಞಾನಾಕ್ಷಿ ವಿದ್ಯಾನಿಕೇತನ ಪ್ರೌಢಶಾಲೆಯವರೇ ಆಗಿರುವ 8ನೇ ತರಗತಿಯ ಖುಷಿ– ಸಂಹಿತ್ ರಾಘವನ್ ತಂಡವು 43 ಅಂಕಗಳೊಂದಿಗೆ ಭಾರಿ ಮುನ್ನಡೆಯಲ್ಲಿದ್ದು, ಬಹುತೇಕ ಇದೇ ತಂಡ ಪ್ರಥಮ ಸ್ಥಾನಗಳಿಸಲಿದೆ ಎಂದು ಭಾವಿಸಲಾಗಿತ್ತು.

ಈ ಸುತ್ತಿನಲ್ಲಿ ‘ಡಿಫಾಲ್ಟ್’ ಆರಿಸಿಕೊಂಡು ಸರಿ ಉತ್ತರ ನೀಡಿದರೆ 10 ಅಂಕ, ತಪ್ಪು ಉತ್ತರ ನೀಡಿದರೆ, 5 ಅಂಕ ಕಡಿತ ಇತ್ತು. ‘ಸ್ಟೆಪ್ ಅಪ್’ ತೆಗೆದುಕೊಂಡು ಸರಿ ಉತ್ತರ ನೀಡಿದರೆ 15 ಅಂಕ, ತಪ್ಪು ಉತ್ತರ ನೀಡಿದರೆ 7 ಅಂಕ ಕಡಿತ ಇತ್ತು.

ಈ ಸಂದರ್ಭದಲ್ಲಿ ಆರ್ಯನ್– ಅಕ್ಷಯ್ ‘ಸ್ಟೆಪ್ ಅಪ್’ ತೆಗೆದುಕೊಂಡು ಒಮ್ಮೆಲೇ 15 ಅಂಕ ಪಡೆಯುವ ಮೂಲಕ ರೋಚಕ 2 ಅಂಕಗಳ ಅಂತರದಿಂದ ಜಯಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾದರು.

ರಾಜ್ಯಮಟ್ಟಕ್ಕೆ ಆಯ್ಕೆಯಾಗದ ನೋವಿದ್ದರೂ ತಮ್ಮದೇ ವಿದ್ಯಾಸಂಸ್ಥೆಯ 9ನೇ ತರಗತಿಯ ಗೆಳೆಯರು ಗೆದ್ದಿರುವುದನ್ನು ಕಂಡು ಸೋಲಿನಲ್ಲೂ ಸಂತೃಪ್ತಿಯೊಂದಿಗೆ ಖುಷಿ–ಸಂಹಿತ್ ದ್ವಿತೀಯ ಸ್ಥಾನದ ಪ್ರಶಸ್ತಿ ಸ್ವೀಕರಿಸಿ ತೆರಳಿದರು.

ಶ್ರೀಅಯ್ಯಪ್ಪ ಎಜುಕೇಷನ್ ಟ್ರಸ್ಟ್‌ನ ಅನುಷಾ–ಹರ್ಷಾ ತಂಡವು 30 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದರು. ಎಸ್‌ಜೆಆರ್ ಕೆಂಗೇರಿ ಪಬ್ಲಿಕ್ ಸ್ಕೂಲ್‌ನ ಸಮೀರ್– ವರುಣ್ ತಂಡ ನಾಲ್ಕನೇ ಸ್ಥಾನ, ಶ್ರೀಅಯ್ಯಪ್ಪ ಎಜುಕೇಷನ್ ಟ್ರಸ್ಟ್‌ನ ವಿದ್ಯಾಸಂಸ್ಥೆಯ ಪ್ರವೀಣ್–ಮನೋಜ್ ತಂಡ ಐದನೇ, ನ್ಯೂ ಕೇಂಬ್ರಿಜ್ ಹೈಸ್ಕೂಲ್‌ನ ಮಧುಮಿತ– ಪ್ರಾಪ್ತಿ ಆರನೇ ಸ್ಥಾನ ಗಳಿಸಿದರು.

ಪ್ರಾಥಮಿಕ ಆಯ್ಕೆ: ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಜಿಲ್ಲೆಗಳ ಹಲವು ತಂಡಗಳು ಭಾಗವಹಿಸಿದ್ದವು. ಅದರಲ್ಲಿ ಆರು ತಂಡಗಳನ್ನು ಆಯ್ಕೆ ಮಾಡಲು ಪ್ರಾಥಮಿಕ ಹಂತದ ರಸಪ್ರಶ್ನೆ ನಡೆಸಲಾಯಿತು.

ಪ್ರಾಥಮಿಕ ಹಂತದಲ್ಲಿ ಇಪ್ಪತ್ತು ಪ್ರಶ್ನೆಗಳಿಗೆ ಸ್ಪರ್ಧಿಗಳು ಉತ್ತರ ಬರೆಯಬೇಕಿತ್ತು. ಅದರಲ್ಲಿ 19 ಪ್ರಶ್ನೆಗಳಿಗೆ ತಲಾ ಒಂದು ಅಂಕ ಹಾಗೂ ಒಂದು ಪ್ರಶ್ನೆಗೆ 2 ಅಂಕ ನೀಡಲಾಗಿತ್ತು. ಹೆಚ್ಚು ಅಂಕ ಗಳಿಸಿದ ಆರು ತಂಡಗಳನ್ನು ಆಯ್ಕೆ ಮಾಡಲಾಯಿತು.

ಐದು ಸುತ್ತಿನ ಸ್ಪರ್ಧೆ

‘ವಸುಧೈವ ಕುಟುಂಬಕಂ’ ಮೊದಲ ಸುತ್ತು ಆಗಿದ್ದು, ಭಾರತದ ಕುರಿತಾದ ಪ್ರಶ್ನೆಗಳಿರುವ ಸುತ್ತು ಆಗಿತ್ತು. ನೇರ ಉತ್ತರಕ್ಕೆ 10 ಅಂಕ, ಪಾಸ್ ಆದ ಉತ್ತರಕ್ಕೆ 5 ಅಂಕ, ಯಾವುದೇ ಮೈನಸ್ ಅಂಕ ಇರಲಿಲ್ಲ.

‘ದೃಶ್ಯ’ ಎರಡನೇ ಸುತ್ತು ಆಗಿತ್ತು. ಚಿತ್ರ ನೋಡಿ ಪ್ರಶ್ನೆಗೆ ಉತ್ತರಿಸಬೇಕಿತ್ತು. ಒಂದನೇ ಸುತ್ತಿನ ನಿಯಮವೇ ಇದಕ್ಕೂ ಅನ್ವಯವಾಗಿತ್ತು. ‘ಮಿಕ್ಸ್ ಬ್ಯಾಗ್’ ಮೂರನೇ ಸುತ್ತು ಆಗಿದ್ದು, ಯಾವುದೇ ಪ್ರಶ್ನೆಗೆ ಬಜರ್ ಒತ್ತಿ ಉತ್ತರಿಸಬೇಕಿತ್ತು. ಮೊದಲು ಬಜರ್ ಒತ್ತಿದವರ ಉತ್ತರ ಸರಿ ಇಲ್ಲದೇ ಇದ್ದರೆ, ಎರಡನೇಯವರಿಗೆ ಅವಕಾಶ ಇತ್ತು. ಅದೂ ತಪ್ಪಾದರೆ ಪ್ರೇಕ್ಷಕರಿಗೆ ಅವಕಾಶ ನೀಡಲಾಗಿತ್ತು.

‘ನಿಮ್ಮ ಆಯ್ಕೆ– ನಮ್ಮ ಪ್ರಶ್ನೆ’ ನಾಲ್ಕನೇ ಸುತ್ತಿನಲ್ಲಿ ವಿಷಯಗಳನ್ನು ಆಯ್ಕೆ ಮಾಡಲು ಸ್ಪರ್ಧಿಗಳಿಗೆ ಅವಕಾಶ ನೀಡಲಾಗಿತ್ತು. ಆಯ್ಕೆ ಮಾಡಿದ ವಿಷಯದ ಮೇಲೆ ಪ್ರಶ್ನೆಗಳಿದ್ದವು. ‘ರ್‍ಯಾಪಿಡ್ ಫೈರ್’ ಐದನೇ ಸುತ್ತು ಫಲಿತಾಂಶವನ್ನೇ ಮೇಲೆ ಕೆಳಗೆ ಮಾಡುವಂತದ್ದಾಗಿತ್ತು. ‘ಡಿಫಾಲ್ಟ್’ ಸರಿ ಉತ್ತರಕ್ಕೆ 10 ಅಂಕ, ತಪ್ಪು ಉತ್ತರಕ್ಕೆ ಮೈನಸ್ 5, ‘ಸ್ಟೆಪ್ ಅಪ್’ ತೆಗೆದುಕೊಂಡರೆ ಸರಿ ಉತ್ತರಕ್ಕೆ 15 ಅಂಕ, ತಪ್ಪು ಉತ್ತರಕ್ಕೆ ಮೈನಸ್ 7 ಅಂಕಗಳಿದ್ದವು.

ಸ್ಪರ್ಧಿಗಳು ಉತ್ತರಿಸಲಾಗದೇ ಪ್ರೇಕ್ಷಕರ ಕಡೆಗೆ ಬಂದ ಪ್ರಶ್ನೆಗಳಿಗೆ ಮತ್ತು ಪ್ರೇಕ್ಷಕರಿಗಾಗಿಯೇ ಸೀಮಿತವಾದ ಪ್ರಶ್ನೆಗಳಿಗೆ ಉತ್ತರಿಸಿ ಹಲವರು ಸ್ಥಳದಲ್ಲೇ ಬಹುಮಾನ ಪಡೆದು. ‘ಕ್ಯೂರಿಯೊಸಿಟಿ ಸೊಲ್ಯುಷನ್ಸ್’ ಸಂಸ್ಥೆಯ ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ್ ಆಕರ್ಷಕವಾಗಿ ಕ್ವಿಜ್ ನಡೆಸಿಕೊಟ್ಟರು.



ರಸಪ್ರಶ್ನೆ ಸ್ಪರ್ಧೆಯನ್ನು ಕುತೂಹಲದಿಂದ ವೀಕ್ಷಿಸಿದ ವಿದ್ಯಾರ್ಥಿಗಳು.

ಗೆಲುವಿಗೆ ಪ್ರಯತ್ನಿಸಿ, ಸೋಲಿಗೆ ತಯಾರಾಗಿ: ಪ್ರದೀಪ್ ಈಶ್ವರ್

‘ಗೆಲ್ಲಲೇಬೇಕು ಎಂದು ಪ್ರಯತ್ನಿಸಬೇಕು. ಆದರೆ, ಗೆಲ್ಲುವುದು ಒಂದೇ ತಂಡ. ಹಾಗಾಗಿ ಸೋಲಿಗೆ ತಯಾರಾಗಿರಬೇಕು. ಸೋತಾಗ ಕುಗ್ಗದೇ ಅದನ್ನು ಸವಾಲಾಗಿ ತೆಗೆದುಕೊಂಡು ಮತ್ತೆ ಗೆಲುವಿಗೆ ಪ್ರಯತ್ನಿಸಬೇಕು’ ಎಂದು ಪರಿಶ್ರಮ ಪಿಯು ಕಾಲೇಜು ಸಂಸ್ಥಾಪಕ, ಶಾಸಕ ಪ್ರದೀಪ್ ಈಶ್ವರ್ ಸಲಹೆ ನೀಡಿದರು.

UPCOMING PARISHRAMA PU COLLEGE WITH INTEGRATED NEET, JEE MAINS & KCET TRAINING Presents ಪ್ರಜಾವಾಣಿ QUIZ CHAMPIONSHIP Powered By BHIMA GOLD • DIAMONDS • SILVER • PLATINUM SINCE 1925

ವಲಯ ಮಟ್ಟದ ಕ್ವಿಜ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ‘ಪ್ರಜಾವಾಣಿ’ ಬಹಳದ ದೊಡ್ಡ ಪಾತ್ರವನ್ನು ವಹಿಸಿಕೊಂಡು ಬಂದಿದೆ. ‘ಪ್ರಜಾವಾಣಿ’ಯ ಸಂಪಾದಕೀಯ ಪುಟವನ್ನು ಓದದೇ ಸ್ಪರ್ಧಿಗಳು ಮುಂದಕ್ಕೆ ಹೋಗಲು ಸಾಧ್ಯವೇ ಇಲ್ಲ. ಜ್ಞಾನ ಪಡೆಯಲು ‘ಪ್ರಜಾವಾಣಿ’ಯನ್ನು ಓದಬೇಕು ಎಂದು ಶ್ಲಾಘಿಸಿದರು.

ತಂದೆ– ತಾಯಿಯನ್ನು ಪ್ರೀತಿಸಿ. ಅವರು ಬೈದರೆ ಕೆಟ್ಟ ನಿರ್ಧಾರ ಮಾಡಬೇಡಿ. ನಿಮ್ಮಲ್ಲಿ ಪ್ರತಿಭೆ, ಪರಿಶ್ರಮ ಮತ್ತು ಆತ್ಮಸ್ಥೈರ್ಯ ಇದ್ದರೆ ಸಾಧನೆ ಮಾಡಬಹುದು. ಕಷ್ಟಪಟ್ಟು ಓದಿ, ಇಷ್ಟಪಟ್ಟು ಓದಿ, ಹೆತ್ತವರಿಗಾಗಿ ಓದಿ. ನಿಮ್ಮ ಸಾಧನೆ ಹೇಗಿರಬೇಕು ಎಂದರೆ ಪರೀಕ್ಷೆ ಮುಗಿದ ಮೇಲೆ ಫಲಿತಾಂಶ ಬಂದಾಗ ನಿಮ್ಮ ಬಗ್ಗೆ ಜನರು ಪತ್ರಿಕೆಯಲ್ಲಿ ಓದುವಂತಿರಬೇಕು ಎಂದು ಸ್ಫೂರ್ತಿ ತುಂಬಿದರು.

ದೇವರ ಕೋಣೆಯಲ್ಲಿರುವ ದೇವರು ಒಳ್ಳೆಯದನ್ನು ಮಾಡುತ್ತಾನೋ ಇಲ್ವೊ ಗೊತ್ತಿಲ್ಲ. ಆದರೆ, ನಿಮ್ಮ ಕೈಯಲ್ಲಿ ಇರುವ ಪುಸ್ತಕ ಒಳ್ಳೆಯದನ್ನು ಮಾಡಲಿದೆ ಎಂದು ತಿಳಿಸಿದರು.

ಟಿಪಿಎಂಎಲ್ ನ್ಯಾಷನಲ್ ಸೇಲ್ಸ್ ಹೆಡ್ ಆನಂದ್ ಬಿಲ್ಡಿಕರ್ ಭಾಗವಹಿಸಿದ್ದರು.

ಬಹುಮಾನ ವಿತರಣೆ: ವಲಯ ಮಟ್ಟದ ವಿಜೇತರಿಗೆ ‘ಪ್ರಜಾವಾಣಿ’ ಸುದ್ದಿ ಸಂಪಾದಕ ನಾಗೇಶ್ ಶೆಣೈ, ಬ್ರ್ಯಾಂಡ್ ಮತ್ತು ಆ್ಯಕ್ಟಿವೇಷನ್ಸ್ ಹೆಡ್ ಪಾರ್ಥ ಜೋಷಿ ಮತ್ತು ಇವೆಂಟ್ಸ್ ಸೇಲ್ಸ್ ನ್ಯಾಷನಲ್ ಹೆಡ್ ಮತ್ತು ಬೆಂಗಳೂರು ರೀಜನಲ್ ಸೇಲ್ಸ್ ಹೆಡ್ ಮಂಜುಳಾ ಮೆನನ್ ಬಹುಮಾನ ವಿತರಿಸಿದರು.

ಪೂರ್ವಭಾವಿ ಸುತ್ತಿನಲ್ಲಿ ಪ್ರಶ್ನೆಯನ್ನು ಕುತೂಹಲದಿಂದ ವೀಕ್ಷಿಸಿದ ವಿದ್ಯಾರ್ಥಿನಿ.

ಬೆಂಗಳೂರಿನಲ್ಲಿ ಶನಿವಾರ ನಡೆದ ‘ಪ್ರಜಾವಾಣಿ’ ಕ್ವಿಜ್ ಚಾಂಪಿಯನ್‌ಶಿಪ್‌ನ ಬೆಂಗಳೂರು ವಲಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು. ಪ್ರಜಾವಾಣಿ ಚಿತ್ರ/ ರಂಜು ಪಿ.

ಅಭಿಪ್ರಾಯಗಳು

ವಿಭಿನ್ನ ಸ್ಪರ್ಧೆ

ರಸಪ್ರಶ್ನೆ ಸ್ಪರ್ಧೆ ಉತ್ತಮವಾಗಿ ಮೂಡಿಬಂತು. ನಮ್ಮ ಶಾಲೆಯಿಂದ ನಾಲ್ಕು ತಂಡಗಳು ಪಾಲ್ಗೊಂಡಿದ್ದವು. ಪೂರ್ವಭಾವಿ ಸುತ್ತಿನಲ್ಲಿ ವಿದ್ಯಾರ್ಥಿಗಳ ಆಲೋಚನೆ ಹೆಚ್ಚಿಸುವಂತಹ ಪ್ರಶ್ನೆಗಳನ್ನೇ ಕೇಳಲಾಗಿತ್ತು. ಇದೊಂದು ವಿಭಿನ್ನ ಸ್ಪರ್ಧೆ. ‘ಪ್ರಜಾವಾಣಿ’ಗೆ ಧನ್ಯವಾದಗಳು.

ಎಸ್.ವಿನುತನಾ, ಶಿಕ್ಷಕಿ, ಬ್ಲಾಸಂ ಪ್ರೌಢಶಾಲೆ, ಕನಕಪುರ

ನಿತ್ಯ ‘ಪ್ರಜಾವಾಣಿ’ ಓದುವ ಅಭ್ಯಾಸ

ಪ್ರಚಲಿತ ವಿದ್ಯಮಾನಗಳ ಬಗ್ಗೆ ಅರಿವು ಇರಬೇಕು ಎಂಬುದನ್ನು ರಸಪ್ರಶ್ನೆ ಸ್ಪರ್ಧೆ ತಿಳಿಸಿಕೊಟ್ಟಿತು. ಶಾಲೆಗಳಲ್ಲಿ ರಸಪ್ರಶ್ನೆ ಆಯೋಜನೆ ಮಾಡುತ್ತಿದ್ದರು. ನಿತ್ಯವೂ ‘ಪ್ರಜಾವಾಣಿ’ ಓದುತ್ತಿದ್ದೆ. ಅದು ಪೂರ್ವಭಾವಿ ಸುತ್ತಿನಲ್ಲಿ ನೀಡಿದ ಪ್ರಶ್ನೆಗಳಿಗೆ ಉತ್ತರಿಸಲು ನೆರವಿಗೆ ಬಂತು.

ಎಂ.ಆರ್.ತನುಜಾ, 9ನೇ ತರಗತಿ, ಸ್ಟ್ಯಾಂಡರ್ಡ್ ಆಂಗ್ಲ ಮಾಧ್ಯಮ ಶಾಲೆ, ದಾಸರಹಳ್ಳಿ

ಕುತೂಹಲಕಾರಿ ಪ್ರಶ್ನೆ

ವಿದ್ಯಾರ್ಥಿಗಳು ಪ್ರತಿನಿತ್ಯ ‘ಪ್ರಜಾವಾಣಿ’ ಓದಿದರೆ ಬಹುತೇಕ ಪ್ರಶ್ನೆಗಳಿಗೆ ಉತ್ತರಿಸಬಹುದು ಎಂಬುದನ್ನು ಈ ಸ್ಪರ್ಧೆ ಸಾಬೀತುಪಡಿಸಿತು. ಪ್ರಶ್ನೆಗಳೂ ಬಹಳ ಕುತೂಹಲವಾಗಿದ್ದವು. ಬೇರೆ ಬೇರೆ ಸುತ್ತುಗಳು ಕುತೂಹಲ ಮೂಡಿಸಿತು.

ಸುಬ್ರಹ್ಮಣ್ಯ, ಶಿಕ್ಷಕ

ಇನ್ನಷ್ಟು ಸಿದ್ಧತೆಯೊಂದಿಗೆ ಸ್ಪರ್ಧೆ

ವಿದ್ಯಾರ್ಥಿಗಳಲ್ಲಿ ಅಡಗಿದ್ದ ಪ್ರತಿಭೆಯನ್ನು ಸ್ಪರ್ಧೆ ಹೊರಹಾಕಿತು. ಶಾಲೆಯಿಂದ ಎರಡು ತಂಡಗಳು ಅಂತಿಮ ಉತ್ತಿಮ ಸುತ್ತಿಗೆ ಆಯ್ಕೆಯಾಗಿದ್ದವು. ಕೆಲವು ಪ್ರಶ್ನೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಎಡವಿದ್ದರಿಂದ ಪ್ರಶಸ್ತಿ ಪಡೆಯಲು ಸಾಧ್ಯವಾಗಲಿಲ್ಲ. ಮುಂದಿನ ವರ್ಷದ ಸ್ಪರ್ಧೆಯಲ್ಲಿ ಹೆಚ್ಚಿನ ಸಿದ್ಧತೆಯೊಂದಿಗೆ ಪಾಲ್ಗೊಳ್ಳುತ್ತೇವೆ.

ಎಂ.ಶಾಂತಕುಮಾರ್, ಶಿಕ್ಷಕ, ಅಯ್ಯಪ್ಪ ಎಜುಕೇಷನ್ ಸೊಸೈಟಿ, ಟಿ.ದಾಸರಹಳ್ಳಿ

ಬೆಂಗಳೂರು ವಲಯ ಮಟ್ಟದ ಸ್ಪರ್ಧೆಯನ್ನು ಶಾಸಕ ಪ್ರದೀಪ್ ಈಶ್ವರ್ ಉದ್ಘಾಟಿಸಿ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದರು.

‘ಆ ಕ್ಷಣದ ಅನಿವಾರ್ಯ ನಿರ್ಧಾರ’

ನಾವು ಕೊನೇ ಪ್ರಶ್ನೆಗೆ ಉತ್ತರಿಸಿದರೆ ಸಾಕಾಗುತ್ತಿರಲಿಲ್ಲ. ‘ಸ್ಟೆಪ್ ಅಪ್’ ತೆಗೆದುಕೊಂಡು ಸರಿ ಉತ್ತರ ನೀಡಿದರಷ್ಟೇ ರಾಜ್ಯಮಟ್ಟಕ್ಕೆ ಆಯ್ಕೆಯಾಗಬಹುದಾಗಿತ್ತು. ತಪ್ಪು ಉತ್ತರ ನೀಡಿದ್ದರೆ ನಾವು ಮೂರನೇ ಸ್ಥಾನಕ್ಕೆ ಹೋಗುತ್ತಿದ್ದೆವು. ಆಗ ಸ್ಟೆಪ್ ಅಪ್ ತೆಗೆದುಕೊಳ್ಳುವುದು ಅನಿವಾರ್ಯವಿತ್ತು. ನಾವು ನೀಡಿದ ಉತ್ತರ ಸರಿಯಾಗಿತ್ತು. ನಾವು ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದೇವೆ ಎಂದು ತಿಳಿದಾಗ ಏನು ಹೇಳಬೇಕು ಎಂಬುದೇ ಗೊತ್ತಾಗದಷ್ಟು ಆನಂದವಾಯಿತು.

ಆರ್ಯನ್ ಸುಬ್ರಹ್ಮಣ್ಯ– ಅಕ್ಷಯ್ ರಾವ್,
ರಾಜರಾಜೇಶ್ವರಿ ನಗರದ ಜ್ಞಾನಾಕ್ಷಿ ವಿದ್ಯಾನಿಕೇತನ ಪ್ರೌಢಶಾಲೆ ವಿದ್ಯಾರ್ಥಿಗಳು

ಕ್ವಿಜ್ ಮಾಸ್ಟರ್ ಮೇಘವಿ ಮಂಜುನಾಥ

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯದಿಂದ ಸುಳಿವು • ಚಾಲಕನ ವಿರುದ್ಧ ಎಫ್‌ಐಆರ್

ಕಾರು ಹರಿದು ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಸವನಹಳ್ಳಿಯಲ್ಲಿರುವ ಸಮೃದ್ಧಿ ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರು ಕಾರಿನ ಚಕ್ರ ಮೈ ಮೇಲೆ ಹರಿದು ಮೂರು ವರ್ಷದ ಹೆಣ್ಣು ಮಗು ಅರ್ಬಿನಾ ಮೃತಪಟ್ಟಿದ್ದು, ಈ ಸಂಬಂಧ ಬೆಳ್ಳಂದೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಅಪಾರ್ಟ್‌ಮೆಂಟ್ ಸಮುಚ್ಚಯದ ಭದ್ರತಾ ಸಿಬ್ಬಂದಿ ಜೋಗ್ ಜತಾರ್ ಅವರ ಪುತ್ರಿಯಾಗಿದ್ದ ಅರ್ಬಿನಾ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದರು. ಸ್ಥಳೀಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ, ಕಾರಿನ ಚಕ್ರ ಹರಿದು ಮಗು ಮೃತಪಟ್ಟಿದ್ದು ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಮಗುವಿನ ಸಾವಿಗೆ ಕಾರಣವಾದ ಆರೋಪದಡಿ ಚಾಲಕ ಸುಮನ್ ಸಿ. ಕೇಶವ್ ದಾಸ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈತ, ಸಮೃದ್ಧಿ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿ’ ಎಂದು ಹೇಳಿದರು.

ಪ್ರವೇಶ ದ್ವಾರದಲ್ಲಿ ಆಟವಾಡುತ್ತಿದ್ದ ಮಗು: ‘ನೇಪಾಳದ ಜೋಗ್ ಜತಾರ್, ಪತ್ನಿ ಹಾಗೂ ಮಕ್ಕಳ ಜೊತೆ ನಗರಕ್ಕೆ ಬಂದಿದ್ದರು. ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಭದ್ರತಾ ಸಿಬ್ಬಂದಿ ಆಗಿದ್ದರು. ಅಲ್ಲಿಯೇ ಅವರಿಗೆ ಕೊಠಡಿಯೊಂದನ್ನು ನೀಡಲಾಗಿತ್ತು. ಮಕ್ಕಳ ಜೊತೆ ದಂಪತಿ ನೆಲೆಸಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಡಿ. 9ರಂದು ಬೆಳಿಗ್ಗೆ ಮಗು ಅರ್ಬಿನಾ, ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶ ದ್ವಾರದಲ್ಲಿ ಆಟವಾಡುತ್ತ ಕುಳಿತಿತ್ತು. ಇದೇ ಸಂದರ್ಭದಲ್ಲಿ ಆರೋಪಿ ಸುಮನ್, ಪಾರ್ಕಿಂಗ್‌ನಲ್ಲಿದ್ದ ಕಾರು ಚಲಾಯಿಸಿಕೊಂಡು ರಸ್ತೆಯತ್ತ ಸಾಗಿದ್ದರು. ಪ್ರವೇಶ ದ್ವಾರದಲ್ಲಿದ್ದ ಮಗುವನ್ನು ಗಮನಿಸಿರಲಿಲ್ಲ. ಮಗುವಿನ ಮೇಲೆಯೇ ಕಾರಿನ ಚಕ್ರ ಹರಿದಿತ್ತು. ಸುಮನ್ ಸಹ ಸ್ಥಳದಿಂದ ಹೊರಟು ಹೋಗಿದ್ದರು’ ಎಂದು ಹೇಳಿವೆ.

‘ತೀವ್ರ ಗಾಯಗೊಂಡಿದ್ದ ಮಗು, ಸ್ಥಳದಲ್ಲಿಯೇ ಬಿದ್ದು ನರಳುತ್ತಿತ್ತು. ಅಪಘಾತದ ಸಂಗತಿ ಯಾರಿಗೂ ಗೊತ್ತಿರಲಿಲ್ಲ. ಸ್ಥಳಕ್ಕೆ ಬಂದಿದ್ದ ತಂದೆ ಜೋಗ್ ಜತಾರ್, ಮಗುವಿನ ದೇಹದಿಂದ ರಕ್ತ ಬರುತ್ತಿದ್ದದ್ದನ್ನು ಗಮನಿಸಿದ್ದರು. ಪ್ರವೇಶ ದ್ವಾರದಲ್ಲಿದ್ದ ಕಬ್ಬಿಣದ ರಾಡ್ ತಾಗಿ ರಕ್ತ ಬರುತ್ತಿರಬಹುದೆಂದು ತಿಳಿದು ಮಗುವನ್ನು ಎತ್ತಿಕೊಂಡು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು’ ಎಂದು ಮೂಲಗಳು ತಿಳಿಸಿವೆ.

ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ: ‘ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಪರೀಕ್ಷಿಸಿದ್ದ ವೈದ್ಯರು, ಸ್ಕ್ಯಾನಿಂಗ್ ಹಾಗೂ ಇತರೆ ಪರೀಕ್ಷೆಗಳಿಗಾಗಿ ₹ 30 ಸಾವಿರ ಪಾವತಿಸುವಂತೆ ಹೇಳಿದ್ದರು. ಹಣವಿಲ್ಲವೆಂದು ಹೇಳಿದ್ದ ತಂದೆ ಜೋಗ್, ಮಗುವನ್ನು ಅಲ್ಲಿಂದ ಸಂಜಯಗಾಂಧಿ ಮಕ್ಕಳ ಆಸ್ಪತ್ರೆಗೆ ಕರೆದೊಯ್ದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಂಜಯಗಾಂಧಿ ಆಸ್ಪತ್ರೆ ವೈದ್ಯರು ಸಹ ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ನಿಮ್ಹಾನ್ಸ್ ಆಸ್ಪತ್ರೆಗೆ ಕಳುಹಿಸಿದ್ದರು. ಪರೀಕ್ಷಿಸಿದ್ದ ನಿಮ್ಹಾನ್ಸ್ ವೈದ್ಯರು, ಮಾರ್ಗಮಧ್ಯೆಯೇ ಮಗು ಮೃತಪಟ್ಟಿರುವುದಾಗಿ ಹೇಳಿದರು’ ಎಂದು ಮೂಲಗಳು ತಿಳಿಸಿವೆ.

ಅಸಹಜ ಸಾವು ಪ್ರಕರಣ: ‘ಕಬ್ಬಿಣದ ರಾಡ್ ತಾಗಿ ಮಗು ಮೃತಪಟ್ಟಿರುವುದಾಗಿ ತಂದೆ ಹೇಳಿದ್ದರಿಂದ, ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿತ್ತು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಸಮೃದ್ಧಿ ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರಿನ ಕಟ್ಟಡದಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಆರೋಪಿ ಸುಮನ್, ಮಗುವಿನ ಮೇಲೆ ಕಾರು ಹರಿಸಿದ್ದ ದೃಶ್ಯ ಸೆರೆಯಾಗಿತ್ತು. ಅದೇ ಸುಳಿವು ಆಧರಿಸಿ ಮತ್ತೊಂದು ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಬೆಳ್ಳಂದೂರು ಸಂಚಾರ ಠಾಣೆಗೆ ವರ್ಗಾಯಿಸಲಾಗಿದೆ’ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಮಗುವಿನ ಮೇಲೆ ಹರಿದಿದ್ದ ಕಾರು

ಗಾಯಗೊಂಡು ನರಳುತ್ತಿದ್ದ ಮಗು

ಮಗುವನ್ನು ಎತ್ತಿಕೊಳ್ಳುತ್ತಿರುವ ತಂದೆ

‘ನರಳಾಡಿದರೂ ಹತ್ತಿರ ಹೋಗದ ಜನ’

ಅಪಘಾತದ ಬಳಿಕ ಸ್ಥಳದಲ್ಲಿಯೇ ಬಿದ್ದು ಮಗು ನರಳಾಡುತ್ತಿತ್ತು. ಪದೇ ಪದೇ ಏಳಲು ಪ್ರಯತ್ನಿಸಿ ಪುನಃ ಬೀಳುತ್ತಿತ್ತು. ಸ್ಥಳಕ್ಕೆ ಬಂದಿದ್ದ 5 ವರ್ಷದ ಬಾಲಕನೊಬ್ಬ ಮಗುವನ್ನು ನೋಡಿ ಕೈ ಹಿಡಿದು ಎಬ್ಬಿಸಲು ಮುಂದಾಗಿದ್ದ. ಆದರೆ, ಅದು ಸಾಧ್ಯವಾಗದಿದ್ದರಿಂದ ವಾಪಸು ಹೋಗಿದ್ದ. ಮಗುವಿಗೆ ಏನಾಗಿದೆ ? ಎಂಬುದು ಬಾಲಕನಿಗೆ ತಿಳಿದಿರಲಿಲ್ಲ. ಇದೇ ಮಾರ್ಗವಾಗಿ ಇಬ್ಬರು ಯುವಕರು ಹಾಗೂ ಸ್ಥಳೀಯ ನಿವಾಸಿಯೊಬ್ಬರು ಹಾದು ಹೋಗಿದ್ದರು. ಅವರ್‍ಯಾರೂ ಮಗುವಿನತ್ತ ತಿರುಗಿ ನೋಡಿರಲಿಲ್ಲ. ಎರಡೂವರೆ ನಿಮಿಷಗಳ ನಂತರ ತಂದೆ ಸ್ಥಳಕ್ಕೆ ಬಂದು ಮಗುವನ್ನು ಎತ್ತಿಕೊಂಡು ಹೋಗಿದ್ದರು. ಈ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಹೈಕಮಾಂಡ್ ಭೇಟಿ ಬಳಿಕ ನಿರ್ಧಾರ ಪ್ರಕಟ: ಸೋಮಣ್ಣ

ಮೈಸೂರು: ‘ಹೈಕಮಾಂಡ್ ಜೊತೆ ಮಾತನಾಡಲು ಕಾಲ ಪಕ್ವವಾಗಿದೆ. ನಾಲ್ಕೈದು ಮಂದಿ ಡಿ.19ರ ನಂತರ 22ರ ಒಳಗೆ ವರಿಷ್ಠರನ್ನು ಭೇಟಿ ಮಾಡುತ್ತೇವೆ. ನಂತರ ನಿರ್ಧಾರ ಪ್ರಕಟಿಸುವೆ. ಕಾಲ ಬಂದಾಗ ಎಲ್ಲವನ್ನೂ ನೇರವಾಗಿಯೇ ಹೇಳುವೆ’ ಎಂದು ಬಿಜೆಪಿ ಮುಖಂಡ ವಿ.ಸೋಮಣ್ಣ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಹೈಕಮಾಂಡ್ ಜೊತೆ ಎಲ್ಲಾ ವಿಚಾರ ಚರ್ಚಿಸುತ್ತೇವೆ. ವಿಧಾನಸಭೆ ಚುನಾವಣೆಯಲ್ಲಿ ನನ್ನ ಸೋಲಿಗೆ ಯಾರು ಕಾರಣವೆಂಬುದನ್ನು ವಿವರವಾಗಿ ಹೇಳುತ್ತೇನೆ’ ಎಂದರು.

‘ಏನೇನಾಗಿದೆ ಎಂಬುದನ್ನು ಡಿ.6ರ ನಂತರ ಹೇಳುತ್ತೇನೆ ಎಂದು ತಿಳಿಸಿದ್ದು ನಿಜ. ಒಳ್ಳೆಯತನದಿಂದ ದುಡಿದ ನನಗೆ ಆದ ಹಿನ್ನಡೆಯನ್ನು ಹೇಗೆ ಸ್ವೀಕರಿಸಿದ್ದೇನೆಂಬುದು ಎಲ್ಲರಿಗೂ ಗೊತ್ತಿದೆ. ಕಾರ್ತೀಕ ಹೋಗಿ ಧನುರ್ಮಾಸವೂ ಶುರುವಾಗಿದೆ. ಶೀಘ್ರದಲ್ಲೇ ಎಲ್ಲವನ್ನೂ ಹೇಳುವೆ’ ಎಂದರು.

ಬೆಳಗಾವಿಯಲ್ಲಿ ಈಚೆಗೆ ನಡೆದ ಕಾಂಗ್ರೆಸ್ ಶಾಸಕಾಂಗ ಸಭೆಯ ನಂತರದ ಔತಣಕೂಟಕ್ಕೆ ಬಿಜೆಪಿಯ ಕೆಲವು ಶಾಸಕರು ಹೋಗಿದ್ದ ಬಗ್ಗೆ ಪ್ರಕ್ರಿಯಿಸಿದ ಅವರು, ‘ಅದನ್ನು ಪಕ್ಷ ಗಮನಿಸುತ್ತದೆ. ಎಸ್.ಟಿ. ಸೋಮಶೇಖರ್ ಹಾಗೂ ಶಿವರಾಮ್ ಹೆಬ್ಬಾರ್ ಕಾಂಗ್ರೆಸ್‌ನಿಂದ ಬಂದವರು. ಸೌಹಾರ್ದದ ಕಾರಣಕ್ಕೆ ಹೋಗಿರಬಹುದು. ಹಾಗೆಂದು, ಎಲ್ಲವೂ ಸರಿಯಿಲ್ಲವೆಂದುಕೊಳ್ಳುವುದು ತಪ್ಪು. ಎಲ್ಲ ಸುಖಾಂತ್ಯವಾಗಲಿದೆ’ ಎಂದರು.

‘ದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಬೇಕಿದೆ ಎಂಬುದು ನನ್ನ ಪ್ರತಿಪಾದನೆ. ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಬಗ್ಗೆ ಯೋಚಿಸಿಲ್ಲ. ವರಿಷ್ಠರ ಭೇಟಿ ನಂತರ, ಅವರ ಸೂಚನೆಯಂತೆ ನಡೆದುಕೊಳ್ಳುವೆ’ ಎಂದು ಪ್ರತಿಕ್ರಿಯಿಸಿದರು.

FARNAZ

ಮೆಟ್ರೊ: ವಾರಾಂತ್ಯದಲ್ಲೂ ಬೆಳಿಗ್ಗಿನ ಪಾಳಿಯಲ್ಲಿ ದುಡಿಯುವ ನೌಕರರಿಗೆ ತೊಂದರೆ

ಭಾನುವಾರದ ತಡ ಸಂಚಾರದಿಂದ ತೊಡಕು

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಿತ್ಯ ಬೆಳಿಗ್ಗೆ 5 ಗಂಟೆಗೆ 'ನಮ್ಮ ಮೆಟ್ರೊ' ಸಂಚಾರ ಆರಂಭವಾಗುತ್ತಿದ್ದು, ಭಾನುವಾರ ಮಾತ್ರ 7 ಗಂಟೆಗೆ ಶುರುವಾಗುತ್ತದೆ. ಇದರಿಂದ ಭಾನುವಾರ ರಜೆ ಇಲ್ಲದ ಖಾಸಗಿ ಕಂಪನಿಗಳಲ್ಲಿ ಬೆಳಿಗಿನ ಪಾಳಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳಿಗೆ ತೊಂದರೆಯಾಗಿದೆ.

2ನೇ ಶನಿವಾರ, 4ನೇ ಶನಿವಾರ ಮುಂತಾದ ಸಾಮಾನ್ಯ ರಜೆಗಳ ದಿನಗಳಲ್ಲಿ ಬೆಳಿಗ್ಗೆ 6ಕ್ಕೆ ಮೆಟ್ರೊ ಸೇವೆ ಆರಂಭವಾಗುತ್ತದೆ. ಈ ಅವಧಿಯನ್ನೇ ಭಾನುವಾರಕ್ಕೂ ಅನ್ವಯಿಸಬೇಕು ಎಂಬುದು ಉದ್ಯೋಗಿಗಳ ಬೇಡಿಕೆಯಾಗಿದೆ.

'ನಾವು ಬೇರೆ ಬೇರೆ ಪಾಳಿಯಲ್ಲಿ ಕೆಲಸ ಮಾಡುತ್ತೇವೆ. ತಿಂಗಳಿಗೆ ಒಂದು ವಾರ ಬೆಳಿಗ್ಗೆ 7ಕ್ಕೆ ಕಚೇರಿಯಲ್ಲಿ ಇರಬೇಕು. ಆ ವಾರ 6 ದಿನ ಸಮಸ್ಯೆ ಇರುವುದಿಲ್ಲ. ಭಾನುವಾರ ಬೆಳಿಗ್ಗೆ ಕಚೇರಿಗೆ ತೆರಳುವುದೇ ಸಮಸ್ಯೆ. ಆ ದಿನ ಆಟೊ ಅಥವಾ ಕ್ಯಾಬ್‌ಗಳಲ್ಲಿ ತೆರಳಬೇಕಾಗುತ್ತದೆ. ಇದು ದುಬಾರಿ ಖರ್ಚು' ಎಂದು ಖಾಸಗಿ ಕಂಪನಿ ಉದ್ಯೋಗಿ ಪವಿತ್ರಾ ಅಳಲು ತೋಡಿಕೊಂಡರು.

'ಬೆಂಗಳೂರಿನಂಥ ವಾಹನದಟ್ಟಣೆ, ಜನದಟ್ಟಣೆ ಅಧಿಕ ಇರುವ ನಗರದಲ್ಲಿ ಮೆಟ್ರೊ ರೈಲು ಬಹಳ ಅನುಕೂಲವಾಗಿದೆ. ಆದರೆ, ಭಾನುವಾರ ತಡವಾಗಿ ಮೆಟ್ರೊ ಸೇವೆ ಆರಂಭಗೊಳ್ಳುತ್ತಿರುವುದು ಸಮಸ್ಯೆ. ಬೆಳಿಗ್ಗೆ 6ಕ್ಕೆ ಆರಂಭಿಸಿದರೆ ನಮಗೆ ಉಪಯೋಗವಾಗುತ್ತದೆ' ಎಂದು ಮತ್ತೊಬ್ಬ ಉದ್ಯೋಗಿ ನಾಗರಾಜ್ ತಿಳಿಸಿದರು.

ಬೆಳಿಗ್ಗೆ ರೈಲು ಸಂಚಾರಗಳ ನಡುವಿನ ಕಾಯುವಿಕೆ ಅವಧಿಯನ್ನು ಹೆಚ್ಚು ಮಾಡಿದರೂ ಪರವಾಗಿಲ್ಲ. ಆದರೆ, ಭಾನುವಾರ ಮಾತ್ರ ಬೆಳಿಗ್ಗೆ ಈಗಿರುವುದಕ್ಕಿಂತ ಒಂದು ಗಂಟೆ ಬೇಗ ರೈಲು ಸೇವೆ ಆರಂಭಿಸಬೇಕು ಎಂಬುದು ಹಲವರ ಬೇಡಿಕೆಯಾಗಿದೆ.

'ಪರಿಶೀಲಿಸಲಾಗುವುದು'

ಪ್ರತಿ ಭಾನುವಾರ ಮೆಟ್ರೊ ರೈಲುಗಳ ನಿರ್ವಹಣೆ ಕಾರ್ಯ ಇರುತ್ತದೆ. ಅದಕ್ಕಾಗಿ 2 ತಾಸು ತಡವಾಗಿ ಸೇವೆ ಆರಂಭಿಸಲಾಗುತ್ತಿದೆ. ಭಾನುವಾರ ಬಹುತೇಕ ಕಂಪನಿಗಳು ರಜೆ ಇರುವುದರಿಂದ ಮುಂಜಾನೆ ಸಂಚರಿಸುವ ಪ್ರಯಾಣಿಕರ ಪ್ರಮಾಣವೂ ಭಾರಿ ಕಡಿಮೆ ಇರುತ್ತದೆ. ಬೇಡಿಕೆಯೂ ಕಡಿಮೆ ಇದೆ. ಹೆಚ್ಚು ಬೇಡಿಕೆ ಇದ್ದರೆ ಪರಿಶೀಲಿಸಿ ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಕ್ಯಾಂಡಿಯನ್ ನೃತ್ಯ ದಕ್ಷಿಣ ಕನ್ನಡ ಜಿಲ್ಲೆ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ವಿರಾಸತ್‌ನ ಮೂರನೇ ದಿನ ಶನಿವಾರ ಆಳ್ವಾಸ್ ವಿದ್ಯಾರ್ಥಿಗಳು ಪ್ರದರ್ಶಿಸಿದ ಶ್ರೀಲಂಕಾದ ಕ್ಯಾಂಡಿಯನ್ ನೃತ್ಯದ ದೃಶ್ಯ – ಪ್ರಜಾವಾಣಿ ಚಿತ್ರ

'ಭಾರತ ಪದ ಸಂವಿಧಾನದತ್ತವಾದುದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ದಿನಗಳಲ್ಲಿ 'ಭಾರತ' ಪದ ಕುರಿತಂತೆ ಅನೇಕ ವಾದ-ವಿವಾದಗಳು ನಡೆಯುತ್ತಿದ್ದು, ಭಾರತೀಯ ಸಂವಿಧಾನದಲ್ಲಿಯೇ 'ಭಾರತ' ಪದ ಅಧಿಕೃತವಾಗಿ ಬಳಕೆಯಾಗಿದೆ' ಎಂದು ಸಂಶೋಧಕ ಕೊಯೆನ್ರಾಡ್ ಎಲ್ಸ್ಟ್ ತಿಳಿಸಿದರು.

ದಿ ಮಿಥಿಕ್ ಸೊಸೈಟಿ, ಮಿಷನ್ ದಿಶಾ, ಪ್ರಜ್ಞಾ ಪ್ರವಾಹ ಹಾಗೂ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಜಂಟಿಯಾಗಿ ನಗರದಲ್ಲಿ ಶನಿವಾರ ಆಯೋಜಿಸಿದ್ದ ಉಪನ್ಯಾಸದಲ್ಲಿ 'ಭಾರತದ ಹಲವು ಮುಖಗಳು ಮತ್ತು ಹೆಸರುಗಳು' ಎಂಬ ವಿಷಯದ ಬಗ್ಗೆ ಮಾತನಾಡಿದರು.

'ಹಿಂದೂ ಧರ್ಮವು ತನ್ನ ಧರ್ಮ ಸಹಿಷ್ಣುತಾ ಭಾವನೆಯಿಂದಾಗಿ ಜಗತ್ತಿನಲ್ಲಿ ಪ್ರಸಿದ್ಧಿ ಪಡೆದಿದೆ. ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ ಅಧ್ಯಯನಕ್ಕೆ ವೇದಗಳು ಮೂಲ ಆಕರ ಗ್ರಂಥಗಳಾಗಿವೆ. ಪುರಾಣಗಳು ಸಹ ಮುಖ್ಯವಾದ ಮಾಹಿತಿಗಳನ್ನು ನೀಡುತ್ತವೆ. ಅನಾದಿ ಕಾಲದಿಂದಲೂ ಜಂಬೂದ್ವೀಪ, ಹಿಂದೂಸ್ಥಾನ ಮುಂತಾದ ಹೆಸರಿಂದ ಕರೆಯಲ್ಪಟ್ಟ ಈ ದೇಶ, ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡು ಜಗತ್ತಿಗೆ ಸದಾ ಹೊಸ ಬೆಳಕನ್ನು ನೀಡುತ್ತಿದೆ. ಹಿಂದೂ ಧರ್ಮವು ಇತರ ಧರ್ಮಗಳಂತೆ ಒಂದು ಧರ್ಮಾಚರಣೆಗೆ ಸೀಮಿತವಾಗಿರದೆ ತನ್ನದೇ ಆದ ಸಾಂಸ್ಕೃತಿಕ ವೈಶಿಷ್ಟ್ಯತೆಗೆ ಹೆಸರುವಾಸಿಯಾಗಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. 'ಪ್ರಾಚೀನ ಭಾರತೀಯ ಸಾಹಿತ್ಯವು ಕಾಲಗಣನೆಯ ಜೊತೆಗೆ ಆಯಾ ಕಾಲದ ದೊರೆಗಳ ಅನುಕ್ರಮ ಪಟ್ಟಿಯನ್ನು ಹೊಂದಿದ್ದರೆ ಭಾರತದ ಇತಿಹಾಸದ ಅಧ್ಯಯನವನ್ನು ಮತ್ತಷ್ಟು ಪರಿಪೂರ್ಣವಾಗಿಸಲು ಸಾಧ್ಯವಾಗುತ್ತಿತ್ತು' ಎಂದು ತಿಳಿಸಿದರು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನ ಗೌರವ ಕಾರ್ಯದರ್ಶಿ ಅರಕಲಿ ವೆಂಕಟೇಶ್ ಪ್ರಸಾದ್, ಜಂಟಿ ಕಾರ್ಯದರ್ಶಿ ಎಂ.ಆರ್. ಪ್ರಸನ್ನ ಕುಮಾರ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕೊಯೆನ್ರಾಡ್ ಎಲ್ಸ್ಟ್ ಅವರನ್ನು ಅರಕಲಿ ವೆಂಕಟೇಶ್ ಪ್ರಸಾದ್ ಗೌರವಿಸಿದರು

'ಗೋವಾದಲ್ಲಿ ಶೀಘ್ರವೇ ಕನ್ನಡ ಭವನ'

ಪ್ರಜಾವಾಣಿ ವಾರ್ತೆ

ಗೋವಾ: 'ಗೋವಾ ರಾಜ್ಯದಲ್ಲಿ ಶೀಘ್ರವೇ ಕನ್ನಡ ಭವನ ನಿರ್ಮಿಸಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಸ್ಥಳೀಯ ಕನ್ನಡಿಗರಿಗೆ ಭರವಸೆ ನೀಡಿದರು.

ಸಚಿವರಾದ ಬಳಿಕ ಮೊದಲ ಬಾರಿಗೆ ಗೋವಾ ರಾಜ್ಯಕ್ಕೆ ಶನಿವಾರ ಭೇಟಿ ನೀಡಿದ ಅವರು, ದಕ್ಷಿಣ ಗೋವಾದ ಜುವಾರಿ ನಗರದಲ್ಲಿನ ಕನ್ನಡಿಗರ ಸಮಸ್ಯೆ ಆಲಿಸಿದ ಬಳಿಕ ಮಾತನಾಡಿದರು.

'ಕೇರಳ, ಮಹಾರಾಷ್ಟ್ರದಲ್ಲಿ ಅಲ್ಲಿನ ಸರ್ಕಾರ ನೀಡಿದ ಸ್ಥಳದಲ್ಲಿ ಕನ್ನಡ ಭವನ ನಿರ್ಮಿಸಲಾಗಿದೆ. ಗೋವಾದಲ್ಲಿ ಕನ್ನಡ ಭವನ ನಿರ್ಮಿಸಲು ಜಾಗ ನೀಡುವಂತೆ ಹಲವು ಬಾರಿ ಇಲ್ಲಿನ ಸರ್ಕಾರಕ್ಕೆ ಕೋರಲಾಗಿತ್ತು. ಆದರೆ, ಭೂಮಿ ನೀಡಲು ಇಲ್ಲಿನ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಈ ಬಾರಿ ನಾವೇ ಒಂದು ಎಕರೆಯಷ್ಟು ಭೂಮಿ ಖರೀದಿಸಿ ಕನ್ನಡ ಭವನ ನಿರ್ಮಿಸುತ್ತೇವೆ' ಎಂದರು.

'ದಕ್ಷಿಣ ಗೋವಾದಲ್ಲಿ ಒಂದೆರಡು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ಈ ಭಾಗದ ಜಿಲ್ಲಾಧಿಕಾರಿಯವರನ್ನು ಸಂಪರ್ಕಿಸಿ, ಶೀಘ್ರವೇ ಜಾಗದ ಖರೀದಿ ಪ್ರಕ್ರಿಯೆ ಅಂತಿಮಗೊಳಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಮುಂದಿನ ಆಯವ್ಯಯದಲ್ಲಿ ಕನ್ನಡ ಭವನ ನಿರ್ಮಾಣದ ಬಗ್ಗೆ ಘೋಷಣೆ ಮಾಡಿಸಿ, ಅವರಿಂದಲೇ ಭೂಮಿ ಪೂಜೆ ನೆರವೇರಿಸಲಾಗುವುದು' ಎಂದರು.

'ಗೋವಾದಲ್ಲಿ ಒಟ್ಟು 15 ಲಕ್ಷ ಜನಸಂಖ್ಯೆ ಇದ್ದು, ಈ ಪೈಕಿ ನಾಲ್ಕರಿಂದ ಐದು ಲಕ್ಷ ಕನ್ನಡಿಗರೇ ಇದ್ದಾರೆ. ನೀವು ಮನಸ್ಸು ಮಾಡಿದರೆ ಮೂರ್ನಾಲ್ಕು ಶಾಸಕರನ್ನು ನೀವೇ ಆಯ್ಕೆ ಮಾಡಬಹುದು' ಎಂದರು.

ಗೋವಾ ಬೈನಾದಲ್ಲಿ ಉತ್ತರ ಕರ್ನಾಟಕದವರೇ ಹೆಚ್ಚಿದ್ದು, ಸಂತ್ರಸ್ತರಾಗಿರುವ ಅವರಿಗೆ ಗೋವಾ ಸರ್ಕಾರ ಪುನರ್ವಸತಿ ಕಲ್ಪಿಸಿಕೊಟ್ಟಿಲ್ಲ. ಸಂತ್ರಸ್ತರಿಗೆ ಗೋವಾ ಸರ್ಕಾರ ಪುನರ್ವಸತಿ ಕಲ್ಪಿಸಿಕೊಡಬೇಕು. ಗೋವಾ ರಾಜ್ಯ ಶೇ 70ರಷ್ಟು ಪ್ರವಾಸೋದ್ಯಮವನ್ನು ಅವಲಂಬಿಸಿದ್ದು, ಇಲ್ಲಿಗೆ ಭೇಟಿ ನೀಡುವವರಲ್ಲಿ ಕನ್ನಡಿಗರೇ ಹೆಚ್ಚಿದ್ದಾರೆ. ಇಲ್ಲಿನ ವಿದ್ಯುತ್ ಉತ್ಪಾದನಾ ಘಟಕದಲ್ಲಿ ಕನ್ನಡಿಗರು ಹೆಚ್ಚಿದ್ದಾರೆ. ಹೀಗಾಗಿ, ಕನ್ನಡಿಗರಿಗೆ ಗೋವಾ ಸರ್ಕಾರ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಆಗ್ರಹಿಸಿದರು.

ಗೋವಾದಲ್ಲಿ ಕನ್ನಡ ಭವನ ನಿರ್ಮಿಸಲು ದಕ್ಷಿಣ ಗೋವಾದ ಸ್ಥಳಗಳಿಗೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಭೇಟಿ ನೀಡಿದರು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಗೋವಾ ಕನ್ನಡ ಸಾಹಿತ್ಯ ಪರಿಷತ್, ಗೋವಾ ರಕ್ಷಣಾ ವೇದಿಕೆ ಸೇರಿದಂತೆ ವಿವಿಧ ಗೋವಾ ಕನ್ನಡ ಸಂಘಟನೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡ ಭವನ ನಿರ್ಮಿಸಲು ಸಚಿವ ಶಿವರಾಜ್ ತಂಗಡಗಿ ಅವರು ದಕ್ಷಿಣ ಗೋವಾದಲ್ಲಿ ಸ್ಥಳ ಪರಿಶೀಲನೆ ನಡೆಸಿದರು. ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ್ ಮತ್ತೀಹಳ್ಳಿ, ಗೋವಾ ಕನ್ನಡ ಸಾಹಿತ್ಯ ಪರಿಷತ್, ಗೋವಾ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಇದ್ದರು

ಉಪನಗರ ರೈಲು: ಜರ್ಮನಿ ಬ್ಯಾಂಕ್–ಕೆ-ರೈಡ್ ಒಪ್ಪಂದ

ಬೆಂಗಳೂರು: ಉಪನಗರ ರೈಲು ಯೋಜನೆಯ ಅನುಷ್ಠಾನಕ್ಕಾಗಿ ಜರ್ಮನಿಯ ಕೆಎಫ್‌ಡಬ್ಲ್ಯು ಡೆವಲಪ್‌ಮೆಂಟ್ ಬ್ಯಾಂಕ್ ಜತೆ ಕರ್ನಾಟಕ ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕೆ-ರೈಡ್) ಒಪ್ಪಂದ ಮಾಡಿಕೊಂಡಿದೆ.

ದೆಹಲಿಯಲ್ಲಿ ಶನಿವಾರ ಎರಡೂ ಸಂಸ್ಥೆಯ ಉನ್ನತ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಯೋಜನೆಗೆ ₹4,500 ಕೋಟಿ ಸಾಲ ಮತ್ತು ₹45 ಕೋಟಿ ಅನುದಾನ ಸಿಗಲಿದೆ. ಇದರಿಂದ ಬೆಂಗಳೂರು ಉಪನಗರ ರೈಲು ಯೋಜನೆಯ ತ್ವರಿತ ಅನುಷ್ಠಾನಕ್ಕೆ ಅನುಕೂಲವಾಗಲಿದೆ ಎಂದು ಮೂಲ ಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಬೆಂಗಳೂನಲ್ಲಿ ಸುಗಮ ಸಂಚಾರ ವ್ಯವಸ್ಥೆಗಾಗಿ ₹15,767 ಕೋಟಿ ವಿನಿಯೋಗಿಸಲಾಗುತ್ತಿದೆ. ಹಲವು ಹಣಕಾಸು ಸಂಸ್ಥೆಗಳಿಂದ ₹7,438 ಕೋಟಿ ಸಾಲವಾಗಿ ತೆಗೆದುಕೊಳ್ಳಲಾಗುತ್ತಿದೆ. ಯೋಜನೆಯನ್ನು ಕೆ-ರೈಡ್ ಮತ್ತು ಕೇಂದ್ರ ಸರ್ಕಾರದ ರೈಲ್ವೆ ಸಚಿವಾಲಯದ ಮೂಲಕ ಜಾರಿಗೊಳಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಬ್ಯಾಂಕ್ ಅಧಿಕಾರಿ ಫಿಲಿಫ್ ವೈಶ್, ಉಪನಿರ್ದೇಶಕಿ ರುಕ್ಮಿಣಿ ಪಾರ್ಥಸಾರಥಿ, ಸ್ವಾತಿ ಖನ್ನಾ, ಕೇಂದ್ರ ಆರ್ಥಿಕ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಮಾನಿಶಾ ಸಿನ್ಹಾ, ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಶ್ರೀಧರ ಮೂರ್ತಿ ಉಪಸ್ಥಿತರಿದ್ದರು.

ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಪರಿಸರವಾದಿಗಳು

'ಅರ್ಜುನ' ಸಾವು: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅರ್ಜುನ ಆನೆ ಸಾವಿಗೆ ಕಾರಣವಾಗಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಪರಿಸರವಾದಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

'ವನ್ಯಜೀವಿಗಳ ವಾಸ ಸ್ಥಾನಗಳಲ್ಲಿ ಅವೈಜ್ಞಾನಿಕ ಪರಿಸರ ಪ್ರವಾಸೋದ್ಯಮ ನಡೆಯುತ್ತಿದೆ. ಇದರಿಂದಾಗಿಯೇ ವನ್ಯಜೀವಿಗಳು ಹಾಗೂ ಜನರ ನಡುವೆ ಸಂಘರ್ಷಗಳು ನಡೆಯುತ್ತಿವೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಪರಿಸರ ಸೂಕ್ಷ್ಮ ಪ್ರದೇಶ ಹಾಗೂ ಪ್ರಾಣಿ ಕಾರಿಡಾರ್‌ಗಳಲ್ಲಿ ಪರಿಸರ ಪ್ರವಾಸೋದ್ಯಮ ನಿಷೇಧಿಸಬೇಕು. ತರಬೇತಿ ಪಡೆದ ರಾಜ್ಯದ ಆನೆಗಳನ್ನು ಕಾರ್ಯಾಚರಣೆಗೆಂದು ಬೇರೆ ರಾಜ್ಯಗಳಿಗೆ ಕಳುಹಿಸಬಾರದು. ವನ್ಯಜೀವಿಗಳ ಅವೈಜ್ಞಾನಿಕ ಹಾಗೂ ಅನಗತ್ಯವಾಗಿ ಸೆರೆ ಹಿಡಿಯುವುದನ್ನು ನಿಲ್ಲಿಸಬೇಕು. ತರಬೇತಿ ಪಡೆದ ಪಶು ವೈದ್ಯರನ್ನು ಅರಣ್ಯ ಇಲಾಖೆ ಕೇಡರ್‌ಗೆ ಸೇರಿಸಬೇಕು' ಎಂದು ಅವರು ಒತ್ತಾಯಿಸಿದರು.

'ಅರಣ್ಯ ಇಲಾಖೆ ಹಣ ದುರ್ಬಳಕೆ ಆಗಿದೆ. ಇದರಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಸೇವೆಯಿಂದ ವಜಾಗೊಳಿಸಬೇಕು. ಅಸಮರ್ಥರಾಗಿರುವ ವನ್ಯಜೀವಿ ಪರಿಪಾಲಕರನ್ನು ಹುದ್ದೆಯಿಂದ ತೆಗೆದು ಹಾಕಬೇಕು' ಎಂದೂ ಅವರು ಒತ್ತಾಯಿಸಿದರು.

ರೈತರ ಮಹಾ ಅಧಿವೇಶನ ಇದೇ 23ಕ್ಕೆ

ಬೆಂಗಳೂರು: ವಿಶ್ವ ರೈತರ ದಿನದ ಅಂಗವಾಗಿ ಸಂಯುಕ್ತ ಕಿಸಾನ್ ಮೋರ್ಚಾದ ವತಿಯಿಂದ ಇದೇ 23ರಂದು 'ರೈತರ ಮಹಾ ಅಧಿವೇಶನ'ವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, 'ಮೂರು ವರ್ಷಗಳಿಂದ ರಾಜ್ಯವು ಅತಿವೃಷ್ಟಿ, ಬರಗಾಲಕ್ಕೆ ತುತ್ತಾಗಿದೆ. ಆದ್ದರಿಂದ ಎಲ್ಲ ರೈತರ ಕೃಷಿ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಎಲ್ಲ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿಗೆ ಕಾನೂನು ಜಾರಿಗೊಳಿಸಬೇಕು. ಕೇಂದ್ರ, ರಾಜ್ಯ ಸರ್ಕಾರಗಳು ಒಂದು ಎಕರೆಗೆ ₹25 ಸಾವಿರ ಬರ ಪರಿಹಾರ ಬಿಡುಗಡೆಗೊಳಿಸಬೇಕು' ಎಂದು ಒತ್ತಾಯಿಸಿದರು.

'ರಾಜ್ಯದಲ್ಲಿ ಪ್ರಕೃತಿಯ ಮುನಿಸಿನಿಂದ ಭತ್ತ, ಕಬ್ಬು, ತೊಗರಿ, ಜೋಳ, ರಾಗಿ ಉತ್ಪಾದನೆಯಲ್ಲಿ ಶೇ 50ರಷ್ಟು ಕುಂಠಿತವಾಗಿದೆ. ಆದ್ದರಿಂದ ವಿದೇಶಕ್ಕೆ ರಫ್ತು ಮಾಡುತ್ತಿರುವ ಆಹಾರ ಧಾನ್ಯಗಳನ್ನು ನಿಷೇಧಿಸಬೇಕು. ಎಲ್ಲ ಕೃಷಿ ಬೆಳೆಗಳಿಗೂ ಕಡ್ಡಾಯವಾಗಿ ಬೆಳೆವಿಮೆ ಜಾರಿಗೊಳಿಸಬೇಕು. 60 ವರ್ಷ ಪೂರೈಸಿದ ರೈತರಿಗೆ ತಿಂಗಳಿಗೆ ₹ 5 ಸಾವಿರ ಪಿಂಚಣಿ ನೀಡಬೇಕು ಸೇರಿ ವಿವಿಧ ವಿಷಯಗಳ ಬಗ್ಗೆ ಅಧಿವೇಶನದಲ್ಲಿ ಚರ್ಚಿಸಲಾಗುವುದು' ಎಂದರು.

ಸಂಗೀತ, ನೃತ್ಯ ಕಲೆಗಳ ವಿಷಯದಲ್ಲಿ ಸರ್ಟಿಫಿಕೆಟ್ ಹಾಗೂ ಡಿಪ್ಲೊಮಾ ಕೋರ್ಸ್

17 ಸಂಸ್ಥೆಗಳೊಂದಿಗೆ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಸಂಗೀತ ಶಿಕ್ಷಣವನ್ನು ವಿಸ್ತರಿಸಲು ಪ್ರಸಕ್ತ ಸಾಲಿನಿಂದಲೇ ಸಂಗೀತ ಮತ್ತು ನೃತ್ಯ ಕಲೆಗಳ ವಿಷಯದಲ್ಲಿ ಸರ್ಟಿಫಿಕೆಟ್ ಹಾಗೂ ಡಿಪ್ಲೊಮಾ ಕೋರ್ಸ್‌ಗಳನ್ನು ನಡೆಸಲು 17 ಖಾಸಗಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ' ಎಂದು ಇಲ್ಲಿನ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ತಿಳಿಸಿದರು.

'ಕರ್ನಾಟಕ ಸಂಗೀತ, ಭರತನಾಟ್ಯ, ಹಿಂದೂಸ್ತಾನಿ ಸಂಗೀತ, ಭರತನಾಟ್ಯ, ಸುಗಮ ಸಂಗೀತ, ವೀಣೆ, ಸಿತಾರ್, ಹಾರ್ಮೋನಿಯಂ ಸೇರಿ ಒಟ್ಟು 16 ವಿಷಯಗಳಲ್ಲಿ ಕೋರ್ಸ್‌ಗಳನ್ನು ಅಭ್ಯಾಸ ಮಾಡಬಹುದು' ಎಂದು ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾಹಿತಿ ನೀಡಿದರು.

'ಮೊದಲಿಗೆ 10 ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ಈಗ 17 ಸಂಸ್ಥೆಗಳೊಂದಿಗೆ ಪ್ರಕ್ರಿಯೆ ನಡೆದಿದೆ. ಅವುಗಳಲ್ಲಿ 2 ಸಂಶೋಧನಾ ಕೇಂದ್ರಗಳಾಗಿ ಕಾರ್ಯನಿರ್ವಹಿಸಲಿವೆ. ವಿಶ್ವವಿದ್ಯಾಲಯದ ಪಠ್ಯಕ್ರಮದ ಅನುಸಾರ ಪರೀಕ್ಷೆ ನಡೆಸಿ, ಪ್ರಮಾಣಪತ್ರ ಕೊಡಲಾಗುವುದು. ಸಂಸ್ಥೆಗಳು ತರಗತಿಗಳನ್ನು ನಡೆಸುತ್ತವೆ. ಈವರೆಗೆ ಮೈಸೂರಿಗೆ ಸೀಮಿತವಾಗಿದ್ದ ಶೈಕ್ಷಣಿಕ ಚಟುವಟಿಕೆಗಳನ್ನು ರಾಜ್ಯದಾದ್ಯಂತ ವಿಸ್ತರಿಸಲಾಗಿದೆ. ರಾಜ್ಯಪಾಲರಿಂದ ಅನುಮೋದನೆ ದೊರೆತಿದೆ. ಅಲ್ಪಾವಧಿ ಕೋರ್ಸ್‌ಗಳನ್ನೂ ಆರಂಭಿಸಲಾಗುವುದು' ಎಂದರು.

ಕೇಂದ್ರಗಳು: 'ಬೆಂಗಳೂರಿನ ಮಲ್ಲೇಶ್ವರಂ ಮಹಿಳಾ ಸಂಘ, ರಾಜೇಶ್ವರಿ ಕಲಾನಿಕೇತನ, ಸಮರ್ಥನಂ ಟ್ರಸ್ಟ್, ಕರ್ನಾಟಕ ಭರತಂಗಮ ಪ್ರತಿಷ್ಠಾನ, ಕಲಾ ಕದಂಬ ಕಲಾ ಕೇಂದ್ರ, ಸೃಷ್ಟಿ ಪ್ರದರ್ಶಕ ಕಲೆಗಳು ಮತ್ತು ನೃತ್ಯ ಥೆರಪಿ ಕೇಂದ್ರ, ನಾಟ್ಯಯಾನ ಟ್ರಸ್ಟ್, ಲಕ್ಷ್ಮಿನಾರಾಯಣ ಗ್ಲೋಬಲ್ ಸೆಂಟರ್ ಆಫ್ ಎಕ್ಸಲೆನ್ಸ್, ವೆಂಕಟ್ ಸಂಗೀತ ಹಾಗೂ ನೃತ್ಯ ಅಕಾಡೆಮಿ, ಕರ್ನಾಟಕ ಜಾನಪದ ಪರಿಷತ್ತು, ನೆಲಮಂಗಲದ ದಿವ್ಯಜ್ಯೋತಿ ವಿದ್ಯಾಕೇಂದ್ರ, ಮೈಸೂರು ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರ, ಮಂಗಳೂರಿನ ಸಂದೇಶ ಪ್ರತಿಷ್ಠಾನ ಹಾಗೂ ಮಾಂಡ್ ಸೊಭಾಣ್, ಹುಬ್ಬಳ್ಳಿಯ ಕಲಾ ಸುಜಯ, ಗುಬ್ಬಿಯ ವಿವೇಕಾನಂದ ವಿದ್ಯಾಪೀಠ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಸದುರ್ಗದ ಕನಕಪ್ರಿಯ ನಾಟ್ಯಕಲಾ ಕೇಂದ್ರ ಟ್ರಸ್ಟ್ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಸೌಕರ್ಯಗಳಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ' ಎಂದರು. ಕುಲಸಚಿವರಾದ ಪ್ರೊ. ಎಂ.ಕೆ. ಮಹದೇವನ್ ಹಾಗೂ ರಾಜೇಶ್ ಎಂ.ಆರ್. ಹಾಜರಿದ್ದರು.

ಯುವನಿಧಿಗೆ ಮಾಹಿತಿ

ಪ್ರೊ.ನಾಗೇಶ್ ವಿ. ಬೆಟ್ಟಕೋಟೆ

'ಯುವನಿಧಿ' ಯೋಜನೆಗೆ ಫಲಾನುಭವಿಗಳಾಗಬಹುದಾದ ವಿಶ್ವವಿದ್ಯಾಲಯದ ಪದವೀಧರರ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ' ಎಂದು ಪ್ರೊ. ನಾಗೇಶ್ ತಿಳಿಸಿದರು.

'ಪ್ರೌಢಶಿಕ್ಷಣ ಮಂಡಳಿಯು ರಾಜ್ಯದಾದ್ಯಂತ ನಡೆಸುತ್ತಿದ್ದ ಸಂಗೀತ, ತಾಳವಾದ್ಯ ಹಾಗೂ ನೃತ್ಯಕ್ಕೆ ಸಂಬಂಧಿಸಿದ ಜೂನಿಯರ್, ಸೀನಿಯರ್, ವಿದ್ವತ್ ಪೂರ್ವ ಹಾಗೂ ವಿದ್ವತ್ ಪರೀಕ್ಷೆಗಳನ್ನು ವಿಶ್ವವಿದ್ಯಾಲಯದಿಂದಲೇ ನಿರ್ವಹಿಸಲು ಅನುಮೋದನೆ ದೊರೆತಿದೆ. ಏಪ್ರಿಲ್–ಮೇನಿಂದ ಆರಂಭಿಸಲಾಗುವುದು. ಇದರಿಂದಾಗಿ, ಪರೀಕ್ಷೆಗಳಿಗೆ ವಿಶ್ವದಾದ್ಯಂತ ಮನ್ನಣೆ ಸಿಗಲಿದೆ' ಎಂದರು.

ಮೈಸೂರು ತಾಲ್ಲೂಕಿನ ನಾಡನಹಳ್ಳಿಯ ಸರ್ದಾರ್ ವಲ್ಲಭಭಾಯಿ ಪಟೇಲ್ ನಗರದಲ್ಲಿ 5 ಎಕರೆ ಸಿಎ ನಿವೇಶನವನ್ನು ಖರೀದಿಸಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ

ಪ್ರೊ.ನಾಗೇಶ್ ವಿ. ಬೆಟ್ಟಕೋಟೆ, ಸಂಗೀತ ವಿ.ವಿ ಕುಲಪತಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

P.S. Goenka Memorial Education Trust
JNANA VIJNANA VIDYAPEETHA
(Aff. To CBSE, New Delhi) #11th Main, 6th Cross, R.K. Layout, Padmanabhanagar, Bangalore – 560062.
Ph. No. 080-26391509, Email: jvvp2001@gmail.com
REQUIRED
Qualified and experienced teachers for the following posts for the academic year 2024-25.
• High School : PGT for English and Social Science.
• Middle School : TGT for Social Science.
• Primary School : TGT for Kannada.
• Nursery : Montessori trained.
Qualified full time teachers for Yoga and Art and Craft. Minimum 3 years of experience in ICSE / CBSE Schools desirable.
Apply within 10days with copies of credentials.

SRI KK EDUCATION CENTRE
(Affiliated to CBSE, Aff. No. 830256)
Kadabagere, Magadi Road, Bangalore
RECRUITMENT OF STAFF
PRE-PRIMARY PROGRAMME
Early Childhood Education / NTT/ MTT
PRIMARY & SECONDARY PROGRAMME
◆English ◆Maths ◆Hindi ◆Social Studies ◆Science ◆Computer Science ◆Physical Educator
Qualification: B.Ed., M.Ed., B.Sc., BCA, with minimum 3 years of experience.
Submit your application in pdf with a photo to
Email: srikkec@gmail.com | Ph: 9886535292

WANTED TRAINED Post Graduate Teachers for Kannada. English.Physical education,Hindi, Chemistry,Physics. Social Studies, Computer,Science Walk-in Interview on Monday 18th December 2023 With The Secretary Srikrishna International School, ITI-Layout, BSK 3rd Stage Bangalore-85. Phone:26690799.

Cook

WANTED COOK For person residing in Yelahanka New Town, Bangalore for Veg, Non-Veg. Contact:- 7483136348.

BEST JOBS in best organisations with best Salary. All categories. bengaluru jobs. Quickest ever Placement system. Just Misscall 24/7: 99000-54468

REPUTED SECURITY Agency Require Experienced Field Officer, Marketing Manager/ Operations, Tally Clerk, Personnel Driver. Bangalore Ph:080-23437474 23437797 Mob:8892073262

REQUIRED OFFICE BOYS/ DELIVERY BOYS/ STORE KEEPERS Candidates residing in and around Hanumanthnagar Contact: 99807-99996

Part-Time Jobs

RETIRED/ VRS Persons Age Above 45 Years Earn 2nd Income 35K To 40K PM. Their Life Here No Retirement: 9886641282/ 7019215243

Wanted

Sardar Veeranagouda Patil
MAHILA VIDYA PEETH
Hosur, Vidyanagar, Hubli-580021
Ph : 0836-2272249, M : 7676530714
Email : mvp.chairman@yahoo.co.in
URGENT REQUIREMENT
PRINCIPAL for Nursing College
Qualification : M.Sc. (Nursing)
Experience : Minimum 1 year
Email / Apply :
Basantkumar Patil Chairman

Accounts & Finance

WANTED IMMEDIATELY
Leading Exporter based out of Yelahanka, Bengaluru is looking for experienced and motivated professionals
Accounts Manager
Candidate will be responsible to maintain the books of accounts, financial reporting and other accounts related tasks. Should have strong managerial skills and able to handle Government compliances, Audit & Taxation, A/c Finalisation, etc...
CA with minimum 5 years of experience
Accounts Executive
Candidate will be responsible to assist Accounts Manager in maintaining the books of accounts and monthly closing of books and other accounts related tasks.
M.Com / MBA / CA Inter with minimum 3 yrs experience
Accounts Assistant
Candidate will be responsible to assist the accounts team in daily recording of transactions, preparation of vouchers, reconciliation and other accounts related tasks.
B.Com / M.Com with minimum 2 years of experience
E-Mail your resume to apply33533@gmail.com

Engg/ Production Technical

WANTED at BSK II STAGE, BANGALORE
PURCHASE EXECUTIVES
B.Com/ B.Sc/ BE- Freshers- Female only
PPC EXECUTIVES
B.Sc/ Diploma/ BE- EEE/ EC- Female only
PRODUCTION SUPERVISOR
GTTC/ NTTF- 1 - 5 Years Exp.
Vertical Injection Moulding, Cable Harness- Male only
QUALITY EXECUTIVES
BE/ Diploma- EEE/ ECE 1 - 2 Years Exp.
SENIOR QUALITY EXECUTIVE
BE/ Diploma- EEE/ ECE 3 - 5 Years Exp.
Send resume to careers@protectron.in
For details please visit www.protrectron.in

General

Creating Job Creators®
I Create, a not- for-profit organization in existence for 23 years, is engaged in training Entrepreneurship skills to retiring Army Veterans. We are looking for Facilitators cum Coordinators for our Business Incubation Centres.
Location: Bangalore & Belgaum
We are looking for people who
• Have Experience in Planning/Managing/ Organizing/Coordinating and Executing the Training Workshops.
• Have Good communication skills in Hindi, English and local language
• Minimum 2 years of experience in the NGO sector.
• Have a Degree and are Computer literate
Selected candidates will be trained in using the unique I Create Methodology and Content. After joining, the candidate will have to conduct training as per I Create norms. Interested candidates may send their CV to info@icreateindia.org within a week.

"WANTED BRANCH MANAGERS Female Telecallers Sales-Managers Sales Executives Freelancers Salary: ₹15k to-1Lakh Plus Incentives. 9071615300, 7829956789. Work Location: M.G.Road, RT.Nagar, Vasanthnagar, Mysore Road, Nagawara, Shivajinagar &.Yelahanka. hrjp365@gmail.com

Drivers

WANTED EXPERIENCED Water Tanker DRIVERS for Bangalore. Contact Immediately Phone:- 9448171416

WANTED CAR Driver 2 years Experience, Near To J.P.Nagar, 5th Phase Hulimavu Area Contact: 9986746241

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Marketing & Sales

WANTED SALES executive having vehicle for outdoor canvassing of Chemicals. Attractive Salary Mahaveer Chemicals 280 1st Main, Chamrajpet. 9741126640

KAVI LOGISTICS Wanted Marketing Executive with 5 years Experience & Office Staffs (Male) To work in Cubbonpet and Peenya. Contact: 9738421001/ 9886683188

Hospital & Medical Jobs

IK HOSPITAL (Alipur-Gauribidanur) is Recruiting Gynaecologist, Duty Doctors (Female), OT & Staff Nurses. For details contact: 9036064018.

REQUIRED
NURSES & CARE GIVERS FOR HOMECARE IN BENGALURU
Qualification: Nurses (ANM, GNM, BSc)
Salary upto 60,000/- per month
Food Accomadation & Transportation provided by company
Call or Whatsapp: +919886187449, 7892996578

Multiple Vacancy

URGENTLY REQUIRE: 1.Accounts Executive 2.Purchase Executive 3.Diploma/ITI (Quality) 4.ITI Fitters, 5.Turners, 6.Drillers- for our Motor & special pumps Manufacturing Unit at Devarachikkanahalli, Bannergatta Road, Bangalore. EMAIL- flowoilpumps@hotmail.com. CONTACT- 080-26484068/ 26482095

JOB
To Place your Classified Ads Contact:
9886213331

WANTED ACCOUNTANTS Female, B.Com with 2-3 years Experience in Tally with GST- Knowledge at Peenya Contact: 8151890999. Email:- hr.shrishmotors@gmail.com

WANTED ACCOUNTENT (Any degree, knowledge in Tally)at Chickpet Bangalore Siddhanta Fashion wholesale Readymade Shop.Mobile number 9731121799

DH ಪ್ರಜಾವಾಣಿ Classifieds More value, more impact
REAL ESTATE
The 1st thing to do when Selling/ Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now!
For more details contact:
+91 9886213331
+91 9845114560
080- 45557163/164

केनरा बैंक
भारत सरकार का उपक्रम
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಒಂದು ಉದ್ಯಮ)
सिंडिकेट Syndicate

ಇನ್‌ಫೆಂಟ್ರಿ ರಸ್ತೆ 2ನೇ ಶಾಖೆ: ನಂ.91/1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560 001,
ದೂರವಾಣಿ ಸಂಖ್ಯೆ 080–25599936, ಇ–ಮೇಲ್: cb1927@canarabank.com

ಸ್ವಾಧೀನ ಪ್ರಕಟಣೆ (ಸೆಕ್ಷನ್ 13(4)ರಡಿ (ಸ್ಥಿರಾಸ್ತಿಗಾಗಿ)

ಆದಾಗ್ಯೂ : ಕೆಳ ಸಹಿದಾರರು ಕೆನರಾ ಬ್ಯಾಂಕ್, ಇನ್‌ಫೆಂಟ್ರಿ ರಸ್ತೆ 2ನೇ ಶಾಖೆಯ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯಿದೆ 2002 (2002ರ 54ರಡಿ) ಮತ್ತು ಸೆಕ್ಷನ್ 13(12) ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಆಸಕ್ತಿ (ಜಾರಿ) ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರಗಳನ್ನು ಬಳಸಿಕೊಂಡು ದಿನಾಂಕ: 29.09.2023 ರಂದು ಸಾಲಗಾರರಿಗೆ ಕರೆ ಮಾಡಿ ತಾವಾದ ನೋಟಿಸನ್ನು ನೀಡಿರುತ್ತಾರೆ. ಸಾಲಗಾರರು/ ಜಾಮೀನುದಾರರು/ಅಡಮಾನದಾರರಾದ 1) ಮೆ॥ ಉಷಾ ಎಜ್ಯುಕೇಷನಲ್ ಫೌಂಡೇಶನ್, #683/64/1, ಸರ್ವೆ ನಂ.64/1, ಹೆಬ್ಬಗೋಡಿ, ಆನೇಕಲ್ ತಾಲ್ಲೂಕು, ಬೆಂಗಳೂರು, ಪ್ರತಿನಿಧಿಸುವವರು ಇದರ ಟ್ರಸ್ಟಿಗಳು, ಶ್ರೀ ಮಹೇಶ್ ರೆಡ್ಡಿ ಮತ್ತು ಶ್ರೀಮತಿ ಉಷಾ ಮಹೇಶ್ ರೆಡ್ಡಿ, 2) ಶ್ರೀ ಮಹೇಶ್ ರೆಡ್ಡಿ, #53, 5ನೇ ಎ ಅಡ್ಡರಸ್ತೆ, 21ನೇ ಮೇನ್, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ 2ನೇ ಹಂತ ಬೆಂಗಳೂರು – 560076, 3) ಶ್ರೀಮತಿ ಉಷಾ ಮಹೇಶ್ ರೆಡ್ಡಿ, #53, 5ನೇ ಎ ಅಡ್ಡರಸ್ತೆ, 21ನೇ ಮೇನ್, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ 2ನೇ ಹಂತ ಬೆಂಗಳೂರು – 560076, ಇವರು ನೋಟೀಸಿನಲ್ಲಿ ನಮೂದಿಸಿದ ಮರು ಪಾವತಿಸಬೇಕಾದ ಮೊತ್ತ ರೂ.26,89,37,450.06 (ರೂಪಾಯಿ ಇಪ್ಪತ್ತಾರು ಕೋಟಿ ಎಂಬತ್ತೊಂಭತ್ತು ಲಕ್ಷ ಮೂವತ್ತೇಳು ಸಾವಿರದ ನಾಲ್ಕು ನೂರ ಐವತ್ತು ಮತ್ತು ಪೈಸೆ ಆರು ಮಾತ್ರ) ದಿನಾಂಕ: 28.09.2023 ರಿಂದ ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಪ್ರಾಸಂಗಿಕ ಖರ್ಚುಗಳು ಮತ್ತು ವೆಚ್ಚಗಳನ್ನು ಪ್ರಕಟಣೆಯಲ್ಲಿ ತಿಳಿಸಲಾದಂತೆ ಪ್ರಕಟಣೆ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡಬೇಕಿತ್ತು.

ಸಾಲಗಾರರು/ಜಾಮೀನುದಾರರು/ಅಡಮಾನದಾರರು ಸಾಲದ ಹಣವನ್ನು ಮರುಪಾವತಿಸಲು ವಿಫಲರಾಗಿದ್ದು, ಈ ಮೂಲಕ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮವನ್ನು ಓದಿಕೊಂಡಂತೆ ಸದರಿ ಕಾಯಿದೆ ಪ್ರಕರಣ 13(4) ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಭದ್ರತಾ ಆಸಕ್ತಿ (ಜಾರಿ) 2002ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಗೆ ವಿವರಿಸಿದ ಸ್ವತ್ತುಗಳನ್ನು ಕೆಳ ಸಹಿದಾರರು 11ನೇ ಡಿಸೆಂಬರ್, 2023 ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಕೆನರಾ ಬ್ಯಾಂಕ್, ಇವರಿಗೆ ಬಾಕಿ ಇರುವ ಮೊತ್ತ ರೂ.26,89,37,450.06 (ರೂಪಾಯಿ ಇಪ್ಪತ್ತಾರು ಕೋಟಿ ಎಂಬತ್ತೊಂಭತ್ತು ಲಕ್ಷ ಮೂವತ್ತೇಳು ಸಾವಿರದ ನಾಲ್ಕು ನೂರ ಐವತ್ತು ಮತ್ತು ಪೈಸೆ ಆರು ಮಾತ್ರ) ದಿನಾಂಕ: 28.09.2023 ರಿಂದ ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಪ್ರಾಸಂಗಿಕ ಖರ್ಚುಗಳು ಮತ್ತು ವೆಚ್ಚಗಳು ಸೇರುತ್ತವೆ.

ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ, ಕಾಯ್ದೆಯ ಸೆಕ್ಷನ್ 13ರ ಉಪ ವಿಭಾಗ (8) ರ ಅನ್ವಯ ಇರುತ್ತದೆ.

ಸ್ಥಿರಾಸ್ತಿ ಸ್ವತ್ತಿನ ವಿವರಣೆ

ಷೆಡ್ಯೂಲ್ ಸ್ವತ್ತು : ಐಟಂ ನಂ.1: ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಜಮೀನು ನಂ. 64/1, ಅಳತೆ 1 ಎಕರೆ 18.08 ಗುಂಟೆ, ಸ್ಥಳ ಹೆಬ್ಬಗೋಡಿ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ, ಶ್ರೀ ಎಂ ಮಹೇಶ್ ರೆಡ್ಡಿಯವರ ಹೆಸರಿನಲ್ಲಿರುವ ಜಮೀನಿನ ಚಕ್ಕುಬಂದಿ : ಪೂರ್ವಕ್ಕೆ : ಸರ್ವೆ ನಂ.64/3 ರಲ್ಲಿನ ಶ್ರೀ ಬಿ. ಕೃಷ್ಣ ಮೂರ್ತಿ ಅವರಿಗೆ ಸೇರಿದ ಜಮೀನು, ಪಶ್ಚಿಮಕ್ಕೆ : ರಾಷ್ಟ್ರೀಯ ಹೆದ್ದಾರಿ ನಂ.7, ಉತ್ತರಕ್ಕೆ : ಚನ್ನಪ್ಪನ ಜಮೀನು ಮತ್ತು ದಕ್ಷಿಣಕ್ಕೆ : ವೀರಪ್ಪನವರ ಜಮೀನು.

ಐಟಂ ಸಂಖ್ಯೆ. 2 : ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ವಾಣಿಜ್ಯ ಭೂಮಿ ಮತ್ತು ಕಟ್ಟಡದ ಖಾನೇಶುಮಾರಿ ನಂ.61 ಮತ್ತು 62, ಸ್ಥಳ : ವೀರಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿರುವ ಅಳತೆ 44,200 ಚದರ ಅಡಿ, ವೀರಸಂದ್ರ, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು–560100. ಶ್ರೀ ಎಂ ಮಹೇಶ್ ರೆಡ್ಡಿ ಅವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ: ಪೂರ್ವಕ್ಕೆ : ಖಾನೇಶುಮಾರಿ ನಂ. 65/ಎ ಸ್ವತ್ತು, ಪಶ್ಚಿಮಕ್ಕೆ : ಹೊಸೂರು ರಸ್ತೆ, ಉತ್ತರಕ್ಕೆ : ಕೋನಪ್ಪನ ಅಗ್ರಹಾರ ಗಡಿ ಮತ್ತು ದಕ್ಷಿಣಕ್ಕೆ : ಎಸ್.ಎಂ ಸತ್ಯನಾರಾಯಣ ಅವರ ಸ್ವತ್ತು.

ಐಟಂ ಸಂಖ್ಯೆ.3 : ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ವಸತಿಯುತ ಕಟ್ಟಡದ ಖಾನೇಶುಮಾರಿ ನಂ. 65/ಎ, ಸ್ಥಳ : ವೀರಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿರುವ ಅಳತೆ 20,000 ಚದರ ಅಡಿ, ಶ್ರೀ ಎಂ ಮಹೇಶ್ ರೆಡ್ಡಿಯವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ : ಪೂರ್ವಕ್ಕೆ : ವೆಂಕಟಸ್ವಾಮಿ ರೆಡ್ಡಿಯವರ ಜಮೀನು, ಪಶ್ಚಿಮಕ್ಕೆ : ಖಾನೇಶುಮಾರಿ ನಂ.61 & 62ರ ಸ್ವತ್ತು, ಉತ್ತರಕ್ಕೆ : ಕೋನಪ್ಪನ ಅಗ್ರಹಾರ ಗಡಿ ಮತ್ತು ದಕ್ಷಿಣಕ್ಕೆ : ಎಸ್.ಎಂ ಸತ್ಯನಾರಾಯಣ ಅವರ ಸ್ವತ್ತು.

ಐಟಂ ಸಂಖ್ಯೆ.4: ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಸ್ವತ್ತಿನ ಸಂ.53, ಮುನಿಸಿಪಲ್ ನಂ. 53, ವಾರ್ಡ್ ನಂ.65ರಲ್ಲಿರುವ ಪಿಐಡಿ ನಂ.65–53–53, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ. ಅಳತೆ ಪೂರ್ವದಿಂದ ಪಶ್ಚಿಮಕ್ಕೆ 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 80 ಅಡಿ, ಒಟ್ಟು ವಿಸ್ತೀರ್ಣ 4,000 ಚದರ ಅಡಿ, ಜೊತೆಗೆ 2,468 ಚದರ ಅಡಿ ಅಳತೆಯ ವಸತಿ ಗೃಹ ನೆಲ ಮತ್ತು ಮೊದಲ ಮಹಡಿಗಳು ಸೇರಿದಂತೆ ಶ್ರೀಮತಿ ಉಷಾ ಮಹೇಶ್ ರೆಡ್ಡಿ ಮತ್ತು ಶ್ರೀ ಎಂ ಮಹೇಶ್ ರೆಡ್ಡಿ ಅವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ : ಪೂರ್ವಕ್ಕೆ : ನಿವೇಶನ ಸಂ. 52, ಪಶ್ಚಿಮಕ್ಕೆ : ನಿವೇಶನ ಸಂ.54, ಉತ್ತರಕ್ಕೆ : ರಸ್ತೆ ಮತ್ತು ದಕ್ಷಿಣಕ್ಕೆ : ಪಾರ್ಕ್.

ದಿನಾಂಕ : 16.12.2023
ಸ್ಥಳ : ಬೆಂಗಳೂರು

ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

केनरा बैंक
भारत सरकार का उपक्रम
ಕೆನರಾ ಬ್ಯಾಂಕ್
(ಭಾರತ ಸರ್ಕಾರದ ಒಂದು ಉದ್ಯಮ)
सिंडिकेट Syndicate

ಇನ್‌ಫೆಂಟ್ರಿ ರಸ್ತೆ 2ನೇ ಶಾಖೆ: ನಂ.91/1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು – 560 001,
ದೂರವಾಣಿ ಸಂಖ್ಯೆ 080–25599936, ಇ–ಮೇಲ್: cb1927@canarabank.com

ಸ್ವಾಧೀನ ಪ್ರಕಟಣೆ (ಸೆಕ್ಷನ್ 13(4)ರಡಿ (ಸ್ಥಿರಾಸ್ತಿಗಾಗಿ)

ಆದಾಗ್ಯೂ : ಕೆಳ ಸಹಿದಾರರು ಕೆನರಾ ಬ್ಯಾಂಕ್, ಇನ್‌ಫೆಂಟ್ರಿ ರಸ್ತೆ 2ನೇ ಶಾಖೆಯ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯಿದೆ 2002 (2002ರ 54ರಡಿ) ಮತ್ತು ಸೆಕ್ಷನ್ 13(12) ನಿಯಮ 3ನ್ನು ಓದಿಕೊಂಡಂತೆ ಭದ್ರತಾ ಆಸಕ್ತಿ (ಜಾರಿ) ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರಗಳನ್ನು ಬಳಸಿಕೊಂಡು ದಿನಾಂಕ: 25.09.2023 ರಂದು ಸಾಲಗಾರರಿಗೆ ಕರೆ ಮಾಡಿ ತಾವಾದ ನೋಟಿಸನ್ನು ನೀಡಿರುತ್ತಾರೆ. ಸಾಲಗಾರರು/ ಜಾಮೀನುದಾರರು/ಅಡಮಾನದಾರರಾದ 1) ಮೆ॥ ಶ್ರೀಷಾ ಎಜ್ಯುಕೇಷನಲ್ ಸರ್ವೀಸಸ್ ಎಲ್‌ಎಲ್‌ಪಿ, ಸರ್ವೆ ನಂ.143/2, ಹೋಮ್ ಮಾಂಟೆಸ್ಸರಿ ಸೆಂಟರ್, ಕಮ್ಮಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು, ಪ್ರತಿನಿಧಿಸುವವರು ಅದರ ನಿರ್ದೇಶಕರು, ಶ್ರೀ ಮಹೇಶ್ ರೆಡ್ಡಿ ಮತ್ತು ಶ್ರೀಮತಿ ಉಷಾ ಮಹೇಶ್ ರೆಡ್ಡಿ, 2) ಶ್ರೀ. ಮಹೇಶ್ ರೆಡ್ಡಿ, #53, 5ನೇ ಎ ಅಡ್ಡರಸ್ತೆ, 21ನೇ ಮೇನ್, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ 2ನೇ ಹಂತ ಬೆಂಗಳೂರು – 560076, ಮತ್ತು 3) ಶ್ರೀಮತಿ ಉಷಾ ಮಹೇಶ್ ರೆಡ್ಡಿ, #53, 5ನೇ ಎ ಅಡ್ಡರಸ್ತೆ, 21ನೇ ಮೇನ್, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ 2ನೇ ಹಂತ ಬೆಂಗಳೂರು – 560076, ಇವರು ನೋಟೀಸಿನಲ್ಲಿ ನಮೂದಿಸಿದ ಮರು ಪಾವತಿಸಬೇಕಾದ ಮೊತ್ತ ರೂ.15,76,31,797.68 (ರೂಪಾಯಿ ಹದಿನೈದು ಕೋಟಿ ಎಪ್ಪತ್ತಾರು ಲಕ್ಷ ಮೂವತ್ತೊಂದು ಸಾವಿರದ ಏಳು ನೂರ ತೊಂಭತ್ತೇಳು ಮತ್ತು ಪೈಸೆ ಅರವತ್ತೆಂಟು ಮಾತ್ರ) ದಿನಾಂಕ: 24.09.2023 ರಿಂದ ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಪ್ರಾಸಂಗಿಕ ಖರ್ಚುಗಳು ಮತ್ತು ವೆಚ್ಚಗಳನ್ನು ಪ್ರಕಟಣೆಯಲ್ಲಿ ತಿಳಿಸಲಾದಂತೆ ಪ್ರಕಟಣೆ ದಿನಾಂಕದಿಂದ 60 ದಿನಗಳ ಒಳಗೆ ಮರುಪಾವತಿ ಮಾಡಬೇಕಿತ್ತು.

ಸಾಲಗಾರರು/ಜಾಮೀನುದಾರರು/ಅಡಮಾನದಾರರು ಸಾಲದ ಹಣವನ್ನು ಮರುಪಾವತಿಸಲು ವಿಫಲರಾಗಿದ್ದು, ಈ ಮೂಲಕ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮವನ್ನು ಓದಿಕೊಂಡಂತೆ ಸದರಿ ಕಾಯಿದೆ ಪ್ರಕರಣ 13(4) ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಭದ್ರತಾ ಆಸಕ್ತಿ (ಜಾರಿ) 2002ರಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕೆಳಗೆ ವಿವರಿಸಿದ ಸ್ವತ್ತುಗಳನ್ನು ಕೆಳ ಸಹಿದಾರರು 11ನೇ ಡಿಸೆಂಬರ್, 2023 ರಂದು ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು/ಜಾಮೀನುದಾರರು/ಅಡಮಾನದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಕೆನರಾ ಬ್ಯಾಂಕ್, ಇವರಿಗೆ ಬಾಕಿ ಇರುವ ಮೊತ್ತ ರೂ.15,76,31,797.68 (ರೂಪಾಯಿ ಹದಿನೈದು ಕೋಟಿ ಎಪ್ಪತ್ತಾರು ಲಕ್ಷ ಮೂವತ್ತೊಂದು ಸಾವಿರದ ಏಳು ನೂರ ತೊಂಭತ್ತೇಳು ಮತ್ತು ಪೈಸೆ ಅರವತ್ತೆಂಟು ಮಾತ್ರ) ದಿನಾಂಕ: 24.09.2023 ರಿಂದ ಜೊತೆಗೆ ಮತ್ತಷ್ಟು ಬಡ್ಡಿ ಮತ್ತು ಪ್ರಾಸಂಗಿಕ ಖರ್ಚುಗಳು ಮತ್ತು ವೆಚ್ಚಗಳು ಸೇರುತ್ತವೆ.

ಈ ಮೂಲಕ ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ, ಕಾಯ್ದೆಯ ಸೆಕ್ಷನ್ 13ರ ಉಪ ವಿಭಾಗ (8) ರ ಅನ್ವಯ ಇರುತ್ತದೆ.

ಸ್ಥಿರಾಸ್ತಿ ಸ್ವತ್ತಿನ ವಿವರಣೆ

ಷೆಡ್ಯೂಲ್ ಸ್ವತ್ತು : ಐಟಂ ನಂ.1: ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಜಮೀನು ಮತ್ತು ಕಟ್ಟಡ ಸೇರಿ ಸರ್ವೆ ನಂ. 143/2, ಅಳತೆ 89,298 ಚದರ ಅಡಿ, (02 ಎಕರೆ 2 ಗುಂಟೆ ಪ್ರದೇಶ) ಖಾತಾ ನಂ.4894, ಸ್ಥಳ : ಸರ್ವೆ ನಂ.143/2, ಅಸೆಸ್‌ಮೆಂಟ್ ನಂ #4894/143/2, ಕಮ್ಮಸಂದ್ರ ರಸ್ತೆ, ಆರ್.ಕೆ.ಸಿಟಿ, ಕಮ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು–560100. ಶ್ರೀ ಎಂ. ಮಹೇಶ್‌ರೆಡ್ಡಿ ಅವರ ಹೆಸರಿನಲ್ಲಿದೆ. ಚಕ್ಕುಬಂದಿ : ಪೂರ್ವಕ್ಕೆ : ಕಮ್ಮಸಂದ್ರ ಕೆರೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೆ ನಂ.143/1ರಲ್ಲಿನ ಜಮೀನು ಮತ್ತು ದಕ್ಷಿಣಕ್ಕೆ : ಸರ್ವೆ ನಂ.143/3ರಲ್ಲಿನ ಸರ್ಕಾರಿ ಜಮೀನು.

ಐಟಂ ಸಂಖ್ಯೆ. 2 : ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ವಾಣಿಜ್ಯ ಭೂಮಿ ಮತ್ತು ಕಟ್ಟಡದ ಖಾನೇಶುಮಾರಿ ನಂ.61 ಮತ್ತು 62, ಸ್ಥಳ : ವೀರಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿರುವ ಅಳತೆ 44,200 ಚದರ ಅಡಿ, ವೀರಸಂದ್ರ, ಹೊಸೂರು ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು–560100. ಶ್ರೀ ಎಂ ಮಹೇಶ್ ರೆಡ್ಡಿ ಅವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ: ಪೂರ್ವಕ್ಕೆ : ಖಾನೇಶುಮಾರಿ ನಂ. 65/ಎ ಸ್ವತ್ತು, ಪಶ್ಚಿಮಕ್ಕೆ : ಹೊಸೂರು ರಸ್ತೆ, ಉತ್ತರಕ್ಕೆ : ಕೋನಪ್ಪನ ಅಗ್ರಹಾರ ಗಡಿ ಮತ್ತು ದಕ್ಷಿಣಕ್ಕೆ : ಎಸ್.ಎಂ ಸತ್ಯನಾರಾಯಣ ಅವರ ಸ್ವತ್ತು.

ಐಟಂ ಸಂಖ್ಯೆ.3 : ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ವಸತಿಯುತ ಕಟ್ಟಡದ ಖಾನೇಶುಮಾರಿ ನಂ. 65/ಎ, ಸ್ಥಳ : ವೀರಸಂದ್ರ ಗ್ರಾಮ, ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆಯಲ್ಲಿರುವ ಅಳತೆ 20,000 ಚದರ ಅಡಿ, ಶ್ರೀ ಎಂ ಮಹೇಶ್ ರೆಡ್ಡಿಯವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ : ಪೂರ್ವಕ್ಕೆ : ವೆಂಕಟಸ್ವಾಮಿ ರೆಡ್ಡಿಯವರ ಜಮೀನು, ಪಶ್ಚಿಮಕ್ಕೆ : ಖಾನೇಶುಮಾರಿ ನಂ.61 & 62ರ ಸ್ವತ್ತು, ಉತ್ತರಕ್ಕೆ : ಕೋನಪ್ಪನ ಅಗ್ರಹಾರ ಗಡಿ ಮತ್ತು ದಕ್ಷಿಣಕ್ಕೆ : ಎಸ್.ಎಂ ಸತ್ಯನಾರಾಯಣ ಅವರ ಸ್ವತ್ತು.

ಐಟಂ ಸಂಖ್ಯೆ.4: ಎಲ್ಲಾ ಭಾಗ ಮತ್ತು ವಿಭಾಗಗಳೆಲ್ಲವೂ ಸೇರಿದಂತೆ ಸ್ವತ್ತಿನ ಸಂ.53, ಮುನಿಸಿಪಲ್ ನಂ. 53, ವಾರ್ಡ್ ನಂ.65ರಲ್ಲಿರುವ ಪಿಐಡಿ ನಂ.65–53–53, ಎಂಸಿಹೆಚ್‌ಎಸ್ ಕಾಲೋನಿ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತದೆ. ಅಳತೆ ಪೂರ್ವದಿಂದ ಪಶ್ಚಿಮಕ್ಕೆ 50 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ 80 ಅಡಿ, ಒಟ್ಟು ವಿಸ್ತೀರ್ಣ 4,000 ಚದರ ಅಡಿ, ಜೊತೆಗೆ 2,468 ಚದರ ಅಡಿ ಅಳತೆಯ ವಸತಿಯುತ ಮನೆ, ನೆಲ ಮತ್ತು ಮೊದಲ ಮಹಡಿಗಳು ಸೇರಿದಂತೆ ಶ್ರೀಮತಿ ಉಷಾ ಮಹೇಶ್ ರೆಡ್ಡಿ ಮತ್ತು ಶ್ರೀ ಎಂ ಮಹೇಶ್ ರೆಡ್ಡಿ ಅವರ ಹೆಸರಿನಲ್ಲಿದೆ. ಮತ್ತು ಚಕ್ಕುಬಂಧಿ : ಪೂರ್ವಕ್ಕೆ : ನಿವೇಶನ ಸಂ. 52, ಪಶ್ಚಿಮಕ್ಕೆ : ನಿವೇಶನ ಸಂ.54, ಉತ್ತರಕ್ಕೆ : ರಸ್ತೆ ಮತ್ತು ದಕ್ಷಿಣಕ್ಕೆ : ಪಾರ್ಕ್.

ದಿನಾಂಕ : 16.12.2023
ಸ್ಥಳ : ಬೆಂಗಳೂರು

ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆ

ಸಾರ್ವಜನಿಕ ಪ್ರಕಟಣೆ

ಈ ಸಾರ್ವಜನಿಕ ಪ್ರಕಟಣೆಯನ್ನು ನಮ್ಮ ಕಕ್ಷಿದಾರರಾದ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸ್ ಲಿಮಿಟೆಡ್ ಮತ್ತು ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್, ನೊಂದಾಯಿತ ಕಛೇರಿ ನಂ.1, ಮಿಡ್‌ಫೋರ್ಡ್ ಹೌಸ್, ಮಿಡ್‌ಫೋರ್ಡ್ ಗಾರ್ಡನ್ಸ್, ಎಂ.ಜಿ. ರಸ್ತೆ, ಬೆಂಗಳೂರು–560 001 ರವರು ಈ ಮೂಲಕ ಸಾರ್ವಜನಿಕ ಗಮನಕ್ಕೆ ತರಬಯಸುವುದೇನೆಂದರೇ, ನಮ್ಮ ಮೊದಲನೇ ಕಕ್ಷಿದಾರರು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಸಂಕ್ಷಿಪ್ತವಾಗಿ ಬಿಎಂಐಸಿಪಿ) ಯೋಜನೆಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ದಿನಾಂಕ: 03–04–1997 ರಂದು ಒಪ್ಪಂದವನ್ನು (Frame Work Agreement–ಇನ್ನು ಮುಂದೆ "FWA"ಎಂದು ಕರೆಯಲಾಗುತ್ತದೆ) ಮಾಡಿಕೊಂಡಿರುತ್ತಾರೆ.

FWA ಒಪ್ಪಂದ ಮತ್ತು ಇತರೆ ವಿಷಯಗಳೊಂದಿಗೆ ಬಿಎಂಐಸಿಪಿ ಅನುಷ್ಠಾನಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿರುವುದು ಕಾನೂನು ಬದ್ಧವಾಗಿದ್ದು, ಸಿಂಧುವಾಗಿದ್ದು, ಸಮಂಜಸವಾಗಿದ್ದು ಮತ್ತು ಹೆಚ್ಚಿನ ಸಾರ್ವಜನಿಕ ಹಿತಾಸಕ್ತಿಯುಳ್ಳದ್ದೆಂದು ಮಾನ್ಯ ನ್ಯಾಯಾಲಯಗಳ ಈ ಕೆಳಕಂಡ ತೀರ್ಪುಗಳಲ್ಲಿ ಉಲ್ಲೇಖಿಸಲಾಗಿರುತ್ತದೆ.

1) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 29221/1997 ಕ್ಕೆ ಸಂಬಂಧಿಸಿದಂತೆ ದಿನಾಂಕ: 21–09–1998ರಂದು ನೀಡಿದ್ದ ತೀರ್ಪನ್ನು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ SLP ಸಂಖ್ಯೆ: 1423/1999 ರಂತೆ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 26–03–1999ರ ಆದೇಶದಲ್ಲಿ ಸದರಿ ಮೇಲ್ಮನವಿಯನ್ನು ವಜಾಮಾಡಿ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿಹಿಡಿದಿರುತ್ತದೆ.
2) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲ್ ಸಂಖ್ಯೆ: 72/2004 ಮತ್ತು ಸಂಬಂಧಪಟ್ಟ ಇತರೆ ಪ್ರಕರಣಗಳಲ್ಲಿ ದಿನಾಂಕ: 28–02–2005ರಂದು ನೀಡಿರುವ ತೀರ್ಪು.
3) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ: 45386/2004 ಹಾಗೂ ಸಂಬಂಧಪಟ್ಟ ಇತರೆ ಪ್ರಕರಣಗಳಲ್ಲಿ ದಿನಾಂಕ: 03–05–2005ರಂದು ನೀಡಿರುವ ತೀರ್ಪು.
4) ಮಾನ್ಯ ಸರ್ವೋಚ್ಚ ನ್ಯಾಯಾಲಯವು Civil Appeal No-3492-97/2005 ರಂತೆ ಹಾಗೂ ಸಂಬಂಧಪಟ್ಟ ಇತರೆ ಪ್ರಕರಣಗಳಲ್ಲಿ ದಿನಾಂಕ: 20–04–2006 ರಂದು ನೀಡಿರುವ ತೀರ್ಪು.
5) ಮಾನ್ಯ ಸರ್ವೋಚ್ಚ ನ್ಯಾಯಾಲಯವು Civil Appeal No- 1215/2011 ರ ಪ್ರಕರಣದಲ್ಲಿ ದಿನಾಂಕ: 02–02–2011ರ ಆದೇಶದಲ್ಲಿ ಬಿಎಂಐಸಿಪಿ ಅನುಷ್ಠಾನಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿರುವುದನ್ನು ಎತ್ತಿ ಹಿಡಿದು ರಾಜ್ಯ ಸರ್ಕಾರವು ಯೋಜನೆ ಅನುಷ್ಠಾನಕ್ಕಾಗಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನುಗಳನ್ನು ಯಾವುದೇ ಕಾರಣಕ್ಕೂ ಭೂಸ್ವಾಧೀನ ಪ್ರಕ್ರಿಯೆಯಿಂದ ಬಿಡುಗಡೆ ಮಾಡದಂತೆ ಈ ಕೆಳಕಂಡಂತೆ ಆದೇಶಿಸಿರುತ್ತದೆ.

*"38. In that view of the matter, this court makes it clear that the State Government should complete the Project as early as possible and **should not do anything, including releasing any land acquired under this project** as that may impede the completion of the project and would not be compatible with the larger public interest which the project is intended to serve."*

6) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ: 3438/2010 ರಂತೆ ಮತ್ತು ಸಂಬಂಧಿಸಿದ ಇತರೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ದಿನಾಂಕ: 15–06–2011 ರಂದು ನೀಡಿರುವ ತೀರ್ಪು.

ಈ ಕೆಳಕಂಡ **ಷೆಡ್ಯೂಲ್**ನಲ್ಲಿ ನಮೂದಿಸಿರುವ ಜಮೀನುಗಳಿಗೆ ರಾಜ್ಯ ಸರ್ಕಾರವು ಕೆ.ಐ.ಎ.ಡಿ. ಕಾಯ್ದೆ ಕಲಂ 28(4) ರಂತೆ ಅಂತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ ಮತ್ತು ಸರ್ಕಾರಿ ಜಮೀನುಗಳನ್ನು ಬಿಎಂಐಸಿಪಿಗಾಗಿ ಕಕ್ಷಿದಾರರಿಗೆ ಹಸ್ತಾಂತರಿಸಲಾಗಿರುತ್ತದೆ. ಕೆ.ಐ.ಎ.ಡಿ. ಕಾಯ್ದೆ ಕಲಂ 28(4) ರಂತೆ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಅಧಿಸೂಚಿತ ಜಮೀನುಗಳು ಎಲ್ಲಾ ಋಣಭಾರರಾಹಿತ್ಯದಿಂದ ರಾಜ್ಯ ಸರ್ಕಾರದಲ್ಲಿ ವಿಹಿತಗೊಂಡಿರುತ್ತವೆ. ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ, ತದ ನಂತರದ ವಹಿವಾಟುಗಳು ಅನೂರ್ಜಿತ ಮತ್ತು ನಿರರ್ಥಕವಾಗಿರುತ್ತದೆ.

ಇತ್ತೀಚಿಗೆ ಕಕ್ಷಿದಾರರ ಗಮನಕ್ಕೆ ಬಂದ ಅಂಶವೇನೆಂದರೇ, ಪಟ್ಟಬದ್ಧ ಹಿತಾಸಕ್ತಿಯುಳ್ಳ ಕೆಲವು ವ್ಯಕ್ತಿಗಳು ಅಧಿಸೂಚಿತ ಮತ್ತು ಭೂಸ್ವಾಧೀನಪಡಿಸಿಕೊಂಡಿರುವ / ಹಸ್ತಾಂತರಿಸಿರುವ ಜಮೀನುಗಳನ್ನು ಮಾರಾಟ/ ಖರೀದಿ ವಹಿವಾಟುಮಾಡಲು, ಭೂಪರಿವರ್ತನೆ ಮಾಡಿಸಿಕೊಳ್ಳಲು, ಅಡಮಾನ, ಪೋಡಿಗಳನ್ನು ಮಾಡಿಸಿಕೊಂಡು ಅಥವಾ ಹೊಸ ಸರ್ವೆ ನಂಬರ್‌ಗಳನ್ನಾಗಿ ಮಾಡಿಸಿಕೊಂಡು ಅಧಿಸೂಚಿತ ಜಮೀನುಗಳ ವ್ಯವಹಾರ ಮಾಡಲು ಬೇರೆ ಬೇರೆ ರೀತಿ ಪ್ರಯತ್ನಿಸುತ್ತಿರುವುದು ಕಂಡುಬಂದಿರುತ್ತದೆ. ಭೂಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿರುವ ಜಮೀನುಗಳಿಗೆ ಸಂಬಂಧಪಟ್ಟ ಮೇಲ್ಕಂಡ ವ್ಯವಹಾರಗಳಲ್ಲಿ ತೊಡಗಿಕೊಳ್ಳುವುದು ಕಾನೂನು ಬಾಹಿರವಾಗಿರುತ್ತದೆ ಎಂದು ಈಗಾಗಲೇ ಕಾನೂನು ರೀತ್ಯಾ ಸಾಭೀತಾಗಿದ್ದು, ಇಂತಹ ಕಾನೂನು ಬಾಹೀರ ವ್ಯವಹಾರಗಳಿಗೆ ರಾಜ್ಯಸರ್ಕಾರ, ಭೂಸ್ವಾಧೀನ ಪ್ರಾಧಿಕಾರ ಮತ್ತು ನಮ್ಮ ಕಕ್ಷಿದಾರರು ಭಾದ್ಯಸ್ಥರಾಗಿರುವುದಿಲ್ಲ. ಇದಲ್ಲದೇ, ಯಾವುದೇ ರೀತಿಯಿಂದಲೂ ಅಧಿಸೂಚಿತ/ ಹಸ್ತಾಂತರಿಸಿರುವ ಜಮೀನುಗಳನ್ನು ಪೋಡಿ ಮಾಡಿ ಹೊಸ ಸರ್ವೆ ನಂಬರ್‌ಗಳನ್ನು ನಮೂದಿಸಿ, ಭೂಸ್ವಾಧೀನದಿಂದ ಕೈಬಿಡುವಂತೆ ಮತ್ತು ಮಾರಾಟ ವ್ಯವಹಾರ ಮಾಡುವುದರಿಂದ ರಾಜ್ಯ ಉಚ್ಚ ನ್ಯಾಯಾಲಯದ ಹಾಗೂ ಮಾನ್ಯ ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘನೆ ಮಾಡಿದಂತಾಗುತ್ತದೆ.

ಆದ್ದರಿಂದ ನಮ್ಮ ಕಕ್ಷಿದಾರರು ಈ ಮೂಲಕ ಸಾರ್ವಜನಿಕರ ಗಮನಕ್ಕೆ ಮತ್ತು ಸಂಬಂಧಪಟ್ಟ ಉಪನೋಂದಣಾಧಿಕಾರಿಗಳ ಹಾಗೂ ಸರ್ಕಾರದ ಇನ್ನಿತರ ಪ್ರಾಧಿಕಾರ ಮತ್ತು ಇಲಾಖೆಗಳ ಆದ್ಯ ಗಮನಕ್ಕೆ ತರಬಯಸುವುದೇನೆಂದರೇ, ಬಿ.ಎಂ.ಐ.ಸಿ. ಯೋಜನೆಗೆ ಸಂಬಂಧಪಟ್ಟಂತೆ **ಷೆಡ್ಯೂಲ್**ನಲ್ಲಿ ನಮೂದಿಸಿರುವ ಜಮೀನುಗಳನ್ನು ಪೂರ್ಣ ಅಥವಾ ಭಾಗಶಃ ಭಾಗಳಿಗೆ ಸಂಬಂಧಪಟ್ಟಂತೆ ಯಾವುದೇ ವ್ಯಕ್ತಿ ಅಥವಾ ಪ್ರಾಧಿಕಾರಗಳು ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವುದು ಅಥವಾ ಪೋಡಿಗಳನ್ನು ಮಾಡಿ ಹೊಸ ಸರ್ವೆ ನಂಬರ್‌ಗಳನ್ನು ಸೃಷ್ಟಿಸುವುದು / ಅಭಿವೃದ್ಧಿಪಡಿಸುವುದು / ಕ್ರಯ / ಲೀಸ್ ಹಾಗೂ ಇನ್ನಿತರೆ ಯಾವುದೇ ರೀತಿಯ ವ್ಯವಹಾರಗಳನ್ನು ಯಾವುದೇ ರೀತಿಯಲ್ಲಿ ಮಾಡುವುದು ಕಾನೂನು ಬಾಹಿರವಾಗಿದ್ದು ಕಾನೂನು ರೀತ್ಯ ನಿರರ್ಥಕವಾಗಿರುತ್ತದೆ ಹಾಗೂ ಇಂತಹ ಅಕ್ರಮ ಚಟುವಟಿಕೆಗಳಿಗೆ ಯಾವುದೇ ರೀತಿಯಿಂದಲೂ ನಮ್ಮ ಕಕ್ಷಿದಾರರು ಜವಾಬ್ದಾರರಾಗಿರುವುದಿಲ್ಲ ಮತ್ತು ಇಂತಹ ಕೃತ್ಯಗಳಿಗೆ ವಿರೋಧ ವ್ಯಕ್ತಪಡಿಸಲಾಗುತ್ತದೆ. ಯಾವುದೇ ರೀತಿ ಅಕ್ರಮವೆಸಗಿದವರ ವಿರುದ್ಧ ನಮ್ಮ ಕಕ್ಷಿದಾರರು ಮಾನ್ಯ ನ್ಯಾಯಾಲಯಗಳಲ್ಲಿ ಪ್ರಶ್ನಿಸಿ ಕಠಿಣ ಕಾನೂನು ಕ್ರಮಕೈಗೊಳ್ಳುತ್ತಾರೆ. ಈ ಕೆಳಕಂಡ ಗ್ರಾಮವಾರು ಸರ್ವೆ ನಂಬರ್‌ಗಳ ಪಟ್ಟಿಯು ಕೆಐಎಡಿ ಕಾಯ್ದೆಯ ಕಲಂ 3(1) / 1(3) / 28(1) / 28(4)ರ ಅಡಿಯಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಅಧಿಸೂಚನೆಗಳಲ್ಲಿ ಪೂರ್ಣ ಸರ್ವೆ ನಂಬರ್‌ಗಳು, ಭಾಗಶಃ ಸರ್ವೆ ನಂಬರ್‌ಗಳು, ಮೂಲ ಸರ್ವೆ ನಂಬರ್‌ಗಳಿಂದ ಪೋಡಿಯಾಗಿರುವ ಹೊಸ ಸರ್ವೆ ನಂಬರ್‌ಗಳನ್ನು ಒಳಗೊಂಡಿದೆ ಎಂಬ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಷೆಡ್ಯೂಲ್

ಗ್ರಾಮಾವಾರು ಸರ್ವೆ ನಂಬರ್‌ಗಳ ವಿವರಗಳು

ಜಿಲ್ಲೆ : ಬೆಂಗಳೂರು ತಾಲ್ಲೂಕು : ಬೆಂಗಳೂರು ಉತ್ತರ ಹೋಬಳಿ : ದಾಸನಪುರ

1) ಗ್ರಾಮ: **ತೋಟದ ಗುಡ್ಡದಹಳ್ಳಿ,** ಸರ್ವೆ ನಂಬರ್ – 1, 75/1, 75/2, 76/1, 76/2, 84, 85, 86, 100, 101, 102, 103, 108, 112, 113, 114, 115, 117, 118
2) ಗ್ರಾಮ: **ಮಾದನಾಯಕನಹಳ್ಳಿ,** ಸರ್ವೆ ನಂಬರ್ – 29, 30, 70, 73, 74
3) ಗ್ರಾಮ: **ಶ್ರೀಕಂಠಪುರ (ಅಂಚೆಪಾಳ್ಯ),** ಸರ್ವೆ ನಂಬರ್ – 34/1, 34/2, 35, 36/1, 36/2
4) ಗ್ರಾಮ: **ಮಾದಾವರ,** ಸರ್ವೆ ನಂಬರ್ – 5/2B1, 5/5, 5/6, 6, 7/1, 7/2, 8/1, 8/2, 9, 10, 12/1A, 12/1B, 12/2, 12/3, 12/4, 12/5A, 12/5B, 12/6, 12/7, 12/8, 12/9, 13/4A, 13/4B, 13/4C, 15/2C, 27/1B, 27/1C, 27/2, 28/1, 28/2, 28/3, 29/1, 29/2, 29/3, 30/1, 30/2, 30/3, 30/4A, 30/4B, 30/5A, 30/5B, 31/1, 31/2, 32, 33, 34/1A, 34/1B, 34/2, 35/1B, 35/1A1, 35/1A2, 36/1, 36/2, 36/3, 36/4, 37/1, 37/2, 37/3, 37/4A, 37/4B, 37/5A, 37/5B, 37/5C, 37/5D, 37/6, 37/7, 37/8, 38/1, 38/2, 38/3A, 38/3B, 38/4A, 38/4B, 38/5, 38/6, 38/7, 38/8B, 38/8A1, 38/8A2, 39/1, 39/2, 39/3, 39/4, 39/5, 39/6, 40/1, 40/2A, 40/2B, 41/1, 41/2, 41/3, 41/4, 42/1, 42/2, 42/3, 43/1, 43/2, 43/3, 44/1, 44/2, 44/3B, 44/3A1, 44/3A2, 44/3A3, 45/1A, 45/1B3, 45/1B2, 48, 50/1, 50/2, 51/1, 51/9, 51/10, 54/1, 54/2, 55/2A, 55/3, 56/1, 56/2, 56/3, 56/4, 56/5, 56/6, 56/7, 56/8, 56/9, 56/10, 56/11, 56/12, 56/13, 56/14A, 56/14B, 56/15, 56/16, 56/17, 56/18, 56/19, 56/20, 57/1, 57/2, 57/3A, 57/3B, 58, 59, 66/1, 66/2, 66/3A, 66/3B, 66/3C, 67, 124/1, 124/2, 124/3
5) ಗ್ರಾಮ: **ಚಿಕ್ಕಬಿದರಕಲ್ಲು,** ಸರ್ವೆ ನಂಬರ್ – 22
6) ಗ್ರಾಮ: **ಕೆ. ಜಿ. ಶ್ರೀಕಂಠಪುರ,** ಸರ್ವೆ ನಂಬರ್ – 5, 9, 10, 11, 12, 13, 14/2, 15, 17, 18, 19, 25/1, 25/2, 26, 27
7) ಗ್ರಾಮ: **ಗಂಗೊಂಡನಹಳ್ಳಿ,** ಸರ್ವೆ ನಂಬರ್ –17, 18, 19/1, 19/2, 19/3, 42, 44, 100/1, 100/2, 101, 105, 111, 112, 115
8) ಗ್ರಾಮ: **ಕಾಚೋಹಳ್ಳಿ,** ಸರ್ವೆ ನಂಬರ್ – 14/1, 14/2, 14/3, 14/4, 14/5, 15, 16, 19/1, 19/2, 19/3, 19/5, 19/6, 19/7

ಜಿಲ್ಲೆ : ಬೆಂಗಳೂರು, ತಾಲ್ಲೂಕು, ಬೆಂಗಳೂರು ಉತ್ತರ, ಹೋಬಳಿ : ಯಶವಂತಪುರ

9) ಗ್ರಾಮ: **ತಿರುಮಲಾಪುರ,** ಸರ್ವೆ ನಂಬರ್ –10, 13, 14, 15, 16, 19/1, 19/2, 19/3, 20, 21, 22, 23, 25/1, 26, 29/1, 30, 31, 43, 44
10) ಗ್ರಾಮ: **ಹಂದ್ರಹಳ್ಳಿ,** ಸರ್ವೆ ನಂಬರ್ – 89, 90/6, 90/7, 90/8, 90/9, 90/10, 90/11, 90/12, 92/2, 92/3, 92/4, 92/5, 97/1, 97/2, 97/3, 97/4, 97/5, 97/6, 97/7, 98/1, 98/4, 99/1, 99/2, 99/3, 99/4, 99/5, 100/1, 100/2, 100/5, 101
11) ಗ್ರಾಮ: **ಲಿಂಗಧೀರನಹಳ್ಳಿ,** ಸರ್ವೆ ನಂಬರ್ – 37, 41
12) ಗ್ರಾಮ: **ಹೊಸಹಳ್ಳಿ ಗೊಲ್ಲರಪಾಳ್ಯ,** ಸರ್ವೆ ನಂಬರ್ – 18/1, 18/2A, 18/2B, 18/3, 19/1B, 19/1C, 19/2A, 19/2B, 19/2C, 20/1, 20/2, 20/3, 22, 23/1, 23/2, 23/3, 23/4, 24/1, 24/2, 24/3, 24/4, 25, 26/1, 26/2, 28, 29, 32/1, 37, 38, 39, 40/1, 40/2, 40/3, 40/4, 40/5, 40/6
13) ಗ್ರಾಮ: **ಕೊಡಗಿಹಳ್ಳಿ,** ಸರ್ವೆ ನಂಬರ್ – 31, 32, 37/1, 37/6, 38/1, 38/2, 86, 87, 88, 89, 90/1, 90/2, 91, 92/1, 92/2, 92/3, 92/4, 96, 97, 98, 99, 100, 101, 102, 103, 104, 112, 115, 118, 119, 122, 123, 124, 132, 133, 134, 140, 141
14) ಗ್ರಾಮ: **ಮಂಗನಹಳ್ಳಿ,** ಸರ್ವೆ ನಂಬರ್ – 31, 32, 34, 35, 43, 44/1, 45, 47/2, 48, 50/3, 51/1, 51/2, 52/2, 52/3, 53, 54/1, 54/2, 54/3, 55/1, 55/2, 56/1, 56/2, 57, 59/1, 59/2, 59/3, 59/4, 60, 61/1, 61/2 , 61/3, 62/1, 62/7, 66/1, 66/2, 66/5, 67/1, 67/2, 68/1, 68/2, 68/3, 68/4, 70, 71, 72/1, 72/2, 72/3, 73/5, 73/6, 73/7

ಜಿಲ್ಲೆ : ಬೆಂಗಳೂರು, ತಾಲ್ಲೂಕು, ಬೆಂಗಳೂರು ಉತ್ತರ, ಹೋಬಳಿ : ಕಸಬಾ

15) ಗ್ರಾಮ: **ಬ್ಯಾಟರಾಯನಪುರ,** ಸಿಟಿ ಸರ್ವೆ ನಂಬರ್ – 626, 627, 628, 629

ಜಿಲ್ಲೆ : ಬೆಂಗಳೂರು, ತಾಲ್ಲೂಕು, ಬೆಂಗಳೂರು ದಕ್ಷಿಣ, ಹೋಬಳಿ : ಬೇಗೂರು

16) ಗ್ರಾಮ: **ಕೋನಪ್ಪನ ಅಗ್ರಹಾರ,** ಸರ್ವೆ ನಂಬರ್ – 51, 53/1, 53/2A, 53/2B, 63, 65/1, 66, 67, 68/1A, 68/1B, 68/2, 68/3, 68/4, 68/5, 68/6, 69/1A, 69/1B, 69/2, 70/1, 70/2, 70/3, 70/4, 70/5, 70/6, 71/1, 71/2, 72/1, 72/2A, 72/2B, 72/2C, 73/1, 73/2A, 73/2B, 73/3, 73/4A, 73/4B4, 73/4B2, 73/4B1, 73/4B3, 74, 75, 76/1, 76/2, 77, 78/1, 78/2A, 78/2B, 78/2D1, 78/2C, 78/2D2, 78/2E, 78/3, 79, 80/1, 80/2, 81/1, 81/2, 82/1, 82/2, 83/1, 83/2, 84, 85/1, 85/2, 86/1, 86/2, 86/3, 87, 89
17) ಗ್ರಾಮ: **ಬೆರಟೇನ ಅಗ್ರಹಾರ,** ಸರ್ವೆ ನಂಬರ್ – 40, 41/1, 41/2, 41/3, 41/4, 42/1, 42/2, 43, 44, 46/1, 46/2, 46/3, 46/4, 46/5, 46/6, 47, 48/5
18) ಗ್ರಾಮ: **ದೊಡ್ಡತೋಗೂರು,** ಸರ್ವೆ ನಂಬರ್ – 13, 14/1, 14/2A, 14/2B, 14/2C, 15/1, 15/2, 15/3, 15/4, 16/1, 16/2, 17/3, 18/1, 18/2, 18/3, 18/4, 27/1, 27/2A, 27/2B, 27/2C, 28/1, 28/2, 29/1, 29/2, 29/3, 29/4, 29/5, 29/6, 29/7, 30/1, 30/2, 30/3, 31/1, 31/2, 31/3, 32, 33/1, 33/2, 34/1, 34/2, 34/3, 34/4, 36/1, 36/2, 113
19) ಗ್ರಾಮ: **ಚಿಕ್ಕತೋಗೂರು,** ಸರ್ವೆ ನಂಬರ್ – 2/1A, 2/1B, 2/2, 2/3, 2/4A, 3/1, 3/2, 3/3, 3/4, 4/1, 4/2, 4/3, 5, 6/1, 6/2, 6/3, 6/4, 6/5, 6/6, 6/7, 10/1, 10/2, 10/3, 10/4, 10/5A, 10/5B, 10/6, 10/7, 10/8, 10/9, 10/10, 11/1, 11/2, 14/1, 14/2, 14/3, 14/4, 16/1, 16/2, 16/3, 16/4, 16/5, 16/6, 23/1A, 23/1B, 23/2, 23/3, 28/1, 28/2, 28/3, 28/4, 28/5, 28/6, 28/7, 28/8, 29/1, 29/2, 29/3, 29/4, 29/6, 29/7, 29/8, 29/9, 29/10, 30/1, 30/2, 30/3, 32/1A, 32/1B, 32/2, 32/3, 32/4, 32/5, 32/6, 32/7, 32/8, 32/9, 32/10A, 32/10B, 32/11, 33/1, 33/2, 34/1, 34/2, 34/3, 34/4, 35/1, 35/2, 35/3, 46, 47/2B, 48, 49/2A, 49/2B, 49/3, 49/4, 49/5A, 50, 51, 52/1, 52/2, 52/3, 52/4, 52/5, 52/6, 52/7, 53, 55/1, 55/2, 55/3, 55/4, 55/5, 55/6, 56/1, 56/2, 56/3, 57, 58, 59/1, 59/2, 59/3, 60/1, 60/2, 61, 63, 6452/7, 53, 55/1, 55/2, 55/3, 55/4, 55/5, 55/6, 56/1, 56/2, 56/3, 57, 58, 59/1, 59/2, 59/3, 60/1, 60/2, 61, 63, 64
20) ಗ್ರಾಮ: **ಬಸಾಪುರ,** ಸರ್ವೆ ನಂಬರ್ – 28/4, 28/5, 28/6, 29/1, 29/3, 29/4, 29/5, 34/3, 34/4, 35/1, 35/2, 36, 37, 39, 40/1, 40/2, 42/1, 42/2, 45/2, 46, 47/1, 47/2
21) ಗ್ರಾಮ: **ಬೇಗೂರು,** ಸರ್ವೆ ನಂಬರ್ – 34/2, 39, 40/1, 40/2, 42, 43, 44, 45/1, 45/2, 45/3, 46/1, 46/2, 47/1B, 47/2, 48, 49/1, 49/2, 50/1, 51/1, 51/2, 63/1, 81/1, 81/2, 81/3A, 82, 83/2, 83/5, 86, 87, 88, 89/2, 90/2A, 90/2B, 95, 107/1, 107/2, 111, 112/1, 112/4, 113, 114, 117/1, 117/3, 117/4, 118/1, 118/2, 118/3, 118/4, 119, 120, 121, 122/1B, 122/1C, 122/2, 122/3, 122/4, 123/3C, 125/4, 126/5, 129
22) ಗ್ರಾಮ: **ಎಳೇನಹಳ್ಳಿ,** ಸರ್ವೆ ನಂಬರ್ – 40/2, 41, 42, 43/1, 43/2, 45, 47/1A, 48/2, 49, 61/1, 61/2, 64, 66/3, 66/4
23) ಗ್ರಾಮ: **ಕಮ್ಮನಹಳ್ಳಿ,** ಸರ್ವೆ ನಂಬರ್ – 20, 37/1, 37/2, 38, 42/1, 42/2, 44, 45/1, 45/2, 46, 47, 54/1, 54/2, 54/3, 55, 56/1, 57/1, 57/2, 71 Part, 73/1, 73/2, 73/3, 74, 83/1, 83/3, 84/4, 85/1, 85/2, 89, 90/2
24) ಗ್ರಾಮ: **ಬಸವನಪುರ,** ಸರ್ವೆ ನಂಬರ್ – 41/1, 42, 43/1, 43/2, 44/1, 45/1, 45/2, 46/1A, 46/1B, 46/3A, 46/3B

ಜಿಲ್ಲೆ : ಬೆಂಗಳೂರು, ತಾಲ್ಲೂಕು, ಬೆಂಗಳೂರು ದಕ್ಷಿಣ, ಹೋಬಳಿ : ಉತ್ತರಹಳ್ಳಿ

25) ಗ್ರಾಮ: **ಗೊಟ್ಟಿಗೆರೆ,** ಸರ್ವೆ ನಂಬರ್ – 64/1, 64/2, 64/3, 64/4, 64/5, 65/2, 65/3, 65/4, 65/5, 65/6, 68/2, 68/3, 69/1, 69/2, 69/3, 70, 71, 101/1, 101/2, 101/3, 101/4, 101/5, 101/6, 102, 103/1, 103/2, 104/1, 104/2, 104/3, 104/4, 104/5, 104/6A, 104/6B, 104/6C, 104/7, 113/1, 113/2, 113/3, 114, 115, 116/1, 116/2, 119/1, 119/2
26) ಗ್ರಾಮ: **ಪಿಲ್ಲಗಾನಹಳ್ಳಿ,** ಸರ್ವೆ ನಂಬರ್ – 1, 2, 3, 4, 5/1, 5/2, 5/3, 5/4, 5/5, 5/6, 5/7, 5/8, 5/9, 5/10, 7, 8/1A, 8/2A, 8/2B, 10/4, 10/5, 10/6, 15/3, 15/4, 15/6, 18, 19, 20/3, 20/4, 20/5, 20/6, 21/1, 21/2, 22, 23, 25, 26, 27, 28, 29
27) ಗ್ರಾಮ: **ಕೆಂಭತ್ತನಹಳ್ಳಿ,** ಸರ್ವೆ ನಂಬರ್ –23/2, 26/2, 27/1, 27/2, 28, 29, 30, 31, 32, 33, 34, 35, 36, 37, 38, 39, 40, 41, 42, 48, 49, 50/2, 53, 55, 56
28) ಗ್ರಾಮ: **ಗೊಲ್ಲಹಳ್ಳಿ,** ಸರ್ವೆ ನಂಬರ್–35/1, 35/2, 36/2, 36/3, 37, 38, 39, 45/1, 45/6, 45/7, 45/8A, 45/8B, 58, 66, 67
29) ಗ್ರಾಮ: **ಅಂಜನಾಪುರ,** ಸರ್ವೆ ನಂಬರ್ – 13, 15/1, 15/2, 15/3, 15/4, 16/2, 16/3, 22/1, 22/2, 23/1, 23/2, 24, 25/2, 25/3, 25/5, 26/2, 27/1, 27/2, 27/3, 28/3, 49, 93, 95, 96, 97, 104, 105, 106, 110, 111, 112
30) ಗ್ರಾಮ: **ಮಲ್ಲಸಂದ್ರ,** ಸರ್ವೆ ನಂಬರ್ – 19
31) ಗ್ರಾಮ: **ಉತ್ತರಹಳ್ಳಿ ಮನವರ್ತಿಕಾವಲ್,** ಸರ್ವೆ ನಂಬರ್ – 10/1A, 11/1, 11/2, 11/3, 18/1, 21, 22/1, 22/2, 24/1, 24/2, 24/3, 27, 28, 29, 30, 32
32) ಗ್ರಾಮ: **ತಲಘಟ್ಟಪುರ,** ಸರ್ವೆ ನಂಬರ್ – 27/1, 28/1, 28/2, 34/3, 35, 36/1, 36/2, 36/3, 38, 39/1B, 39/1A2, 39/1A1, 39/2A, 39/2B, 39/2B1, 39/2B2, 40/3, 41/2, 41/3, 41/4, 41/5
33) ಗ್ರಾಮ: **ಅವಲಹಳ್ಳಿ,** ಸರ್ವೆ ನಂಬರ್ – 17, 27/1
34) ಗ್ರಾಮ: **ಹೊಸಕೆರೆಹಳ್ಳಿ,** ಸರ್ವೆ ನಂಬರ್ – 7, 9/2, 10/2, 11, 13/1A, 13/1B, 13/2B1, 14, 15, 28/1, 28/2, 29, 30/1, 30/2, 31/2, 31/3, 31/4, 31/5, 32/2, 33, 34/4, 35/3, 35/4, 36, 37/2, 38/2, 38/4, 79, 80/2, 80/3, 81, 82/1, 82/2, 69, 70, 71/1, 71/2, 71/3, 71/4, 72, 73, 75/1, 75/2, 77, 78
35) ಗ್ರಾಮ: **ವಡ್ಡರಪಾಳ್ಯ,** ಸರ್ವೆ ನಂಬರ್ – 7, 8 , 9, 10, 11, 33, 34, 35, 36
36) ಗ್ರಾಮ: **ಅರೇಹಳ್ಳಿ,** ಸರ್ವೆ ನಂಬರ್ – 24, 25/3, 26/1, 26/2, 26/3, 27, 28, 41
37) ಗ್ರಾಮ: **ಚನ್ನಸಂದ್ರ,** ಸರ್ವೆ ನಂಬರ್ – 1/1, 1/2, 1/3, 1/5, 1/6, 1/7A, 1/8, 1/9, 2/1, 2/2, 8/1, 8/2A, 8/2B, 8/3, 9, 16, 17/2, 18/2A, 18/2B, 18/3, 18/4, 18/5, 19/5, 19/6, 19/7, 27, 28, 29, 30, 31, 32, 34/6
38) ಗ್ರಾಮ: **ಕೆ. ಚೂಡಹಳ್ಳಿ,** ಸರ್ವೆ ನಂಬರ್ – 68

ಜಿಲ್ಲೆ : ಬೆಂಗಳೂರು, ತಾಲ್ಲೂಕು, ಬೆಂಗಳೂರು ದಕ್ಷಿಣ, ಹೋಬಳಿ : ಕೆಂಗೇರಿ

39) ಗ್ರಾಮ: **ರಾಚನಮಡು,** ಸರ್ವೆ ನಂಬರ್ – 14/2, 14/3, 15/1, 15/3
40) ಗ್ರಾಮ: **ಬಡಮನವರ್ತಿಕಾವಲ್,** ಸರ್ವೆ ನಂಬರ್ - 4, 10/14, 10/15, 10/16, 10/17, 10/18, 10/19, 10/20, 10/21, 10/22, 10/23, 10/24, 13, 14, 15, 16, 17, 18/26, 18/27, 20/1, 20/2, 20/3, 20/13, 20/14, 20/15, 26, 27/8, 32/1B, 33, 34/1, 54/1, 54/2, 58/1, 59, 60/1, 60/2, 60/3, 61, 62/1, 62/2, 63, 64, 93, 105/4, 105/5, 105/6, 105/12, 105/14, 107, 108/1, 191/4, 182, 184, 185, 186, 187, 191/5, 193, 208, 222, 264, 265, 245
41) ಗ್ರಾಮ: **ಸೋಂಪುರ,** ಸರ್ವೆ ನಂಬರ್ – 2/1, 2/2, 2/3, 3, 4, 5/1, 5/2, 5/3, 5/4, 6, 7, 8, 9/1, 9/2, 10, 20, 20/1, 20/2, 21/1, 21/2A, 21/12, 21/13, 24, 27/1, 27/2, 27/3, 27/4A, 27/4B, 27/5, 27/6, 27/7, 27/8, 27/9, 27/39, 27/40, 27/47, 27/48, 27/49, 28/1, 28/2, 28/3, 29, 30/1, 30/2, 30/3, 30/4, 30/5, 30/6, 30/7, 30/8, 30/9, 30/10, 31, 32, 33, 34, 35/1A, 35/1B, 35/2, 35/3, 35/4
42) ಗ್ರಾಮ: **ವರಹಾಸಂದ್ರ,** ಸರ್ವೆ ನಂಬರ್ – 1/1, 1/2A, 1/2B, 1/2C, 1/3, 2, 3, 5/2, 6/1, 6/2, 6/3, 6/4, 6/5, 8, 13, 14, 15/1, 15/2, 16, 18, 19, 20, 23/1, 23/2A, 23/2B, 23/3, 24, 25/1, 25/2, 26, 27/1, 27/2, 27/3, 27/4, 27/5, 27/6, 27/7, 28/1, 28/2, 28/3, 28/4, 28/5, 28/6, 28/7, 28/8, 28/9, 29, 30, 31, 32, 33, 34/1, 34/2, 35, 36
43) ಗ್ರಾಮ: **ಕೆಂಗೇರಿ ಗೊಲ್ಲಹಳ್ಳಿ,** ಸರ್ವೆ ನಂಬರ್ – 8/1A, 8/1B, 8/1C, 8/2, 8/3, 8/4, 8/5, 8/6, 11/1, 11/2, 11/3, 11/4, 12
44) ಗ್ರಾಮ: **ಹೆಮ್ಮಿಗೆಪುರ,** ಸರ್ವೆ ನಂಬರ್ – 3, 4 , 53/1, 53/2B, 53/6, 53/7, 53/9, 53/11, 54, 55/4, 55/5, 55/13, 55/14, 55/15, 57/1, 57/2, 57/3, 57/13, 57/14, 57/15, 57/19, 58/2, 58/3, 58/4, 58/5, 58/6, 58/7, 58/8, 58/13, 58/14, 75, 76, 114
45) ಗ್ರಾಮ: **ಚೂಡೇನಪುರ,** ಸರ್ವೆ ನಂಬರ್ – 16, 17, 18, 19
46) ಗ್ರಾಮ: **ದೊಡ್ಡಬೆಲೆ,** ಸರ್ವೆ ನಂಬರ್ – 8/1
47) ಗ್ರಾಮ: **ಕೆಂಗೇರಿ,** ಸರ್ವೆ ನಂಬರ್ – 120, 121, 122, 123, 124, 125/1A, 125/1B, 125/2, 125/3, 125/4, 126, 127, 128/1, 128/2, 137/1, 137/2, 137/6, 138, 139, 141, 142/1, 142/2, 143, 144/1, 144/2, 144/3, 144/4, 145, 147/1, 147/2, 147/3, 147/4, 147/5, 147/6, 147/7, 147/8, 147/9, 147/10, 147/11, 148/1A, 148/1B, 148/2A, 148/2B, 148/3, 149, 150/1, 150/2, 151/3A, 151/3B, 154/10, 164/4, 164/5, 165, 166, 167/1, 167/2, 168, 169/1, 169/2, 169/3, 237/1, 237/2, 241, 242, 243, 244, 245, 246, 247, 248, 249, 250, 251, 252, 254, 255,
48) ಗ್ರಾಮ: **ಕೊಮ್ಮಘಟ್ಟ,** ಸರ್ವೆ ನಂಬರ್ – 2, 13, 14, 15, 16, 17, 18, 19, 20/1, 20/2A, 20/2B, 20/3, 20/4, 21/1, 21/2B, 21/2A1, 21/2C, 21/2A2, 21/2D, 21/2E, 22/1, 22/2, 22/3, 23/1, 23/2, 23/3, 23/4, 25/1, 25/2A2, 25/2B1, 25/2A1, 25/2B2, 26, 27/2A, 113, 114, 125, 126, 127, 136/1, 136/2, 137, 138, 139, 140/1, 140/2, 140/3, 141, 160, 161, 165, 167, 170, 171, 172, 173, 174, 175, 176, 177, 178, 179, 180, 181, 182, 183, 184, 185, 186, 187, 188, 189, 190, 191, 192, 193, 194, 195, 196, 197, 198, 199, 200, 201, 202, 203, 204, 205, 206, 207, 208
49) ಗ್ರಾಮ: **ರಾಮಸಂದ್ರ,** ಸರ್ವೆ ನಂಬರ್ – 5/1, 5/2, 5/3, 6, 7, 8, 9, 13/1, 17, 18, 19/1, 40, 41/1, 41/2, 42/1, 44/1A, 44/1B, 44/2, 44/3, 45/1, 45/2, 46, 51/2, 51/3, 52/1, 52/2, 53, 57, 58, 59, 68/1, 69/1, 69/2, 70, 71, 72, 74, 75, 77, 78, 80/2
50) ಗ್ರಾಮ: **ದೀವಟಿಗೆ ರಾಮನಹಳ್ಳಿ,** ಸಿಟಿ ಸರ್ವೆ ನಂಬರ್ – 663
51) ಗ್ರಾಮ: **ಪಂತರಪಾಳ್ಯ,** ಸರ್ವೆ ನಂಬರ್ – 9, 10, 11, 12, 13, 20, 21, 22, 23, 26, 27, 28, 29, 30, 31, 32, 33, 34, 35, 36, 37, 38, 39, 40, 41, 42, 43, 44, 45, 46, 47, 50, 51, 52, 53, 54/1, 54/2, 55/1, 55/2, 57/1, 57/2, 58
52) ಗ್ರಾಮ: **ಪಟ್ಟಣಗೆರೆ,** ಸರ್ವೆ ನಂಬರ್ – 10, 11
53) ಗ್ರಾಮ: **ಗಾಣಕಲ್ಲು,** ಸರ್ವೆ ನಂಬರ್ – 6/3A, 7/5, 7/6, 7/7, 7/8, 7/9, 7/10, 7/11, 7/12, 9/1, 9/2, 9/3, 9/4, 9/6, 10, 11
54) ಗ್ರಾಮ: **ಗಂಗಸಂದ್ರ,** ಸರ್ವೆ ನಂಬರ್ – 5/1, 5/2, 5/3, 6/1, 6/2, 6/3, 6/4, 6/5, 7/1, 7/2, 8/1, 8/2, 8/9, 8/10, 8/11, 8/12, 8/13, 8/14, 8/15, 8/16, 8/17, 10, 11/19, 11/20, 12, 13/1, 14
55) ಗ್ರಾಮ: **ಚಿನ್ನಕುರ್ಚಿ,** ಸರ್ವೆ ನಂಬರ್ – 21/1, 22, 23/1, 23/2, 23/3, 24, 25/2, 28/1A, 30/ 7B, 30/4, 30/5, 30/6, 30/7A, 30/8, 31, 32/1, 32/2, 33, 38/1, 38/2, 39
56) ಗ್ರಾಮ: **ವಸಂತನಹಳ್ಳಿ,** ಸರ್ವೆ ನಂಬರ್ – 45, 46/1, 46/2, 47, 48, 49, 50/1, 50/2, 53, 54, 55, 57
57) ಗ್ರಾಮ: **ಹಂಪಾಪುರ,** ಸರ್ವೆ ನಂಬರ್ – 18/1
58) ಗ್ರಾಮ: **ಗೋಣಿಪುರ,** ಸರ್ವೆ ನಂಬರ್ – 1/2, 1/3, 1/4, 1/5, 1/6, 1/7, 1/8, 2/1, 2/2, 2/3, 3, 4/1 , 4/2, 4/3, 4/4, 5/1, 5/2, 5/3, 5/4, 5/5, 5/6, 6, 7/1, 7/2, 7/3, 7/4, 8/1, 8/2, 8/3, 8/4, 8/5, 9, 10, 11, 12, 13/1, 13/2, 13/3, 13/4, 13/5, 13/6, 13/7, 13/8, 14, 15, 16/1, 16/2, 17, 18/1, 18/2, 19, 20, 21, 22, 23/1, 23/2, 23/3, 23/4, 23/5, 23/6, 24, 25, 26/1, 26/2, 27, 29/1, 29/2, 29/3, 29/4, 29/5, 29/6, 30/1, 30/2A, 30/2B, 30/3, 30/4, 30/5, 30/6, 30/7, 30/8, 30/9, 30/10, 30/11, 30/12, 30/13, 31, 32/1, 32/2, 33/1, 33/2, 34/1, 34/2, 35, 36, 38/1, 38/2, 38/3, 38/4, 39, 40, 41/1, 41/2, 42, 43/1, 43/2, 43/3, 44, 45, 46, 47 , 48, 49/1, 49/2, 50, 51/1, 51/2, 52, 53, 54, 55, 56, 57, 58/1, 58/2, 58/3, 58/4, 58/5, 58/6, 58/7A, 58/7B, 58/8, 58/9A, 58/9B, 58/10, 58/11, 58/12, 58/13, 58/14, 60, 61/1, 61/2, 61/3, 62/1, 62/2, 62/3, 62/4, 62/5, 62/6, 63/1A, 63/1B, 63/2, 64/1, 64/2, 64/3, 64/4, 65, 66, 67/1, 67/2, 67/3, 68, 69/1, 69/2, 69/3, 70/1, 70/2, 71/1, 71/2, 71/3, 71/4, 71/5, 73/1, 73/2, 74, 75, 76/1, 76/2, 77, 78, 79, 80, 81, 82, 83, 84, 85
59) ಗ್ರಾಮ: **ತಿಪ್ಪೂರು,** ಸರ್ವೆ ನಂಬರ್ – 1/1, 1/2, 1/3, 1/4, 1/5, 1/6, 1/7, 1/8, 1/9, 1/10, 2, 3, 4, 5/1, 5/2, 6, 7/1, 7/2, 7/3, 8/1, 8/2, 9/1, 9/2, 10, 11/1, 11/2, 11/3, 12, 13, 14, 15, 16/1A, 16/1B, 16/2, 17/1, 17/2, 18/1, 18/2, 18/3, 19/1, 19/2, 19/3, 19/4, 20/1, 20/2, 20/3, 21, 22/1, 22/2, 23, 24, 25, 26, 27/1, 27/2, 27/3, 27/4, 27/5, 27/6, 27/7, 28/1, 28/2, 28/3, 28/4, 28/5, 28/6, 28/7, 28/8, 28/9, 29/1, 29/2, 30, 31/1, 31/2, 31/3, 31/4, 31/5, 31/6, 31/7, 31/8, 31/9, 31/10, 31/11, 31/12, 31/13A, 31/13B, 31/14, 32/1, 32/2, 33, 34, 35, 36/1, 36/2, 36/3, 36/4, 36/5, 36/6, 37/1, 37/2, 38, 39/1, 39/2, 40, 41, 42/1, 42/2, 43/1, 43/2, 44, 45/1, 45/2, 45/3, 46, 47, 48, 49, 50, 51, 52, 53, 54/1, 54/3, 54/4, 54/5, 54/6, 54/7, 54/8, 54/9, 54/10, 55/1A, 55/1B, 55/1C1-P1, 56/1, 57/1, 57/2, 58, 59, 60, 61/1, 61/2, 61/3, 61/4, 62/1A, 62/1B, 62/2
60) ಗ್ರಾಮ: **ಶೀಗೇಹಳ್ಳಿ,** ಸರ್ವೆ ನಂಬರ್ – 1, 2, 3, 4, 5, 6/1, 6/2, 7, 8, 9/1, 9/2, 9/3, 9/4, 9/5, 9/6, 9/7, 9/8, 9/9, 9/10, 10, 11, 12, 14, 15, 16, 17, 18, 20, 22

ಜಿಲ್ಲೆ : ರಾಮನಗರ, ತಾಲ್ಲೂಕು, ರಾಮನಗರ, ಹೋಬಳಿ : ಬಿಡದಿ

61) ಗ್ರಾಮ: **ದೊಡ್ಡಕುಂಟನಹಳ್ಳಿ,** ಸರ್ವೆ ನಂಬರ್ – 1/1, 1/2, 1/3, 1/4, 1/5, 2/1, 2/2, 2/3, 3, 4/1, 4/2, 4/3, 4/4, 5/1, 5/2, 5/3, 5/4, 5/5, 5/6, 5/7, 5/8, 6/1, 6/3, 6/4 , 6/5, 6/6 , 6/7, 6/8, 6/9, 6/10, 6/11, 7, 8/1, 8/2, 8/3, 8/4, 8/5, 8/6, 9, 10, 11, 12, 13, 14, 15, 16, 18, 19/1, 19/2, 20/1, 20/2, 21/1, 21/2, 21/3, 21/4, 21/5, 21/6, 21/7, 22, 23, 24/1, 24/2, 24/3, 25, 26, 27, 28, 29, 30/1, 30/2, 30/3, 31, 32, 33, 34, 35, 36, 37, 38, 39, 40, 41, 42, 43, 44/1, 44/2, 45, 48, 49, 50, 51, 52, 53, 54, 55, 56, 57, 58, 59, 60, 61, 62, 63, 64, 65, 66, 67, 68
62) ಗ್ರಾಮ: **ಕೋಡಿಯಾಲ ಕರೇನಹಳ್ಳಿ,** ಸರ್ವೆ ನಂಬರ್ – 216/1, 216/2, 217, 218, 219, 220, 221, 222, 223, 224, 225/1, 225/2, 226/1, 226/2, 227/1, 227/2 , 228, 229/1, 229/2, 230, 231, 232, 233, 234, 235, 236/1, 236/2, 237/1, 238, 239/1A, 239/2, 239/3B, 239/4A, 239/4B, 239/5A, 239/5B, 240, 241, 242, 244/1, 244/2, 244/3, 244/4, 245/1, 245/2, 247, 248, 249, 250, 251, 252, 253, 254, 255, 256, 257, 258, 259, 260, 264, 265/1, 265/2, 266/1, 266/2, 267, 457, 458, 459, 460/1, 460/2, 460/3, 460/4, 460/5, 460/6, 461/1, 461/2, 461/3, 462/1, 462/2, 462/3, 463, 464, 465, 466, 467, 468/1, 468/2, 469, 470, 471, 472, 473/1, 473/2, 473/3, 474, 475, 476, 477, 478, 479, 480
63) ಗ್ರಾಮ: **ಭೀಮೇನಹಳ್ಳಿ,** ಸರ್ವೆ ನಂಬರ್ – 32/2, 34/1, 34/2, 35/1, 35/2, 36, 37/2, 37/3, 42/1, 43
64) ಗ್ರಾಮ: **ತಾಳಗುಪ್ಪೆ,** ಸರ್ವೆ ನಂಬರ್ – 57, 58/2, 58/3, 59, 60, 61, 76, 77/1, 77/2, 78, 79, 80, 82, 83,84/1, 84/2, 88, 89, 90, 107, 108, 109, 110, 129, 139/1, 139/2, 140, 141

ಸ್ಥಳ : ಬೆಂಗಳೂರು
ದಿನಾಂಕ: 15.12.2023

ಸಹಿ/– ಕಿಂಗ್ ಮತ್ತು ಪಾಟ್ರೀಡ್ಜ್
ವಕೀಲರು
48, ಲ್ಯಾವಲ್ಲೆರಸ್ತೆ, ಬೆಂಗಳೂರು–560001

ಕೋಟ್ಯಂತರ ಮೌಲ್ಯದ ಆಸ್ತಿ • ಭೂ ದಾಖಲೆಗಳ ಸಿಬ್ಬಂದಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು

ಅಕ್ರಮ ಪೋಡಿ: ಸರ್ಕಾರದ 4 ಎಕರೆ ಕಬಳಿಕೆ

• ಸಂತೋಷ ಜಿಗಳಿಕೊಪ್ಪ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕಿನ ಅಂಜನಾಪುರ ಗ್ರಾಮದಲ್ಲಿರುವ ಸರ್ಕಾರಿ ಜಮೀನು ಕಬಳಿಸಲು ನೆರವು ನೀಡಿರುವ ಆರೋಪದಡಿ ಭೂ ದಾಖಲೆಗಳ ಇಲಾಖೆಯ ನಾಲ್ವರು ಸಿಬ್ಬಂದಿ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

'ಉತ್ತರಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುವ ಅಂಜನಾಪುರದ ಸರ್ವೆ ನಂಬರ್ 49ರಲ್ಲಿರುವ 4 ಎಕರೆ ಜಮೀನು ಒತ್ತುವರಿ ಸಂಬಂಧ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಸಚಿನ್ ಅವರು ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಭೂ ದಾಖಲೆಗಳ ಕಚೇರಿಯ ಸೂಪರಿಂಟೆಂಡೆಂಟ್ ಸಿ.ಎಚ್. ಕೃಷ್ಣ, ತಪಾಸಣೆಗಾರರಾದ ಬಿ.ಜೆ. ರಾಜಗೋಪಾಲ್, ಕುಮಾರಸ್ವಾಮಿ ಹಾಗೂ ಭೂ ಮಾಪಕ ಉಮೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಹಲಸೂರು ಗೇಟ್ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

'2006ರಿಂದ 2009ರವರೆಗೆ ನಡೆದಿರುವ ಕೃತ್ಯದ ಸಂಬಂಧ ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ. ಆರೋಪಿಗಳಿಗೆ ನೋಟಿಸ್ ನೀಡಿ, ಪ್ರಕರಣದ ಬಗ್ಗೆ ವಿಚಾರಣೆ ನಡೆಸಲಾಗುವುದು. ಅವರ ಹೇಳಿಕೆ ದಾಖಲಿಸಿಕೊಂಡ ಬಳಿಕ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಅಕ್ರಮ ಪೋಡಿ: 'ಅಂಜನಾಪುರ ಗ್ರಾಮದಲ್ಲಿ ನೈಸ್ ರಸ್ತೆ ಹಾದು ಹೋಗಿದೆ. ಈ ರಸ್ತೆಯ ಪಕ್ಕದಲ್ಲಿಯೇ 4 ಎಕರೆ ಸರ್ಕಾರಿ ಜಮೀನು ಇದೆ. ಅಕ್ರಮವಾಗಿ ಪೋಡಿ ಮಾಡಿದ್ದ ಅಧಿಕಾರಿಗಳು, ಜಮೀನು ಕಬಳಿಸಲು ನೆರವು ನೀಡಿದ್ದರೆಂಬುದು ಇಲಾಖೆಯ ಆಂತರಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳುಹೇಳಿವೆ.

'ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಕಚೇರಿಯಲ್ಲಿ ಈ ಹಿಂದೆ ಸೂಪರಿಂಟೆಂಡೆಂಟ್ ಆಗಿ ಸಿ.ಎಚ್. ಕೃಷ್ಣ (ಸದ್ಯ ಮಾಗಡಿ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ), ತಪಾಸಣೆಗಾರರಾಗಿ ಬಿ.ಜೆ. ರಾಜಗೋಪಾಲ್ (ಸದ್ಯ ಯಲಹಂಕ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ), ಕುಮಾರಸ್ವಾಮಿ (ಸದ್ಯ ದೊಡ್ಡಬಳ್ಳಾಪುರ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ) ಹಾಗೂ ಭೂ ಮಾಪಕರಾಗಿ ಉಮೇಶ್ (ಸದ್ಯ ಮಂಡ್ಯ ತಾಲ್ಲೂಕು ಭೂ ದಾಖಲೆಗಳ ಸಹಾಯಕ ನಿರ್ದೇಶಕ ಕಚೇರಿ) ಕೆಲಸ ಮಾಡುತ್ತಿದ್ದರು.'

'2006ರಿಂದ 2009ರವರೆಗೆ ಜಮೀನನ್ನು ಅಕ್ರಮವಾಗಿ ಪೋಡಿ ಮಾಡಿದ್ದರು. ಮುನಿಯಪ್ಪ, ಮುನಿಸ್ವಾಮಿ, ಕೃಷ್ಣಪ್ಪ, ಅನಂತಯ್ಯ, ಮೊಹಮ್ಮದ್ ಹುಸೇನ್, ವಜ್ರಮುನಿ ಉರುಫ್ ಬಾಬು, ಶಾಂತಕುಮಾರಿ, ಲಕ್ಷ್ಮಣ ಬಾಬು, ನಾರಾಯಣ ರೆಡ್ಡಿ, ವಿ. ಚಂದ್ರಶೇಖರ್ ಹೆಸರಿಗೆ ಜಮೀನು ಅಕ್ರಮವಾಗಿ ಪೋಡಿ ಆಗಿತ್ತು' ಎಂದು ಮೂಲಗಳು ತಿಳಿಸಿವೆ.

'ಒತ್ತುವರಿ ತೆರವು'

'ದಾಖಲೆಗಳ ಪರಿಶೀಲನೆ ವೇಳೆ ಅಕ್ರಮ ಪೋಡಿ ಪತ್ತೆ ಮಾಡಿದ್ದ ಸರ್ಕಾರ, ಮರು ಪೋಡಿಗೆ ಆದೇಶ ಹೊರಡಿಸಿತ್ತು. ಅಧಿಕಾರಿಗಳು ಅಕ್ರಮ ಪೋಡಿ ಮಾಡಿದ್ದು ಪತ್ತೆಯಾಗಿತ್ತು. ಕಾರ್ಯಾಚರಣೆ ನಡೆಸಿದ್ದ ಅಧಿಕಾರಿಗಳು, ಒತ್ತುವರಿ ತೆರವು ಮಾಡಿ ಜಮೀನನ್ನು ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿದ್ದರು' ಎಂದು ಮೂಲಗಳು ಹೇಳಿವೆ

'ಜಮೀನು ಕಬಳಿಸಲು ನೆರವು ನೀಡಿದ್ದವರು ಯಾರು? ಎಂಬುದನ್ನು ಪತ್ತೆ ಮಾಡಲು ವಿಚಾರಣೆ ನಡೆಸಿದ್ದರು. ಕೃಷ್ಣ, ರಾಜಗೋಪಾಲ್, ಕುಮಾರಸ್ವಾಮಿ ಹಾಗೂ ಉಮೇಶ್ ಅವರು ಕರ್ತವ್ಯಲೋಪ ಎಸಗಿದ್ದು ಗೊತ್ತಾಗಿತ್ತು. ನಾಲ್ವರನ್ನೂ ಸೇವೆಯಿಂದ ಅಮಾನತು ಮಾಡಲಾಗಿತ್ತು. ಇದೀಗ ನಾಲ್ವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಹಿರಿಯ ಅಧಿಕಾರಿಗಳ ವಿಚಾರಣೆ: ಮಾಹಿತಿ

'ಪ್ರಕರಣ ಸಂಬಂಧ ಆರೋಪಿಗಳ ವಿಚಾರಣೆ ನಡೆಸಲಾಗುವುದು. ಅವರ ಹೇಳಿಕೆಯಲ್ಲಿ ಹಿರಿಯ ಅಧಿಕಾರಿಗಳ ಬಗ್ಗೆ ಮಾಹಿತಿ ಇದ್ದರೆ, ಅವರಿಗೂ ನೋಟಿಸ್ ನೀಡಿ ವಿಚಾರಣೆಗೆ ಕರೆಯಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಮಲಮಗಳ ಮೇಲೆ ಅತ್ಯಾಚಾರ: 20 ವರ್ಷ ಶಿಕ್ಷೆ

ದಾವಣಗೆರೆ: ಮಲಮಗಳ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿಗೆ ಇಲ್ಲಿನ ಮಕ್ಕಳ ಸ್ನೇಹಿ ಮತ್ತು ಎಫ್.ಟಿ.ಎಸ್.ಸಿ–1ನೇ ನ್ಯಾಯಾಲಯ 20 ವರ್ಷ ಜೈಲು ಶಿಕ್ಷೆ ಹಾಗೂ ₹ 22,000 ದಂಡ ವಿಧಿಸಿದೆ.

ಬಾಗಲಕೋಟೆಯ ವ್ಯಕ್ತಿ, ಸಂತ್ರಸ್ತ ಬಾಲಕಿಯ ತಾಯಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಆ ಬಳಿಕ ಅವರ ಜೊತೆಗೆ ನಗರದಲ್ಲಿ ನೆಲೆಸಿದ್ದ. ಒಂದೂವರೆ ವರ್ಷದ ಹಿಂದೆ ಮನೆಯಲ್ಲಿ ಯಾರೂ ಇಲ್ಲದಾಗ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ವಿಷಯ ಗೊತ್ತಾಗಿ ತಾಯಿಯು ಬಾಲಕಿಗೆ ಬೇರೊಬ್ಬರೊಂದಿಗೆ ವಿವಾಹ ಮಾಡಲು ಮುಂದಾಗಿದ್ದರು. ಇದನ್ನು ಅರಿತ ಆರೋಪಿಯು ಸಂತ್ರಸ್ತೆಯನ್ನು ಪುಸಲಾಯಿಸಿ ಬೇರೊಂದು ಗ್ರಾಮಕ್ಕೆ ಕರೆದೊಯ್ದು ಹಲವು ಬಾರಿ ಅತ್ಯಾಚಾರ ಎಸಗಿದ್ದ. ಗರ್ಭಿಣಿಯಾದ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದಳು.

ಮಗಳು ಕಾಣೆಯಾಗಿರುವುದಾಗಿ ತಾಯಿ, ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಡಿವೈಎಸ್‌ಪಿ ಯು.ನಾಗೇಶ್ ಐತಾಳ್ ಅವರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಮಕ್ಕಳ ಸ್ನೇಹಿ ಮತ್ತು ಎಫ್.ಟಿ.ಎಸ್.ಸಿ–1ನೇ ನ್ಯಾಯಾಲಯದ ನ್ಯಾಯಾಧೀಶ ಶ್ರೀಪಾದ ಎನ್. ಅವರು ತೀರ್ಪು ನೀಡಿದ್ದಾರೆ. ಸಂತ್ರಸ್ತೆಗೆ ಜನಿಸಿದ ಮಗುವಿಗೆ ಸರ್ಕಾರದಿಂದ ₹5 ಲಕ್ಷ ಪರಿಹಾರ ನೀಡಲು ಆದೇಶಿಸಿದ್ದಾರೆ.

ಸರ್ಕಾರದ ಪರ ಸರ್ಕಾರಿ ಅಭಿಯೋಜಕರಾದ ಜಯಪ್ಪ ಕೆ.ಜಿ. ವಾದ ಮಂಡಿಸಿದ್ದರು.

ಮಯೂರಿ ನೋಟ

ಬೆಂಗಳೂರಿನ ವಿಧಾನಸೌಧದ ಆವರಣದಲ್ಲಿರುವ ಉದ್ಯಾನದಲ್ಲಿ ಜೋಡಿ ನವಿಲುಗಳ ಕಲಾಕೃತಿಯನ್ನು ಕಾರ್ಮಿಕರು ಅಳವಡಿಸುತ್ತಿದ್ದ ದೃಶ್ಯ
- ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ಹನಿಟ್ರ್ಯಾಪ್: ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಹಣ ದೋಚಲು ಮುಂದಾಗಿದ್ದ ದಂಪತಿ ಸೇರಿ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಉಲ್ಲಾಳು ಬಳಿಯ ಚಿಕ್ಕಬಸ್ತಿಯ ನಿವಾಸಿ ಕಲೀಂ ಅಹ್ಮದ್ (42), ಅವರ ಪತ್ನಿ ಶಬಾ ಅಪ್ಸಾನಾ (32), ಪಾದರಾಯನಪುರದ ಉಬೇದ್ ಖಾನ್ (32), ಬಿಟಿಎಂ ಬಡಾವಣೆಯ ಅಬ್ದುಲ್ ರಕೀಬ್ ಜಫಾರಿ (45) ಹಾಗೂ ಚಿಕ್ಕಬಾಣಾವರದ ಶೇಖ್ ಅತೀಕ್ ಉರ್ ರೆಹಮಾನ್ (33) ಬಂಧಿತರು.

'ಶಬಾ ಅಪ್ಸಾನಾ ಅವರನ್ನು ಬಳಸಿಕೊಂಡು ಉದ್ಯಮಿಯನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ₹ 6 ಲಕ್ಷಕ್ಕೆ ಬೇಡಿಕೆ ಇರಿಸಲಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ರಾಜರಾಜೇಶ್ವರಿನಗರ ಠಾಣೆ ವ್ಯಾಪ್ತಿಯಲ್ಲಿ ಡಿ. 14ರಂದು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

ವಿಧವೆ ಎಂಬುದಾಗಿ ಪರಿಚಯ: 'ಸಂತ್ರಸ್ತ ಉದ್ಯಮಿಯನ್ನು ಆರೋಪಿ ಕಲೀಂ ಅಹ್ಮದ್ ಪರಿಚಯ ಮಾಡಿಕೊಂಡಿದ್ದ. ಹಣವಿರುವುದನ್ನು ತಿಳಿದು ದೋಚಲು ಸಂಚು ರೂಪಿಸಿದ್ದ. ಪತ್ನಿ ಶಬಾ ಅಪ್ಸಾನಾ ಅವರನ್ನು ಉದ್ಯಮಿ ಬಳಿ ಕರೆದೊಯ್ದಿದ್ದ ಆತ, 'ಇವರು ವಿಧವೆ. ಕೆಲಸ ನೀಡಿ ಜೀವನಕ್ಕೆ ದಾರಿ ಮಾಡಿಕೊಡಿ' ಎಂಬುದಾಗಿ ವಿನಂತಿಸಿದ್ದ. ಅದಕ್ಕೆ ಉದ್ಯಮಿ ಒಪ್ಪಿದ್ದರು.'

'ಉದ್ಯಮಿ ಜೊತೆ ಸಲುಗೆಯಿಂದ ವರ್ತಿಸಲಾರಂಭಿಸಿದ್ದ ಶಬಾ, ಹಲವು ಬಾರಿ ಖಾಸಗಿ ಕ್ಷಣ ಕಳೆದಿದ್ದರು. ಡಿ. 14ರಂದು ಉದ್ಯಮಿಗೆ ಕರೆ ಮಾಡಿದ್ದ ಮಹಿಳೆ, 'ವಸತಿಗೃಹಕ್ಕೆ ಹೋಗೋಣ. ಆಧಾರ್ ತೆಗೆದುಕೊಂಡು ಬನ್ನಿ' ಎಂದಿದ್ದರು. ರಾಜರಾಜೇಶ್ವರಿನಗರ ಬಳಿಯ ವಸತಿಗೃಹವೊಂದಕ್ಕೆ ಬಂದಿದ್ದರು. ನಂತರ, ಇಬ್ಬರೂ ಕೊಠಡಿಯೊಂದನ್ನು ಬಾಡಿಗೆ ಪಡೆದು ತಂಗಿದ್ದರು' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಅದೇ ಕೊಠಡಿಗೆ ಹೋಗಿದ್ದ ಕಲೀಂ ಹಾಗೂ ಇತರೆ ಆರೋಪಿಗಳು, ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು. 'ಕೆಲಸಕ್ಕಾಗಿ ಬಂದ ಮಹಿಳೆಯನ್ನು ದುರ್ಬಳಕೆ ಮಾಡಿಕೊಂಡಿದ್ದಿಯಾ? ನಿನ್ನ ಪತ್ನಿ ಹಾಗೂ ಸಂಬಂಧಿಕರಿಗೆ ವಿಷಯ ತಿಳಿಸುತ್ತೇವೆ. ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡುತ್ತೇವೆ' ಎಂದು ಬೆದರಿಸಿದ್ದರು. ಸ್ಥಳದಿಂದ ಬಿಟ್ಟು ಕಳುಹಿಸಲು ₹ 6 ಲಕ್ಷ ನೀಡುವಂತೆ ಬೇಡಿಕೆ ಇರಿಸಿದ್ದರು. ಈ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಕಾರ್ಯಾಚರಣೆ ನಡೆಸಿದಾಗ ಆರೋಪಿಗಳು ಸಿಕ್ಕಿಬಿದ್ದರು' ಎಂದು ಮೂಲಗಳು ಹೇಳಿವೆ.

₹ 2,000 ಮುಖಬೆಲೆಯ ಖೋಟಾ ನೋಟುಗಳು ಪತ್ತೆ

ಬೆಂಗಳೂರು: ನೃಪತುಂಗ ರಸ್ತೆಯಲ್ಲಿರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (ಆರ್‌ಬಿಐ) ಶಾಖೆಗೆ ತುಂಬಲು ತರಲಾಗಿದ್ದ ನೋಟುಗಳಲ್ಲಿ ₹ 2,000 ಮುಖಬೆಲೆಯ 6 ಖೋಟಾ ನೋಟುಗಳು ಪತ್ತೆಯಾಗಿದ್ದು, ಈ ಬಗ್ಗೆ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಆರ್‌ಬಿಐ ಸಹಾಯಕ ಪ್ರಧಾನ ವ್ಯವಸ್ಥಾಪಕರು ದೂರು ನೀಡಿದ್ದಾರೆ. ವಿಜಯಾ ಬ್ಯಾಂಕ್ ಎಂ.ಜಿ.ರಸ್ತೆ ಶಾಖೆಯ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಜಯಾ ಬ್ಯಾಂಕ್ ಎಂ.ಜಿ. ರಸ್ತೆ ಶಾಖೆಯ ಕರೆನ್ಸಿ ಚೆಸ್ಟ್‌ನಿಂದ ಅ. 25ರಂದು ಆರ್‌ಬಿಐಗೆ ಹಣ ಬಂದಿತ್ತು. ಪರಿಶೀಲನೆ ನಡೆಸಿದಾಗ ಅದರಲ್ಲಿ ₹ 2,000 ಮುಖಬೆಲೆಯ 6 ಖೋಟಾ ನೋಟುಗಳು ಇದ್ದವು. ನಂತರ, ಆರ್‌ಬಿಐ ಅಧಿಕಾರಿಗಳು ವಿಚಾರಣೆ ನಡೆಸಿದ್ದರು. ನಂತರ, ವರದಿ ಸಮೇತ ಠಾಣೆಗೆ ದೂರು ನೀಡಿದ್ದಾರೆ' ಎಂದು ತಿಳಿಸಿವೆ.

'ಅಪರಿಚಿತರು ಖೋಟಾ ನೋಟುಗಳನ್ನು ವಿಜಯಾ ಬ್ಯಾಂಕ್‌ನ ಶಾಖೆಗೆ ನೀಡಿರುವ ಅನುಮಾನವಿದೆ. ಈ ಕೃತ್ಯದಲ್ಲಿ ಭಾಗಿಯಾಗಿರುವ ವ್ಯಕ್ತಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಯುಎಇ ಕರೆನ್ಸಿ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಧ ಮೊತ್ತಕ್ಕೆ ಯುಎಇ ಕರೆನ್ಸಿ ಕೊಡುವುದಾಗಿ ಹೇಳಿ ಬಣ್ಣದ ಜೆರಾಕ್ಸ್ ಪ್ರತಿ ನೀಡಿ ವಂಚಿಸಿದ್ದ ಆರೋಪದಡಿ ಇಮ್ರಾನ್ ಶೇಖ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ದೆಹಲಿಯ ಇಮ್ರಾನ್ ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನ ಕೃತ್ಯಕ್ಕೆ ಸಹಕಾರ ನೀಡುತ್ತಿದ್ದ ಮಹಿಳೆ ರುಕ್ಸಾನಾ ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಂತರರಾಷ್ಟ್ರೀಯ ನಗದು ವಿನಿಮಯ ಏಜೆನ್ಸಿ ನಡೆಸುತ್ತಿರುವುದಾಗಿ ಹೇಳುತ್ತಿದ್ದ ಆರೋಪಿಗಳು, ವಿದೇಶಕ್ಕೆ ಹೋಗುವ ಉದ್ಯಮಿಗಳು ಹಾಗೂ ಉದ್ಯೋಗಿಗಳನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. 'ನಮ್ಮ ಬಳಿ ಯುಎಇ ದಿರ್ಹಮ್ ಕರೆನ್ಸಿ ಇದೆ. ಅರ್ಧ ಮೊತ್ತಕ್ಕೆ ಕೊಡುತ್ತೇವೆ' ಎನ್ನುತ್ತಿದ್ದರು. ಅದನ್ನು ನಂಬಿ ಉದ್ಯಮಿಗಳು ಹಾಗೂ ಉದ್ಯೋಗಿಗಳು ಹಣ ಕೊಡುತ್ತಿದ್ದರು.'

'ದಿರ್ಹಮ್ ಕರೆನ್ಸಿಯ ಬಣ್ಣದ ಜೆರಾಕ್ಸ್ ಪ್ರತಿಗಳನ್ನು ನೀಡುತ್ತಿದ್ದ ಆರೋಪಿಗಳು, ಹಣ ಪಡೆದು ಪರಾರಿಯಾಗುತ್ತಿದ್ದರು. ನಗದು ವಿನಿಮಯ ಕೇಂದ್ರಗಳಲ್ಲಿ ಕರೆನ್ಸಿ ಪರಿಶೀಲನೆ ನಡೆಸಿದಾಗಲೇ, ಅದು ಜೆರಾಕ್ಸ್ ಪ್ರತಿ ಎಂಬುದು ಗೊತ್ತಾಗುತ್ತಿತ್ತು. ಇದೇ ರೀತಿಯಲ್ಲಿ ಆರೋಪಿಗಳು 500ಕ್ಕೂ ಹೆಚ್ಚು ಮಂದಿಯನ್ನು ವಂಚಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಹೆಣ್ಣುಭ್ರೂಣ ಹತ್ಯೆ ಪ್ರಕರಣ: 12 ದಿನ ಪೊಲೀಸರ ವಶಕ್ಕೆ ಆರೋಪಿ

ಎಸ್‌ಪಿಜಿ ಆಸ್ಪತ್ರೆ ಮಾಲೀಕ ಶ್ರೀನಿವಾಸ್ ಸೆರೆ

ಪ್ರಜಾವಾಣಿ ವಾರ್ತೆ

ಡಾ.ಶ್ರೀನಿವಾಸ್

ಹೊಸಕೋಟೆ: ತಲೆಮರೆಸಿಕೊಂಡಿದ್ದ ಭ್ರೂಣ ಹತ್ಯೆ ಪ್ರಕರಣದ ಪ್ರಮುಖ ಆರೋಪಿ, ಎಸ್‌ಪಿಜಿ ಆಸ್ಪತ್ರೆಯ ಮಾಲೀಕ ಡಾ.ಶ್ರೀನಿವಾಸ್ ಅವರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಹೊಸಕೋಟೆ–ಬೆಂಗಳೂರು ರಸ್ತೆಯಲ್ಲಿ ಕಾರಿನಲ್ಲಿ ಹೊರಟಿದ್ದ ಡಾ.ಶ್ರೀನಿವಾಸ್ ಅವರನ್ನು ತಿರುಮಲ ಶೆಟ್ಟಿಹಳ್ಳಿ ಪೊಲೀಸರು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಹೆಚ್ಚಿನ ವಿಚಾರಣೆಗೆ 12 ದಿನ ಪೊಲೀಸ್ ವಶಕ್ಕೆ ಪಡೆದಿದ್ದಾರೆ.

ಕಳೆದ ಬುಧವಾರ ಜಿಲ್ಲಾ ಆರೋಗ್ಯಾಧಿಕಾರಿ ನೇತೃತ್ವದ ಅಧಿಕಾರಿಗಳ ತಂಡ ತಿರುಮಲಶೆಟ್ಟಿಹಳ್ಳಿ ಕ್ರಾಸ್‌ನಲ್ಲಿರುವ ಎಸ್‌ಪಿಜಿ ಆಸ್ಪತ್ರೆಯ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಸುಮಾರು ನಾಲ್ಕೈದು ತಿಂಗಳ ಹೆಣ್ಣು ಮಗುವಿನ ಭ್ರೂಣ ಹತ್ಯೆ ಮಾಡಿರುವುದನ್ನು ಪತ್ತೆ ಮಾಡಿತ್ತು.

ಅಂದಿನಿಂದ ಆಸ್ಪತ್ರೆಯ ಮಾಲಿಕ ಡಾ.ಶ್ರೀನಿವಾಸ್ ತಲೆಮರೆಸಿಕೊಂಡಿದ್ದರು. ಶ್ರೀನಿವಾಸ್ ಸೇರಿದಂತೆ ಐವರ ವಿರುದ್ಧ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಪ್ರಕರಣದಲ್ಲಿ ಈಗಾಗಲೇ ನಾಲ್ವರನ್ನು ಬಂಧಿಸಿ, ನ್ಯಾಯಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸನ್ ರೂಫ್‌ನಲ್ಲಿ ಹುಚ್ಚಾಟ: ಕೇರಳದ ಐವರು ವಶಕ್ಕೆ

ಅಪರಾಧ ಸುದ್ದಿ

ಬೆಂಗಳೂರು: ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಚಲಿಸುತ್ತಿದ್ದ ಕಾರಿನ ಸನ್‌ರೂಫ್‌ನಲ್ಲಿ ನಿಂತು ಹುಚ್ಚಾಟ ಪ್ರದರ್ಶಿಸಿ ಸಾರ್ವಜನಿಕರ ಜೀವಕ್ಕೆ ಕುತ್ತು ತರಲು ಯತ್ನಿಸಿದ್ದ ಐವರು ಯುವಕರನ್ನು ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಕೇರಳದ ಯುವಕರು ಇತ್ತೀಚೆಗೆ ನಗರಕ್ಕೆ ಬಂದಿದ್ದರು. ಡಿಎಲ್ 3 ಸಿಬಿಎ 9775 ನೋಂದಣಿ ಸಂಖ್ಯೆಯ ಕಾರಿನಲ್ಲಿ ಅಪಾಯಕಾರಿ ರೀತಿಯಲ್ಲಿ ಸುತ್ತಾಡಿದ್ದರು. ಇವರ ವಿಡಿಯೊವನ್ನು ಚಿತ್ರೀಕರಿಸಿದ್ದ ಸಾರ್ವಜನಿಕರೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ವಿಡಿಯೊ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಯುವಕನೊಬ್ಬ ಕಾರು ಚಲಾಯಿಸುತ್ತಿದ್ದ. ಮೂವರು ಯುವಕರು, ಕಾರಿನ ಸನ್‌ರೂಫ್‌ನಲ್ಲಿ ನಿಂತಿದ್ದರು. ಮತ್ತೊಬ್ಬ, ಕಾರಿನ ಕಿಟಕಿಯಲ್ಲಿ ಅರ್ಧ ದೇಹ ಹೊರಕ್ಕೆ ಹಾಕಿಕೊಂಡು ನಿಂತಿದ್ದ. ಅತೀ ವೇಗವಾಗಿ ಹೊರಟಿದ್ದ ಕಾರಿನಲ್ಲಿ ಎಲ್ಲರೂ ಚೀರಾಡುತ್ತಿದ್ದರು. ಅಕ್ಕ–ಪಕ್ಕದ ವಾಹನ ಸಂಚಾರಕ್ಕೆ ಅಡ್ಡಿಪಡಿಸುತ್ತಿದ್ದರು.'

'ಅಪಾಯಕಾರಿ ಚಾಲನೆ, ನಿರ್ಲಕ್ಷ್ಯ ಹಾಗೂ ಸಾರ್ವಜನಿಕ ರಸ್ತೆಯಲ್ಲಿ ಜನರ ಜೀವಕ್ಕೆ ಕುತ್ತು ತರಲು ಯತ್ನಿಸಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಕೆಲವೇ ಗಂಟೆಗಳನ್ನು ಆರೋಪಿಗಳನ್ನು ಪತ್ತೆ ಮಾಡಿ, ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

'ದಢೂತಿ ಪೊಲೀಸರಿಗಿಲ್ಲ ತರಬೇತಿ ಅವಕಾಶ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಹೊಸದಾಗಿ ನೇಮಕವಾದ ಪೊಲೀಸರಿಗೆ ತರಬೇತಿ ನೀಡುವ ಪೊಲೀಸ್ ಅಧಿಕಾರಿಗಳು ದೈಹಿಕವಾಗಿ ಸದೃಢರಾಗಬೇಕು. ಇಲ್ಲದಿದ್ದರೆ ಅವರು ಇತರರಿಗೆ ಹೇಳುವ ನೈತಿಕತೆ ಕಳೆದುಕೊಳ್ಳುತ್ತಾರೆ. ಹೀಗಾಗಿ, ದಢೂತಿ ದೇಹ ಹೊಂದಿದ ಪೊಲೀಸರನ್ನು ತರಬೇತಿ ಕಾಲೇಜುಗಳಿಗೆ ನಿಯೋಜಿಸುವುದಿಲ್ಲ' ಎಂದು ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಚೇರಿ ಕೆಲಸಗಳನ್ನು ನಿರ್ವಹಿಸುವವರು ಹಾಗೂ ಬಡ್ತಿಗಾಗಿ ಬಾಕಿ ಇರುವವರು ವರ್ಗಾವಣೆಯಾಗಿ ಬಂದವರನ್ನು ಹೊರತುಪಡಿಸಿ ಇತರ ಸಿಬ್ಬಂದಿ ಫಿಟ್ನೆಸ್ ಕಾಯ್ದುಕೊಳ್ಳುವುದು ಕಡ್ಡಾಯ. ತರಬೇತಿ ಕಾಲೇಜುಗಳಿಗೆ ವರ್ಗಾವಣೆಯಾಗಿ ಬಂದ ದಢೂತಿ ಕಾಯದ ಕೆಲವರನ್ನು ವಾಪಸ್ ಕಳುಹಿಸಲಾಗಿದೆ' ಎಂದರು.

ಹೊಸದಾಗಿ ನೇಮಕವಾಗುವ ಪೊಲೀಸ್ ಸಿಬ್ಬಂದಿಗೆ ಎಕೆ 47, ಎಂಪಿ 5 ಗನ್ ಸೇರಿದಂತೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಬಳಕೆಯ ಜೊತೆಗೆ ಸೈಬರ್ ಕ್ರೈಂ ತಡೆಗಟ್ಟುವ ಬಗ್ಗೆಯೂ ತರಬೇತಿ ನೀಡಲಾಗುವುದು. ಇದೀಗ ಬೋಧಿಸುತ್ತಿರುವ ಪಠ್ಯಕ್ರಮದಲ್ಲಿ ಕೆಲ ಬದಲಾವಣೆಗಳನ್ನು ತರಲಾಗುತ್ತಿದೆ. ಪೊಲೀಸ್ ಇತಿಹಾಸದ ಬಗ್ಗೆ ಹೆಚ್ಚಿನ ಮಾಹಿತಿ ಈಗ ಅಗತ್ಯವಿಲ್ಲ. ಹೀಗಾಗಿ, ಅಂತಹ ಪಾಠಗಳನ್ನು ಸಂಕ್ಷಿಪ್ತಗೊಳಿಸಿ ಜನರೊಂದಿಗೆ ಹೇಗೆ ವರ್ತಿಸಬೇಕು. ಸಾಮಾಜಿಕ ಜಾಲತಾಣದ ಮೇಲೆ ಕಣ್ಣಿಡುವುದು, ಆರ್ಥಿಕ ಅಪರಾಧಗಳು, ಮಹಿಳೆಸಮಸ್ಯೆಗಳನ್ನು ನಿರ್ವಹಿಸುವ ಬಗೆಯ ಬಗ್ಗೆ ತರಬೇತಿಯಲ್ಲಿ ಮಾಹಿತಿ ನೀಡಲಾಗುವುದು ಎಂದರು.

ರಂಗಭೂಮಿ ಸಮಸ್ಯೆ ಸಮಾಲೋಚನೆ

ರಂಗಕರ್ಮಿಗಳ ವಿವಿಧ ಬೇಡಿಕೆಗಳಿಗೆ ಸಕಾರಾತ್ಮಕ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ವಿಶ್ರಾಂತಿ ಕೊಠಡಿಯನ್ನು ಕಾರ್ಯಕ್ರಮಗಳಿಗೆ ನೀಡದಿರುವುದು, ರವೀಂದ್ರ ಕಲಾಕ್ಷೇತ್ರ ಕಾಯ್ದಿರಿಸುವಿಕೆಯಲ್ಲಿ ದೋಷ, ರಂಗ ಮಂದಿರಗಳಿಗೆ ಅಧಿಕ ಬಾಡಿಗೆ ನಿಗದಿ ಸೇರಿ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಭರವಸೆ ನೀಡಿದರು.

ಆಯ್ದ ರಂಗಕರ್ಮಿಗಳ ಜತೆಗೆ ಕನ್ನಡ ಭವನದಲ್ಲಿ ಸಮಾಲೋಚನೆ ಸಭೆ ನಡೆಸಿದ ಅವರು, ರಂಗಭೂಮಿಯ ಸಮಸ್ಯೆಗಳ ಬಗ್ಗೆ ಚರ್ಚಿಸಿದರು.

'ರವೀಂದ್ರ ಕಲಾಕ್ಷೇತ್ರದಲ್ಲಿ ಇರುವ ಮಹಿಳಾ ವಿಶ್ರಾಂತಿ ಕೊಠಡಿಯನ್ನು ಮೊದಲಿನಿಂದಲ ಪುಸ್ತಕ ಬಿಡುಗಡೆ, ವಿಚಾರ ಸಂಕಿರಣಗಳಂತಹ ಕಾರ್ಯಕ್ರಮಗಳಿಗೆ ಬಾಡಿಗೆಗೆ ಕೊಡಲಾಗುತ್ತಿತ್ತು. ಆದರೆ, ಕಳೆದ ಎರಡು ವರ್ಷಗಳಿಂದ ಅದನ್ನು ನಿಲ್ಲಿಸಲಾಗಿದೆ. ಮತ್ತೆ ಈ ಕೊಠಡಿಯನ್ನು ಮುಕ್ತವಾಗಿರಿಸಬೇಕು' ಎಂದು ರಂಗಕರ್ಮಿಗಳು ಮನವಿ ಮಾಡಿಕೊಂಡರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ನಿರ್ದೇಶಕಿ, ಮಹಿಳಾ ವಿಶ್ರಾಂತಿ ಕೊಠಡಿಯನ್ನು ಕಾರ್ಯಕ್ರಮಗಳಿಗೆ ಕೊಡುವಂತೆ ಕಲಾಕ್ಷೇತ್ರದ ವ್ಯವಸ್ಥಾಪಕರಿಗೆ ಆದೇಶಿಸಿದರು.

'ರವೀಂದ್ರ ಕಲಾಕ್ಷೇತ್ರವನ್ನು ತಿಂಗಳಿಗೆ ಕನಿಷ್ಠ 17 ದಿನ ನಾಟಕಗಳಿಗೆ ಮೀಸಲಿಡಬೇಕು. ರಾತ್ರಿ 12 ಗಂಟೆಗೆ ಶುರುವಾಗುವ ಬುಕ್ಕಿಂಗ್ ಸಮಯವನ್ನು ಹಗಲಿನ ಹೊತ್ತು ನಿಗದಿಪಡಿಸಬೇಕು. ಆನ್‌ಲೈನ್ ಬುಕ್ಕಿಂಗ್ ಪ್ರಾರಂಭವಾದ ಕೆಲವೇ ನಿಮಿಷಗಳಲ್ಲಿ ವಾರಾಂತ್ಯದ ದಿನಗಳೆಲ್ಲಾ ಬುಕ್ ಆಗುತ್ತಿವೆ. ಕಾಯ್ದಿರಿಸುವಿಕೆಯಲ್ಲಿ ಆಗುತ್ತಿರುವ ಲೋಪಗಳನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು. 'ರಂಗಮಂದಿರ ಕಾಯ್ದಿರಿಸುವಲ್ಲಿ ಪಾರದರ್ಶಕತೆ ತರಲಾಗುವುದು' ಎಂದು ಧರಣಿದೇವಿ ಭರವಸೆ ನೀಡಿದರು.

ಸಾಂಸ್ಕೃತಿಕ ನೀತಿ ಜಾರಿ, ಹಿಂದಿನ ಹಾಗೂ ಹಾಲಿ ವರ್ಷದ ಪ್ರಶಸ್ತಿಗಳು ಪ್ರದಾನ, ಇಲಾಖೆ ನೀಡುವ ಪ್ರಾಯೋಜನೆಗಳಿಗೆ ಮಾರ್ಗಸೂಚಿ, ಸಾಂಸ್ಕೃತಿಕ ಚಟುವಟಿಕೆಗೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಅವಕಾಶ ಸೇರಿ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಲೇಖಕಿ ವಿಜಯಾ, ರಂಗಕರ್ಮಿಗಳಾದ ಶ್ರೀನಿವಾಸ ಜಿ. ಕಪ್ಪಣ್ಣ, ಜೆ. ಲೋಕೇಶ್, ಬಿ. ಸುರೇಶ್, ಕೆ.ವಿ. ನಾಗರಾಜಮೂರ್ತಿ, ಶಶಿಧರ್ ಭಾರಿಘಾಟ್, ಗುಂಡಣ್ಣ, ಶಶಿಕಾಂತ್ ಯಡಹಳ್ಳಿ, ಮಂಗಳಾ, ಶೋಭಾ ಸೇರಿ ರಂಗಭೂಮಿಯ ಪ್ರಮುಖರು ಇದ್ದರು.

'ದೇವಸ್ಥಾನದಲ್ಲಿ ವಸ್ತ್ರಸಂಹಿತೆ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೂ ದೇವಸ್ಥಾನಗಳಲ್ಲಿ ವಸ್ತ್ರಸಂಹಿತೆ ಜಾರಿಗೊಳಿಸಬೇಕು' ಎಂದು ಹಿಂದೂ ಜನಜಾಗೃತಿ ಸಮಿತಿಯ ರಾಜ್ಯ ವಕ್ತಾರ ಮೋಹನ್ ಗೌಡ ಹೇಳಿದರು.

ಕರ್ನಾಟಕ ದೇವಸ್ಥಾನ, ಮಠ ಮತ್ತು ಧಾರ್ಮಿಕ ಸಂಸ್ಥೆಗಳ ಮಹಾಸಂಘ ಆಯೋಜಿಸಿರುವ ಎರಡು ದಿನಗಳ 'ದೇವಸ್ಥಾನಗಳ ರಾಜ್ಯಮಟ್ಟದ ಅಧಿವೇಶನ'ದಲ್ಲಿ ಅವರು ಮಾತನಾಡಿದರು.

'ಇಂದು ಪ್ರತಿಯೊಂದು ಕ್ಷೇತ್ರದಲ್ಲಿ ಅದರದ್ದೇ ಆದ ಶಿಷ್ಟಾಚಾರಗಳನ್ನು ಪಾಲಿಸಲಾಗುತ್ತಿದೆ. ಪೊಲೀಸರು, ಸರ್ಕಾರಿ ಕಚೇರಿಗಳು ಸೇರಿದಂತೆ ಅನೇಕ ಕಡೆಗಳಲ್ಲಿ ಸಮವಸ್ತ್ರ ಧರಿಸಿಯೇ ಕೆಲಸ ಮಾಡಲಾಗುತ್ತಿದೆ. ಆದ್ದರಿಂದ, ರಾಜ್ಯದಲ್ಲಿರುವ ಹಿಂದೂ ದೇವಸ್ಥಾನಗಳಿಗೆ ಭೇಟಿ ನೀಡಬೇಕಾದರೆ ನಮ್ಮದೇ ಆದ ವಸ್ತ್ರಸಂಹಿತೆ ಹೊಂದಿರಬೇಕು. ಇದರಿಂದ ದೇವರ ದರ್ಶನ ಪಡೆಯುವ ಭಕ್ತರಿಗೂ ಹೆಚ್ಚು ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿರುವ 500 ದೇವಸ್ಥಾನಗಳಲ್ಲಿ ವಸ್ತ್ರಸಂಹಿತೆ ಜಾರಿಗೊಳಿಸಲು ನಾವೆಲ್ಲರೂ ಸಂಕಲ್ಪ ಕೈಗೊಳ್ಳಬೇಕು' ಎಂದು ಕರೆ ನೀಡಿದರು.

ಹಿಂದೂ ಜನಜಾಗೃತಿ ಸಮಿತಿಯ ಕನ್ನಡ ಜಾಲತಾಣ Hindujagruti.org/Kannada ಮತ್ತು 'ಸನಾತನ ಪಂಚಾಂಗ 2024 ಮೊಬೈಲ್ ಆ್ಯಪ್ ಬಿಡುಗಡೆಗೊಳಿಸಲಾಯಿತು. ಅಧಿವೇಶನದಲ್ಲಿ 500ಕ್ಕೂ ಹೆಚ್ಚು ದೇವಸ್ಥಾನಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಹಿಂದೂ ಜನಜಾಗೃತಿ ಸಮಿತಿಯ ರಾಷ್ಟ್ರೀಯ ವಕ್ತಾರ ರಮೇಶ ಶಿಂಧೆ, ಆದಿಚುಂಚನಗಿರಿ ಮಠದ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಭಾರತೀಯ ಸಂಪ್ರದಾಯ ಟ್ರಸ್ಟ್‌ನ ಮಹರ್ಷಿ ಗುರೂಜಿ, ಸನಾತನ ಸಂಸ್ಥೆಯ ರಮಾನಂದ ಗೌಡ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ಕನ್ನಡ ಜಾನಪದ ಪ್ರೀಮಿಯರ್ ಲೀಗ್ ಉದ್ಘಾಟನೆ: ಎಂ.ಟಿ.ಬಿ. ನಾಗರಾಜ್, ಅಧ್ಯಕ್ಷತೆ: ಎಸ್. ಬಾಲಾಜಿ, ಅತಿಥಿಗಳು: ವೆ. ಅಜಿತ್ ಕುಮಾರ್, ಶಿಲ್ಪ ನಾಗರಾಜು, ರವಿ ಸಿ., ಸತ್ಯಾನಂದ, ಮರಿಲಿಂಗಯ್ಯ, ಟಿ. ವೀರಭದ್ರಪ್ಪ, ಕೆ.ಎನ್. ಶೇಷಾದ್ರಿ ಗೌಡ, ಆಯೋಜನೆ: ಕನ್ನಡ ಜಾನಪದ ಪರಿಷತ್ ಬೆಂಗಳೂರು ನಗರ ಜಿಲ್ಲೆ, ಸ್ಥಳ: ಗೋಪಾಲನ್ ಸ್ಪೋರ್ಟ್ಸ್ ಅಕಾಡೆಮಿ, ಆವಲಹಳ್ಳಿ, ಬೆಳಿಗ್ಗೆ 7

ಆರ್ಗ್ಯಾನಿಕ್ ಸಂತೆ: ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 7.30ರಿಂದ

ಗೌಡತಿಯರ ಸಂಭ್ರಮ 'ನಮ್ಮ ಗೌಡತಿ, ನಮ್ಮ ಹೆಮ್ಮೆ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಸೌಮ್ಯ ರಮೇಶ್, ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಅತಿಥಿಗಳು: ಕೆ.ನ. ಲಿಂಗೇಗೌಡ, ಅರಮನೆ ಶಂಕರ್, ಎ.ಎಸ್. ಗೋವಿಂದಗೌಡ, ಪದ್ಮ ಪ್ರಕಾಶ್, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಶಶಿಕಲಾಗೌಡ, ಪುಣ್ಯವತಿ ಸಿ. ನಾಗರಾಜ, ಆಯೋಜನೆ: ಗೌಡತಿಯರ ಸೇನೆ, ಸ್ಥಳ: ಆದಿಚುಂಚನಗಗಿರಿ ಸಮುದಾಯ ಭವನ, ವಿಜಯನಗರ, ಬೆಳಿಗ್ಗೆ 9

ಧನ್ವಂತ್ರಿ ಜಯಂತಿ ಅಂಗವಾಗಿ ರಾಷ್ಟ್ರೀಯ ವಿಚಾರಸಂಕಿರಣ: ಡಾ. ಸೈಯದಾ ಅಥರ್ ಫಾತಿಮಾ, ಡಾ. ವಹೀದಾ ರಹಮಾನ್ ಎ., ಡಾ. ಸಂತೋಷ್ ಪಾಟೀಲ್, ಆಯೋಜನೆ: ಅಗ್ನಿವೇಷ ಆಯುರ್ವೇದ ಅನುಷ್ಠಾನ, ಸ್ಥಳ: ಕೇಶವ ಶಿಲ್ಪಾ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡನಗರ, ಬೆಳಿಗ್ಗೆ 9.30ರಿಂದ

ವಾರ್ಷಿಕ ಬಳಗಕೂಟ–2023: ಅತಿಥಿ: ಅರವಿಂದ ಕುಮಾರ್, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಮತ್ತು ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

ಉಚಿತ ಹೃದಯ ಪರೀಕ್ಷೆ, ಸಲಹಾ ಶಿಬಿರ: ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಬೆಳಿಗ್ಗೆ 10

ಸಂಗೀತ ಸಂಭ್ರಮ: ಅತಿಥಿಗಳು: ಜಯರಾಮ್ ಪಾರೆ ನಾರಾಯಣಮೂರ್ತಿ, ಪದ್ಮಾವತಿ, ತಬಲಾ: ನಂದೀಶ ಟಿ.ಎಚ್., ಕೀ–ಬೋರ್ಡ್: ಹರೀಶ ಟಿ.ಜಿ., ರಿದಮ್ ಪ್ಯಾಡ್: ಕೆ.ಎಸ್. ಅಕ್ಷಯ ಶ್ರೀವತ್ಸ, ಆಯೋಜನೆ: ಶ್ರೀ ಸಂಗೀತ ಶಾಲೆ, ಸ್ಥಳ: ಬಿ.ಎಂ.ಶ್ರೀ., ಸ್ಮಾರಕ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10.30

ಎಂ.ಡಿ. ಗಣೇಶ್, ಭಾವನಾ ಗಣೇಶ್

ದಶಮಾನೋತ್ಸವ: ನೃತ್ಯ: ಎಂ.ಡಿ. ಗಣೇಶ್, ಭಾವನಾ ಗಣೇಶ್, ಅತಿಥಿಗಳು: ಸೌಮ್ಯ ಸೋಮಶೇಖರ್, ಸೋಮಶೇಖರ್ ಚೌದಂತ್, ಟಿ. ಮಂಜುನಾಥ್ ಆರಾಧ್ಯ, ಭರತ್ ಸೌಂದರ್ಯ, ಎಚ್.ಪಿ. ರಾಮಮೂರ್ತಿ, ಎಚ್.ಆರ್. ವಿಜಯಲಕ್ಷ್ಮಿ, ಆಯೋಜನೆ: ಗಣೇಶ ನೃತ್ಯಾಲಯ, ಸ್ಥಳ: ಕಲಾಗ್ರಾಮ ಸಭಾಂಗಣ, ನಾಗರಭಾವಿ, ಸಂಜೆ 5.30

'ಇ.ಎಸ್. ವೆಂಕಟರಾಮಯ್ಯ' ಶತಮಾನೋತ್ಸವ ಸ್ಮಾರಕ ಉಪನ್ಯಾಸ: ಅತಿಥಿ: ಡಿ.ವೈ. ಚಂದ್ರಚೂಡ್, ಆಯೋಜನೆ: ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 11

ಸರ್ವಸದಸ್ಯರ ಮಹಾಸಭೆ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ತಿಗಳರ (ಅಗ್ನವಂಶ ಕ್ಷತ್ರಿಯ) ಸಾರ್ವಜನಿಕ ವಿದ್ಯಾಭಿವೃದ್ಧಿ ಸಂಘ, ರಾಜಾಜಿನಗರ, ಬೆಳಿಗ್ಗೆ 11

46ನೇ ಬಿಲ್ಲವ ವಾರ್ಷಿಕೋತ್ಸವ ಹಾಗೂ ಬಿಲ್ಲವ ಯುವ ಹಬ್ಬ: ಉದ್ಘಾಟನೆ: ಮಧು ಬಂಗಾರಪ್ಪ, ಅಧ್ಯಕ್ಷತೆ: ಸೂರ್ಯಕಾಂತ್ ಸುವರ್ಣ, ಅತಿಥಿಗಳು: ಎಚ್.ಆರ್. ಗವಿಯಪ್ಪ, ಎ. ಶ್ರೀನಾಥ್, ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ದೇವತಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ರೂಪಶ್ರೀ ಆರ್.ಕೆ., ಕಾವ್ಯಶ್ರೀ ಆರ್.ಕೆ., ಅತಿಥಿಗಳು: ಮಾಲಾ ಶಶಿಕಾಂತ್, ಗೀತಾ ಕುಲಕರ್ಣಿ, ಎಚ್.ವಾಸು, ಆಯೋಜನೆ: ನೃತ್ಯಗಂಗಾ ಪ್ರದರ್ಶಕ ಕಲಾ ಕೇಂದ್ರ, ಸ್ಥಳ: ರಾಜ್‌ಕುಮಾರ್ ಕಲಾಭವನ, ಮಾರುತಿನಗರ, ಮಧ್ಯಾಹ್ನ 3

ಸ್ವರಲಯ ಸಂಗಮ-2023: ಅಧ್ಯಕ್ಷತೆ: ಆರ್.ಕೆ. ಪದ್ಮನಾಭ, ಅತಿಥಿಗಳು: ಹರಿದಾಸ ಭಟ್, ಗಾಯನ: ಅಕ್ಷಯ್ ಆರ್.ವಿ., ಅಭಿಷೇಕ್ ಆರ್.ವಿ., ಪಿಟೀಲು: ಅಭಿರಾಮ್, ಮೃದಂಗ: ಪ್ರಣವ್ ಎನ್. ಬಾಲಕೃಷ್ಣ, ಸ್ಥಳ: ಸುಶ್ರಾವ್ಯ ಅಕಾಡೆಮಿ ಫಾರ್ ಮ್ಯೂಸಿಕ್ ಸಂಸ್ಥೆ, ಸ್ಥಳ: ಸಂಸ್ಕೃತ ಭಾರತಿ ಅಕ್ಷರಂ, ಗಿರಿನಗರ, ಮಧ್ಯಾಹ್ನ 3

ಪಿಟೀಲು ವಾದ್ಯ ವೈಭವ: ಎಸ್. ಶಶಿಧರ್ ಮತ್ತು ವಿದ್ಯಾರ್ಥಿಗಳು, ಮೃದಂಗ: ಲಕ್ಷ್ಮೀನಾರಾಯಣ, ಘಟ: ಎನ್.ಎಸ್. ಕೃಷ್ಣಪ್ರಸಾದ್, ಸ್ಥಳ: ಆದರ್ಶ ಭವನ, ಮಲ್ಲೇಶ್ವರ, ಸಂಜೆ 4

ಸಮರ್ಪಣಾ ಕಾರ್ಯಕ್ರಮ: ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಕಾಡುಗೋಡಿ, ಸಂಜೆ 4ರಿಂದ

ಮುಕುಲ ನೃತ್ಯೋತ್ಸವ: ಅತಿಥಿಗಳು: ಜ್ಯೋತಿ ಪಟ್ಟಾಭಿರಾಮ್, ರಶ್ಮಿ ಪ್ರಸಾದ್, ಆಯೋಜನೆ ಮತ್ತು ಸ್ಥಳ: ಸಾಧನಾ ಸಂಗಮ ಟ್ರಸ್ಟ್, ಬಸವೇಶ್ವರನಗರ, ಸಂಜೆ 4

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸ್ಮೃತಿ ವಿಜಯಭಾಸ್ಕರ್, ಉಪಸ್ಥಿತಿ: ದೀಪಾ ಶಶಿಧರನ್, ಎಸ್.ಎನ್. ಸುಶೀಲಾ, ಆಯೋಜನೆ: ಕಲಾಸಧ ಅಕಾಡೆಮಿ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4.30

ಸಂಗೀತ ಕಾರ್ಯಕ್ರಮ: ಗಾಯನ: ಈಶ್ವರ್ ಐಯ್ಯರ್, ಪಿಟೀಲು: ಕೆ.ಎಸ್. ವಾಸುಕಿ, ಮೃದಂಗ: ಶ್ರೀನಿಧಿ ಎಚ್. ಆರ್., ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

ಕಡಲು ಉತ್ಸವ: ಪ್ರಸ್ತುತಿ: ರಾಜಶ್ರೀ ಹೊಳ್ಳ, ಮಾರ್ಗದರ್ಶನ: ವೇದಾಂತ ಸತ್ಯ, ಆಯೋಜನೆ: ಲಾಸ್ಯ ಲಹರಿ ಸಾಂಸ್ಕೃತಿಕ ಸಂಸ್ಥೆ, ಸ್ಥಳ: ವಿವೇಕ ಸಭಾಂಗಣ, ಜಯನಗರ, ಸಂಜೆ 5

ಗುರುಗೌರವ ಸಮರ್ಪಣೆ: ಅತಿಥಿ: ಪಿ. ಚಂದ್ರಿಕಾ, ಅಧ್ಯಕ್ಷತೆ: ಮಂಜುನಾಥ, ಗೌರವ ಪುರಸ್ಕೃತರು: ನರಹಳ್ಳಿ ಬಾಲಸುಬ್ರಹ್ಮಣ್ಯ, ರಜನಿ ನರಹಳ್ಳಿ, ಆಯೋಜನೆ: ಸುಮೇರು ಟ್ರಸ್ಟ್, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

ಸ್ವರ ಸಂಧ್ಯಾ: ಗಾಯನ: ದಿವ್ಯಾ ಶೆಣೈ, ತಬಲಾ: ಪ್ರಹ್ಲಾದ್ ದೇಶಪಾಂಡೆ, ಹಾರ್ಮೋನಿಯಂ: ನೀತಾ ಬೆಳೆಯೂರು, ಗಾಯನ: ಬಿ. ಕೃಷ್ಣ ಭಟ್ಟ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಅಶ್ವಿನ್ ವಾಲಾವಲ್ಕರ್, ಆಯೋಜನೆ: ಸಪ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 5.30

'ಡಾ.ಬಿ.ಆರ್. ಅಂಬೇಡ್ಕರ್ ನೌವ್ ಆ್ಯಂಡ್ ದೆನ್' ಸಾಕ್ಷ್ಯಚಿತ್ರ ಪ್ರದರ್ಶನ: ನಿರ್ದೇಶನ: ಜ್ಯೋತಿ ನಿಶಾ, ಸಂವಾದ: ಮೂಡ್ನಾಕೂಡು ಚಿನ್ನಸ್ವಾಮಿ, ವಿಕಾಸ್ ಆರ್. ಮೌರ್ಯ, ದು. ಸರಸ್ವತಿ, ಎಚ್. ಆರ್. ಶ್ರದ್ಧಾರಾಜ್, ಆಯೋಜನೆ: ಜಂಗಮ ಕಲೆಕ್ಟಿವ್ ತಮಟೆ ಮೀಡಿಯಾ, ಸ್ಥಳ: ಚಾಮುಂಡೇಶ್ವರಿ ಸ್ಟುಡಿಯೋ, ವಸಂತನಗರ, ಸಂಜೆ 5.30



ಬಿ.ಆರ್. ಲಕ್ಷ್ಮಣರಾವ್

ಎಂ.ಎಸ್. ನರಸಿಂಹಮೂರ್ತಿ ಅವರ 'ಬೇಗ್ ಬಾರೋ ಅಳಿಯ', ಮೌನೇಶ ಬಡಿಗೇರ ಅವರ 'ಶ್ರೀಗಳ ಅರಣ್ಯಕಾಂಡ', ಸಂತೆಕಸಲಗೆರೆ ಪ್ರಕಾಶ್ ಅವರ 'ಪ್ರತಿಮೆ ಇಲ್ಲದ ಊರು', ವಿವೇಕಾನಂದ ಕಾಮತ್ ಅವರ 'ಪದರುಗಳು' ಪುಸ್ತಕಗಳ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಅತಿಥಿಗಳು: ಎಚ್. ಡುಂಡಿರಾಜ್, ರಘುನಾಥ ಚ.ಹ., ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬೆಳಿಗ್ಗೆ 10.30

ಚಿತ್ರಾವಳಿ

ನಗರದಲ್ಲಿ ಶನಿವಾರ ನಡೆದ ನುಡಿನಮನ ಕಾರ್ಯಕ್ರಮದಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್‌. ಶಂಕರ್‌, ಚಂದ್ರೇಗೌಡರ ಮಗಳು ವೀಣಾ, ಶಾಸಕ ಟಿ.ಡಿ. ರಾಜೇಗೌಡ, ಮಾಜಿ ಸಚಿವೆ ಲೀಲಾದೇವಿ ಆರ್‌. ಪ್ರಸಾದ್‌, ಸ್ಕೌಟ್ಸ್‌ ಮತ್ತು ಗೈಡ್ಸ್‌ನ ರಾಜ್ಯ ಆಯುಕ್ತ ಪಿ.ಜಿ.ಆರ್‌. ಸಿಂಧ್ಯ, ಮಾಜಿ ಸಚಿವ ಕಿಮ್ಮನೆ ರತ್ನಾಕರ್‌ ಅವರು ಬಿ.ಎಸ್‌. ವಿಶ್ವನಾಥ್‌ ಹಾಗೂ ಡಿ.ಬಿ. ಚಂದ್ರೇಗೌಡ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ದಲಿತ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಘಟಕ ಶನಿವಾರ ನಗರದ ಗಾಂಧಿ ಸಾಹಿತ್ಯ ಸಂಘದಲ್ಲಿ ಆಯೋಜಿಸಿದ್ದ 'ದಲಿತ ಸಾಹಿತ್ಯ ಮತ್ತು ಚಳವಳಿಗೆ ಬಿ. ಬಸವಲಿಂಗಪ್ಪನವರ ಕೊಡುಗೆ–ಒಂದು ಚಿಂತನೆ' ಕಾರ್ಯಕ್ರಮದಲ್ಲಿ ಪರಿಷತ್ತಿನ ವಿಭಾಗೀಯ ಸಂಯೋಜಕ ಗಣಪತಿ ಗೋ. ಛಲವಾದಿ, ಸಾಹಿತಿ ಎಚ್‌. ಲಕ್ಷ್ಮೀನಾರಾಯಣಸ್ವಾಮಿ, ಜಾನಪದ ವಿದ್ವಾಂಸ ಬಾನಂದೂರು ಕೆಂಪಯ್ಯ, ಲೇಖಕಿ ಸೌಮ್ಯ ಕೋಡೂರು, ದಲಿತ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಘಟಕದ ಅಧ್ಯಕ್ಷ ಗೌಡಗೆರೆ ಮಾಯುಶ್ರೀ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಸಿ.ಪಿ. ಯೋಗೇಶ್ವರ್‌ ಭಾವ ಮಹದೇವಯ್ಯ ಹತ್ಯೆ ಪ್ರಕರಣ

ಮತ್ತಿಬ್ಬರು ಪೊಲೀಸರ ವಶಕ್ಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ತಾಲ್ಲೂಕಿನ ವಡ್ಡರದೊಡ್ಡಿಯಲ್ಲಿ ನಡೆದ ವಿಧಾನ ಪರಿಷತ್‌ ಸದಸ್ಯ ಸಿ.ಪಿ. ಯೋಗೇಶ್ವರ್‌ ಭಾವ ಮಹದೇವಯ್ಯ ಪಿ. ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚನ್ನಪಟ್ಟಣ ಪೊಲೀಸರು ಮತ್ತಿಬ್ಬರನ್ನು ವಶಕ್ಕೆ ಪಡೆದಿದ್ದಾರೆ. ಕೃತ್ಯದಲ್ಲಿ ನೇರವಾಗಿ ಭಾಗಿಯಾಗಿರುವ ಮತ್ತೊಬ್ಬನ ಬಂಧನಕ್ಕೆ ಹುಡುಕಾಟ ಮುಂದುವರಿದಿದೆ.

ಪೊಲೀಸರು ಬಂಧಿಸುವ ಮೊದಲೇ ಹಾವು ಕಡಿದು ಚಿಕಿತ್ಸೆ ಪಡೆಯುತ್ತಿದ್ದ ಮುರುಗೇಶ್‌ಗೆ (42) ಚನ್ನಪಟ್ಟಣದಲ್ಲಿ ಚಿಕಿತ್ಸೆ ಕೊಡಿಸಿದ ಪೊಲೀಸರು, ಶನಿವಾರ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಆತನ ಆರೋಗ್ಯದಲ್ಲಿ ಏರುಪೇರಾಗಿ ರುವುದರಿಂದ ರಾಮನಗರ ಕಾರಾಗೃಹ ದಿಂದ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ.

ಮುರುಗೇಶ್‌ ಪತ್ನಿ ಮತ್ತು ಆತನ ಮಲ ಸಹೋದರನನ್ನು ಸಹ ವಶಕ್ಕೆ ಪಡೆಯಲಾಗಿದೆ. ಆರೋಪಿ ಸೇರಿದಂತೆ ಇವರಿಬ್ಬರೂ ಧರ್ಮಪುರಿ ಜಿಲ್ಲಾ ಕೇಂದ್ರದಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ ಪೆನ್ನಾಗ್ರಂ ಗ್ರಾಮದವರಾಗಿದ್ದಾರೆ.

ಈ ಪೈಕಿ, ಆತನ ಮಲ ಸಹೋದರ ಕೂಡ ಮುರುಗೇಶ್‌ ಜೊತೆ ಕೃತ್ಯದಲ್ಲಿ ಭಾಗಿಯಾಗಿರುವುದು ವಿಚಾರಣೆಯಲ್ಲಿ ಗುತ್ತಾಗಿದೆ. ಕೊಲೆಗೆ ಆತನ ಪತ್ನಿಯೂ ಸಹಕರಿಸಿರುವ ಶಂಕೆ ಇರುವುದರಿಂದ ಆಕೆಯನ್ನೂ ಸಹ ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸ್‌ ಮೂಲಗಳು ತಿಳಿಸಿವೆ.



ಮಹದೇವಯ್ಯ

ಡಿ. 1ರಂದು ರಾತ್ರಿ 11 ಗಂಟೆ ಸುಮಾರಿಗೆ ವಡ್ಡರದೊಡ್ಡಿಯ ತೋಟದ ಮನೆಗೆ ಬಂದಿದ್ದ ಆರೋಪಿಗಳು ಮತ್ತು ಮಹದೇವಯ್ಯ ಅವರ ನಡುವೆ ಮಾತಿನ ಚಕಮಕಿ ನಡೆದು, ಹಲ್ಲೆ ಮಟ್ಟಕ್ಕೆ ಹೋಗಿದೆ. ಮಹದೇವಯ್ಯ ಸಹ ಮುರುಗೇಶ್‌ ಮೇಲೆ ಹಲ್ಲೆ ನಡೆಸಿದ್ದಾರೆ. ಆಗ, ಉಳಿದವರು ರಾಡ್‌ನಿಂದ ಮಹದೇವಯ್ಯ ತಲೆಗೆ ಹೊಡೆದು ಕೊಲೆ ಮಾಡಿದ್ದಾರೆ. ನಂತರ ಶವವನ್ನು ಹನೂರು ತಾಲ್ಲೂಕಿನ ರಾಮಾಪುರ ಬಳಿ ಎಸೆದು ಹೋಗಿದ್ದರು ಎಂದು ಪೊಲೀಸ್‌ ಮೂಲಗಳು ತಿಳಿಸಿವೆ.

ಶವ ಮತ್ತು ಕಾರು ಯಾರಿಗೂ ಸಿಗದಿದ್ದರೆ ತಮ್ಮ ಸುಳಿವು ಸಿಗುವುದಿಲ್ಲ ಎಂದು ಭಾವಿಸಿದ್ದ ಆರೋಪಿಗಳು, ಕಾರಿನಲ್ಲೇ ತಮ್ಮೂರಿಗೆ ಹೋಗಲು ನಿರ್ಧರಿಸಿದ್ದರು. ಆದರೆ, ಶವ ಸಾಗಿಸುವಾಗ ಮಾರ್ಗಮಧ್ಯೆ ಕಾರು ಒಂದೆರಡು ಸಲ ತೊಂದರೆ ಕೊಟ್ಟಿದೆ. ಜೊತೆಗೆ, ಇಂಧನ ಕೂಡ ತಗ್ಗಿದ್ದರಿಂದ ರಾಮಾಪುರ ಬಳಿ ಕಾರು ನಿಲ್ಲಿಸಿ ಬಸ್‌ ಹತ್ತಿಕೊಂಡು ತಮ್ಮೂರಿಗೆ ಹೋಗಿದ್ದರು.

ಆಸ್ಪತ್ರೆಯಿಂದ ತಪ್ಪಿಸಿಕೊಳ್ಳಲು ಯತ್ನ: ಬೆನ್ನಟ್ಟಿ ಬಂಧಿಸಿದ ಪೊಲೀಸರು

ವಿವಿಧೆಡೆ ಸಿಕ್ಕ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದಾಗ ಮುರುಗೇಶ್‌ ಕೃತ್ಯದಲ್ಲಿ ಭಾಗಿಯಾಗಿರುವುದು ಖಚಿತವಾಯಿತು. ತಮಿಳುನಾಡಿನ ಧರ್ಮಪುರಿಯಲ್ಲಿರುವ ಅವರ ವಿಳಾಸ ಪತ್ತೆ ಹಚ್ಚಿದ ತಂಡ, ಆತನ ಬಂಧಿಸಲು ಊರಿಗೆ ತೆರಳಿತ್ತು. ಆತನ ಮನೆ ಬಾಗಿಲು ಹಾಕಿತ್ತು. ಹಾವು ಕಚ್ಚಿದ್ದರಿಂದ ಆತ ಧರ್ಮಪುರಿಯ ಆಸ್ಪತ್ರೆಗೆ ದಾಖಲಾಗಿದ್ದ. ಅಕ್ಕಪಕ್ಕದವರನ್ನು ವಿಚಾರಿಸಿದಾಗ ಆಸ್ಪತ್ರೆಯಲ್ಲಿರುವ ವಿಷಯ ತಿಳಿಸಿದರು.

ಅಲ್ಲಿಂದ ತಂಡ ಆಸ್ಪತ್ರೆಗೆ ಹೋಗಿತು. ಅಷ್ಟೊತ್ತಿಗಾಗಲೇ ಗ್ರಾಮದವರು ಮುರುಗೇಶ್‌ಗೆ, 'ಕರ್ನಾಟಕದಿಂದ ಯಾರೋ ನಿನ್ನನ್ನು ಹುಡುಕಿಕೊಂಡು ಬಂದಿದ್ದರು' ಎಂದು ವಿಷಯ ತಿಳಿಸಿದ್ದರು.

'ತನ್ನನ್ನು ಹಿಡಿಯಲು ಪೊಲೀಸರೇ ಬಂದಿದ್ದಾರೆ ಎಂದು ಅನುಮಾನಗೊಂಡ ಆತ, ತನಗೆ ಹಾಕಿದ್ದ ಡ್ರಿಪ್‌ ಕಿತ್ತು ಹಾಕಿ ಆಸ್ಪತ್ರೆಯವರಿಗೂ ಹೇಳದೆ ಅಲ್ಲಿಂದ ವಾಹನದಲ್ಲಿ ಪರಾರಿಯಾಗುತ್ತಿದ್ದ. ಅಷ್ಟೊತ್ತಿಗಾಗಲೇ ನಮ್ಮ ತಂಡ ಆಸ್ಪತ್ರೆಗೆ ಹೋಗಿತ್ತು. ವಾಹನ ಬೆನ್ನಟ್ಟಿ ಹಿಡಿಯಲಾಯಿತು' ಎಂದು ಪೊಲೀಸ್‌ ಮೂಲಗಳು ತಿಳಿಸಿವೆ.

ನಿಖರ ಕಾರಣ ಇನ್ನೂ ಅಸ್ಪಷ್ಟ

'ಮಹದೇವಯ್ಯ ಅವರು ನಮಗೆ ಮೋಸ ಮಾಡಿದರು. ಹಾಗಾಗಿ, ಕೊಲೆ ಮಾಡಿದೆವು' ಎಂದಷ್ಟೇ ಮುರುಗೇಶ್‌ ಬಾಯ್ಬಿಟ್ಟಿದ್ದಾನೆ.

ಆದರೆ, ಕೊಲೆಗೆ ಅದೊಂದೇ ಅಂಶ ಕಾರಣವಲ್ಲ ಎಂಬುದು ಸ್ಪಷ್ಟ. ಈ ನಡುವೆ ಮಹಿಳೆಯೊಬ್ಬರ ಪಾತ್ರವೂ ಕೃತ್ಯದಲ್ಲಿ ಇದೆ ಎಂಬ ಅನುಮಾನ ವ್ಯಕ್ತವಾಗಿದೆ.

ಹಾಗಾಗಿ, ಎಲ್ಲಾ ಆಯಾಮದಿಂದಲೂ ತನಿಖೆ ನಡೆಯಬೇಕಿದೆ. ಆರೋಪಿ ಆಸ್ಪತ್ರೆಯಲ್ಲಿರುವುದರಿಂದ ಆತನನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಬೇಕಿದೆ. ಜೊತೆಗೆ, ಮತ್ತೊಬ್ಬನ ಬಂಧನವಾಗಬೇಕಿದೆ ಎಂದು ಮೂಲಗಳು ಹೇಳಿವೆ.

'ರೈತರ ಮಕ್ಕಳಿಗೆ ಹೆಣ್ಣು ಕೊಡಿಸಿ'

ಶಿರಾ: ತಾಲ್ಲೂಕು ಕಚೇರಿಯಲ್ಲಿ ಶನಿವಾರ ನಡೆದ ಜನತಾ ದರ್ಶನದಲ್ಲಿ ರೈತರ ಮಕ್ಕಳಿಗೆ ಹೆಣ್ಣು ಕೊಡಿಸುವಂತೆ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್‌ ಅವರಿಗೆ ರೈತ ಜಯರಾಮಪ್ಪ ಮನವಿ ಸಲ್ಲಿಸಿದರು.

ಚಿಕ್ಕನಕೋಟೆ ಗ್ರಾಮದ ರೈತ ಜಯರಾಮಪ್ಪ ಅವರು, 'ರೈತರ ಮಕ್ಕಳಿಗೆ ಯಾರೂ ಹೆಣ್ಣು ಕೊಡುತ್ತಿಲ್ಲ. 10 ವರ್ಷದಿಂದ ಹುಡುಕಿದರೂ ನನ್ನ ಮಗನಿಗೆ ಹೆಣ್ಣು ಸಿಕ್ಕಿಲ್ಲ ಎಂದರು.

ಬೃಹತ್‌ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ–ಕೇಂದ್ರೀಯ–10 ವಿಭಾಗ, ಬಿಬಿಎಂಪಿ, ಎನ್‌.ಆರ್‌. ಚೌಕ, ಬೆಂಗಳೂರು–560002.

ಸಂ: ಕಾಪಾಅ/ಯೋ–ಕೇಂ–10/ಟೆಂಡ್‌/01/2023–24 ದಿನಾಂಕ:16.12.2023

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್‌ ಪೋರ್ಟಲ್‌ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರೀಯ–10 ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಇಎಂಡಿ (ರೂಗಳಲ್ಲಿ)
1	ಬೆಂಗಳೂರು ನಗರದ ಗೋವಿಂದರಾಜನಗರ ಮತ್ತು ವಿಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿ ವೈಟ್‌ ಟಾಪಿಂಗ್‌ ಒದಗಿಸುವ ಮೂಲಕ ರಸ್ತೆಗಳ ಸಮಗ್ರ ಅಭಿವೃದ್ಧಿಗಾಗಿ ವಿವರವಾದ ಯೋಜನಾ ವರದಿ (ಡಿಪಿಆರ್‌) ತಯಾರಿಕೆಯಲ್ಲಿ ಸಲಹಾ ಸೇವೆಗಳನ್ನು ಒದಗಿಸುವುದು (ಪ್ಯಾಕೇಜ್‌–3).	21,500/- (ಕೆಪಿಪಿ ಪೋರ್ಟಲ್‌ ಮೂಲಕ ಪಾವತಿಸಬೇಕು)

1) REP ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ: **18.12.20203ರಿಂದ** 2) ಟೆಂಡರ್‌ ಬಗೆಗಿನ ಸ್ವೀಕರಿಸಲು ಕೊನೆಯ ದಿನಾಂಕ : **20.12.2023ರ ಸಂಜೆ 5.30 ಗಂಟೆಯವರೆಗೆ.** 3) ಪೂರ್ವಭಾವಿ ಸಭೆ ದಿನಾಂಕ : **21.12.2023 ರ ಸಂಜೆ 3.00 ಗಂಟೆಗೆ.** 4) ಪ್ರಸ್ತಾವನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **26.12.2023 ರ ಸಂಜೆ 5.30 ಗಂಟೆಯವರೆಗೆ.** 5) ತಾಂತ್ರಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ: **28.12.2023 ರ ಬೆಳಿಗ್ಗೆ 11.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್‌ : www.kppp.karnataka.gov.in ನಲ್ಲಿ ಲಾಗಿನ್‌ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ–ಕೇಂದ್ರೀಯ–10 ವಿಭಾಗ.

ಚಾರ್ಟರ್ಡ್‌ ಸಹಕಾರಿ ಬ್ಯಾಂಕ್‌ ನಿಯಮಿತ

ನಂ.1, 1ನೇ ಮುಖ್ಯರಸ್ತೆ, 1ನೇ ಬ್ಲಾಕ್‌, ಕೋರಮಂಗಲ, ಬೆಂಗಳೂರು–560034
ದೂರವಾಣಿ: 080–25526266 / 25526288 / 25526299

ಸ್ವಾಧೀನ ಪ್ರಕಟಣೆ (ಸ್ಥಿರ ಆಸ್ತಿಗಳಿಗೆ)

ಹಣಕಾಸು ಸ್ವತ್ತುಗಳ ಪ್ರಭೂತೀಕರಣ ಮತ್ತು ಸ್ವಾಧೀನಕರಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ 2002 (Securitisation Act 2002) ರ ಅಡಿಯಲ್ಲಿ ಪ್ರಕರಣ 13 (2) ರ ನಿಯಮದಲ್ಲಿನ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ರ ಅನುಸಾರ ನೀಡಲಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ಸಹಿ ಮಾಡಿರುವ **ಚಾರ್ಟರ್ಡ್‌ ಸಹಕಾರಿ ಬ್ಯಾಂಕ್‌ ನಿಯಮಿತ,** ನಂ.1, 1ನೇ ಮುಖ್ಯರಸ್ತೆ, 1ನೇ ಬ್ಲಾಕ್‌, ಕೋರಮಂಗಲ, ಬೆಂಗಳೂರು–560 034, ಇದರ ಅಧಿಕೃತ ಅಧಿಕಾರಿಯಾದ ನಾನು ದಿನಾಂಕ: **10–10–2023** ರಂದು ತಗಾದೆ ನೋಟೀಸನ್ನು ಸಾಲಗಾರರಾದ **ಶ್ರೀ ವೈ.ಪಿ. ಅರುಣ್‌ ಕುಮಾರ್‌** ಬಿನ್‌ ಶ್ರೀ ಲೇಟ್‌ ಯಲ್ಲಪ್ಪ ರೆಡ್ಡಿ ಮತ್ತು **ಶ್ರೀಮತಿ ಮಹೇಶ್ವರಿ ಜಿ** ಕೋಂ. ಶ್ರೀ ವೈ.ಪಿ. ಅರುಣ್‌ ಕುಮಾರ್‌, ವಾಸ ಸ್ಥಳ : ನಂ. 417, 21ನೇ ಕ್ರಾಸ್‌, 24ನೇ ಮುಖ್ಯ ರಸ್ತೆ, ಸೆಕ್ಟರ್‌ 2. ಹೆಚ್‌ ಎಸ್‌ ಆರ್‌ ಲೇಔಟ್‌, ಬೆಂಗಳೂರು–560102 ಇವರಿಗೆ ನೀಡಿ, ಅದರಲ್ಲಿ ತಿಳಿಸಲಾದ ಮೊತ್ತ **ರೂ. 2,27,60,795/–ಗಳನ್ನು** (ರೂಪಾಯಿಗಳು ಎರಡು ಕೋಟಿ ಇಪ್ಪತ್ತೇಳು ಲಕ್ಷ ಅರವತ್ತು ಸಾವಿರದ ಏಳು ನೂರ ತೊಂಬತ್ತ ಐದು ಮಾತ್ರ) ನೋಟೀಸು ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಹೇಳಿರುತ್ತೇವೆ.

ಈ ಮೊಬಲಗನ್ನು ಮರು ಪಾವತಿ ಮಾಡಲು ಸಾಲಗಾರರು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅಧಿನಿಯಮ ಪ್ರಕರಣ 13(4) ನಿಯಮ 9ರ ಅನುಸಾರ ನೀಡಲಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ವಿವರಿಸಲಾಗಿರುವ ಸಾಲಕ್ಕೆ ಅಡಮಾನ ಮಾಡಿರುವ ಶ್ರೀ ವೈ.ಪಿ. ಅರುಣ್‌ ಕುಮಾರ್‌ರವರ ಹೆಸರಿನಲ್ಲಿರುವ ಆಸ್ತಿಯನ್ನು ದಿನಾಂಕ **13–12–2023** ರಂದು ಸ್ವಾಧೀನ ಪಡಿಸಿಕೊಂಡಿರುತ್ತೇವೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಎಚ್ಚರಿಕೆ ನೀಡಿ ತಿಳಿಸುವುದೇನೆಂದರೆ ಈ ಸ್ವತ್ತಿನ ಮೇಲೆ ಯಾವುದೇ ವ್ಯವಹಾರಗಳನ್ನು ಮಾಡುವಂತಿಲ್ಲ ಮತ್ತು ಯಾವುದೇ ವ್ಯವಹಾರಗಳು **ಚಾರ್ಟರ್ಡ್‌ ಸಹಕಾರಿ ಬ್ಯಾಂಕ್‌ ನಿಯಮಿತ** ಇವರಿಗೆ ದಿನಾಂಕ **13–12–2023** ರಂದು ಕೊಡಬೇಕಾದ ಮೊತ್ತ **ರೂ.2,28,80,751.00** + ನಂತರದ ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಸ್ಥಿರಾಸ್ತಿಯ ಸ್ವತ್ತಿನ ವಿವರ :

ಬೆಂಗಳೂರು ನಗರದಲ್ಲಿರುವ ಹೆಚ್‌ಎಸ್‌ಆರ್‌ ಬಡಾವಣೆಯ ಸೆಕ್ಟರ್‌ ಎರಡರಲ್ಲಿರುವ ನಿವೇಶನ ಸಂಖ್ಯೆ 417 ಆಗಿದ್ದು, ಇದರ ಬಿಬಿಎಂಪಿ ಖಾತಾ ಸಂಖ್ಯೆ 2719/417 ಆಗಿರುತ್ತದೆ. ಈ ಸ್ವತ್ತಿನ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 12.19 ಮೀಟರುಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 18.29 ಮೀಟರುಗಳಾಗಿದ್ದು ಒಟ್ಟಾರೆ ಅಳತೆ 222.95 ಚದುರ ಮೀಟರುಗಳಾಗಿದ್ದು, ಈ ಸ್ವತ್ತಿನ ಮೇಲೆ ಕಟ್ಟಿರುವ ಕಟ್ಟಡವನ್ನೊಳಗೊಂಡಿರುತ್ತದೆ. ಈ ಸ್ವತ್ತಿನ ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ಸಂಖ್ಯೆ 418, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 416, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 405.

ದಿನಾಂಕ: 13.12.2023
ಸ್ಥಳ : ಬೆಂಗಳೂರು

ಸಹಿ/–
ಅಧಿಕಾರ ಹೊಂದಿದ ಅಧಿಕಾರಿ
ಚಾರ್ಟರ್ಡ್‌ ಸಹಕಾರಿ ಬ್ಯಾಂಕ್‌ ನಿಯಮಿತ
ಕೋರಮಂಗಲ, ಬೆಂಗಳೂರು–34

ನೈರುತ್ಯ ರೈಲ್ವೆ

ಟೆಂಡರ್‌ ಸೂಚನೆ ಸಂ. 17/SBC/23 ದಿನಾಂಕ: 06.12.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಬೆಂಗಳೂರು – ಜೋಲಾರ್‌ಪೇಟ್ಟೈ ವಿಭಾಗ– ತ್ಯಾಕಲ್‌ ನಿಲ್ದಾಣದಲ್ಲಿ (4 ಟ್ರ್ಯಾಕ್‌ ಕ್ರಾಸಿಂಗ್‌) ಫುಟ್‌ ಓವರ್‌ ಬ್ರಿಡ್ಜ್‌ (ಎಫ್‌ಒಬಿ) ನಿರ್ಮಾಣ. ನಿರ್ವಹಣೆ ಅವಧಿ 6 ತಿಂಗಳುಗಳು	ರೂ. 3,42,87,512/-
2	ಬೆಂಗಳೂರು–ಜೋಲಾರ್‌ ಪೇಟ್ಟೈ ವಿಭಾಗ: **ಉಪ ಕಾಮಗಾರಿ–1:** ಕೃಷ್ಣರಾಜಪುರಂ – ವೈಟ್‌ಫೀಲ್ಡ್‌ ಪ್ಯಾನಲ್‌ ಕ್ಯಾಬಿನ್‌ ನಿಲ್ದಾಣಗಳ ನಡುವೆ ಕಿಮೀ 336/300–341/500 ನಲ್ಲಿ 5.2ಕಿಮೀ ಉದ್ದಕ್ಕೆ ಅಸ್ತಿತ್ವದಲ್ಲಿರುವ PSC ಯ ಸ್ಲೀಪರ್‌ ಸಾಂದ್ರತೆಯನ್ನು 1540 ಸ್ಲೀಪರ್‌/ಕಿಮೀ ನಿಂದ 1660 ಸ್ಲೀಪರ್‌/ಕಿಮೀ ಅಪ್‌ಲೈನ್‌ಗೆ ಹೆಚ್ಚಿಸುವುದು. **ಉಪ ಕಾಮಗಾರಿ–II:** ಹಿರಿಯ ವಿಭಾಗೀಯ ಇಂಜಿನಿಯರ್‌/ ಇ/ಬೆಂಗಳೂರು ವಿಭಾಗದಲ್ಲಿ ಕಿಮೀ 231/300–236/600 ನಲ್ಲಿ 5.3 ಕಿಮೀ ಉದ್ದಕ್ಕೆ ಅಪ್‌ಲೈನ್‌ನಲ್ಲಿ ಅಸ್ತಿತ್ವದಲ್ಲಿರುವ PSC ಯ ಸ್ಲೀಪರ್‌ ಸಾಂದ್ರತೆಯನ್ನು 1540 ಸ್ಲೀಪರ್‌/ಕಿಮೀ ನಿಂದ 1660 ಸ್ಲೀಪರ್‌/ಕಿಮೀಗೆ ಹೆಚ್ಚಿಸುವುದು.	ರೂ. 73,61,753/-
3	ಬೆಂಗಳೂರು–ಜೋಲಾರ್‌ ಪೇಟ್ಟೈ ವಿಭಾಗ: ಹಿರಿಯ ವಿಭಾಗೀಯ ಇಂಜಿನಿಯರ್‌/ಇ/ ಬೆಂಗಳೂರು ವಿಭಾಗದಲ್ಲಿ ಬಂಗಾರಪೇಟೆ – ಕೋಲಾರ ವಿಭಾಗದಲ್ಲಿ 132/200–148/500 SL ನಿಂದ ಒಟ್ಟು 16.3 ಕಿಮೀ ಉದ್ದಕ್ಕೆ ಥ್ರೂ ಬಲ್ಲಾಸ್ಟ್‌ ರಿಕೂಪ್‌ ಮೆಂಟ್‌ ಕೆಲಸಕ್ಕೆ ಸಂಬಂಧಿಸಿದಂತೆ ತ್ಯಾಕಲ್‌ ಡಿಪೋದಲ್ಲಿ (32600 ಘನ ಮೀಟರ್‌) ಯಂತ್ರ ಪುಡಿಮಾಡಿದ ನಿಲುಭಾರದ ಪೂರೈಕೆ ಮತ್ತು ಲೋಡಿಂಗ್‌.	ರೂ. 2,85,30,151/-
4	ಬೆಂಗಳೂರು–ಜೋಲಾರ್‌ ಪೇಟ್ಟೈ ವಿಭಾಗ: **ಉಪ ಕಾಮಗಾರಿ I:** ಯಲಹಂಕ– ಬಂಗಾರಪೇಟೆ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್‌/ಬಂಗಾರಪೇಟೆ ಉಪ ವಿಭಾಗದಲ್ಲಿ LH ಬದಿಯಲ್ಲಿ (1000m) km 103/800–104/800 ರಿಂದ ಶ್ರೀನಿವಾಸಪುರ ನಿಲ್ದಾಣದಲ್ಲಿ ಗಡಿ ಗೋಡೆಯ ಪ್ರಸ್ತಾವಿತ ನಿರ್ಮಾಣ. **ಉಪ ಕಾರ್ಯ–II:** ವೈಟ್‌ಫೀಲ್ಡ್‌ – ವೈಟ್‌ಫೀಲ್ಡ್‌ನಲ್ಲಿ 1.00 ಲಕ್ಷ ಲೀಟರ್‌ ಸಾಮರ್ಥ್ಯದ ಓವರ್‌ಹೆಡ್‌ ಟ್ಯಾಂಕ್‌ (OHT) ಒದಗಿಸುವಿಕೆ. **ಉಪ ಕಾರ್ಯ–III:** ಸೋಮನಾಯಕನಪಟ್ಟಿಯಲ್ಲಿ ಅಪ್ರೋಚ್‌ ರಸ್ತೆಗೆ ಪ್ರಸ್ತಾಪಿತ ಸುಧಾರಣೆ ಮತ್ತು ಕುಪ್ಪಂ ನಿಲ್ದಾಣದಲ್ಲಿ ಎರಡನೇ ದರ್ಜೆಯ ನಿರೀಕ್ಷಣಾ ಹಾಲ್‌ನ ಸುಧಾರಣೆಗಳು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 1,70,39,052/-
5	ಬೆಂಗಳೂರು–ಮೈಸೂರು ವಿಭಾಗ: **ಉಪ ಕಾಮಗಾರಿ–I:** ಕಿಮೀ 1/300–12/200 ಡೌನ್‌ ಲೈನ್‌ನಿಂದ 10.7ಕಿಮೀ ಉದ್ದಕ್ಕೆ ಥ್ರೂ ಫಿಟ್ಟಿಂಗ್‌ ರಿನಿವಲ್‌ **ಉಪ ಕಾಮಗಾರಿ–II:** ಸಹಾಯಕ ವಿಭಾಗೀಯ ಇಂಜಿನಿಯರ್‌/ಮಂಡ್ಯ ವಿಭಾಗದಲ್ಲಿ OSC ಯೊಂದಿಗೆ ಸುಧಾರಿತ SEJ- 52kg ಇಂದ ಹಳೆಯ SEJ ಅನ್ನು ಬದಲಿಸುವುದು – 16 ಸಂಖ್ಯೆಗಳು. **ಉಪ ಕಾಮಗಾರಿ–III:** ಸಹಾಯಕ ವಿಭಾಗೀಯ ಇಂಜಿನಿಯರ್‌/ಮಂಡ್ಯ ವಿಭಾಗದಲ್ಲಿ OSC ಯೊಂದಿಗೆ ಸುಧಾರಿತ SEJ- 60kg (T-6902) ಇಂದ ಹಳೆಯ SEJ ಅನ್ನು ಬದಲಿಸುವುದು – 22 ಸಂಖ್ಯೆಗಳು.	ರೂ. 50,30,423/-
6	**ಉಪ ಕಾಮಗಾರಿ I:** ಆಟೋ ಗೂಮ್ಟಿಗಳ ನಿರ್ಮಾಣ (3 ಸಂ.) ಬೆಂಗಳೂರು– ಯಶವಂತಪುರ–ಯಲಹಂಕ ಮಾರ್ಗ. **ಉಪ ಕಾಮಗಾರಿ II:** ಯಲಹಂಕದಲ್ಲಿ ದುಡ್ಡು ಕೊಟ್ಟು ಬಳಕೆ ಮಾಡುವ ಶೌಚಾಲಯವನ್ನು ಒದಗಿಸುವುದು (PF ಸಂಖ್ಯೆ 4/5). **ಉಪ ಕಾಮಗಾರಿ III:** ಬೆಂಗಳೂರು– ಸಂಪಿಗೆ ರೋಡ್‌ ವಿಭಾಗ: ಚಿಕ್ಕಬಾಣಾವರ ನಿಲ್ದಾಣದಲ್ಲಿ ದುಡ್ಡು ಕೊಟ್ಟು ಬಳಕೆ ಮಾಡುವ ಶೌಚಾಲಯದ ವ್ಯವಸ್ಥೆ. **ಉಪ ಕಾಮಗಾರಿ IV:** ಯಶವಂತಪುರ – RPF ಬ್ಯಾರಕ್‌ಗೆ ಹೆಚ್ಚುವರಿ ವಸತಿ 25 ಹಾಸಿಗೆಗಳು ಮತ್ತು ಊಟದ/ಅಡುಗೆಮನೆಯ ನಿರ್ಮಾಣ. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 2,53,19,949/-
7	ಬೆಂಗಳೂರು – ಅರಸೀಕೆರೆ ವಿಭಾಗ : ಯಶವಂತಪುರ ಯಾರ್ಡ್‌ನಲ್ಲಿರುವ ಪಿಎಫ್‌ ನಂ. 1, 2, 3, 4, 5, 6ರಲ್ಲಿ ಸಿಸಿ ಅಪ್ರಾನ್‌ಗೆ ದುರಸ್ತಿ. ನಿರ್ವಹಣೆ ಅವಧಿ 12 ತಿಂಗಳುಗಳು	ರೂ. 2,43,97,263/-
8	ಬೆಂಗಳೂರು ವಿಭಾಗ: ಹಿರಿಯ ಸೆಕ್ಷನ್‌ ಇಂಜಿನಿಯರ್‌/ಪಿ.ವೇ/ಚನ್ನರಾಯಪಟ್ಟಣ ವಿಭಾಗದಲ್ಲಿ 2 ವರ್ಷಗಳ ಕಾಲ ಪಿ.ವೇ ನಿರ್ವಹಣೆ ಗುತ್ತಿಗೆ.	ರೂ. 7,82,30,642/-
9	ಸಹಾಯಕ ವಿಭಾಗೀಯ ಇಂಜಿನಿಯರ್‌/ಯಶವಂತಪುರ ವಿಭಾಗ: ಅತಿಕ್ರಮಣ ತಡೆಯಲು ಗಡಿ ಗೋಡೆ ನಿರ್ಮಾಣದ ಬಾಕಿ ಕಾಮಗಾರಿ. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 6,56,33,126/-
10	**ಉಪ ಕಾಮಗಾರಿ I:** ಬೆಂಗಳೂರು – ಧರ್ಮಾವರಂ ವಿಭಾಗ: ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳ ಥ್ರೂ ಬಲ್ಲಾಸ್ಟ್‌ ರಿಕೂಪ್‌ ಮೆಂಟ್‌ – ಒಡ್ಡರಹಳ್ಳಿ ಅಂಗಳದಲ್ಲಿ 4 ಅಂಕಗಳು ಮತ್ತು ಮಕಳಿದುರ್ಗ ಅಂಗಳದಲ್ಲಿ 5 ಅಂಕಗಳು (ಒಟ್ಟು 9 ಸಂಖ್ಯೆಗಳು). **ಉಪ ಕಾಮಗಾರಿ II:** ಬೆಂಗಳೂರು – ಧರ್ಮಾವರಂ ವಿಭಾಗ : ಹಿರಿಯ ಸೆಕ್ಷನ್‌ ಇಂಜಿನಿಯರ್‌/ಪಿ.ವೇ/ಯಲಹಂಕ ವಿಭಾಗದ (ಚನ್ನಸಂದ್ರ – ರಸ್ತೆ 1, 3, 4 ಮತ್ತು ಯಲಹಂಕ ರಸ್ತೆ – 1, 2) ಲೂಪ್‌ ಲೈನ್‌ಗಳಲ್ಲಿ 4.2 ಕಿಮೀ ಉದ್ದಕ್ಕೆ SWP ಯನ್ನು LWR ಆಗಿ ಪರಿವರ್ತಿಸುವುದು. **ಉಪ ಕಾಮಗಾರಿ III:** ಬೆಂಗಳೂರು – ಧರ್ಮಾವರಂ ವಿಭಾಗ: ಯಲಹಂಕ ಯಾರ್ಡ್‌ ನಲ್ಲಿ (100A, 101A, 102B, 103A, 104A, 105A, 105B, 106B) ಅಸ್ತಿತ್ವದಲ್ಲಿರುವ 1 ಇನ್‌ 12 ಕರ್ವಡ್‌ ಸ್ವಿಚ್‌ ಮತ್ತು CMS ಕ್ರಾಸಿಂಗ್‌ ಗಳ ಥ್ರೂ ಟರ್ನ್‌ ಔಟ್‌ ರಿನಿವಲ್‌ – 08 ಸಂಖ್ಯೆಗಳು. **ಉಪ ಕಾಮಗಾರಿ IV:** ಬೆಂಗಳೂರು – ಸತ್ಯ ಸಾಯಿ ಪ್ರಶಾಂತಿ ನಿಲಯಂ – ಧರ್ಮಾವರಂ ವಿಭಾಗ: ಹಿರಿಯ ವಿಭಾಗದ ಇಂಜಿನಿಯರ್‌/ಪಿ.ವೇ/ಸತ್ಯ ಸಾಯಿ ಪ್ರಶಾಂತಿ ನಿಲಯಂ ವಿಭಾಗದಲ್ಲಿ 8 ಸೇತುವೆಗಳಲ್ಲಿ (PD14, PD21, PD24, PD84, PD86, PD127, PD129, PD139) 0.474 ಕಿಮೀ ಉದ್ದಕ್ಕೆ ಥ್ರೂ ಟರ್ನ್‌ ಔಟ್‌ ರಿನಿವಲ್‌ (ಪ್ರಾಥಮಿಕ). **ಉಪ ಕಾಮಗಾರಿ V:** ಬೆಂಗಳೂರು – ಧರ್ಮಾವರಂ ವಿಭಾಗ: ಯಲಹಂಕ– ಪೆನುಕೊಂಡ ಡಬ್ಲಿಂಗ್‌ ಯೋಜನೆಗೆ ಸಂಬಂಧಿಸಿದಂತೆ ದೇವರಪಲ್ಲಿ – ಹಿಂದೂಪುರ ವಿಭಾಗದಲ್ಲಿ ಬಾಕಿ ಕಾಮಗಾರಿಗಳ ಕಾಮಗಾರಿಗೆ ಸಂಬಂಧಿಸಿದಂತೆ ಭೂ ಕೆಲಸ.	Rs. 91,60,172/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29–12–2023, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್‌ ಆನ್‌ ಆಗಿ

ಹಿರಿಯ ವಿಭಾಗೀಯ ಇಂಜನೀಯರ್‌ / ಕೋ–ಆರ್ಡ್‌
ಬೆಂಗಳೂರು

PUB/567/AAV/PRB/SWR/2023-24

South Western Railway-SWR southwesternrailway_swr SWRRLY southwesternrailway SWRRLY

ಬಿಡಿಎ ಕನಸಿನ ನಿವೇಶನ ನಿಮ್ಮದಾಗಿಸಿಕೊಳ್ಳಲು ಸದಾವಕಾಶ

ಬಿಡ್‌ ಮಾಡಿ!!

ಇ-ಹರಾಜು ಪ್ರಕಟಣೆ

ಪ್ರತಿ ಚ.ಮೀ.ಗೆ ರೂ. 500/- ಗಳ ಗುಣಕಗಳಲ್ಲಿ ಬಿಡ್‌ ದರದ ಕನಿಷ್ಠ ಏರಿಕೆ

ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್‌ ಆರಂಭಿಸುವ ದಿನಾಂಕ ಮತ್ತು ಸಮಯ: 19.12.2023

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ಮೂಲೆ / ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು.

ಕ್ರ.ಸಂ. 01 ರಿಂದ 66 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 01.01.2024, ಸಂಜೆ 5.00 ಗಂಟೆಗೆ

ಇ–ಹರಾಜಿನ ನೇರ ಬಿಡ್ಡಿಂಗ್‌ ಆರಂಭಿಸುವ ದಿನಾಂಕ: 02.01.2024ರ ಬೆಳಿಗ್ಗೆ 11.00 ಗಂಟೆಯಿಂದ.
ನೇರ ಬಿಡ್ಡಿಂಗ್‌ ಅಂತಿಮಗೊಳ್ಳುವ ದಿನಾಂಕ: 03.01.2024ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾಟೈಮ್‌ 5.00 ನಿಮಿಷ)

ಕ್ರ. ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ–ಪಶ್ಚಿಮ	ಅಳತೆ (ಮೀ.ಗಳಲ್ಲಿ) ಉತ್ತರ–ದಕ್ಷಿಣ	ವಿಸ್ತೀರ್ಣ ಚ.ಮೀ.ಗಳಲ್ಲಿ
ಆರ್‌.ಎಂ.ವಿ. 2ನೇ ಹಂತ, ಭೂಪಸಂದ್ರ ಗ್ರಾಮ				
1	7	29.40	(17.60+19.60)/2	546.84
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 1,51,200/- ಸಂಪರ್ಕಿಸಿ: 9448739250				
ಚಂದ್ರಾ ಲೇಔಟ್‌				
2	97	16.15	14.02	226.42
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 1,35,000/- ಸಂಪರ್ಕಿಸಿ: 9535575790				
ಅಂಜನಾಪುರ ಟೌನ್‌ಶಿಪ್‌ 5ನೇ ಬ್ಲಾಕ್‌				
3	175	9	(4.00+4.80)/2	39.6
4	400/A	12.00	(17.20+13.10)/2	181.80
5	381/A	12.00	(9.00+13.10)/2	132.60
6	365	12.00	(13.00+17.70)/2	184.20
7	332	(14.50+10.20)/2	12.00	148.20
8	6	(12.30+13.70)/2	23.50	305.50
9	85	(13.00+4.80)/2	11.45	101.90
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 58,350/- ಸಂಪರ್ಕಿಸಿ: 9945208154/8884747093				
ಬಿಟಿಎಂ 2ನೇ ಹಂತ, ಬಿಳೇಕಾನಹಳ್ಳಿ ಗ್ರಾಮ				
10	132	(15.25+14.50)/2	27.20	404.60
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 1,50,500/- ಸಂಪರ್ಕಿಸಿ: 9945208154/8884747093				
ಅಂಜನಾಪುರ ಟೌನ್‌ಶಿಪ್‌ 1ನೇ ಬ್ಲಾಕ್‌				
11	593	(9.00+3.70)/2	12.00	76.20
12	647	(8.80+9.20)/2	12.70	114.30
13	684	(8.00+2.50)/2	12.00	63.00
14	711	(7.50+3.10)/2	12.00	63.50
15	740	(8.40+5.00)/2	12.00	80.40
16	620	(12.50+6.50)/2	12.00	114.00
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 55,500/- ಸಂಪರ್ಕಿಸಿ: 9945208154/8884747093				
ಮುಂದುವರೆದಂತೆ ಬನಶಂಕರಿ 6ನೇ ಹಂತ, 4ನೇ 'ಟಿ' ಬ್ಲಾಕ್‌				
17	1111	(6.00+5.50)/2	9.00	51.75
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 60,000/- Contact : 9945208154/8884747093				
ಬನಶಂಕರಿ 6ನೇ ಹಂತ, 10ನೇ ಬ್ಲಾಕ್‌				
18	295	5.90	9.00	53.10
19	296	6.00	9.00	54.00
20	255	6.00	9.00	54.00
21	256	6.00	9.00	54.00
22	218	6.00	9.00	54.00
23	236	5.40	9.00	48.60
24	507	9.00	12.00	108.00
25	275	5.80	9.00	52.20
26	276	5.80	9.00	52.20
27	353	5.70	9.00	51.30
28	354	6.00	9.00	54.00
29	431	5.10	9.00	45.90
30	1211	(6.0+7.0)/2	9.00	58.50
31	705	9.00	(9.5+8.5)/2	81.00
32	724	9.00	(5.0+5.2)/2	45.90
33	412	6.70	9.00	60.30
34	411	6.00	9.00	54.00
35	373	5.60	9.00	50.40
36	374	6.80	9.00	61.20
37	334	6.00	9.00	54.00
38	14	(13.40+12.30)/2	24.00	308.48
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 54,000/- ಸಂಪರ್ಕಿಸಿ: 9945208154/8884747093				
ಮುಂದುವರೆದಂತೆ ಅಂಜನಾಪುರ 10ನೇ ಬ್ಲಾಕ್‌				
39	437	12.00	(10.90+9.30)/2	121.20
40	463	12.00	(10.60+9.50)/2	120.60
41	438	12.00	(9.50+8.00)/2	105.00
42	464	12.00	(10.80+11.90)/2	136.20
43	528	12.00	(10.80+12.00)/2	136.80
44	553	12.00	(13.10+12.00)/2	150.60
45	579	(12.10+12.50)/2	24.00	295.20
46	580	24.00	(15.30+13.40)/2	344.40
47	595	24.00	(11.30+13.40)/2	296.40
48	572	(15.70+15.00)/2	24.00	368.40
49	587	(13.40+17.00)/2	24.30	369.36
50	588	(17.00-17.30)/2	24.30	416.74
51	450	12.00	(11.60+10.70)/2	133.80
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 63,400/- ಸಂಪರ್ಕಿಸಿ: 9945208154/8884747093				
ಮುಂದುವರೆದಂತೆ ಅಂಜನಾಪುರ 11ನೇ ಬ್ಲಾಕ್‌				
52	1271	(6.80+5.80)/2	9.00	56.70
53	1272	(4.30+5.80)/2	9.00	45.45
54	1302	(9.20+7.00)2	9.00	72.90
55	1303	(6.20+7.00)/2	9.00	59.40
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 72,350/- ಸಂಪರ್ಕಿಸಿ: 9945208154/8884747093				
ಬನಶಂಕರಿ 6ನೇ ಹಂತ, 9ನೇ ಬ್ಲಾಕ್‌				
56	1206	12.00	8.00	96.00
ಆರಂಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 52,000/- ಸಂಪರ್ಕಿಸಿ: 9945208154/8884747093				
ಜೆ.ಪಿ. ನಗರ 8ನೇ ಫೇಸ್‌, 2ನೇ ಬ್ಲಾಕ್‌				
57	321	(7.60+6.40)/2	19.00	133.00
ಆರಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 65,000/- ಸಂಪರ್ಕಿ ಸಿ: 9945208154/8884747093				
ನಾಗರಭಾವಿ 1ನೇ ಹಂತ				
58	197	(12.20+13.90)/2	(10.40+5,90)/2	106.35
59	194	(15.30+16.60)/2	(11.85+5.30)/2	136.77
60	168	(18.30+19.0)/2	(19.0+15.0)/2	317.05
61	193	(12.20+13.50)/2	(15.05+10.0)/2	160.88
ಆರಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 1,12,500/- ಸಂಪರ್ಕಿ ಸಿ: 9535575790				
ಮುಂದುವರೆದಂತೆ ಸರ್‌ ಎಂ. ವಿಶ್ವೇಶ್ವರಯ್ಯ ಲೇಔಟ್‌, 8ನೇ ಬ್ಲಾಕ್‌				
62	541	18.00	(7.10+9.14)/2	146.16
63	1007	(12.00+18.80)/2	18.00	277.20
64	844	12.00	(10.10+8.90)/2	114.00
65	975	(8.60+9.00)/2	12.00	105.60
66	1177	(7.40+7.60)/2	12.00	90.00
ಆರಭಿಕ ಬಿಡ್‌ ದರ : ಚ.ಮೀಟರ್‌ಗೆ ರೂ. 64,000/- ಸಂಪರ್ಕಿ ಸಿ: 9880973636				

ಇ–ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತ ರೂ. 4.00 ಲಕ್ಷಗಳನ್ನು (ರೂ.ನಾಲ್ಕು ಲಕ್ಷ ಮಾತ್ರ) ನಿಗದಿಗೊಳಿಸಿದ್ದು, ಸದರಿ ಮೊತ್ತವನ್ನು ಹಾಗೂ ಇ–ಹರಾಜಿನ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್‌ ಪೋರ್ಟಲ್‌ನಲ್ಲಿರುವಂತೆ ಪಾವತಿ ಮಾಡಬೇಕು. ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು. ಇ–ಹರಾಜು ಪೋರ್ಟಲ್‌ ಬದಲಿಗೆ ಬಿಡಿಎ ಖಾತೆಗೆ ಸಲ್ಲಿಸಿದರೆ ಮರುಪಾವತಿಯ ಸಮಯದಲ್ಲಿ ಇಎಂಡಿ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
3. ಯಶಸ್ವಿ ಬಿಡ್ಡುದಾರರಿಗೆ / ಅತಿ ಹೆಚ್ಚಿನ ಬಿಡ್ಡುದಾರರಿಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ 25% ರಷ್ಟು ಮೌಲ್ಯದಲ್ಲಿ ಇ.ಎಂ.ಡಿ ಮೊತ್ತ ರೂ. 4.00 ಲಕ್ಷ ಕಡಿತಗೊಳಿಸಿ, ಬಾಕಿ ಮೌಲ್ಯವನ್ನು ಇ–ಹರಾಜು ಮುಕ್ತಾಯಗೊಂಡ ಅವಧಿಯ 72 ಘಂಟೆಯೊಳಗಾಗಿ (ಬ್ಯಾಂಕ್‌ ರಜೆಗಳನ್ನು ಹೊರತು ಪಡಿಸಿ) ಕೆಳಕಂಡ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್‌ ಖಾತೆಗೆ ಪಾವತಿ ಮಾಡಿ, ಚಲನ್‌ ಅನ್ನು ಆರ್ಥಿಕ ಶಾಖೆಯ ಲೆಕ್ಕಾಧಿಕಾರಿಯವರ ವಿಭಾಗಕ್ಕೆ ('ಡಿ' ಬ್ಲಾಕ್‌, 2ನೇ ಮಹಡಿ, ರೂಮ್‌.ನಂ.308) ನೀಡುವಂತೆ ಇ–ಮೇಲ್‌ ಮುಖಾಂತರ ಸೂಚನಾ ಪತ್ರವನ್ನು (Advice Letter) ಕಳುಹಿಸಲಾಗುವುದು. ನಿಗದಿತ ಸಮಯದೊಳಗೆ 25% ರಷ್ಟನ್ನು ಪಾವತಿಸಲು ವಿಫಲವಾದಲ್ಲಿ, ಇಎಂಡಿ ಅನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

   ಒಂದು ವೇಳೆ ಸೂಚನಾ ಪತ್ರವು (Advice Letter) ತಲುಪದೇ ಇದ್ದಲ್ಲಿ, ಹರಾಜು ನಿವೇಶನದಾರರೇ ಶೇ.25 ರಷ್ಟು ಮೌಲ್ಯವನ್ನು ಲೆಕ್ಕಾಚಾರ ಮಾಡಿ, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು ಅಥವಾ ಪ್ರಾಧಿಕಾರದ ಕೇಂದ್ರ ಕಛೇರಿಗೆ ಬಂದು ಸೂಚನಾ ಪತ್ರವನ್ನು ಪಡೆದು, ಮೇಲ್ಕಂಡಂತೆ ನಿಗದಿತ ಅವಧಿಯೊಳಗೆ ಪಾವತಿಸಬೇಕು.

   ಬ್ಯಾಂಕ್‌ನ ಹೆಸರು:– ಕೆನರಾ ಬ್ಯಾಂಕ್‌, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು – 560020

   ಉಳಿತಾಯ ಖಾತೆಯ ಹೆಸರು : –ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

   ಉಳಿತಾಯ ಖಾತೆ ಸಂಖ್ಯೆ :– 2828101053014 ಐ.ಎಫ್‌.ಎಸ್‌.ಸಿ ಕೋಡ್‌ :– CNRB0002828

   ಪಾವತಿಯ ವಿಧಾನ : ಆರ್‌.ಟಿ.ಜಿ.ಎಸ್‌ /ಎನ್‌.ಇ.ಎಫ್‌.ಟಿ

   ಬಿಡ್ಡುದಾರರು ತಮ್ಮ ಸ್ವಂತ ಬ್ಯಾಂಕ್‌ ಖಾತೆಯಿಂದ ಮಾತ್ರ ಇಎಂಡಿ/ 25% ಹಣವನ್ನು ಪಾವತಿಸಬೇಕು.
4. ಪ್ಯಾನ್‌ ಕಾರ್ಡ್‌ನ್ನು ಕಡ್ಡಾಯವಾಗಿ ಇ–ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್‌ ಅಧಿಕಾರಿ/ ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್‌.ಆರ್‌.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಭಾರತೀಯ ಅನಿವಾಸಿಗರು (NRI) ಸ್ವ–ಪ್ರಮಾಣ ದೃಢೀಕರಣ ಪತ್ರ (Self Attested) ವನ್ನು ಅಪ್‌ಲೋಡ್‌ ಮಾಡಬಹುದು. ಯಶಸ್ವಿ ಬಿಡ್‌ದಾರರು ತದನಂತರ ಭಾರತೀಯ ರಾಯಭಾರಿ ಕಛೇರಿ (ಎಂಬೆಸ್ಸಿ) ಯಿಂದ ಪಡೆದ ದೃಢೀಕೃತ ಪತ್ರವನ್ನು ನೀಡಬೇಕು.
5. ಯಶಸ್ವಿ ಬಿಡ್ಡುದಾರರು ಶೇ.25 ರಷ್ಟು ಬಿಡ್‌ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
6. ಯಶಸ್ವಿಯಾಗದ ಬಿಡ್ಡುದಾರರಿಗೆ ಇಒಆ ಹಣ 4 ಲಕ್ಷ ರೂ.ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು.
7. **ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ–ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್‌ : www.bdabangalore.org ಗೆ ಭೇಟಿ ನೀಡಿ.**
8. **ಇ–ಹರಾಜು ನಿವೇಶನಗಳಿಗೆ ಕನಿಷ್ಠ 2 ಬಿಡ್‌ದಾರರು ಇರಬೇಕು. ಒಂದೇ ಬಿಡ್ಡರ್‌ ಅನ್ನು ತಿರಸ್ಕರಿಸಲಾಗುತ್ತದೆ.**
9. ಬಿಡ್ಡಿಂಗ್‌ ಸಮಯದಲ್ಲಿ, ಅದೇ ನಿವೇಶನಕ್ಕೆ ಅಡ್ಡ ಹೆಸರುಗಳ ಯಾವುದೇ ನಕಲು ಇದ್ದರೆ, ಅಂತಹ ಬಿಡ್‌ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
10. ಇ–ಹರಾಜು ಬಿಡ್ಡುದಾರರು ವೆಬ್‌ಸೈಟ್‌: **https://kppp.karnataka.gov.in** ಗೆ ಲಾಗ್‌ಇನ್‌ ಮಾಡುವ ಮೂಲಕ ಹೊಸ ಇ–ಹರಾಜು ಬಿಡ್ಡಿಂಗ್‌ ಬಳಕೆದಾರರ ಕೈಪಿಡಿಯನ್ನು ಡೌನ್‌ಲೋಡ್‌ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್‌ ಪೋರ್ಟಲ್‌ ಅನ್ನು ಸಂಪರ್ಕಿಸಿ: 080–46010000 ಮತ್ತು 080–68948777.
11. ಬಿಡ್ಡುದಾರರು ನಿಗದಿತ ಮಾದರಿ ಸಹಿ ನಮೂನೆಯನ್ನು (ಇದರಲ್ಲಿನ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರು ಕನ್ನಡ ಮತ್ತು ಇಂಗ್ಲಿಷ್‌ ಭಾಷೆಯಲ್ಲಿ) ಮತ್ತು ಸಂಪರ್ಕ ಮಾಹಿತಿ ಸ್ವರೂಪವನ್ನು ವೆಬ್‌ಸೈಟ್‌ **https://kppp.karnataka.gov.in** ನಿಂದ ಡೌನ್‌ಲೋಡ್‌ ಮಾಡಿ, ವಿವರಗಳನ್ನು ಭರ್ತಿ ಮಾಡಿ ಮತ್ತು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್‌ ಮಾಡುವುದು.
12. ನಿವೇಶನದ ಜಂಟಿ ಖರೀದಿದಾರರು ಒದಗಿಸಿದ ಸ್ವರೂಪದಲ್ಲಿ ಜಂಟಿ ಹೆಸರನ್ನು ನಿರ್ದಿಷ್ಟಪಡಿಸಬೇಕು ಮತ್ತು ಇ–ಹರಾಜು ಪೋರ್ಟಲ್‌ನಲ್ಲಿ ತಮ್ಮ ಆಧಾರ್‌ ಕಾರ್ಡ್‌, ಪ್ಯಾನ್‌ ಕಾರ್ಡ್‌, ಮದುವೆ ಪ್ರಮಾಣಪತ್ರ, ಪಾಸ್‌ಪೋರ್ಟ್‌ ಅಥವಾ ಯಾವುದೇ ಇತರ ಸರ್ಕಾರ ನೀಡಿದ ದಾಖಲೆಗಳನ್ನು ಜಂಟಿಯಾಗಿ ಅಪ್‌ಲೋಡ್‌ ಮಾಡಬೇಕು. ಜಂಟಿ ನೋಂದಣಿಗಾಗಿ ತಡವಾಗಿ ಸಲ್ಲಿಸುವ ವಿನಂತಿಗಳನ್ನು ತಿರಸ್ಕರಿಸಲಾಗುತ್ತದೆ.
13. ಯಶಸ್ವಿ ಬಿಡ್ಡುದಾರರಿಗೆ ಹರಾಜಾದ ನಿವೇಶನಗಳನ್ನು ಅವು ಹೇಗಿದೆಯೋ ಅದೇ ಸ್ಥಿತಿಯಲ್ಲಿ ಹಂಚಲಾಗುತ್ತದೆ. ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಬಿಡ್‌ ಮಾಡುವ ಮೊದಲು ನಿವೇಶನವಿರುವ ಸ್ಥಳ, ರಸ್ತೆಯ ಅಗಲ ಇತ್ಯಾದಿ ವಿಷಯಗಳನ್ನು ಭೌತಿಕವಾಗಿ ಪರಿಶೀಲಿಸಬೇಕು. ಇ–ಹರಾಜಿನ ಮೂಲಕ ನೀಡಲಾದ ನಿವೇಶನಗಳನ್ನು ರದ್ದುಗೊಳಿಸಲಾಗುವುದಿಲ್ಲ/ಬದಲಿಯಾಗಿ ನೀಡಲಾಗುವುದಿಲ್ಲ.
14. ಇ–ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಮೇಲೆ ನಿರ್ದಿಷ್ಟಪಡಿಸಿದ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರಬೇಕು

ಬಿಡ್‌ದಾರರು ಬಿಡ್‌ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ–ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ **https://kppp.karnataka.gov.in** ಲಾಗಾನ್‌ ಆಗಿ

ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ **080–23368435 /23368036** ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ **080–46010000 /68948777** ಸಂಪರ್ಕಿಸಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್‌ ಪಶ್ಚಿಮ, ಬೆಂಗಳೂರು – 560 020.

ನಂ. ಬೆಂಅಪ್ರಾ/ಅಸ/ಇ–ಹರಾಜು/ಟಿ–03/2023–24, ದಿನಾಂಕ: 16.12.2023

ಸಹಿ/- ಅಭಿಯಂತರ ಸದಸ್ಯರು

ಶೈಶವಾವಸ್ಥೆಯಲ್ಲಿ ಶೈತ್ಯಾಗಾರ

ಒಂದನೇ ಪುಟದಿಂದ...

ಅವುಗಳ ಬಳಕೆ ಬಗ್ಗೆ ಸಮರ್ಪಕ ಮಾಹಿತಿ ಇಲ್ಲ. ಮಾತ್ರವಲ್ಲ, ಕೋಲ್ಡ್‌ಸ್ಟೋರೇಜ್‌ಗಳ ಅವಶ್ಯಕತೆ ಹಾಗೂ ಅದನ್ನು ಪೂರೈಸುವ ಕುರಿತು ಈವರೆಗೂ ಸರ್ಕಾರದ ಮಟ್ಟದಲ್ಲಿ ಅಧ್ಯಯನಗಳಾಗಲೀ, ಸಮೀಕ್ಷೆಗಳಾಗಲೀ ನಡೆದಿಲ್ಲ. ಇಷ್ಟೆಲ್ಲ ಇದ್ದರೂ ಯಾವ ಆಧಾರದ ಮೇಲೆ ಪ್ರತಿ ಬಾರಿಯ ಬಜೆಟ್‌ನಲ್ಲಿ ಕೋಲ್ಡ್‌ಸ್ಟೋರೇಜ್‌ಗಾಗಿ ಕೋಟಿಗಟ್ಟಲೆ ಹಣ ತೆಗೆದಿಡುತ್ತಾರೋ ಕಾರಣ ತಿಳಿಯದು.

ಎಷ್ಟೆಷ್ಟಿವೆ ಕೋಲ್ಡ್ ಸ್ಟೋರೇಜ್?

ತೋಟಗಾರಿಕೆ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದ 25 ಜಿಲ್ಲೆಗಳಲ್ಲಿ 162 ಕೋಲ್ಡ್‌ಸ್ಟೋರೇಜ್ ಘಟಕಗಳಿವೆ. ಇವುಗಳಲ್ಲಿ 152 ಖಾಸಗಿಯವರದ್ದು. 10 ಮಾತ್ರ ಸರ್ಕಾರಿ ಸ್ವಾಮ್ಯದವು. ಅದರಲ್ಲಿ ಕೆಪೆಕ್ ಅಡಿಯಲ್ಲಿ 9 (ವಿಜಯಪುರದಲ್ಲಿ 4, ಬಾಗಲಕೋಟೆ, ಧಾರವಾಡ, ಬೀದರ್, ಗದಗ್, ಕೊಪ್ಪಳದಲ್ಲಿ ತಲಾ 1) ಹಾಗೂ ತೋಟಗಾರಿಕೆ ಇಲಾಖೆಯಡಿ 1(ಬೆಂಗಳೂರು ಗ್ರಾಮಾಂತರ). ಉಳಿದಂತೆ 49 ಖಾಸಗಿ ಕೋಲ್ಡ್‌ಸ್ಟೋರೇಜ್‌ಗಳು ರಾಷ್ಟ್ರೀಯ ತೋಟಗಾರಿಕಾ ಮಿಷನ್ (ಎನ್‌ಎಚ್‌ಎಂ) ಸಹಾಯಧನದ ಅಡಿ ನಿರ್ಮಾಣವಾಗಿವೆ.

ಇಲಾಖೆಯ ಲೆಕ್ಕವಲ್ಲದೇ, ರಾಜ್ಯದಲ್ಲಿ 500ಕ್ಕೂ ಹೆಚ್ಚು ಬೃಹತ್ ಸಾಮರ್ಥ್ಯದ ಶೀತಲಗೃಹಗಳಿರುವ ಅಂದಾಜು ಇ..ದೆ. ಕೆಲವು ಕಂಪನಿಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಕೋಲ್ಡ್‌ಸ್ಟೋರೇಜ್‌ಗಳನ್ನು ಇಟ್ಟುಕೊಂಡಿವೆ. ಹೀಗೆ ಬಿಡಿಬಿಡಿಯಾಗಿರುವುದರಿಂದ ಅಧಿಕೃತವಾಗಿ ಇಂತಿಷ್ಟೇ ಕೋಲ್ಡ್ ಸ್ಟೋರೇಜ್‌ಗಳಿವೆ ಎಂಬ ಲೆಕ್ಕ ಸಿಗುವುದಿಲ್ಲ.

ವರ್ತಕರೇ ಬಳಕೆದಾರರು: ರಾಜ್ಯದಲ್ಲಿರುವ ಎಲ್ಲ ಕೋಲ್ಡ್‌ಸ್ಟೋರೇಜ್‌ಗಳ ಬಹುಪಾಲು ಬಳಕೆದಾರರು ವರ್ತಕರು. ಇವರು ಪದಾರ್ಥಗಳ ಗುಣಮಟ್ಟ ಕಾಪಾಡುವುದಕ್ಕೆ ಶೀತಲಗೃಹಗಳನ್ನು ಬಳಸಿದರೆ, ರೈತರು ಬೆಲೆ ಏರಿಳಿತದ ಹಿನ್ನೆಲೆಯಲ್ಲಿ ಬಳಕೆ ಮಾಡುತ್ತಾರೆ.

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಭಾಗದಲ್ಲಿ ಬೆಳೆಗಾರರು ಶುಂಠಿ, ಕಾಳುಮೆಣಸು, ಅಡಿಕೆಯನ್ನು ಶೀತಲಗೃಹದಲ್ಲಿ ಇಡುತ್ತಾರೆ. ವಿಜಯಪುರದಲ್ಲಿ ಒಣದ್ರಾಕ್ಷಿ, ಹಾವೇರಿ ಜಿಲ್ಲೆಯಲ್ಲಿ ಬ್ಯಾಡಗಿ ಮೆಣಸಿನಕಾಯಿ, ಶುಂಠಿ, ಹುಣಸೆಹಣ್ಣು, ಅರಿಶಿಣ ಬೆಳೆಗಳನ್ನಿಡುತ್ತಾರೆ. ಗದಗದಲ್ಲಿ ಹೆಸರುಕಾಳಿನಂತಹ ಧಾನ್ಯಗಳನ್ನು ಇಡುತ್ತಾರೆ. ಹಾಸನ, ಚಿಕ್ಕಬಳ್ಳಾಪುರ ಭಾಗದಲ್ಲಿ ಆಲೂಗೆಡ್ಡೆಗಳನ್ನಿಡುತ್ತಾರೆ.

ಯಾವ್ಯಾವ ಉತ್ಪನ್ನಗಳಿಗೆ ಶೀತಲಗೃಹ?

ಪ್ರತಿ ಸಾರಿ ಟೊಮೆಟೊ, ಈರುಳ್ಳಿಯಂತಹ ಉತ್ಪನ್ನಗಳ ದರ ಕುಸಿದು, ರೈತರು ಉತ್ಪನ್ನಗಳನ್ನು ಬೀದಿಗೆ ಚೆಲ್ಲಿ ಪ್ರತಿಭಟಿಸಿದಾಗ, 'ಕೋಲ್ಡ್‌ಸ್ಟೋರೇಜ್' ಬೇಕೆಂಬ ಬೇಡಿಕೆ ಮುನ್ನೆಲೆಗೆ ಬರುತ್ತದೆ. ಆದರೆ, ತಜ್ಞರ ಪ್ರಕಾರ ಎಲ್ಲ ತರಕಾರಿಗಳನ್ನು, ಹಣ್ಣುಗಳನ್ನು (ಅದರಲ್ಲೂ ತೇವಾಂಶ ಹೆಚ್ಚಿರುವ ಉತ್ಪನ್ನಗಳು) ದೀರ್ಘಕಾಲ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟು ಮಾರಾಟ ಮಾಡಲು ಸಾಧ್ಯವಿಲ್ಲ.

ಪ್ರತಿ ತರಕಾರಿ, ಹಣ್ಣು ಅಥವಾ ಹೂವು, ಒಣ ಪದಾರ್ಥಗಳು... ಹೀಗೆ ಒಂದೊಂದಕ್ಕೂ ಒಂದೊಂದು ಗುಣವಿರುತ್ತದೆ. ಪ್ರತಿಯೊಂದನ್ನೂ ನಿರ್ದಿಷ್ಟ ಆರ್ದ್ರತೆ ಹಾಗೂ ಉಷ್ಣಾಂಶದಲ್ಲಿಡಬೇಕಾಗುತ್ತದೆ. ಇಪ್ಪತ್ತೈದು ವರ್ಷಗಳ ಹಿಂದೆಯೇ ನ್ಯಾಷನಲ್ ಕೋಲ್ಡ್ ಚೈನ್ ಡೆವಲಪ್‌ಮೆಂಟ್ ಕಾರ್ಪೊರೇಷನ್ (ಎನ್‌ಸಿಸಿಡಿಸಿ) ಸಂಶೋಧನೆ ನಡೆಸಿ ಯಾವ ಉತ್ಪನ್ನವನ್ನು ಎಷ್ಟು ಡಿಗ್ರಿ ಉಷ್ಣಾಂಶದಲ್ಲಿಡಬೇಕೆಂಬ ಪ್ರಮಾಣಿತ ಕಾರ್ಯಾಚರಣೆ ವಿಧಾನ(ಎಸ್‌ಒಪಿ) ಯನ್ನು ಕೊಟ್ಟಿದೆ. ಆ ಪ್ರಕಾರ ಶೇ 30 ರಿಂದ 40 ಕ್ಕಿಂತ ಹೆಚ್ಚು ತೇವಾಂಶ ಹೆಚ್ಚಿರುವ ಟೊಮೆಟೊ, ಬಾಳೆಹಣ್ಣು, ಕಲ್ಲಂಗಡಿ, ಈರುಳ್ಳಿಯಂತಹ ಉತ್ಪನ್ನಗಳನ್ನು ದೀರ್ಘಕಾಲ ಕೋಲ್ಡ್ ಸ್ಟೋರೇಜ್‌ನಲ್ಲಿಟ್ಟರೆ ಕೊಳೆಯುತ್ತವೆ. ಎಲ್ಲ ತರಕಾರಿಗಳನ್ನು ದೀರ್ಘಕಾಲ ಇಟ್ಟು ಮಾರಾಟ ಮಾಡುವುದು ಕಷ್ಟ.

ಟೊಮೆಟೊವನ್ನು 14 ಡಿಗ್ರಿ ಸೆ. ತಾಪಮಾನದಲ್ಲಿಡಬಹುದು. ಹೆಚ್ಚುದಿನ ಸಂರಕ್ಷಿಸಿ ಇಡುವುದು ಕಷ್ಟ. ಮಾವು, ದಾಳಿಂಬೆ, ನಿಂಬೆಯಂತಹ ಹಣ್ಣುಗಳನ್ನು, ಬ್ರೊಕೋಲಿಯಂತಹ ತರಕಾರಿಗಳನ್ನು 8 ಡಿಗ್ರಿ ಸೆ.ನಲ್ಲಿ, ಅಣಬೆಯನ್ನು 4 ಡಿಗ್ರಿ ಸೆ.ನಲ್ಲಿ, ಒಣಗಿದ ಶುಂಠಿ, ಧಾನ್ಯ, ಬೇಳೆಕಾಳುಗಳು, ಒಣ ಮೆಣಸಿನಕಾಯಿಯಂಥ ಒಣ ಉತ್ಪನ್ನಗಳನ್ನು 8 ರಿಂದ 12 ಡಿಗ್ರಿ ಸೆ. ತಾಪಮಾನದಲ್ಲಿಡಬಹುದು. ಯಾವುದೇ ಒಣ ಉತ್ಪನ್ನಗಳನ್ನು 4 ರಿಂದ 6 ಡಿಗ್ರಿ ಸೆ.ನಲ್ಲಿ ಇಡಬಹುದು. ಆಲೂಗೆಡ್ಡೆಯನ್ನು 6 ಡಿಗ್ರಿ ಸೆ.ನಲ್ಲಿ ಇಡುತ್ತಿದ್ದಾರೆ. ಸದ್ಯ ರಾಜ್ಯದಲ್ಲಿರುವ ದೊಡ್ಡ ಪ್ರಮಾಣದ ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಕೋಲ್ಡ್ ಸ್ಟೋರೇಜ್‌ಗಳು ಹೆಚ್ಚು ಬಳಕೆಯಾಗುತ್ತಿರುವುದು ಶುಂಠಿ, ಒಣದ್ರಾಕ್ಷಿ, ಆಲೂಗಡ್ಡೆ, ಮೆಣಸಿನಕಾಯಿ ಮತ್ತು ದವಸ-ಧಾನ್ಯಗಳಂತಹ ಉತ್ಪನ್ನಗಳಿಗೆ.

ಕೋಲ್ಡ್‌ಸ್ಟೋರೇಜ್ ಕೊರತೆ; ಆರ್ಥಿಕ ವಹಿವಾಟಿಗೆ ಪೆಟ್ಟು...

ವಿಜಯಪುರ ಜಿಲ್ಲೆಯಲ್ಲಿ 25 ಸಾವಿರ ಹೆಕ್ಟೇರ್, ಬಾಗಲಕೋಟೆ ಜಿಲ್ಲೆಯಲ್ಲಿ 4 ಸಾವಿರ ಹೆಕ್ಟೇರ್ ಮತ್ತು ಬೆಳಗಾವಿ ಜಿಲ್ಲೆಯಲ್ಲಿ 5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದ್ರಾಕ್ಷಿ ಕೃಷಿ ಮಾಡಲಾಗುತ್ತಿದೆ. ವಾರ್ಷಿಕ ಸರಾಸರಿ 5 ಲಕ್ಷದಿಂದ 6 ಲಕ್ಷ ಟನ್‌ಗೂ ಅಧಿಕ ಹಸಿ ದ್ರಾಕ್ಷಿ ಬೆಳೆಯಲಾಗುತ್ತದೆ. ಇದರಲ್ಲಿ ಸುಮಾರು 1.60 ಲಕ್ಷ ಟನ್ ಒಣದ್ರಾಕ್ಷಿ ತಯಾರಿಸುತ್ತಾರೆ. ಕನಿಷ್ಠ ₹ 2,500 ರಿಂದ ₹ 3,000 ಕೋಟಿ ವಾರ್ಷಿಕ ಒಣ ಮತ್ತು ಹಸಿ ದ್ರಾಕ್ಷಿ ವಹಿವಾಟು ನಡೆಯುತ್ತದೆ. ಇಷ್ಟಾದರೂ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಇಲ್ಲ. ವರ್ಷಾನುಗಟ್ಟಲೆ ಸಂಗ್ರಹಿಸಿಟ್ಟುಕೊಳ್ಳಲು ಶೈತ್ಯಾಗಾರಗಳ (ಕೋಲ್ಡ್ ಸ್ಟೋರೇಜ್) ಕೊರತೆ ಇದೆ. ಅದಕ್ಕೆ ದ್ರಾಕ್ಷಿ ಬೆಳೆಗಾರರು 60 ಕಿ.ಮೀ ದೂರವಿರುವ ಮಹಾರಾಷ್ಟ್ರದ ತಾಸ್‌ಗಾಂವ್, ಸಾಂಗ್ಲಿ ಮಾರುಕಟ್ಟೆ ಅವಲಂಬಿಸಿದ್ದಾರೆ.

'ನಾವು ಬೆಳೆದ ಬಹುತೇಕ ಒಣದ್ರಾಕ್ಷಿಯನ್ನು ಪ್ರತಿ ಟನ್‌ಗೆ ತಿಂಗಳಿಗೆ ₹650 ಬಾಡಿಗೆ ನೀಡಿ, ಸಾಂಗ್ಲಿ ಮತ್ತು ತಾಸ್‌ಗಾಂವ್‌ನ ಶೈತ್ಯಾಗಾರಗಳಲ್ಲಿ ಇಡುತ್ತೇವೆ. ಉತ್ತಮ ದರ ಸಿಕ್ಕಾಗ, ಅಲ್ಲಿಯೇ ಮಾರಿ, ಅದೇ ಹಣದಲ್ಲಿ ಬೆಳೆಗೆ ಬೇಕಾದ ಗೊಬ್ಬರ, ಔಷಧ ಸೇರಿ ಇನ್ನಿತರ ಯಂತ್ರೋಪಕರಣ ಖರೀದಿಸುತ್ತೇವೆ' ಎನ್ನುತ್ತಾರೆ ದ್ರಾಕ್ಷಿ ಬೆಳೆಗಾರರು.

ಸದ್ಯ ವಿಜಯಪುರ ಜಿಲ್ಲೆಯಲ್ಲಿರುವ ಶೈತ್ಯಾಗಾರಗಳ ಒಟ್ಟಾರೆ ಸಂಗ್ರಹ ಸಾಮರ್ಥ್ಯ ಕೇವಲ 40 ಸಾವಿರ ಟನ್. ಶೈತ್ಯಾಗಾರದ ಕೊರತೆ ಮತ್ತು ಮಾರುಕಟ್ಟೆ ವ್ಯವಸ್ಥೆ ಇಲ್ಲದ್ದಕ್ಕೆ 1.20 ಲಕ್ಷ ಟನ್ ಒಣ ದ್ರಾಕ್ಷಿ ಮಹಾರಾಷ್ಟ್ರ ಮಾರುಕಟ್ಟೆ ಸೇರುತ್ತಿದೆ.

'ವಿಜಯಪುರ ನಗರ ಸಮೀಪದ ತೊರವಿಯಲ್ಲಿ ದ್ರಾಕ್ಷಿ ಮತ್ತು ವೈನ್ ಮಂಡಳಿಯಿಂದ ₹40.75 ಕೋಟಿ ಅನುದಾನದಲ್ಲಿ 10 ಸಾವಿರ ಟನ್ ಸಾಮಾರ್ಥ್ಯದ ಕೋಲ್ಡ್ ಸ್ಟೋರೇಜ್ ನಿರ್ಮಿಸುವ ಯೋಜನೆಯಿದ್ದು ಟೆಂಡರ್ ಹಂತದಲ್ಲಿ ಇದೆ' ಎನ್ನುತ್ತಾರೆ ವಿಜಯಪುರ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ರಾಹುಲ್‌ಕುಮಾರ್ ಬಾವಿದಡ್ಡಿ.

ಗದಗ ಜಿಲ್ಲೆ ಹೆಸರುಕಾಳು ಬೆಳೆಗೆ ಪ್ರಸಿದ್ಧಿ. ಒಂದು ಸೀಸನ್‌ನಲ್ಲಿ 5 ಸಾವಿರದಿಂದ 10 ಸಾವಿರ ಟನ್ ಹೆಸರುಕಾಳು ಉತ್ಪಾದನೆಯಾಗುತ್ತದೆ ಇಲ್ಲಿರುವುದು 20 ಕೋಲ್ಡ್‌ಸ್ಟೋರೇಜ್ ಘಟಕಗಳು. ಗದಗ ಎಪಿಎಂಸಿಯಲ್ಲಿ ಕೆಪೆಕ್‌ನಿಂದ 2 ಕೋಲ್ಡ್‌ಸ್ಟೋರೇಜ್‌ಗಳಿವೆ. ಇದನ್ನು ಶೇ 2ರಷ್ಟು ರೈತರಷ್ಟೇ ಬಳಸುತ್ತಾರೆ. ಉಳಿದವರು ವರ್ತಕರು. ಶೀತಲಗೃಹ ಬಳಕೆ ತಿಳಿಯದ ರೈತರು, ಹೊರ ರಾಜ್ಯಗಳಿಗೆ ಹೆಸರುಕಾಳು ಮಾರಾಟ ಮಾಡುತ್ತಾರೆ.

ತುಮಕೂರಿನಲ್ಲಿ ಕೋಲ್ಡ್‌ಸ್ಟೋರೇಜ್ ವ್ಯವಸ್ಥೆ ಸಮರ್ಪಕವಾಗಿಲ್ಲದ ಕಾರಣ ವರ್ತಕರು, ಬೆಳೆಗಾರರು ಇಲ್ಲಿ ಬೆಳೆಯುವ ಹುಣಸೆಹಣ್ಣನ್ನು ಆಂಧ್ರದ ಮಡಕಶಿರಾ, ಹಿಂದೂಪುರದ ಕೋಲ್ಡ್‌ಸ್ಟೋರೇಜ್‌ಗಳಲ್ಲಿಟ್ಟು, ಅಲ್ಲೇ ಮಾರಾಟ ಮಾಡುತ್ತಾರೆ. 'ಸರ್ಕಾರ ಸುಸಜ್ಜಿತ ಕೋಲ್ಡ್‌ಸ್ಟೋರೇಜ್ ಸ್ಥಾಪಿಸಿ, ರೈತರಿಗೆ ಕೈಗೆಟಕುವ ಬಾಡಿಗೆ ನಿಗದಿಪಡಿಸಿದರೆ, ರೈತರ ಜೊತೆಗೆ, ವರ್ತಕರೂ ಬಳಸಿಕೊಳ್ಳುತ್ತಾರೆ' ಎನ್ನುವುದು ತೋವಿನಕೆರೆ ಹುಣಸೆಹಣ್ಣು ಬೆಳೆಗಾರ ರಮೇಶ್ ಅವರ ಅಭಿಪ್ರಾಯ.

ಸರ್ಕಾರಕ್ಕೆ ಬಿ.ಸಿ. ಪಾಟೀಲ್ ಪತ್ರ

ಬಿ.ಸಿ ಪಾಟೀಲ್ ಅವರು ಕೃಷಿ ಸಚಿವರಾಗಿದ್ದಾಗ, ₹124.10 ಕೋಟಿ ವೆಚ್ಚದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ 13 ಕೋಲ್ಡ್ ಸ್ಟೋರೇಜ್ ಮಂಜೂರು ಮಾಡಿಸಿದ್ದರು. ಅವುಗಳ ಕೆಲಸ ಈಗ ಪ್ರಗತಿಯಲ್ಲಿದೆ. ಕಾಮಗಾರಿ ಪೂರ್ಣಗೊಳಿಸಲು ಹೆಚ್ಚುವರಿಯಾಗಿ ₹43.43 ಕೋಟಿ ಬೇಕಾಗಿದ್ದು, ಅನುದಾನ ಬಿಡುಗಡೆ ಮಾಡುವಂತೆ ನವೆಂಬರ್ 28 ರಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಸರ್ಕಾರ ಪ್ರತಿಕ್ರಿಯಿಸಿರುವ ಕುರಿತು ಮಾಹಿತಿ ಲಭ್ಯವಿಲ್ಲ.



ಸಹಜ ಆರ್ಗ್ಯಾನಿಕ್ಸ್ – ರೈತ ಉತ್ಪಾದಕ ಸಂಸ್ಥೆ ಅಳವಡಿಸಿರುವ ಸೌರಶಕ್ತಿ ಆಧಾರಿತ ಕೋಲ್ಡ್ ಸ್ಟೋರೇಜ್

ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯ ಧನ ಸಹಾಯದೊಂದಿಗೆ ವಿಜಯಪುರದಲ್ಲಿ ನಿರ್ಮಿಸಿರುವ ಕೋಲ್ಡ್‌ಸ್ಟೋರೇಜ್

'ಕೋಲ್ಡ್ ಸ್ಟೋರೇಜ್‌ನಲ್ಲಿ ಮೆಣಸಿನಕಾಯಿ ಮಾತ್ರವಲ್ಲ, ಯಾವುದೇ ತೇವಾಂಶವಿರುವ ವಸ್ತುಗಳನ್ನಿಟ್ಟಾಗ ತೂಕ ಕಡಿಮೆಯಾಗುತ್ತದೆ. 30 ಕೆ.ಜಿ. ಚೀಲ ಒಣ ಮೆಣಸಿನಕಾಯಿ ಇಟ್ಟರೆ, ಒಂದು ವರ್ಷಕ್ಕೆ ಒಂದರಿಂದ ಒಂದೂವರೆ ಪರ್ಸೆಂಟ್ ತೂಕ ಕಡಿಮೆಯಾಗಬಹುದು. ಆದರೆ ಗುಣಮಟ್ಟ ಸಿಗುತ್ತದೆ. ಹೊರಗಡೆ ಇಟ್ಟರೆ, ಇದಕ್ಕಿಂತ ಹೆಚ್ಚು ನಷ್ಟವಾಗುತ್ತದೆ. ಕೀಟಗಳು, ಇಲಿಗಳು ತಿಂದು ಹಾಳಾಗುತ್ತವೆ' ಎನ್ನುತ್ತಾರೆ ಬ್ಯಾಡಗಿಯ ವರ್ತಕರು.

ಕೊಯ್ಲೋತ್ತರ ನಷ್ಟ ತಪ್ಪಿಸಲು

ಕೋಲ್ಡ್‌ಸ್ಟೋರೇಜ್, ಕೇವಲ ಪದಾರ್ಥಗಳನ್ನಿಟ್ಟು ಬೆಲೆ ಹೆಚ್ಚಾದಾಗ ಮಾರಾಟ ಮಾಡುವುದಕ್ಕಷ್ಟೇ ಅಲ್ಲ. ಕೊಯ್ಲೋತ್ತರ ನಷ್ಟದ ಪ್ರಮಾಣ (ಪೋಸ್ಟ್ ಹಾರ್ವೆಸ್ಟ್ ಲಾಸ್) ತಗ್ಗಿಸುವುದಕ್ಕೂ ಸಹಾಯವಾಗುತ್ತದೆ. ಧಾನ್ಯಗಳನ್ನು ದೂಳು, ಕೀಟಗಳು, ಇಲಿ-ಹೆಗ್ಗಣಗಳ ಹಾವಳಿಯಿಂದ ರಕ್ಷಿಸಿ, ಅವುಗಳ ಗುಣಮಟ್ಟವನ್ನೂ ಕಾಪಾಡಿಕೊಳ್ಳಲು ಹಾಗೂ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಗಲು ಕೋಲ್ಡ್‌ಸ್ಟೋರೇಜ್ ಸಹಾಯವಾಗುತ್ತದೆ ಎನ್ನುತ್ತಾರೆ ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ಕೆ. ವೆಂಕಟೇಶ್.

'ರಾಜ್ಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಬೆಳೆಯಲ್ಲಿ ಕೊಯ್ಲೋತ್ತರ ನಷ್ಟ ಅಂದಾಜು ಶೇ 18ರಿಂದ 20ರಷ್ಟು. ರಾಜ್ಯದಲ್ಲಿ ಸರಾಸರಿ 390 ಲಕ್ಷ ಟನ್‌ನಷ್ಟು ತೋಟಗಾರಿಕೆ ಬೆಳೆ ಉತ್ಪಾದನೆಯಾಗುತ್ತದೆ. ಇದರಲ್ಲಿ ಶೇ 15 ನಷ್ಟವಾದರೂ, ಕೋಟಿ ಕೋಟಿ ರೂಪಾಯಿಯಷ್ಟು ಹಣ ವ್ಯರ್ಥವಾಗುತ್ತದೆ. ಉತ್ಪನ್ನದ ನಷ್ಟದ ಜೊತೆಗೆ ಅದಕ್ಕಾಗಿ ವ್ಯಯಿಸಿದ ಬೀಜ, ಗೊಬ್ಬರ, ನೀರು, ಹಣ, ಸಮಯ ಎಲ್ಲವೂ ಪರೋಕ್ಷವಾಗಿ ನಷ್ಟವೇ. ರೈತರಿಗೆ ಕೈಗೆಟುಕುವ ಬಾಡಿಗೆ ದರದಲ್ಲಿ ಹಾಗೂ ಅವರ ಜಮೀನಿನ ಹತ್ತಿರದಲ್ಲಿ ಕೋಲ್ಡ್‌ಸ್ಟೋರೇಜ್ ಲಭ್ಯವಾದರೆ, ಈ ನಷ್ಟವನ್ನು ತಪ್ಪಿಸಲು ಸಾಧ್ಯವಿದೆ' ಎಂದು ಅವರು ಅಭಿಪ್ರಾಯಪಡುತ್ತಾರೆ.

ಕೋಲ್ಡ್‌ಸ್ಟೋರೇಜ್‌ನಲ್ಲಿ ಅಲಸಂದಿ ಇಟ್ಟಿದ್ದೇನೆ. ಇದರಿಂದ ನುಸಿ ಹಾಗೂ ಇನ್ನಿತರ ಕೀಟಗಳಿಂದ ರಕ್ಷಿಸಲು ಸಾಧ್ಯವಿದೆ

ನಿಂಗಪ್ಪ ತಳವಾರ ಹಾಗೂ ಪಟ್ಟಣಶೆಟ್ಟಿ ಗದಗ ಜಿಲ್ಲೆ

'ಧಾನ್ಯಗಳು, ಮೆಣಸಿನಕಾಯಿಯಂತಹ ಒಣ ಪದಾರ್ಥಗಳು ಗ್ರಾಹಕರಿಗೆ ತಲುಪುವವರೆಗೂ ಗುಣಮಟ್ಟದಲ್ಲಿರಬೇಕೆಂದರೆ, ಅವುಗಳನ್ನು ಕೋಲ್ಡ್‌ಸ್ಟೋರೇಜ್‌ನಲ್ಲಿಟ್ಟು ರಕ್ಷಿಸಬೇಕು. ನಾವು ಈ ಎಲ್ಲ ಉತ್ಪನ್ನಗಳನ್ನು ಕೋಲ್ಡ್‌ಸ್ಟೋರೇಜ್‌ನಲ್ಲಿಟ್ಟು, ಕಂಪನಿಗಳಿಗೆ ಅಗತ್ಯಕ್ಕೆ ತಕ್ಕಂತೆ ಪೂರೈಸುತ್ತೇನೆ. ಉತ್ತಮ ಬೆಲೆಯೂ ಸಿಗುತ್ತದೆ' ಎನ್ನುತ್ತಾರೆ ಬ್ಯಾಡಗಿಯ ಕಬ್ಬೂರ್ ಎಂಟರ್‌ಪ್ರೈಸಸ್‌ನ ಬಸವರಾಜ್.

ನಮ್ಮ ರಾಜ್ಯಕ್ಕಿಂತ ಬೆಳೆ ಉತ್ಪಾದನೆ ಕಡಿಮೆ ಇರುವ ಗುಜರಾತ್, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಪಂಜಾಬ್ ರಾಜ್ಯಗಳಲ್ಲಿ ಉತ್ತಮ ಕೋಲ್ಡ್‌ಸ್ಟೋರೇಜ್‌ಗಳಿವೆ. ಅಲ್ಲಿ ಕೊಯ್ಲೋತ್ತರ ನಷ್ಟ ಶೇ 5ರಿಂದ 6ರಷ್ಟು ಮಾತ್ರ. ಇವೆಲ್ಲವೂ ಕೋಲ್ಡ್‌ಸ್ಟೋರೇಜ್‌ಗಳಿಂದ ಸಾಧ್ಯವಾಗಿದೆ ಎನ್ನುತ್ತಾರೆ ತಜ್ಞರು. ಕರ್ನಾಟಕ, ಕೋಲ್ಡ್‌ಸ್ಟೋರೇಜ್ ಸೌಲಭ್ಯ ಪಡೆಯುವಲ್ಲಿ 10ನೇ ಸ್ಥಾನದಲ್ಲಿದೆ ಎನ್ನುತ್ತಾರೆ ತೋಟಗಾರಿಕೆ ವಿಜ್ಞಾನಿ ಎಸ್.ಎಲ್. ಜಗದೀಶ್.

ಸ್ಥಾಪನೆ, ನಿರ್ವಹಣೆ ಕಠಿಣ

ಕೋಲ್ಡ್‌ಸ್ಟೋರೇಜ್- ಕೃಷಿ-ತೋಟಗಾರಿಕೆ ಕ್ಷೇತ್ರದ ಅಗತ್ಯ ಸೌಲಭ್ಯಗಳಲ್ಲಿ ಒಂದು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಅದನ್ನು ಸ್ಥಾಪಿಸಿ ನಿರ್ವಹಿಸುವುದು ಸುಲಭವಲ್ಲ, ಸಾಧಾರಣ ರೈತರೊಬ್ಬರಿಂದಂತೂ ಸಾಧ್ಯವಿಲ್ಲ ಎನ್ನುವುದು ತಜ್ಞರ ಅಭಿಮತ.

'ಒಂದು ಸಾಧಾರಣ ಸಾಮರ್ಥ್ಯದ ಕೋಲ್ಡ್‌ಸ್ಟೋರೇಜ್ ನಿರ್ಮಾಣಕ್ಕೆ ₹4 ಕೋಟಿಯಿಂದ ₹5 ಕೋಟಿ ಖರ್ಚಾಗಬಹುದು' ಎಂದು ಅಂದಾಜಿಸುತ್ತಾರೆ ಹಾವೇರಿ ಜಿಲ್ಲೆಯ ಹಿರಿಯ ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಅಶೋಕ ಕುರುಬರ. ಮೂಲದ ಪ್ರಕಾರ, ಅಂದಾಜು ನಾಲ್ಕು ಸಾವಿರ ಟನ್ ಸಾಮರ್ಥ್ಯದ ಸೋಲಾರ್ ಮತ್ತು ವಿದ್ಯುತ್ ಆಧಾರಿತ ಕೋಲ್ಡ್‌ಸ್ಟೋರೇಜ್ ನಿರ್ಮಾಣಕ್ಕೆ ಸುಮಾರು ₹10 ಕೋಟಿ ಬಂಡವಾಳ, ವಾರ್ಷಿಕ ನಿರ್ವಹಣೆಗೆ ಅಂದಾಜು ಏಳೆಂಟು ಲಕ್ಷ ರೂಪಾಯಿ ಬೇಕಾಗುತ್ತದೆ. 10 ಟನ್ ಸಾಮರ್ಥ್ಯದ ಸೌರಶಕ್ತಿ ಆಧಾರಿತ ಸಣ್ಣ ಘಟಕ ಸ್ಥಾಪನೆಗೆ ಅಂದಾಜು ₹25 ಲಕ್ಷ ಬೇಕಾಗುತ್ತದೆ. ಅಷ್ಟೇ ಅಲ್ಲ, ಶೀತಲಗೃಹ ಆರಂಭಿಸಿದ ಮೇಲೆ ನಿರಂತರವಾಗಿ ವಿದ್ಯುತ್ ಇರಬೇಕು. ವಿದ್ಯುತ್ ಕೈಕೊಟ್ಟರೆ, ಪರ್ಯಾಯ ವ್ಯವಸ್ಥೆ ಮಾಡಿಕೊಂಡಿರಬೇಕು.

ಇಂಥ ಕಠಿಣ ಕಾರಣಗಳಿಗಾಗಿಯೇ ರೈತರು ವೈಯಕ್ತಿಕವಾಗಿ ಕೋಲ್ಡ್‌ಸ್ಟೋರೇಜ್ ಹೊಂದುವುದು ಕಷ್ಟ. ಹಾಗೆಯೇ, ಸಣ್ಣ ಹಿಡುವಳಿದಾರರು, ಖಾಸಗಿಯವರ ಶೀತಲಗೃಹಗಳಲ್ಲಿ ಉತ್ಪನ್ನಗಳನ್ನಿಟ್ಟು ದುಬಾರಿ ಬಾಡಿಗೆ ಕಟ್ಟುವುದು ಕಷ್ಟ. ಇವೆಲ್ಲದರ ನಡುವೆಯೂ ಒಣದ್ರಾಕ್ಷಿ, ಮೆಣಸಿನ ಕಾಯಿ, ಶುಂಠಿ, ಕಾಳುಮೆಣಸು, ಅಡಿಕೆಯಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಆರ್ಥಿಕವಾಗಿ ಸಬಲರಾಗಿರುವ ರೈತರು ಬಾಡಿಗೆ ಭರಿಸಿ ಶೀತಲಗೃಹಗಳನ್ನು ಬಳಸುತ್ತಿದ್ದಾರೆ.

ಪರಿಹಾರ ಸಾಧ್ಯತೆಗಳು

ಈಗ ರಾಜ್ಯದಾದ್ಯಂತ ಕ್ರಿಯಾಶೀಲವಾಗಿರುವ 800ಕ್ಕೂ ಹೆಚ್ಚು ರೈತ ಉತ್ಪಾದಕ ಕಂಪನಿಗಳಿವೆ (ಫಾರ್ಮರ್ ಪ್ರೊಡ್ಯೂಸರ್ಸ್ ಆರ್ಗನೈಸೇಷನ್ (ಎಫ್‌ಪಿಒ)/ಕಂಪನಿ (ಎಫ್‌ಪಿಸಿ). ತೋಟಗಾರಿಕೆ ಇಲಾಖೆ, ನಬಾರ್ಡ್, ಕೃಷಿ ಇಲಾಖೆ ಸೇರಿದಂತೆ ಸರ್ಕಾರದ ಹಲವು ಇಲಾಖೆಗಳ ಅಡಿಯಲ್ಲಿ ಈ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಮೂಲಕ ಕೋಲ್ಡ್‌ಸ್ಟೋರೇಜ್ ಸ್ಥಾಪನೆ ಮತ್ತು ನಿರ್ವಹಣೆಗೆ ಸರ್ಕಾರ ಆದ್ಯತೆ ನೀಡಬೇಕು. ಈ ಪ್ರಯತ್ನ ಆರಂಭವಾಗಿದ್ದರೂ, ಇದಕ್ಕೆ ವೇಗ ಕೊಡಬೇಕಿದೆ. ಮುಖ್ಯವಾಗಿ ರೈತರಿಗೆ, ಶೀತಲಗೃಹಗಳಿಂದ ಏನೆಲ್ಲ ಪ್ರಯೋಜನವಿದೆ, ಅದನ್ನು ಬಳಸಿಕೊಳ್ಳುವುದು ಹೇಗೆ ಎಂಬ ಜಾಗೃತಿಯನ್ನೂ ಮೂಡಿಸಬೇಕಿದೆ ಎನ್ನುವುದು ತಜ್ಞರ ಅಭಿಪ್ರಾಯ.

ಸರ್ಕಾರ ಈ ರೀತಿ ಪ್ರೋತ್ಸಾಹಿಸಿ, ಅದರ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಹೊರಗಿನವರಿಗೆ ಕೊಟ್ಟು, ಆ ಕೋಲ್ಡ್ ಸ್ಟೋರೇಜ್‌ಗಳಲ್ಲಿ ರೈತರಿಗೆ ಆದ್ಯತೆ ನೀಡಿ, ದರವನ್ನು ಕಡಿಮೆ ಇಡಲು ಸೂಚಿಸಿದರೆ, ಆಗ ಕೋಲ್ಡ್ ಸ್ಟೋರೇಜ್ ಬಳಕೆ ವ್ಯಾಪಕವಾಗುತ್ತದೆ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಅಧಿಕಾರಿಗಳು.

ಇಂಥದ್ದೇ ಬೆಳೆಗೆಂದು ಕೋಲ್ಡ್‌ಸ್ಟೋರೇಜ್ ಸ್ಥಾಪಿಸಿದರೂ, ಇದರಲ್ಲಿ ಆ ಉತ್ಪನ್ನಗಳನ್ನೇ ಇಡಬೇಕಿಲ್ಲ. ಸುತ್ತಮುತ್ತಲಿನ ರೈತರಿಗೆ ಅಗತ್ಯವಿರುವ ತರಕಾರಿ, ಹಣ್ಣು, ಧಾನ್ಯಗಳು, ಗೆಡ್ಡೆಗಳಂತಹ ಎಲ್ಲ ಪದಾರ್ಥಗಳನ್ನು ಇಡುವಂತೆ ವ್ಯವಸ್ಥೆ ಮಾಡಬಹುದು. ಈ ಬಗ್ಗೆ ಬೆಳೆಗಾರರಲ್ಲಿ ಜಾಗೃತಿ ಮೂಡಿಸುವುದು ಅಗತ್ಯ. ಆಗ ಬಳಕೆಯೂ ವ್ಯಾಪಕವಾಗುತ್ತದೆ.

ಅಧ್ಯಯನ, 'ಜಾಗೃತಿ'ಯೂ ಅಗತ್ಯ

ರಾಜ್ಯದಲ್ಲಿ ಕೋಲ್ಡ್ ಸ್ಟೋರೇಜ್ ಸ್ಥಿತಿಗತಿ, ಅಗತ್ಯಗಳ ಬಗ್ಗೆ ಅಧ್ಯಯನವಾಗಬೇಕು. ರಾಷ್ಟ್ರೀಯ ಕೋಲ್ಡ್‌ಚೈನ್ ಅಭಿವೃದ್ಧಿ ಕೇಂದ್ರ(ಎನ್‌ಸಿಸಿಡಿ) ಮತ್ತು ನಬಾರ್ಡ್ ಕನ್ಸಲ್ಟೆನ್ಸಿ ಸರ್ವೀಸ್ ಪ್ರೈ.ಲಿ. ಸಹಯೋಗದಲ್ಲಿ 2014-15ನಲ್ಲಿ ಇಂಥದ್ದೊಂದು ಅಧ್ಯಯನ ಮಾಡಿ, ವರದಿ ನೀಡಿದೆ. ಆ ನಂತರದಲ್ಲಿ ಇಂಥ ಪ್ರಯತ್ನಗಳಾಗಿಲ್ಲ.

ಕೋಲ್ಡ್‌ಸ್ಟೋರೇಜ್ ಕುರಿತು ಜಾಗೃತಿ ಮೂಡಿಸುವ ಮತ್ತು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಸರ್ಕಾರ, ಯಾವುದಾದರೂ ಒಂದು ನಿರ್ದಿಷ್ಟ ಇಲಾಖೆಗೆ ವಹಿಸಬೇಕಿದೆ. ಕೃಷಿ, ತೋಟಗಾರಿಕೆ, ಕೃಷಿ ಉತ್ಪನ್ನ ಮಾರುಕಟ್ಟೆ ವಿಭಾಗಗಳು, ಉತ್ಪಾದನೆ, ಮಾರಾಟಕ್ಕಷ್ಟೇ ಸೀಮಿತವಾಗಿವೆ. 'ಶೀತಲಗೃಹ'ಗಳ ಅನುಷ್ಠಾನ ನಿರ್ವಹಣೆಯನ್ನು ಕೇಳುವವರಿಲ್ಲದಂತಾಗಿದೆ.

ಸರ್ಕಾರವು ಎಲ್ಲ ಎಪಿಎಂಸಿಗಳಲ್ಲೂ ಶೀತಲಗೃಹಗಳನ್ನು ಕಡ್ಡಾಯವಾಗಿ ಸ್ಥಾಪಿಸಬೇಕು. ಕೈಗೆಟಕುವ ದರದಲ್ಲಿ ಬಾಡಿಗೆ ನಿಗದಿಪಡಿಸಬೇಕು. ಬಳಕೆಯ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಬೇಕು. ರೈತರು ಎಪಿಎಂಸಿಗೆ ಧಾನ್ಯಗಳನ್ನು ತಂದು, ನಿರೀಕ್ಷಿತ ಬೆಲೆ ಸಿಗದಿದ್ದಾಗ, ಅಲ್ಲೇ ಇರುವ ಕೋಲ್ಡ್‌ಸ್ಟೋರೇಜ್‌ನಲ್ಲಿಟ್ಟು ಉತ್ತಮ ಬೆಲೆ ಬಂದಾಗ ಮಾರಾಟ ಮಾಡುವಂತಹ ವ್ಯವಸ್ಥೆಯಾಗಬೇಕು ಎನ್ನುವುದು ತಜ್ಞರ ಅಭಿಮತ.

ರಾಜ್ಯದಲ್ಲಿರುವ ಕೋಲ್ಡ್‌ಸ್ಟೋರೇಜ್ ವಿವರ

ಜಿಲ್ಲೆ	ಸಂಖ್ಯೆ	ಸಾಮರ್ಥ್ಯ (ಟನ್‌ಗಳಲ್ಲಿ)
ಬಾಗಲಕೋಟೆ	5	5865
ಬೆಳಗಾವಿ	4	8500
ಬಳ್ಳಾರಿ	26	141650
ಬೆಂಗಳೂರು ಗ್ರಾ.	2	15000
ಬೆಂಗಳೂರು ನಗರ	9	17930
ಬೀದರ್	2	1900
ಚಿಕ್ಕಬಳ್ಳಾಪುರ	1	11500
ಚಿಕ್ಕಮಗಳೂರು	1	1000
ಚಿತ್ರದುರ್ಗ	4	17540
ದಕ್ಷಿಣ ಕನ್ನಡ	2	3150
ಧಾರವಾಡ	5	26598
ಗದಗ	4	17005
ಹಾಸನ	8	58000
ಹಾವೇರಿ	30	160350
ಕಲಬುರಗಿ	1	5000
ಕೋಲಾರ	2	5000
ಕೊಪ್ಪಳ	1	500
ಮೈಸೂರು	5	13863
ರಾಯಚೂರು	11	66806
ರಾಮನಗರ	2	33
ಶಿವಮೊಗ್ಗ	2	9400
ತುಮಕೂರು	2	3000
ಉತ್ತರ ಕನ್ನಡ	3	970
ವಿಜಯಪುರ	29	39055
ಯಾದಗಿರಿ	1	2000
ಒಟ್ಟು	162	631615

- ಚಾಮರಾಜನಗರ, ದಾವಣಗೆರೆ, ಕೊಡಗು, ಮಂಡ್ಯ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೋಲ್ಡ್ ಸ್ಟೋರೇಜ್‌ಗಳಿಲ್ಲ.
- ರಾಷ್ಟ್ರೀಯ ತೋಟಗಾರಿಕಾ ಮಿಷನ್ ಅಡಿ 49 ಕೋಲ್ಡ್ ಸ್ಟೋರೇಜ್‌ಗಳಿವೆ.
- ಸರ್ಕಾರಿ ಸ್ವಾಮ್ಯದ 10 ಕೋಲ್ಡ್ ಸ್ಟೋರೇಜ್‌ಗಳಿವೆ. ಇದರಲ್ಲಿ 9 ಕೆಪಕ್ ಅಡಿಯಲ್ಲಿವೆ.(ವಿಜಯಪುರ-4, ಕೊಪ್ಪಳ, ಗದಗ, ಧಾರವಾಡ ಬೀದರ್, ಬಾಗಲಕೋಟೆ ತಲಾ 1). ಇನ್ನೊಂದು ತೋಟಗಾರಿಕೆ ಇಲಾಖೆಯಡಿ ಬೆಂಗಳೂರು ನಗರದಲ್ಲಿದೆ.

(2022-23ರ ಮಾಹಿತಿ: ತೋಟಗಾರಿಕೆ ಇಲಾಖೆ, ಹಣ್ಣು ಮತ್ತು ತರಕಾರಿಗಳ ವಿಭಾಗ, ಲಾಲ್‌ಬಾಗ್, ಬೆಂಗಳೂರು)

ಒಂದನೇ ಪುಟದಿಂದ...

'ಸೌರ' ಆಧಾರಿತ ಕೋಲ್ಡ್‌ಸ್ಟೋರೇಜ್

'ಸೌರ ಆಧಾರಿತ ಘಟಕವಾದರೂ, ಎಮರ್ಜೆನ್ಸಿಗಾಗಿ ವಿದ್ಯುತ್ ಸಂಪರ್ಕವೂ ಇದೆ. ಆದರೆ ಈ ವರೆಗೂ ಒಂದು ಯೂನಿಟ್ ಬಳಸಿಲ್ಲ. ಒಂದೂವರೆ ವರ್ಷದಿಂದ ಈ ಘಟಕವನ್ನು ಸೌರಶಕ್ತಿಯಿಂದ ಬಳಸುತ್ತಿದ್ದೇವೆ. ಈವರೆಗೆ ನಿರ್ವಹಣೆಗಾಗಿ ಒಂದು ಪೈಸೆ ಕೂಡ ಖರ್ಚಾಗಿಲ್ಲ' ಎನ್ನುತ್ತಾರೆ ಸೋಮೇಶ್.

ಶಿವಮೊಗ್ಗ ಜಿಲ್ಲೆಯ ರಿಪ್ಪನ್‌ಪೇಟೆಯಲ್ಲಿ ಶಾರದಾ ವಿವಿಧೋದ್ದೇಶ ಕೋಲ್ಡ್‌ಸ್ಟೋರೇಜ್ ಘಟಕವಿದೆ. ಇದು ಕೂಡ ಸೌರಶಕ್ತಿ ಮತ್ತು ವಿದ್ಯುತ್ ಚಾಲಿತ ಘಟಕ. ಸುಮಾರು 4.4 ಸಾವಿರ ಟನ್ ಸಾಮರ್ಥ್ಯದ್ದು. ನಾಲ್ಕು ಅಂತಸ್ತುಗಳ ಘಟಕ. ರೈತರು ಮತ್ತು ಟ್ರೇಡರ್ಸ್ ಇಬ್ಬರೂ ಶುಂಠಿ, ಕಾಳುಮೆಣಸು, ಅಡಿಕೆ ಇಡುತ್ತಾರೆ. ಸೌರವಿದ್ಯುತ್ ಹೆಚ್ಚು ಉತ್ಪಾದನೆಯಾದರೆ, ಅದನ್ನು ಗ್ರಿಡ್‌ಗೆ ಮಾರಾಟ ಮಾಡುತ್ತಾರೆ.

'ಬಿಸಿಲು ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಸರ್ಕಾರ ಸೌರಶಕ್ತಿ ಆಧಾರಿತ ಬೃಹತ್ ಗಾತ್ರದ ಕೋಲ್ಡ್‌ಸ್ಟೋರೇಜ್‌ಗಳನ್ನು ಮಾಡಲು ವಿಪುಲ ಅವಕಾಶಗಳಿವೆ. ಇದರಿಂದ ನಿರ್ವಹಣಾ ವೆಚ್ಚವೂ ಕಡಿಮೆಯಾಗುತ್ತದೆ' ಎನ್ನುತ್ತಾರೆ ತಜ್ಞರು.

ಪೂರಕ ಮಾಹಿತಿ: ಬಸವರಾಜ ಸಂಪಳ್ಳಿ, ವಿಜಯಪುರ. ಸಿದ್ದು ಆರ್.ಜಿ.ಹಳ್ಳಿ, ಹಾವೇರಿ. ಸತೀಶ್ ಬೆಳ್ಳಕ್ಕಿ, ಗದಗ. ಸಂಧ್ಯಾ ಹೆಗಡೆ, ಮಂಗಳೂರು. ಓದೇಶ್, ರಾಮನಗರ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 17-12-1998

● ವಿಮಾ ಮಸೂದೆ ವಿರೋಧಿಸಿ ರಾಷ್ಟ್ರ ವ್ಯಾಪಿ ಸಿಬ್ಬಂದಿ ಸಂಪು

ನವದೆಹಲಿ ಡಿ. 16 (ಪಿಟಿಐ)– ಲೋಕಸಭೆಯಲ್ಲಿ ಮಂಗಳವಾರ ಮಂಡಿಸಲಾದ ವಿಮಾ ನಿಯಂತ್ರಣ ಪ್ರಾಧಿಕಾರ (ಐಆರ್‌ಎ) ಮಸೂದೆಯನ್ನು ಪ್ರತಿಭಟಿಸಿ ಸಾಮಾನ್ಯ ವಿಮಾ ನಿಗಮ ಹಾಗೂ ಭಾರತೀಯ ಜೀವ ವಿಮಾ ನಿಗಮದ ಉದ್ಯೋಗಿಗಳು ಇಂದು ಮುಷ್ಕರ ನಡೆಸಿದರು.

ಎಲ್‌ಐಸಿಯ ಮುಖ್ಯಕಚೇರಿ 'ಜೀವನ್ ಭಾರತಿ' ಕಟ್ಟಡ ಮುಂದೆ ಬೃಹತ್ ರ‍್ಯಾಲಿಯೊಂದನ್ನು ಉದ್ಯೋಗಿಗಳು ನಡೆಸಲಿದ್ದಾರೆ ಎಂದು ಉತ್ತರ ವಲಯದ ಜಿಐಸಿ ಉದ್ಯೋಗಿಗಳ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಉಮ್ಮದ್ ಸಿಂಗ್ ಹೇಳಿದರು.

50 ವರ್ಷಗಳ ಹಿಂದೆ

ಸೋಮವಾರ, 17-12-1973

● ರಾಜ್ಯದ ಎಲ್ಲೆಡೆ ಶಾಂತಿ

ಬೆಂಗಳೂರು, ಡಿ. 16– ಮಹಾರಾಷ್ಟ್ರದ ವಿವಿಧೆಡೆ ಕನ್ನಡಿಗರ ಮೇಲೆ ನಡೆದ ದೌರ್ಜನ್ಯಗಳ ವಿರುದ್ಧ ಕರ್ನಾಟಕದ ಅನೇಕ ನಗರ, ಪಟ್ಟಣಗಳಲ್ಲಿ ನಡೆದ ಹನ್ನೊಂದು ದಿನಗಳ ಉಗ್ರ ಪ್ರತಿಭಟನೆ, ಹಿಂಸಾಕೃತ್ಯಗಳ ನಂತರ ರಾಜ್ಯದ ಎಲ್ಲೆಡೆ ಇಂದು ಶಾಂತಸ್ಥಿತಿ ಕಂಡುಬಂತು.

ಉಗ್ರಗಲಭೆ, ಗೋಲಿಬಾರ್, ಹಿಂಸಾಕೃತ್ಯಗಳಿಂದ ತಲ್ಲಣಗೊಂಡಿದ್ದ ಬಿಜಾಪುರ ಜಿಲ್ಲೆಯ ಮುಧೋಳ, ಜಮುಖಂಡಿ, ರಬಕವಿ ಪಟ್ಟಣಗಳಲ್ಲಿ ಇಂದು ಜನಜೀವನ ಮಾಮೂಲು ಸ್ಥಿತಿಗೆ ಮರಳಿತು. ಉದ್ರಿಕ್ತ ಪರಿಸ್ಥಿತಿಯಿದ್ದ ಹುಬ್ಬಳ್ಳಿ- ಧಾರಾವಾಡ ನಗರಗಳಲ್ಲಿ ಇಂದು ಶಾಂತ ಸ್ಥಿತಿಯಿತ್ತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಡಿಸೆಂಬರ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಪಂಚಮಿ ಗಂ. 17-34 **ನಕ್ಷತ್ರ:** ಧನಿಷ್ಠಾ ಗಂ. 26-55 **ಯೋಗ:** ಹರ್ಷಣ ಗಂ 24-35
ಕರಣ: ಬವ ಗಂ. 06-47, ಬಾಲವ ಗಂ. 17-34, ಧನು ಮಾಸದ 01 ನೇ ದಿನ,
ಮಳೆನಕ್ಷತ್ರ: ಮೂಲಾ 1, **ರಾಹುಕಾಲ:** ಸಾಯಂಕಾಲ 04-30 – 06-00
ಸೂರ್ಯೋದಯ: 06-50 **ಸೂರ್ಯಾಸ್ತ:** 06-03
ಮುಸ್ಲಿಂ ದಿನಾಂಕ: 03 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 8, 3

ಮೇಷ: ವ್ಯವಹಾರದಲ್ಲಿನ ಹೆಚ್ಚಿನ ಸಮಸ್ಯೆಗಳಿಗೆ ಈ ದಿನ ಉತ್ತಮ ರೀತಿಯಲ್ಲಿ ಪರಿಹಾರ ದೊರೆಯಲಿದೆ. ಸ್ನೇಹಿತರ ಸಹಾಯದಿಂದ ಜಮೀನು ಖರೀದಿ ಮಾಡುವ ಕನಸು ನನಸಾಗಲಿದೆ. ಆತ್ಮವಿಶ್ವಾಸ ಬೇಕೇ ವಿನಃ ಅಂಜಿಕೆ ಬೇಡ.

ವೃಷಭ: ಅನ್ಯರಿಗೆ ಸಲಹೆ ಸೂಚನೆ ಕೊಡುವ ನಿಮಗೆ ನಿಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳುವುದು ಕಷ್ಟವೆನಿಸಲಿದೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಅಪರಿಮಿತ ಆಸಕ್ತಿ ಮೂಡಲಿದೆ. ಗೃಹಿಣಿಯರಿಗೆ ಆಶಾದಾಯಕ ದಿನ.

ಮಿಥುನ: ನೀವು ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ಸ್ನೇಹಿತರ ಕಷ್ಟಗಳಿಗೆ ನೆರವಾಗುವ ನಿಮ್ಮ ಸ್ವಭಾವದಿಂದ ಸಮಸ್ಯೆಗಳನ್ನು ತಲೆ ಮೇಲೆ ಎಳೆದುಕೊಂಡಂತೆ ಆಗಬಹುದು.

ಕರ್ಕಾಟಕ: ನಿಮ್ಮ ದೈನಂದಿನ ಬದುಕನ್ನು ಶಿಸ್ತು ಬದ್ಧ ರೀತಿಯಲ್ಲಿ ನಡೆಸಲು ತೀರ್ಮಾನಿಸುವುದರಿಂದ ಅಭಿವೃದ್ಧಿ ಹೊಂದುವಿರಿ. ಎಲ್ಲಾ ಕೆಲಸಗಳನ್ನು ಸಮಯದಲ್ಲಿ ಮಾಡಿ ಮುಗಿಸಿಕೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ.

ಸಿಂಹ: ಆರಕ್ಷಕರು ಮತ್ತು ರಾಜಕಾರಣಿಗಳು ನಿಮ್ಮಿಂದಲೇ ತಪ್ಪುಗಳು ನಡೆಯುವ ಸಂಭವವು ಹೆಚ್ಚಿರುವುದರಿಂದ ಜಾಗರೂಕತೆ ವಹಿಸಬೇಕಾಗುತ್ತದೆ. ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ಹಾಗೂ ಸೌಲಭ್ಯವನ್ನು ಪಡೆಯಬಹುದು.

ಕನ್ಯಾ: ವ್ಯವಹಾರದಲ್ಲಿ ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ. ಅಲಂಕಾರಿಕ ವಸ್ತುಗಳಿಗಾಗಿ ಹೆಚ್ಚಿನ ಹಣ ವಿನಿಯೋಗವಾಗುವುದು. ಕೆಲಸಗಳು ನೆರವೇರಲು ತುಸು ಶ್ರಮ ವಹಿಸಬೇಕಾದೀತು.

ತುಲಾ: ನಿರುದ್ಯೋಗಿಗಳಿಗೆ ಲೆಕ್ಕ ಪತ್ರಗಳ ಜವಾಬ್ದಾರಿ ನೋಡುವಂತಹ ಕೆಲಸ ಸಿಗುವ ಸಾಧ್ಯತೆ ಇದೆ. ಬಂಧು ಮಿತ್ರರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ. ನಿಮ್ಮ ಸ್ನೇಹಿತರ ಕಷ್ಟಗಳನ್ನು ವಿಮರ್ಶಿಸಿ ಸಹಕರಿಸಿ.

ವೃಶ್ಚಿಕ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ನೀಲಿ ವಸ್ತ್ರ ಅಥವಾ ಹರಳು ಕಾರ್ಯಸಾಧನೆಗೆ ಸಹಾಯಕವಾಗಲಿದೆ. ಈಶ್ವರನ ಆರಾಧನೆ ಮಾಡಿ, ಶುಭವಾಗುತ್ತದೆ.

ಧನು: ಕಳೆದಿದ್ದ ದಾಖಲೆ ಪತ್ರಗಳು ಸಿಕ್ಕು ಸಮಾಧಾನ ಉಂಟಾಗುತ್ತದೆ. ಗಿಡ ಮೂಲಿಕೆಗಳ ಬಳಕೆಯಿಂದ ಉದರ ಸಂಬಂಧಿ ವ್ಯಾಧಿಗಳು ಗುಣವಾಗುವುದು. ಕುಟುಂಬದ ಸರ್ವ ಸದಸ್ಯರಲ್ಲಿ ಆರೋಗ್ಯ ಭಾಗ್ಯ ಇರುವುದು.

ಮಕರ: ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಬಹಳ ದಿನಗಳಿಂದ ನಿಮ್ಮ ಮೇಲಿದ್ದ ಅಪವಾದಗಳು ದೂರಾಗುವುದು.

ಕುಂಭ: ಮಗನ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಎಡವಿದ ಅನುಭವ ಆಗಲಿದೆ. ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಈ ದಿನ ಮಾತಿಗೆ ಕಡಿವಾಣ ಹಾಕುವುದು ಲೇಸು.

ಮೀನ: ದೇವತಾ ಕಾರ್ಯಗಳನ್ನು ಹಮ್ಮಿಕೊಳ್ಳುವ ಅಥವಾ ಭಾಗವಹಿಸುವ ಉದ್ದೇಶದಿಂದ ಪ್ರಯಾಣ ಮಾಡಬೇಕಾಗಬಹುದು. ಮಕ್ಕಳಿಂದ ದುಬಾರಿ ಬೆಲೆಯ ವಸ್ತುಗಳ ಖರೀದಿ. ವಿದ್ವಾಂಸರಿಗೆ ಮನ್ನಣೆ ಗೌರವ ಹೆಚ್ಚುವುದು.

ಪದಬಂಧ 5532

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗೋಪಾಲಕನ ಮುಂದೆಯೇ ತೋರಿದ ಶೀಘ್ರಸಿಟ್ಟು! (3)
3.ವಿಕಸಿಸುತ್ತಿರುವ ಪುಷ್ಪ (3)
5.ಹಾವು ಹೊಕ್ಕಿರುವ ಕಣಜ! (3)
6.ಮರದ ಹತ್ತಿರವಿರುವ ಮೊಸಳೆ (3)
8.ತೆಪ್ಪಗೆ ಹತ್ತಿದ ಹರಿಗೋಲು (2)
9.ಹೆಂಗಳೆಯರಿಗೆ ಬೇಕಾದ ರುಬ್ಬುವಕಲ್ಲು (3)
10.ಪದ್ಯದ ನಿಯತಸ್ಥಳಗಳಲ್ಲಿ ಬರುವ ನಿಯತಾಕ್ಷರ (2)
13.ಪುಟ್ಟದಾದ ಭರಣಿ (3)
15.ರೂಪಸಿಯೂ ಆಗಿರುವ ನಲ್ಲೆ (3)
16.ಪ್ರಚಲಿತ ವಿಶ್ವ (3)
17.ತಿರುಗಿ ನಿಂತು ಸಿಟ್ಟಿಗೇಳು! (3)

ಮೇಲಿಂದ ಕೆಳಕ್ಕೆ

1.ಬೆಳಗಿನ ಜಾವವಿದು (3)
2.ಶ್ರೇಷ್ಠವಾದುದನ್ನು ಹೀಗೂ ಹೇಳುವರು (3)
3.ಕುಟಿಲನು ಪ್ರವೇಶಿಸಿರುವ ಗುಡಿಸಲು (3)
4.ಮಳೆಯಲ್ಲಿರುವ ಹೆಂಗಸು (3)
5.ಹಣ ನೀಡಿ ತಂದಿರುವ ದೀಪ (3)
7.ಕರುವಿನ ಪಚನಾಂಗ (3)
9.ಪುನಃ ಪುನಃ ತೋರಿದ ವೈಯಾರ (3)
11.ಸನ್ಮಾರ್ಗ ತೋರಿದ ತಪಸ್ವಿ (3)
12.ಏಳಿಗೆಯಿಲ್ಲಿ ಉಲ್ಟಾ ಆಗಿಬಿಟ್ಟಿದೆ (3)
13.ಸಂಕೋಲೆ ನೋಡುತ್ತಲೇ ಕುಗ್ಗುವಿಕೆ! (3)
14.ಪಾಲು ಕೇಳಿ ಬರೆದಿರುವ ಅಂಚೆ (3)
15.ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿಟ್ಟಿರುವ ನೋಡುಗ (3)



5531ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಾಂಚಾಣ 3.ಹುಸಿನಗು 5.ಅನುರಾಗ 7.ಹೂದಾನಿ 8.ಪರಿಕ್ರಮಣ 10.ಹರಕೆ 11.ಕರಿಯೋಲೆ 14.ದಿಗ್ವಿಜಯ 15.ಅತ್ತರು

ಮೇಲಿಂದ ಕೆಳಕ್ಕೆ: 2.ಣವರಾ 3.ಹುತ್ತ 4.ಗುಮಾನಿ 6.ಗಡಾರಿ 7.ಹೂರಣ 8.ಪತಾಕೆ 9.ಮಸ್ತಕ 10.ಹಳದಿ 12.ರೆಕ್ಕಅ 13.ಪಾಯ

ಸುಡೊಕು 5918

		1		6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5917 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ಕೋವಿಡ್: ಆಸ್ಪತ್ರೆಗಳಲ್ಲಿ ಸನ್ನದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆರೆಯ ಕೇರಳ ರಾಜ್ಯದಲ್ಲಿ ಕೋವಿಡ್ ಸೋಂಕಿತ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ರಾಜ್ಯದಲ್ಲೂ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಆರೋಗ್ಯ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಕೆಲವು ದಿನಗಳಿಂದ ಕೇರಳದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಆದರಿಂದ ಕರ್ನಾಟಕದಲ್ಲಿ ಆತಂಕಪಡುವ ಸ್ಥಿತಿಯೇನೂ ಇಲ್ಲ. ಆದರೆ, ಸಂಭಾವ್ಯ ಪರಿಸ್ಥಿತಿ ಎದುರಿಸಲು ಸಜ್ಜಾಗುತ್ತಿದ್ದೇವೆ' ಎಂದರು.

ಸೋಂಕು ವ್ಯಾಪಕವಾಗಿ ಹರಡುವ ಮುನ್ನವೇ ಆಸ್ಪತ್ರೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಬೇಕು. ಇದಕ್ಕಾಗಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಲಭ್ಯತೆ, ಔಷಧಿ, ಆಮ್ಲಜನಕ, ಮಾಸ್ಕ್ ಮತ್ತಿತರ ಅಗತ್ಯ ವಸ್ತುಗಳ ದಾಸ್ತಾನು ಪರಿಶೀಲಿಸುವಂತೆ ಸೂಚಿಸಲಾಗಿದೆ. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಸನ್ನದ್ಧತೆ ಪರಿಶೀಲಿಸುವಂತೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ಪರೀಕ್ಷೆ ಹೆಚ್ಚಳಕ್ಕೆ ಸೂಚನೆ: ವಿಷಮಶೀತ ಜ್ವರದಿಂದ (ಐಎಲ್‌ಐ) ಬಳಲುತ್ತಿರುವ 20 ಜನರಲ್ಲಿ ಒಬ್ಬರಿಗೆ ಮತ್ತು ತೀವ್ರ ಉಸಿರಾಟದಿಂದ ಬಳಲುತ್ತಿರುವ (ಸಾರಿ) ಎಲ್ಲರಿಗೂ ಕೋವಿಡ್ ಪರೀಕ್ಷೆ ಮಾಡಲಾಗುವುದು. ಹಂತ ಹಂತವಾಗಿ ಕೋವಿಡ್ ಪರೀಕ್ಷೆ ಹೆಚ್ಚಳಕ್ಕೆ ಸೂಚಿಸಲಾಗಿದೆ ಎಂದು ಸಚಿವರು ಹೇಳಿದರು.

ಈಗ 30,000 ಕೋವಿಡ್ ಆರ್‌ಟಿ-ಪಿಸಿಆರ್ ಕಿಟ್‌ಗಳ ದಾಸ್ತಾನು ಇದೆ. ಇನ್ನೂ ಮೂರು ಲಕ್ಷ ಕಿಟ್‌ಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ವಾರದೊಳಗೆ ಪೂರೈಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಕೇರಳದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಾರಣಕ್ಕೆ ಅಂತರರಾಜ್ಯ ಗಡಿಯಲ್ಲಿ ಪ್ರವೇಶ ನಿರ್ಬಂಧಿಸುವ ಅಥವಾ ಕೋವಿಡ್ ಪರೀಕ್ಷೆ ಕಡ್ಡಾಯಗೊಳಿಸುವ ಪ್ರಸ್ತಾವ ಇಲ್ಲ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಕೋವಿಡ್ ಸಂಬಂಧಿಸಿದಂತೆ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ. ರವಿ ಅವರ ನೇತೃತ್ವದಲ್ಲಿ ಮಂಗಳವಾರ ಸಭೆ ನಡೆಯಲಿದೆ. ಸಮಿತಿ ನೀಡುವ ಶಿಫಾರಸುಗಳನ್ನು ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ 58 ಸಕ್ರಿಯ ಪ್ರಕರಣ

'ರಾಜ್ಯದಲ್ಲಿ ಈಗ ಕೋವಿಡ್ ಸೋಂಕಿನ 58 ಸಕ್ರಿಯ ಪ್ರಕರಣಗಳಿವೆ. ಅವುಗಳಲ್ಲಿ 47 ಮಂದಿ ಮನೆಗಳಲ್ಲೇ ಪ್ರತ್ಯೇಕವಾಸದಲ್ಲಿ ಇದ್ದಾರೆ. 11 ಮಂದಿ ಆಸ್ಪತ್ರೆಗೆ ದಾಖಲಾಗಿದ್ದು, ಅವರಲ್ಲಿ ಆರು ಜನರು ತೀವ್ರ ನಿಗಾ ಘಟಕದಲ್ಲಿದ್ದಾರೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

'ಎರಡು ತಿಂಗಳಿಂದ ಈಚೆಗೆ ರಾಜ್ಯದಲ್ಲಿ ಕೋವಿಡ್‌ನಿಂದ ಯಾವುದೇ ಮರಣ ಸಂಭವಿಸಿಲ್ಲ. ತೀವ್ರ ಸ್ವರೂಪದ ಇತರ ಕಾಯಿಲೆಗಳಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ. ಅವರಲ್ಲಿ ಕೋವಿಡ್ ದೃಢಪಟ್ಟಿದ್ದು, ಅದು ಕೋವಿಡ್‌ನಿಂದಾಗಿಯೇ ಸಂಭವಿಸಿದ ಮರಣ ಎನ್ನಲಾಗದು' ಎಂದು ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಸಿಟಿ ವ್ಯಾಲ್ಯೂ 25ಕ್ಕಿಂತ ಕಡಿಮೆ ಇರುವ ಕೋವಿಡ್ ರೋಗಿಗಳ ಗಂಟಲು ಮತ್ತು ಮೂಗಿನ ದ್ರವದ ಮಾದರಿಯನ್ನು ವೈರಾಣುವಿನ ವಂಶವಾಹಿ ಸಂರಚನೆ ಅಧ್ಯಯನಕ್ಕಾಗಿ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಕಳುಹಿಸಲು ಆರೋಗ್ಯ ಸಚಿವರು ಸೂಚಿಸಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಆಸ್ಪತ್ರೆಗಳ ಸನ್ನದ್ಧತೆ ಪರಿಶೀಲನೆ ಗುರುವಾರದಿಂದ ಆರಂಭವಾಗಿದ್ದು, ಸೋಮವಾರ ಪೂರ್ಣಗೊಳ್ಳಲಿದೆ. ಮಂಗಳವಾರ ವರದಿ ಲಭ್ಯವಾಗಲಿದೆ ಎಂದು ಹೇಳಿದ್ದಾರೆ.

ವಿಜಯ ದಿವಸ್: ಬಿಎಸ್‌ಎಫ್ ಕವಾಯತು

ನವದೆಹಲಿ (ಪಿಟಿಐ): ಬಾಂಗ್ಲಾ ವಿಮೋಚನೆಗಾಗಿ 1971ರಲ್ಲಿ ನಡೆದ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧ ಭಾರತ ಸೇನೆ ಜಯಗಳಿಸಿದ್ದರ ಸ್ಮರಣಾರ್ಥ ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ಶನಿವಾರ ಇದೇ ಮೊದಲ ಬಾರಿಗೆ 'ವಿಜಯ ದಿವಸ್ ಕವಾಯತು' ಆಯೋಜಿಸಿತ್ತು.

ಯುದ್ಧದಲ್ಲಿ ಹುತಾತ್ಮರಾದ ವೀರ ಯೋಧರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವರು ಗೌರವ ನಮನ ಸಲ್ಲಿಸಿದರು.

'ಗಡಿ ಭದ್ರತಾ ಪಡೆಯು ಇದೇ ಮೊದಲ ಬಾರಿಗೆ 'ವಿಜಯ ದಿವಸ್ ಪರೇಡ್' ಆಯೋಜಿಸಿದೆ. ಇದಕ್ಕೂ ಮುನ್ನ ಬೆಟಾಲಿಯನ್ ಮತ್ತು ಸೇನಾ ಘಟಕಗಳ ಮಟ್ಟದ ಕಾರ್ಯಕ್ರಮ ಆಯೋಜಿಸಿ ಹುತಾತ್ಮರಿಗೆ ನಮನ ಸಲ್ಲಿಸುತ್ತಿದ್ದೆವು' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

1971ರ ಡಿಸೆಂಬರ್ 16ರಂದು ಪಾಕಿಸ್ತಾನದ 90,000 ಸೈನಿಕರು ಶರಣಾಗತಿಯಾಗುವ ಮೂಲಕ ಭಾರತವು ಯುದ್ಧದಲ್ಲಿ ಜಯ ಸಾಧಿಸಿತ್ತು. ಇದರ ಪರಿಣಾಮವಾಗಿ ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರದ ಉಗಮವಾಯಿತು. ಈ ವಿಜಯದ ಸ್ಮರಣಾರ್ಥ ಡಿ.16ರಂದು ಭಾರತ 'ವಿಜಯ ದಿವಸ್' ಆಚರಿಸುತ್ತದೆ.

ಯುದ್ಧದಲ್ಲಿ ಭಾರತದ ಬಿಎಸ್‌ಎಫ್‌ನ 125 ಸಿಬ್ಬಂದಿ ಹುತಾತ್ಮರಾಗಿದ್ದರು ಮತ್ತು 392 ಮಂದಿ ಗಾಯಗೊಂಡಿದ್ದರು.

ಮೇಜರ್ ಜನರಲ್ ಗೌರವ್ ಗೌತಮ್ ಅವರು 'ವಿಜಯ ದಿವಸ್' ಅಂಗವಾಗಿ ಜಮ್ಮುವಿನಲ್ಲಿರುವ ಬಲಿದಾನ ಸ್ತಂಭಕ್ಕೆ ಶನಿವಾರ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ನಮ್ಮ ಯೋಧರ ನಿಸ್ವಾರ್ಥ ತ್ಯಾಗವನ್ನು ರಾಷ್ಟ್ರವು ಸದಾ ನೆನಪಿನಲ್ಲಿ ಇಡುತ್ತದೆ. ಅಪ್ರತಿಮ ಶೌರ್ಯದ ಮೂಲಕ ಐತಿಹಾಸಿಕ ಗೆಲುವು ಸಾಧಿಸಿದ ಯೋಧರಿಗೆ ಗೌರವ ನಮನಗಳು

ದ್ರೌಪದಿ ಮುರ್ಮು, ರಾಷ್ಟ್ರಪತಿ

1971ರಲ್ಲಿ ದೇಶಕ್ಕಾಗಿ ಪ್ರಾಣವನ್ನೇ ತ್ಯಾಗ ಮಾಡಿದ ವೀರ ಯೋಧರಿಗೆ ಹೃದಯಪೂರ್ವಕ ಗೌರವ ನಮನಗಳು. ಅವರ ತ್ಯಾಗ ಮತ್ತು ಅದಮ್ಯ ಉತ್ಸಾಹ ದೇಶದ ಜನರ ಹೃದಯದಲ್ಲಿ ಅಜರಾಮರ

ನರೇಂದ್ರ ಮೋದಿ, ಪ್ರಧಾನಿ

ವಿರೋಧ ಪಕ್ಷದ ನಾಯಕರಾಗಿ ಕೆಸಿಆರ್ ಆಯ್ಕೆ



ಹೈದರಾಬಾದ್ (ಪಿಟಿಐ): ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ.

'39 ಶಾಸಕರನ್ನು ಹೊಂದಿರುವ ಭಾರತ ರಾಷ್ಟ್ರ ಸಮಿತಿಯು ವಿಧಾನ ಸಭೆಯಲ್ಲಿ ಎರಡನೇ ಅತಿ ದೊಡ್ಡ ಪಕ್ಷವಾಗಿದ್ದು, ಆ ಪಕ್ಷದ ನಾಯಕ ಚಂದ್ರಶೇಖರ ರಾವ್ ಅವರಿಗೆ ವಿರೋಧ ಪಕ್ಷದ ನಾಯಕನ ಸ್ಥಾನ ನೀಡಲಾಗಿದೆ' ಎಂದು ಸಭಾಧ್ಯಕ್ಷ ಗದ್ದಮ್ ಪ್ರಸಾದ್ ಕುಮಾರ್ ಅವರು ಶನಿವಾರ ಸದನದಲ್ಲಿ ಪ್ರಕಟಿಸಿದರು.

ಪಿಎಂಒ ಅಧಿಕಾರಿ ಸೋಗು: ಸೆರೆ

ಭುವನೇಶ್ವರ (ಪಿಟಿಐ): ಪ್ರಧಾನ ಮಂತ್ರಿ ಕಚೇರಿ ಅಧಿಕಾರಿ ಮತ್ತು ಸೇನೆ ವೈದ್ಯನ ಸೋಗಿನಲ್ಲಿ ಜನರಿಗೆ ವಂಚಿಸುತ್ತಿದ್ದ ಕಾಶ್ಮೀರ ಮೂಲದ ವ್ಯಕ್ತಿ ಸೈಯದ್ ಇಶಾನ್ ಬುಕಾರಿ ಅವರನ್ನು ಒಡಿಶಾ ಪೊಲೀಸ್ ಇಲಾಖೆಯ ವಿಶೇಷ ಕಾರ್ಯಾಚರಣೆ ಪಡೆ ಬಂಧಿಸಿದೆ.

ಕೇರಳ: ಕೋವಿಡ್ ಉಪತಳಿ ಜೆಎನ್.1 ವೈರಾಣು ಪತ್ತೆ

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಜೆಎನ್.1 ಉಪತಳಿಯು ಕೇರಳದ ಮಹಿಳೆಯೊಬ್ಬರಲ್ಲಿ ಇದೇ ತಿಂಗಳ 8ರಂದು ಪತ್ತೆಯಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ (ಐಸಿಎಂಆರ್) ಶನಿವಾರ ತಿಳಿಸಿದೆ.

ಶೀತ ಜ್ವರದ (ಐಎಲ್‌ಐ) ಸೌಮ್ಯ ಲಕ್ಷಣಗಳನ್ನು ಹೊಂದಿದ್ದ 73 ವರ್ಷದ ಮಹಿಳೆಯಲ್ಲಿನ ಮಾದರಿಯನ್ನು ತಿರುವನಂತಪುರ ಜಿಲ್ಲೆಯ ಕರಕುಳಂನಲ್ಲಿ ನವೆಂಬರ್ 18ರಂದು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಕಳುಹಿಸಲಾಗಿತ್ತು. ಜೆಎನ್.1 ವೈರಾಣು ಇರುವುದು ಪರೀಕ್ಷೆಯಿಂದ ದೃಢಪಟ್ಟಿದ್ದು, ಮಹಿಳೆ ಕೋವಿಡ್‌ನಿಂದ ಚೇತರಿಸಿಕೊಂಡಿದ್ದಾರೆ ಎಂದು ಐಸಿಎಂಆರ್ ಮಹಾನಿರ್ದೇಶಕ ಡಾ.ರಾಜೀವ್ ಬಹ್ಲ್ ಹೇಳಿದ್ದಾರೆ.

'ಕೇರಳದಲ್ಲಿ ಕಳೆದ ಕೆಲ ವಾರಗಳಿಂದ ಕೋವಿಡ್-19 ಪ್ರಕರಣದಲ್ಲಿ ಏರಿಕೆ ಕಂಡುಬಂದಿದೆ. ಐಎಲ್‌ಐ ಲಕ್ಷಣ ಗಳನ್ನು ಹೊಂದಿರುವ ಎಲ್ಲರನ್ನೂ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸುತ್ತಿರುವುದು ಇದಕ್ಕೆ ಕಾರಣ' ಎಂದಿದ್ದಾರೆ.

ಜೆಎನ್.1 ತಳಿಯ ಪ್ರಕರಣ ದೇಶದಲ್ಲಿ ಮತ್ತೆಲ್ಲಿಯೂ ಪತ್ತೆಯಾಗಿಲ್ಲ. ಈ ವೈರಾಣು ಜಗತ್ತಿನಲ್ಲಿ ಮೊದಲು ಲಕ್ಸೆಂಬರ್ಗ್‌ನಲ್ಲಿ ಕಾಣಿಸಿಕೊಂಡಿತ್ತು. ಆ ಬಳಿಕ ಹಲವು ದೇಶಗಳಿಗೆ ಹರಡುತ್ತಿದೆ ಎಂದು ಮೂಲಗಳು ಹೇಳಿವೆ.

ಈ ಹಿಂದೆ, ಸಿಂಗಪುರದಲ್ಲಿ ಭಾರತೀಯ ಪ್ರಯಾಣಿಕರೊಬ್ಬರಲ್ಲಿ ಜೆಎನ್.1 ಉಪತಳಿ ವೈರಾಣು ಪತ್ತೆಯಾಗಿತ್ತು. ಈ ವ್ಯಕ್ತಿ ತಮಿಳುನಾಡಿನ ತಿರುಚಿರಾಪಳ್ಳಿ ಜಿಲ್ಲೆಯವರಾಗಿದ್ದು, ಅಕ್ಟೋಬರ್ 25ರಂದು ಸಿಂಗಪುರಕ್ಕೆ ತೆರಳಿದ್ದರು.

ಸದ್ಯ ದೇಶದಲ್ಲಿ ಕಾಣಿಸಿಕೊಳ್ಳುತ್ತಿರುವ ಕೋವಿಡ್-19 ಪ್ರಕರಣಗಳಲ್ಲಿ ಶೇ 90ಕ್ಕೂ ಹೆಚ್ಚು ಪ್ರಕರಣಗಳು ಸೌಮ್ಯ ಲಕ್ಷಣ ಹೊಂದಿವೆ. ರೋಗಿಗಳನ್ನು ಮನೆಯಲ್ಲೇ ಪ್ರತ್ಯೇಕವಾಗಿರಿಸಿ, ಆರೈಕೆ ಮಾಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಹೊಸ 339 ಪ್ರಕರಣಗಳು ದೃಢ

ನವದೆಹಲಿ (ಪಿಟಿಐ): ದೇಶದಾದ್ಯಂತ 24 ಗಂಟೆಯಲ್ಲಿ ಕೋವಿಡ್‌ನ 339 ಹೊಸ ಪ್ರಕರಣಗಳು ದಾಖಲಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 1,492ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ತಿಳಿಸಿದೆ.

'ಇದುವರೆಗಿನ ಸಾವಿನ ಸಂಖ್ಯೆ ಒಟ್ಟು 5,33,311 ಇದ್ದು, ದೇಶದಾದ್ಯಂತ ಈವರೆಗಿನ ಕೋವಿಡ್ ಪ್ರಕರಣಗಳ ಸಂಖ್ಯೆ 4,50,04,481ಕ್ಕೆ ಏರಿಕೆಯಾಗಿದೆ' ಎಂದು ಇಲಾಖೆಯ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ.

'ಚೇತರಿಕೆ ಪ್ರಮಾಣವು ಶೇ 98.81 ರಷ್ಟಿದ್ದು, ಸಾವಿನ ಪ್ರಮಾಣ ಶೇ 1.19 ರಷ್ಟಿದೆ. ದೇಶದಲ್ಲಿ ಈವರೆಗೆ ಕೋವಿಡ್ ಲಸಿಕೆಯ 220.67 ಕೋಟಿ ಡೋಸ್‌ಗಳನ್ನು ಜನರಿಗೆ ಹಾಕಲಾಗಿದೆ' ಎಂಬ ಮಾಹಿತಿ ವೆಬ್‌ಸೈಟ್‌ನಲ್ಲಿ ಇದೆ.

ಕೇರಳದಲ್ಲಿ ಇಬ್ಬರ ಸಾವು

ಕೋಯಿಕ್ಕೋಡ್: ಕೇರಳದ ಕೋಯಿಕ್ಕೋಡ್ ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ಕೋವಿಡ್‌ನಿಂದ ಇಬ್ಬರು ಮೃತಪಟ್ಟಿದ್ದಾರೆ ಎಂದು 'ಮನೋರಮಾ ಆನ್‌ಲೈನ್' ವರದಿ ಮಾಡಿದೆ.

ಕೋಯಿಕ್ಕೋಡ್‌ನ ವಟ್ಟೋಳಿ ಕುನ್ನುಮ್ಮಲ್ ನಿವಾಸಿ ಕುಮಾರನ್ (77), ಕಣ್ಣೂರಿನ ಪಾನೂರು ನಿವಾಸಿ ಅಬ್ದುಲ್ಲ (82) ಮೃತಪಟ್ಟವರು.

ಕುಮಾರನ್ ಅವರು ಕೋವಿಡ್‌ನಿಂದ ಮೃತಪಟ್ಟಿರುವುದು ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿರುವುದಾಗಿ ವರದಿಯಲ್ಲಿ ಹೇಳಲಾಗಿದೆ.

'ಗಡಿಯುದ್ದಕ್ಕೂ 250 ಉಗ್ರರು'

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಒಳಗೆ ನುಸುಳುವ ಉದ್ದೇಶದಿಂದ ಗಡಿಯಾದ್ಯಂತ ಸುಮಾರು 250-300 ಉಗ್ರರು ಅಡಗುದಾಣಗಳಲ್ಲಿ ಅಡಗಿದ್ದಾರೆ ಎಂಬ ಗುಪ್ತಚರ ಮಾಹಿತಿ ಲಭ್ಯವಾಗಿದೆ ಎಂದು ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಇನ್‌ಸ್ಪೆಕ್ಟರ್ ಜನರಲ್ ಅಶೋಕ್ ಯಾದವ್ ಶನಿವಾರ ತಿಳಿಸಿದ್ದಾರೆ.

ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿದ್ದು, ಒಳನುಸುಳುವ ಭಯೋತ್ಪಾದಕರ ಯತ್ನವನ್ನು ವಿಫಲಗೊಳಿಸಲಿವೆ ಎಂದೂ ಹೇಳಿದರು.

'ಕಳೆದ ಕೆಲ ವರ್ಷಗಳಿಂದ ಭದ್ರತಾ ಪಡೆ ಮತ್ತು ಕಾಶ್ಮೀರ ಜನತೆಯ ನಡುವಣ ಸಂಪರ್ಕ ಹೆಚ್ಚಾಗಿದೆ. ಜನರು ನಮಗೆ ಸಹಕಾರ ನೀಡಿದಲ್ಲಿ ಅಭಿವೃದ್ಧಿ ಚಟುವಟಿಕೆಗಳಿಗೆ ಇನ್ನಷ್ಟು ವೇಗ ದೊರೆಯಲಿದೆ' ಎಂದು ಹೇಳಿದರು.

ವಿದೇಶಿ ವಿ.ವಿ ಸಹಯೋಗ ಯುಜಿಸಿ ಎಚ್ಚರಿಕೆ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ (ಯುಜಿಸಿ) ಮಾನ್ಯತೆ ಪಡೆಯದ ವಿದೇಶಿ ವಿಶ್ವವಿದ್ಯಾಲಯಗಳ ಸಹಯೋಗದಲ್ಲಿ ಪದವಿ ನೀಡುತ್ತಿರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಮತ್ತು ಕಾಲೇಜುಗಳಿಗೆ ಯುಜಿಸಿ ಎಚ್ಚರಿಕೆ ನೀಡಿದೆ.

ಈ ರೀತಿ ನೀಡುವ ಯಾವುದೇ ಪದವಿಗೆ ಮಾನ್ಯತೆ ಇರುವುದಿಲ್ಲ. ಇಂಥ ಕೋರ್ಸ್‌ಗಳಿಗೆ ಸೇರ್ಪಡೆಯಾಗುವ ಮುನ್ನ ವಿದ್ಯಾರ್ಥಿಗಳು ಎಚ್ಚರದಿಂದ ಇರಬೇಕು ಎಂದು ತಿಳಿಸಿದೆ.

'ಯುಜಿಸಿಯಿಂದ ಮಾನ್ಯತೆ ಪಡೆಯದ ವಿದೇಶದ ಶಿಕ್ಷಣ ಸಂಸ್ಥೆಗಳೊಂದಿಗೆ ಹಲವು ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಕಾಲೇಜುಗಳು ಒಪ್ಪಂದ ಮಾಡಿಕೊಂಡಿರುವುದು ಮತ್ತು ವಿದೇಶದ ಪದವಿ ನೀಡುತ್ತಿರುವುದು ಗಮನಕ್ಕೆ ಬಂದಿದೆ. ಇಂಥ ಯಾವುದೇ ಸಹಯೋಗ ಅಥವಾ ಒಪ್ಪಂದಕ್ಕೆ ಹಾಗೂ ಸಂಸ್ಥೆಗಳು ನೀಡುವ ಪದವಿಗಳಿಗೆ ಮಾನ್ಯತೆ ಇರುವುದಿಲ್ಲ' ಎಂದು ಯುಜಿಸಿ ಕಾರ್ಯದರ್ಶಿ ಮನೀಶ್ ಜೋಶಿ ಸ್ಪಷ್ಟಪಡಿಸಿದರು. ಇಂಥ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದೂ ಅವರು ತಿಳಿಸಿದರು.

ಕರ್ನಾಟಕ ಅರಣ್ಯ ಇಲಾಖೆ
ವನ್ಯಜೀವಿ ವಿಭಾಗ, ಶಿವಮೊಗ್ಗ.
No.A1/BUD/CAMPA-R.C/CR-12/2023-24 Date:12.12.2023
ಕೆ.ಪಿ.ಪಿ– ಪೋರ್ಟಲ್ ಪ್ರಕಟಣೆ. (ಕೆ.ಪಿ.ಪಿ– ಪೋರ್ಟಲ್ ಮುಖಾಂತರ)
2023–24ನೇ ಸಾಲಿನಲ್ಲಿ ಹುಲಿ–ಸಿಂಹಧಾಮ, ತ್ಯಾವರೆಕೊಪ್ಪದಲ್ಲಿ ಅನುಂಬಧದಲ್ಲಿ ನಮೂದಿಸಲಾದ ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2023–24ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ನೊಂದಾಯಿತ ಹಾಗೂ ಸದರಿ ಕಾಮಗಾರಿಗಳಲ್ಲಿ ಅನುಭವ ಹೊಂದಿರುವ ಆಸಕ್ತ ಲೋಕೋಪಯೋಗಿ ಹಾಗೂ ಅರಣ್ಯ ಗುತ್ತಿಗೆದಾರರಿಂದ ಕೆ.ಪಿ.ಪಿ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.12.2023 ಸಂಜೆ 4.30ರವರೆಗೆ ನಿಗಧಿ ಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in/ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/49/12/23–24/900

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2023–24/ 1418
ದಿನಾಂಕ:–15/12/2023
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, ವಿವಿಧ ಲೆಕ್ಕ ಶೀರ್ಷಿಕೆ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–1 & 2ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:13 ಅಂದಾಜು ಮೊತ್ತ ರೂ.4.50 ಲಕ್ಷಗಳಿಂದ 45.50 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಸ್ವರೂಪ ರಸ್ತೆ ಮತ್ತು ಕಟ್ಟಡ ಕಾಮಗಾರಿಗಳು. ಟೆಂಡರ್ ಫಾರಂಗಳನ್ನು ದಿನಾಂಕ: 15/12/2023 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ:29/12/2023 ಸಂಜೆ 4.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/415/ ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1.ಇ.ಟೆಂಡರ್:30:2023–24 ದಿನಾಂಕ: 12–12–2023
ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
2023–24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿ (2ನೇ ಕರೆ) – 04 ಕಾಮಗಾರಿ, 2023–24 ನೇ ಸಾಲಿನ ಎಸ್.ಎಫ್.ಸಿ. ಮುಕ್ತನಿಧಿಯ ಶೇಕಡ 24.10 (ಎಸ್.ಸಿ.ಎಸ್.ಪಿ.) (2ನೇ ಕರೆ) – 01 ಕಾಮಗಾರಿ, 2023–24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (5ನೇ ಕರೆ), – 01 ಕಾಮಗಾರಿ, 2023–24 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 01 ಕಾಮಗಾರಿ, ಸ್ವಚ್ಛ ಭಾರತ್ ಮಿಷನ್ (ನಗರ) –2.0 ಯೋಜನೆ – 03 ಕಾಮಗಾರಿ ಒಟ್ಟು 09 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8068948777 ರಿಂದ ಮಾಹಿತಿ ಪಡೆಯಬಹುದು.
(1) ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 14–12–2023 (2) ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ (ರೂ.100.00 ಲಕ್ಷ ಮೇಲ್ಪಟ) : 22–12–2023 ಸಮಯ : 11.00 (3) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 28–12–2023 ಸಮಯ : 16.30 (4) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 28–12–2023 ಸಮಯ : 17.00 (5) ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30–12–2023 ಸಮಯ : 11.00
ವಾಸಾಇ/ದಾವಣಗೆರೆ/413/ ಕೆಎಸ್‌ಎಂಸಿಎ/2023–24
ಸಹಿ/– ಕಾರ್ಯಪಾಲಕ ಅಭಿಯಂತರರು (ಸಿವಿಲ್) ಮಹಾನಗರ ಪಾಲಿಕೆ, ದಾವಣಗೆರೆ

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಿತ್ರದುರ್ಗ.
ದೂ: ಸಂ: 08194–235018 ಇ–ಮೇಲ್: dhochitradurga@gmail.com
ಸಂ.ಜಿಆಕುಕ/ಚಿ/ಸರಬ/01/2023–24 ದಿನಾಂಕ: 15.12.2023
ಇ–ಟೆಂಡರ್ ಪ್ರಕಟಣೆ
2023–24 ನೇ ಸಾಲಿಗೆ ಜಿಲ್ಲೆಯ ಅಧೀನ ಆಸ್ಪತ್ರೆಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳ ಖರೀದಿಗಾಗಿ ಇ–ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ:–16–12–2023 ರಿಂದ ದಿನಾಂಕ:–30–12–2023 ರ ಸಮಯ ಸಂಜೆ 5=00 ಗಂಟೆಯವರೆಗೆ ಅಪ್ ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 01.01.204ರ ಬೆಳಿಗ್ಗೆ 11.00 ಗಂಟೆಗೆ. ಟೆಂಡರ್‌ನ ಪ್ರತಿಯೊಂದು ಷರತ್ತು ಮತ್ತು ನಿಬಂಧನೆಗಳನ್ನು http://kppp.karnataka.gov.in ಅಂತರ್‌ಜಾಲದಲ್ಲಿ ಪಡೆದು ಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.
DIPR/CTA/KSMCA/ 414/2023-24
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಸರ್ಕಾರ
(ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ
ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in
ಸಂಖ್ಯೆ:ಕಾಇಂ/ಪಂ.ರಾ.ಇ.ವಿ/ವಿಜ/ಇಪ್ರಾ/ಟೆಂಡರ್/2023–24/ ದಿನಾಂಕ:07.12.2023
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022–23 ನೇ ಸಾಲಿನ 8443 ಠೇವಣಿ ವಂತಿಕೆ (ವಿವೇಕ ಶಾಲೆ ಪದವಿ ಪೂರ್ವ ಕಾಲೇಜ) ಯೋಜನೆಯಡಿಯಲ್ಲಿ ತಲಾ ರೂ. 50.10 ಲಕ್ಷಗಳಂತೆ ಒಟ್ಟು 5 ಕಾಮಗಾರಿಗಳನ್ನು ಈ ಕಚೇರಿಯ ಟೆಂಡರ ಪ್ರಕಟಣೆ **ಸಂಖ್ಯೆ: 1863 ದಿನಾಂಕ: 15.12.2023** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಅಹ್ವಾನಿಸಿದ್ದು, ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.
ವಾಸಾಸಂಇ/ವಿಜಯಪುರ/334/ಕೆಎಸ್‌ಎಂಸಿಎ/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ–2/ಎಎಒ/Ten.Nofi/2023–24/1869
ದಿನಾಂಕ:13.12.2023
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ –2000 ರಂತೆ)
ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ, ತಾಲ್ಲೂಕಿನ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:15/12/2023 ರಿಂದ 26/12/2023** ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ:27/12/2023** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 22/12/2023** ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂನ್ಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿ:22/12/2023 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ–ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/563/ಕೆಎಸ್‌ಎಂಸಿಎ/2023–24

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನಂ. 16/I, ಮಿಲ್ಲರ್‍ಸ್ ಟ್ಯಾಂಕ್ ಬೆಡ್ ಏರಿಯಾ, ಬೆಂಗಳೂರು – 560 052.
ದೂ.: 080–22260932 ಇ–ಮೇಲ್: mdkfcsc123@yahoo.com
ಸಂಖ್ಯೆ:ಕಆನಾಸನಿನಿ/ಸಂ/ಬೆಂಬೆ/02/2023–24/ ದಿನಾಂಕ: 16.12.2023
ಪ್ರಕಟಣೆ
ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದಲ್ಲಿ 2023–24ನೇ ಸಾಲಿನ ಕನಿಷ್ಠ ಬೆಂಬಲ ಯೋಜನೆಯಡಿ ರಾಜ್ಯದ ರೈತರಿಂದ ಖರೀದಿಸಿದ ರಾಗಿಯನ್ನು B Twill New Jute Gunny ಚೀಲದಲ್ಲಿ ತುಂಬಲು ಹಾಗೂ ಅದನ್ನು ಹೊಲಿಯಲು ಅಗತ್ಯವಿರುವ Twine jute thread ಗಳನ್ನು ಅರ್ಹ ತಯಾರಕರಿಂದ ಖರೀದಿಸಲು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಖಲೆ ಹಾಗೂ ಇತರೆ ವಿವರಗಳಿಗಾಗಿ E-Procurement ಜಾಲತಾಣ www.kppp.karnataka.gov.in ಹಾಗೂ ನಿಗಮದ ಅಧಿಕೃತ ಜಾಲತಾಣ https://kfcsc.karnataka.gov.in ದಿಂದ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ–ಮೇಲ್: contracts@bmrc.co.in ವೆಬ್‌ಸೈಟ್: www.bmrc.co.in
ಸಂಖ್ಯೆ: ಬಿಎಂಆರ್‌ಸಿಎಲ್/ಹಂತ–2ಎ&2ಬಿ/ಟರ್ನ್‌ಔಟ್ಸ್/2023/101
ದಿನಾಂಕ: 17.12.2023
ಟೆಂಡರ್ ಅಧಿಸೂಚನೆ
ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಇವರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು), "**ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹಂತ 2ಎ ಮತ್ತು 2ಬಿ ಗಾಗಿ ಸ್ಟ್ಯಾಂಡರ್ಡ್ ಗೇಜ್ UIC 60 ಟರ್ನ್‌ಔಟ್‌ಗಳ ವಿನ್ಯಾಸ, ತಯಾರಿಕೆ ಮತ್ತು ಪೂರೈಕೆಗಾಗಿ**" ಮುಕ್ತ ಟೆಂಡರನ್ನು ಆಹ್ವಾನಿಸುತ್ತಾರೆ. ಟೆಂಡರ್ ಭದ್ರತಾ ಮೊತ್ತ: ರೂ. 37.40 ಲಕ್ಷ. ಟೆಂಡರ್ ದಸ್ತಾವೇಜುಗಳ ಮಾರಾಟ (ಆನ್‌ಲೈನ್‌ನಲ್ಲಿ ಮಾತ್ರ): 18.12.2023 ರಿಂದ 24.01.2024 ರವರೆಗೆ. ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ: (ವೈಯಕ್ತಿಕವಾಗಿ ಮಾತ್ರ) 25.01.2024 ರಂದು 10.00 ಗಂಟೆಯಿಂದ 15.00 ಗಂಟೆಗಳವರೆಗೆ (IST). ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 25.01.2024 ರಂದು 15.30 ಗಂಟೆಗೆ. ಟೆಂಡರ್ ದಸ್ತಾವೇಜಿನ ಬೆಲೆ: ರೂ. 59,000/–. ಹೆಚ್ಚಿನ ವಿವರಗಳಿಗಾಗಿ, ದಿನಾಂಕ: 17.12.2023 ರಿಂದ ನಮ್ಮ ವೆಬ್‌ಸೈಟ್: www.bmrc.co.in ಪರಿವೀಕ್ಷಿಸಬಹುದು.
ಸಹಿ/–ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಪೋಡಿಯಂ ಬ್ಲಾಕ್, ವಿ.ವಿ. ಕೇಂದ್ರ, ನೆಲಮಹಡಿ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001,
ದೂರವಾಣಿ ಸಂಖ್ಯೆ: 080–22866066, 080–22866046
ಇ–ಮೇಲ್ ವಿಳಾಸ: dirdwdscka@gmail.com
ಟೆಂಡರ್ ಪ್ರಕಟಣೆ ಸಂ: DEDASC/2023-24/IND0014 ದಿನಾಂಕ: 15.12.2023
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ)
2023–24ನೇ ಸಾಲಿನಲ್ಲಿ ತೀವ್ರತೆರನಾದ ದೈಹಿಕ ವಿಕಲಚೇತನರಿಗೆ ನೀಡಲಾಗುವ ಅಂದಾಜು 4000 ರೆಟ್ರೋಫಿಟೆಡ್ ಯಂತ್ರಚಾಲಿತ ದ್ವಿಚಕ್ರವಾಹನ 124ಸಿಸಿ ಮತ್ತು ಅದಕ್ಕಿಂತ ಹೆಚ್ಚಿನ (ಗೇರು ರಹಿತ) (ಟ್ಯೂಬ್ ರಹಿತ) (BS-VI) ಗಳನ್ನು ಖರೀದಿಸಿ ವಿತರಿಸಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ (ಅಂದಾಜು ಬಿಡ್ ಮೊತ್ತ ರೂ. 3600.00 ಲಕ್ಷಗಳು). ಬಿಡ್‌ಗಳನ್ನು ವಾಹನಗಳ/ಸಲಕರಣೆಗಳ ಮೂಲ ತಯಾರಕರ ಅಥವಾ ಅಧಿಕೃತ ಡೀಲರ್‌ಗಳಿಂದ ಸ್ವೀಕರಿಸಲು ಕೊನೆಯ **ದಿನಾಂಕ ಮತ್ತು ಸಮಯ 16.01.2024ರಂದು ಅಪರಾಹ್ನ 04:00 ಗಂಟೆಯವರೆಗೆ**, ಪ್ರಿ–ಬಿಡ್ **ದಿನಾಂಕ: 27.12.2023ರಂದು ಬೆಳಿಗ್ಗೆ 11:00 ಗಂಟೆ, ದಿನಾಂಕ: 18.01.2024ರಂದು ಅಪರಾಹ್ನ 03:00 ಗಂಟೆಗೆ** ತಾಂತ್ರಿಕ ಬಿಡ್ ಮತ್ತು **ದಿನಾಂಕ: 23.01.2024 ರಂದು ಅಪರಾಹ್ನ 04:00 ಗಂಟೆಗೆ** ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
ಯಾವುದೇ ಕಾರಣ ನೀಡದೇ ಎಲ್ಲಾ ಆಫರ್ಸ್/ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ ಮತ್ತು ಮರು ಟೆಂಡರ್ ಕರೆಯುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ. ವಿವರಗಳನ್ನು www.kppp.karnataka.gov.in ಜಾಲ ತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ. ವಿ. ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001 ಇವರನ್ನು **ದೂರವಾಣಿ ಸಂಖ್ಯೆ: 080–22860907,** ಸಂಪರ್ಕಿಸಬಹುದಾಗಿದೆ. ಇಲಾಖೆಯ ಜಾಲತಾಣ ವಿಳಾಸ: www.dwdsc.karnataka.gov.in ನ್ನು ವೀಕ್ಷಿಸಬಹುದಾಗಿದೆ.
ಸಹಿ/– ನಿರ್ದೇಶಕರ ಪರವಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
DIPR/CP/RO/2598/2023-24

ಕರ್ನಾಟಕ ಸರ್ಕಾರದ ಸಚಿವಾಲಯ (ಭದ್ರತೆಗಳು)
ಆರ್ಥಿಕ ಇಲಾಖೆ
ವಿಧಾನಸೌಧ, ಬೆಂಗಳೂರು.
1. **ಒಟ್ಟು ಮೊತ್ತ : ರೂ. 4000 ಕೋಟಿ (ರೂ. 2000 ಕೋಟಿ** (15 ವರ್ಷಗಳ ಅಧಿಕಾರಾವಧಿ) ಮತ್ತು **ರೂ. 2000 ಕೋಟಿ** (16 ವರ್ಷಗಳ ಅಧಿಕಾರಾವಧಿ))
2. ವಿತರಿಸುವ ವಿಧಾನ: ಹರಾಜು PDO, RBI, ಮುಂಬೈ (ಕೋಟೆ) ಮೂಲಕ.
3. ಹರಾಜಿನ ದಿನಾಂಕ : **ಡಿಸೆಂಬರ್ 19, 2023.**
ಕರ್ನಾಟಕ ಸರ್ಕಾರವು ಮೇಲಿನ ಭದ್ರತೆಗಳಿಗೆ ಚಂದಾದಾರಿಕೆಗಳನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ 10% ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ www.rbi.org.in ವೆಬ್‌ಸೈಟ್ ನಲ್ಲಿ ಲಭ್ಯವಿದೆ.
ಸಹಿ/– (ಡಾ. ರೇಜು ಎಂ.ಟಿ.) ಸರ್ಕಾರದ ಕಾರ್ಯದರ್ಶಿ (ವೆಚ್ಚ), ಆರ್ಥಿಕ ಇಲಾಖೆ
DIPR/CP/RO/2558/2023-24

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ– 571 401
(Autonomous Medical Institution, Government of Karnataka)
Phone: 08232-231003, 222086, 231197, 224040,
Fax: 08232-231001, mimsmandya@gmail.com
E-Mail Address: mimsmandyaoffice@gmail.com ,
ಮರು ಇ–ಟೆಂಡರ್ ಪ್ರಕಟಣೆ – (ದ್ವಿಲಕೋಟೆ ಪದ್ಧತಿ)
ಸಂಖ್ಯೆ: ಮಿಮ್ಸ್/ಸರಬ–1/ರ.ನಿ/ಪ್ಲಾಸ್ಮಾ/ಇ–ಟೆಂ/104/2023–24 (ಕಾಲ್–2) ದಿ:13.12.2023
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಕ್ತನಿಧಿ ಕೇಂದ್ರದಲ್ಲಿ ಸಂಗ್ರಹಣೆಯಾಗುವ Fresh Frozen Plasmaನ್ನು ಮಾರಾಟ ಮಾಡಲು ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ.60.00 ಲಕ್ಷಗಳು (ಎಲ್ಲಾ ತೆರಿಗೆ ಇತ್ಯಾದಿಗಳು ಸೇರಿ)**. ಇ.ಎಂ.ಡಿ ಮೊತ್ತ **ರೂ.1,20,000/–** ಇ–ಟೆಂಡರ್ ಅರ್ಜಿ ಸಲ್ಲಿಸುವ ಪ್ರಾರಂಭದ ದಿನಾಂಕ: 16ನೇ ಡಿಸೆಂಬರ್ 2023, ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **04ನೇ ಜನವರಿ 2024 ರ ಸಂಜೆ 5.00 ಗಂಟೆ**. ಟೆಂಡರ್ ಪ್ರಕ್ರಿಯೆ ದಿನಾಂಕ ಮತ್ತಿತ್ತರ ವಿವರಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.
ಸಹಿ/–ಮುಖ್ಯಆಡಳಿತಾಧಿಕಾರಿಗಳು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/374/2023–24

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ
ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ಸ್ವಾಯತ್ತ ಸಂಸ್ಥೆ
(ಉನ್ನತ ವೈದ್ಯಕೀಯ ವಿಜ್ಞಾನಗಳ ಸ್ನಾತಕೋತ್ತರ ಸಂಸ್ಥೆ)
ಸಹಕಾರ ಸಂಘಗಳ ನೋಂದಾಯಿತ ನೋಂದಣಿ ಸಂಖ್ಯೆ 132/85–86 ಅಡಿಯಲ್ಲಿ ಗುರುತಿಸಲ್ಪಟ್ಟಿದೆ
ದಕ್ಷಿಣ ಆಸ್ಪತ್ರೆ ಸಂಕೀರ್ಣ, ಧರ್ಮಾರಾಂ ಕಾಲೇಜು ಅಂಚೆ, ಬೆಂಗಳೂರು–560029.
ಇ–ಮೇಲ್: ihealthchild@yahoo.in, ವೆಬ್‌ಸೈಟ್: https://igich.karnataka.gov.in
ದಿನಾಂಕ: 16.12.2023
ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಇ–ಪೋರ್ಟಲ್ ಪ್ಲಾಟ್‌ಫಾರಂ https://kppp.karnataka.gov.in ಮುಖಾಂತರ)
ನಿರ್ದೇಶಕರು, ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು–560 029, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ನಮೂದಿಸಿರುವ ಕಾಮಗಾರಿಗಳಿಗೆ ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕೆಪಿಪಿಪಿ ಇಂಡೆಂಟ್ ಸಂಖ್ಯೆ	ಕಾಮಗಾರಿಯ ಅಂದಾಜು ಮೊತ್ತ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	Construction of Building (Third Floor) over existing OPD block at Indira Gandhi Institute of Child Health, Bengaluru	DME/2023-24/BD/WORK_INDENT15	1,25,66,000.00	1,88,500.00
2	Construction of RC box drain from dg room to quarters and asphalting to roads in premises of Indira Gandhi Institute of Child Health, Bengaluru	DME/2023-24/RD/WORK_INDENT16	38,90,000.00	77,800.00
3	Construction of FETAL medicine center adjacent to open terrace of surgery ward at second floor tower block building Indira Gandhi Institute of Child Health, Bengaluru	DME/2023-24/BD/WORK_INDENT17	37,08,000.00	74,200.00

ಟೆಂಡರ್ ಪ್ರಕ್ರಿಯೆಯ ಶುಲ್ಕ: **As per kppp.karnataka.gov.in**. ದಾಖಲೆಗಳನ್ನು ದಿನಾಂಕ: **13.12.2023** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ವಿಚಾರಣೆ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ (ಆನ್‌ಲೈನ್) **ದಿನಾಂಕ: 02.01.2024ರ ಸಂಜೆ 4:00 ಗಂಟೆಯವರೆಗೆ.** ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಕೊನೆಯ **ದಿನಾಂಕ: 12.01.2024ರ ಮಧ್ಯಾಹ್ನ 3:00 ಗಂಟೆಯವರೆಗೆ.** ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ: 12.01.2024ರ ಸಂಜೆ 4:00 ಗಂಟೆಯವರೆಗೆ.** ಟೆಂಡರ್ ಲಕೋಟೆ–1ನ್ನು ತೆರೆಯುವ **ದಿನಾಂಕ: 16.01.2024ರ ಸಂಜೆ 4:00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in** ಅಥವಾ ಇ–ಪೋರ್ಟಲ್ ಹೆಲ್ಪ್‌ಡೆಸ್ಕ್ ನಂ. **080–8046010000, 91–8068948777** ಸಂಪರ್ಕಿಸಿ.
ಸಹಿ/– ನಿರ್ದೇಶಕರು ಇಂ.ಮ.ಆ.ಸಂ., ಬೆಂಗಳೂರು
DIPR/CP/BCPL/2601/2023-24

ಮಹಿಳೆ ಬೆತ್ತಲೆಗೊಳಿಸಿ ಹಲ್ಲೆ ಮಾಡಿದ ಪ್ರಕರಣ: ಮಹಿಳಾ ಆಯೋಗ, ಬಿಜೆಪಿ ನಿಯೋಗ ಪರಿಶೀಲನೆ

ತದ್ವಿರುದ್ಧ ನಿಲುವು ತಾಳಿದ ತಂಡಗಳು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿಯಲ್ಲಿ ದೌರ್ಜನ್ಯಕ್ಕೊಳಗಾದ ಮಹಿಳೆಯನ್ನು ಶನಿವಾರ ಭೇಟಿ ಮಾಡಿದ ರಾಷ್ಟ್ರೀಯ ಮಹಿಳಾ ಆಯೋಗ ಹಾಗೂ ಬಿಜೆಪಿ ಸತ್ಯಶೋಧನಾ ತಂಡದ ಸದಸ್ಯರು ರಾಜ್ಯ ಪೊಲೀಸರ ಕ್ರಮದ ಬಗ್ಗೆ ಭಿನ್ನ ನಿಲುವು ವ್ಯಕ್ತಪಡಿಸಿದರು.

'ಈ ಘಟನೆ ವಿಚಾರವಾಗಿ ಪೊಲೀಸರ ತನಿಖೆ ಸರಿಯಾಗಿ ಸಾಗುತ್ತಿದೆ' ಎಂದು ಮಹಿಳಾ ಆಯೋಗದ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದರೆ, 'ಘಟನೆ ತಡೆಯುವಲ್ಲಿ ಪೊಲೀಸರು ಸಂಪೂರ್ಣ ವಿಫಲವಾಗಿದ್ದಾರೆ. ಅವರ ನಿರ್ಲಕ್ಷ್ಯವೇ ಇದಕ್ಕೆ ಕಾರಣ' ಎಂದು ಬಿಜೆಪಿ ಸತ್ಯಶೋಧನಾ ತಂಡದ ಸದಸ್ಯರು ಆರೋಪಿಸಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ ಹಾಗೂ ಬಿಜೆಪಿ ಸತ್ಯಶೋಧನಾ ತಂಡದವರು ಶನಿವಾರ (ಡಿ.16) ಪ್ರತ್ಯೇಕವಾಗಿ ಪ್ರಕರಣವನ್ನು ಪರಿಶೀಲಿಸಿದರು. ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂತ್ರಸ್ತೆ ಯನ್ನು ಭೇಟಿಯಾಗಿ ಮಾಹಿತಿ ದಾಖಲಿಸಿಕೊಂಡರು. ಅಲ್ಲಿಂದ ಹೊಸ ವಂಟಮೂರಿ ಗ್ರಾಮಕ್ಕೆ ತೆರಳಿ ಸ್ಥಳ ಪರಿಶೀಲಿಸಿದರು.

ಸಂತ್ರಸ್ತೆಯನ್ನು ಭೇಟಿಯಾಗಿ ಧೈರ್ಯ ಹೇಳಿಬಂದ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಡೆಲಿನಾ ಕೊಂಗಡುಪ್ ಅವರು, 'ಅಮಾನವೀಯವಾದ ಈ ಘಟನೆ ಸಹಿಸಿಕೊಳ್ಳಲು ಸಾಧ್ಯವಿಲ್ಲ. ಈಗ ಪೊಲೀಸರ ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದು, ಮಹಿಳೆ ರಕ್ಷಿಸುವ ಕೆಲಸ ಆಗಬೇಕಿದೆ. ಜನರು ಕೂಡ ತಮ್ಮ ಮನಸ್ಥಿತಿ ಬದಲಿಸಿಕೊಳ್ಳಬೇಕಿದೆ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ರಾಜ್ಯ ಸರ್ಕಾರದ ಮೇಲೆ ಕಿಡಿ: ಬಿಜೆಪಿ ಸತ್ಯಶೋಧನಾ ತಂಡದಲ್ಲಿದ್ದ ಸಂಸದರಾದ ಅಪರಜಿತಾ ಸಾರಂಗಿ, ಸುನೀತಾ ದುಗ್ಗಲ್, ಲಾಕೆಟ್ ಚಟರ್ಜಿ, ರಂಜಿತಾ ಕೋಲಿ ಹಾಗೂ ಪಕ್ಷದ ರಾಷ್ಟ್ರೀಯ ಘಟಕದ ಕಾರ್ಯದರ್ಶಿ ಆಶಾ ಲಾಕ್ರ ಅವರು ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡುತ್ತ, ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು.

'ಕರ್ನಾಟಕ ಹೈಕೋರ್ಟ್ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿದೆ. ಆದರೆ, ಪೊಲೀಸರು ಇದಕ್ಕೆ ಸರಿಯಾಗಿ ಸ್ಪಂದಿಸಿಲ್ಲ. ಘಟನಾ ಸ್ಥಳದಿಂದ ಪೊಲೀಸ್ ಠಾಣೆ ಸಮೀಪದಲ್ಲಿದ್ದರೂ ಎರಡು ತಾಸಿನ ನಂತರ ಹೋಗಿದ್ದಾರೆ. ವಿಧಾನಮಂಡಲ ಚಳಿಗಾಲದ ಅಧಿವೇಶನ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗಾವಿಯಲ್ಲಿದ್ದರೂ ಸಂತ್ರಸ್ತೆ ಭೇಟಿಯಾಗಿಲ್ಲ. ಈ ಘಟನೆ ಸರ್ಕಾರದ ಮಾನಸಿಕ ಸ್ಥಿತಿ ಮತ್ತು ವೈಫಲ್ಯವನ್ನು ಎತ್ತಿ ತೋರಿಸುತ್ತದೆ' ಎಂದು ಆರೋಪಿಸಿದರು.

'ಅಂದು ರಾತ್ರಿ 1 ಗಂಟೆಗೆ ಈ ಘಟನೆ ನಡೆದಿದೆ. ಅದೇ ಸಮಯಕ್ಕೆ ಮಾಹಿತಿ ಪಡೆದಿದ್ದೇವೆ ಎಂದು ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ. ಆದರೆ, ಘಟನಾ ಸ್ಥಳಕ್ಕೆ ತಡವಾಗಿ ಹೋಗಿರುವುದು ಏಕೆ? 15 ಜನರು ಮನೆಗೆ ನುಗ್ಗಿ ಮಹಿಳೆ ಮೇಲೆ ದಾಳಿ ನಡೆಸಿದರೂ ಸರ್ಕಾರ ಏಕೆ ಸುಮ್ಮನಿದೆ' ಎಂದು ಪ್ರಶ್ನಿಸಿದರು.

'ಈ ಘಟನೆಗೆ ಸಂಬಂಧಿಸಿ ಮುಖ್ಯಮಂತ್ರಿ ಎಕ್ಸ್ ಪೋಸ್ಟ್‌ಗಷ್ಟೇ ಸೀಮಿತವಾಗುತ್ತಾರಾ' ಎಂದು ಪ್ರಶ್ನಿಸಿದ ಸದಸ್ಯೆಯರು, 'ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಬೆಳಗಾವಿಯ ಘಟನೆ ವಿಚಾರವಾಗಿ ತುಟಿ ಬಿಚ್ಚಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹಸಚಿವ ಡಾ.ಜಿ.ಪರಮೇಶ್ವರ ಅವರು ರಾಜ್ಯದ ಮಹಿಳೆಯರ ಕ್ಷಮೆ ಕೇಳಬೇಕು. ಹೊಸ ವಂಟಮೂರಿಯಲ್ಲಿ ಇನ್ನೂ ಬಿಗುವಿನ ವಾತಾವರಣವಿದ್ದು, ಜನರ ಭಯ ಹೋಗಲಾಡಿಸಬೇಕು. ಸಂತ್ರಸ್ತೆಗೆ ಘೋಷಿಸಿದ ₹5 ಲಕ್ಷ ಪರಿಹಾರದ ಮೊತ್ತವನ್ನು ತಕ್ಷಣ ನೀಡಬೇಕು' ಎಂದರು.

ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿಗೆ ಬಿಜೆಪಿ ಸತ್ಯಶೋಧನಾ ತಂಡದವರು ಶನಿವಾರ ಭೇಟಿ ನೀಡಿ, ಮಹಿಳೆಯನ್ನು ಬೆತ್ತಲೆಗೊಳಿಸಿ, ಥಳಿಸಿದ ಪ್ರಕರಣದ ಕುರಿತು ಮಾಹಿತಿ ಸಂಗ್ರಹಿಸಿದರು

ತಡವರಿಸಿದ ತಂಡ

'ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದಾಗ, ಏಕೆ ಸತ್ಯಶೋಧನಾ ಸಮಿತಿ ರಚಿಸಲಿಲ್ಲ' ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಲು ಬಿಜೆಪಿ ಸತ್ಯಶೋಧನಾ ತಂಡದವರು ತಡವರಿಸಿದರು. 'ಆ ಘಟನೆಯ ಬಗ್ಗೆ ಪ್ರಧಾನಿ ಅವರೇ ಗಮನ ಹರಿಸಿದ್ದಾರೆ. ನಾವು ಬಂದಿದ್ದು ಹೊಸ ವಂಟಮೂರಿ ಘಟನೆ ಕುರಿತು ಪರಿಶೀಲಿಸಲು. ಈ ಘಟನೆಯ ಬಗ್ಗೆ ಮಾತ್ರ ಮಾತನಾಡುತ್ತೇವೆ' ಎಂದರು.

'ಪ್ರಧಾನಿ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರ ಸೂಚನೆಯಂತೆ ಬೆಳಗಾವಿಗೆ ಬಂದಿದ್ದೇವೆ. ಎಲ್ಲ ಆಯಾಮಗಳಿಂದ ಪ್ರಕರಣದ ಕುರಿತು ಮಾಹಿತಿ ಪಡೆದುಕೊಂಡು, ಪಕ್ಷಕ್ಕೆ ವರದಿ ಸಲ್ಲಿಸುತ್ತೇವೆ. ಲೋಕಸಭೆಯಲ್ಲೂ ಈ ಘಟನೆಯ ಬಗ್ಗೆ ಪ್ರಸ್ತಾಪ ಮಾಡುತ್ತೇವೆ' ಎಂದರು.

ಎರಡು ಎಕರೆ ಜಮೀನು ಮಂಜೂರು

'ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ಸರ್ಕಾರ 2.03 ಎಕರೆ ಜಮೀನು ಮಂಜೂರು ಮಾಡಿ ಆದೇಶಿಸಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದ್ದಾರೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಬಿ.ನಾಗೇಂದ್ರ ಅವರು ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ತಕ್ಷಣವೇ ಜಮೀನು ಮಂಜೂರಾತಿಗೆ ನಿರ್ದೇಶನ ನೀಡಿದ್ದರು.

ನೊಂದ ಮಹಿಳೆಗೆ ಆರ್ಥಿಕ ಸ್ಥಿರತೆ ಒದಗಿಸುವ ದೃಷ್ಟಿಯಿಂದ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಭೂ ಒಡೆತನ ಯೋಜನೆಯಡಿ ಜಮೀನು ಮಂಜೂರು ಮಾಡಲಾಗಿದೆ. ಜಮೀನು ಮಂಜೂರಾತಿ ಜತೆಗೆ, ಸರ್ಕಾರವು ₹5 ಲಕ್ಷ ರೂಪಾಯಿ ಪರಿಹಾರವನ್ನೂ ಘೋಷಿಸಿದೆ ಎಂದು ಹೇಳಿದ್ದಾರೆ.

ಮತ್ತೆ ಮೂವರ ಬಂಧನ

ಹೊಸ ವಂಟಮೂರಿಯಲ್ಲಿ ಮಹಿಳೆ ಬೆತ್ತಲೆಗೊಳಿಸಿ, ಥಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಕತಿ ಠಾಣೆ ಪೊಲೀಸರು ಶನಿವಾರ ಮತ್ತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 11ಕ್ಕೆ ಏರಿದೆ. ಇನ್ನೊಬ್ಬ ಆರೋಪಿಗಾಗಿ ಹುಡುಕಾಟ ನಡೆದಿದೆ.

ಈ ಹಿಂದೆ ಬಂಧಿತರಾದ ಯುವತಿಯ ತಂದೆ, ತಾಯಿ, ಅಜ್ಜಿ, ಸಂಬಂಧಿಕರನ್ನು ಡಿ.21ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹೊಸ ವಂಟಮೂರಿಯ ಪ್ರೇಮಿಗಳು ಮನೆ ಬಿಟ್ಟು ಹೋದ ಕಾರಣಕ್ಕೆ, ಯುವಕನ ತಾಯಿಯನ್ನು ಬೆತ್ತಲೆಗೊಳಿಸಿ, ಮೆರವಣಿಗೆ ಮಾಡಿ, ವಿದ್ಯುತ್ ಕಂಬಕ್ಕೆ ಕಟ್ಟಿ ಹಲ್ಲೆ ಮಾಡಿದ ಆರೋಪ ಇವರ ಮೇಲಿದೆ.

ಸುದ್ದಿ 2 ನಿಮಿಷ

'ಬಿಜೆಪಿಯಿಂದ ರಾಜಕಾರಣ'

ಹುಬ್ಬಳ್ಳಿ: 'ಉತ್ತರ ಪ್ರದೇಶದಲ್ಲಿ ಬಿಜೆಪಿ ಶಾಸಕರೇ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಜೈಲು ಶಿಕ್ಷೆಗೆ ಒಳಗಾಗಿದ್ದಾರೆ. ಹೀಗಿದ್ದಾಗ ಬೆಳಗಾವಿ ಪ್ರಕರಣ ಇಟ್ಟುಕೊಂಡು ಬಿಜೆಪಿ ರಾಜಕೀಯ ಮಾಡುತ್ತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಶನಿವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಬೆಳಗಾವಿಯ ವಂಟಮೂರಿಯಲ್ಲಿ ನಡೆದ ಘಟನೆ ನಾಗರಿಕ ಸಮಾಜ ತಲೆತಗ್ಗಿಸುವಂತಹದ್ದು. ಆದರೆ, ಅದನ್ನಿಟ್ಟುಕೊಂಡು ಬಿಜೆಪಿ ರಾಜಕೀಯ ಮಾಡುತ್ತಿದೆ. ರಾಷ್ಟ್ರೀಯ ಮಹಿಳಾ ಆಯೋಗ ಮತ್ತು ಬಿಜೆಪಿ ಮಹಿಳಾ ಸಂಸದರು, ಪ್ರಲ್ಹಾದ ಜೋಶಿ ಮತ್ತು ಜೆ.ಪಿ. ನಡ್ಡಾ ರಾಜಕೀಯ ಮಾಡುತ್ತಿದ್ದಾರೆ. ಬಿಜೆಪಿ ಶಾಸಕರಿಗೆ ಶಿಕ್ಷೆ ಆಗಿರುವುದು ಸಚಿವ ಪ್ರಹ್ಲಾದ ಜೋಶಿಗೆ ಗೊತ್ತಿಲ್ಲವೇ?' ಎಂದು ಕಿಡಿಕಾರಿದರು.

'ಪ್ರಕರಣಕ್ಕೆ ಸಂಬಂಧಿಸಿ ತಕ್ಷಣ ರಾಜ್ಯ ಸರ್ಕಾರ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿದೆ' ಎಂದರು.

'ಸಂತ್ರಸ್ತೆಗೆ ನ್ಯಾಯ ನೀಡದ ಸರ್ಕಾರ'

ಮಂಡ್ಯ: 'ಇಡೀ ಸರ್ಕಾರ ಬೆಳಗಾವಿಯಲ್ಲಿದ್ದಾಗಲೇ ಮಹಿಳೆಯನ್ನು ವಿವಸ್ತ್ರಗೊಳಿಸಿದ ಘಟನೆ ನಡೆದಿದ್ದು ತಲೆ ತಗ್ಗಿಸುವ ಸಂಗತಿ. ಜಿಲ್ಲಾ ಮಂತ್ರಿ, ಮುಖ್ಯಮಂತ್ರಿ, ಗೃಹ ಸಚಿವರು ಸ್ಥಳಕ್ಕೆ ಹೋಗಲಿಲ್ಲ. ದೇಶವ್ಯಾಪಿ ಪ್ರತಿಭಟನೆ ನಡೆದ ಬಳಿಕ ಮುಖ್ಯಮಂತ್ರಿ ₹ 5 ಲಕ್ಷ ಪರಿಹಾರ ಘೋಷಿಸಿದರು. ಇಲ್ಲದಿದ್ದರೆ ಅದನ್ನೂ ನೀಡುತ್ತಿರಲಿಲ್ಲ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಬಿಜೆಪಿಯು ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾದ ಬಗ್ಗೆ ಅಧಿವೇಶನದಲ್ಲಿ ಚರ್ಚೆಗೆ ನಿಡುವಳಿ ಸೂಚನೆ ತಂದಿದ್ದೆ. ದೌರ್ಜನ್ಯ ಪ್ರಕರಣ ಚರ್ಚೆಯ ಅಜೆಂಡಾದಲ್ಲಿತ್ತು. ಆದರೆ ಮುಖ್ಯಮಂತ್ರಿಯು ಕಾಟಾಚಾರಕ್ಕೆ ಉತ್ತರ ನೀಡಿ, ಸಮಯ ವ್ಯರ್ಥ ಮಾಡಿದರು. ಪ್ರಕರಣ ಚರ್ಚೆಗೆ ಬರುತ್ತದೆಂದು ಪಲಾಯನ ಮಾಡಿದರು. ಸ್ಪೀಕರ್ ಕೂಡ ಮಲತಾಯಿ ಧೋರಣೆ ತೋರಿದರು' ಎಂದು ದೂರಿದರು.

'ಘಟನೆ ನಡೆದು ನಾಲ್ಕು ದಿನದ ಬಳಿಕ ಸ್ಥಳ ಪರಿಶೀಲನೆಗೆ ದೆಹಲಿಯಿಂದ ನಿಯೋಗ ಬರುತ್ತಿದೆ ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ. ಅಷ್ಟು ದಿನ ನೀವು ಘಟನೆಯನ್ನು ಮುಚ್ಚಿಹಾಕಿ, ಯಾರು ಹೋಗದಂತೆ ನೋಡಿಕೊಂಡಿದ್ದೀರಿ. ನಾನು ಹೋಗುವವರೆಗೂ ಗೊತ್ತಾಗಿರಲಿಲ್ಲ. ನ್ಯಾಯಾಲಯ ಕೂಡ ಕಾಂಗ್ರೆಸ್‌ಗೆ ಛೀಮಾರಿ ಹಾಕಿದೆ' ಎಂದರು.

'ನನ್ನ ವಿರುದ್ಧ ಮಾತನಾಡಲು ಬಿಟ್ಟಿದ್ದಾನೆ'

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಬಸನಗೌಡ ಪಾಟೀಲ ಯತ್ನಾಳ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬಸನಗೌಡ ಪಾಟೀಲ

ವಿಜಯಪುರ: 'ನನ್ನ ವಿರುದ್ಧವಾಗಿ ಮಾತನಾಡಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಕೆಲವರನ್ನು ಬಿಟ್ಟಿದ್ದಾನೆ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ ಮಾಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನ್ನ ವಿರುದ್ಧ ಕೆಲವು ಹಂದಿ, ಬೀದಿನಾಯಿಗಳು ಬೊಗಳುತ್ತವೆ. ಅದಕ್ಕೆಲ್ಲ ಉತ್ತರ ಕೊಡುವುದಿಲ್ಲ' ಎಂದು ಹರಿಹಾಯ್ದರು.

'ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ವಿರೋಧ ಪಕ್ಷದ ನಾಯಕನಂತೆ, ಬಿಜೆಪಿ ಅಧ್ಯಕ್ಷನಂತೆ ನಾನು ಹೆಚ್ಚು ಪ್ರೋ ಆ್ಯಕ್ಟೀವ್ ಆಗಿ ಕೆಲಸ ಮಾಡಿದ್ದೇನೆ. ಉತ್ತರ ಕರ್ನಾಟಕದಲ್ಲೂ ಸಮರ್ಥ ನಾಯಕರಿದ್ದಾರೆ ಎಂಬುದನ್ನು ತೋರಿಸಿದ್ದೇನೆ' ಎಂದರು.

'ಬೆಳಗಾವಿಯಲ್ಲಿ ನಡೆದ ಮಹಿಳೆ ಬೆತ್ತಲೆ ಪ್ರಕರಣ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭ್ರಷ್ಟಾಚಾರ ಪ್ರಕರಣ ರಾಜ್ಯ ಸರ್ಕಾರ ಕೈಬಿಟ್ಟಿರುವ ಕುರಿತು ಉಗ್ರ ಹೋರಾಟ ಮಾಡೋದಾಗಿ ಬಿಜೆಪಿಯ ಜೋಡೆತ್ತುಗಳು ಹೇಳಿದ್ದವು. ಆದರೆ, ಉಗ್ರ ಹೋರಾಟ ಮಾಡಲಿಲ್ಲ. ಬರೀ ಖಂಡನೆಗೆ, ಟ್ವೀಟ್‌ಗೆ ಸೀಮಿತವಾದವು. ಆದರೆ, ನಾನು ಡಿಕೆಶಿ ವಿಚಾರಕ್ಕೆ ನ್ಯಾಯಾಲಯಕ್ಕೆ ಹೋಗಿದ್ದೇನೆ' ಎಂದು ಹೇಳಿದರು.

'ಕಳೆದ 11 ವಿಧಾನಮಂಡಲ ಅಧಿವೇಶನಗಳಲ್ಲಿ ಕೊನೆಗೆ ಒಂದು ದಿನ ಕಾಟಾಚಾರಕ್ಕೆ ಎಂಬಂತೆ ಉತ್ತರ ಕರ್ನಾಟಕ ಬಗ್ಗೆ ಚರ್ಚಿಸಲಾಗುತ್ತಿತ್ತು. ಆದರೆ, ಈ ಬಾರಿ ಮೊದಲ ದಿನವೇ ನಾನು ಗಟ್ಟಿ ಧ್ವನಿ ಎತ್ತಿದ್ದರಿಂದ ಮೊದಲ ವಾರದಲ್ಲೇ ಸಮಗ್ರವಾಗಿ ಚರ್ಚಿಸಲು ಅವಕಾಶ ದೊರಕಿತು' ಎಂದು ಯತ್ನಾಳ ಹೇಳಿದರು.

ಟೂಲ್ ಕಿಟ್ ರಾಜಕೀಯದ ಅನುಮಾನ: ಸಿ.ಟಿ.ರವಿ

ಸಿ.ಟಿ.ರವಿ

ಚಿಕ್ಕಮಗಳೂರು: 'ಭದ್ರತಾ ವ್ಯವಸ್ಥೆಯನ್ನು ಭೇದಿಸಿ ಲೋಕಸಭೆ ಒಳಗೆ ಸ್ಮೋಕ್ ಕ್ಯಾನ್(ಅನಿಲ ಉಗುಳುವ ಡಬ್ಬಿ) ಪ್ರಯೋಗಿಸಿದ್ದ ಪ್ರಕರಣದಲ್ಲಿ ಕಾಂಗ್ರೆಸ್ ಸಕ್ರಿಯತೆ ನೋಡಿದರೆ ಟೂಲ್ ಕಿಟ್ ರಾಜಕೀಯದ ಅನುಮಾನ ಇದೆ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಹೇಳಿದರು.

'ಕಲಾಪ ನೋಡಲು ಬಯಸುವವರು ಬಂದು ಕೇಳಿದರೆ ಪಾಸ್ ಕೊಡುವುದು ಸಾಮಾನ್ಯ. ಸಂಸದ ಪ್ರತಾಪ್ ಸಿಂಹ ಅವರ ಜಾಗದಲ್ಲಿ ನಾನೇ ಇದ್ದರೂ ಪಾಸ್ ಕೊಡಿಸುತ್ತಿದ್ದೆ. ಸಿದ್ದರಾಮಯ್ಯ ಇದ್ದಿದ್ದರೂ ಪಾಸ್ ಕೊಡುತ್ತಿದ್ದರು. ಭದ್ರತಾ ಲೋಪ ಆಗಿರುವುದನ್ನು ಸಮರ್ಥನೆ ಮಾಡಿಕೊಳ್ಳುವುದಿಲ್ಲ' ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ಘೋಷಿತ ಅಪರಾಧಿಗೆ ಶಿಫಾರಸು ಮಾಡಿದ್ದರೆ ಅಪರಾಧವಾಗುತ್ತಿತ್ತು. ಆದರೆ, ಶಿಫಾರಸು ಮಾಡುವಾಗ ಒಳ್ಳೆಯವನೊ, ಕೆಟ್ಟವನೊ ಎಂದು ಗುರುತಿಸಲು ಯಾರ ಬಳಿಯೂ ಐ ಸ್ಕ್ಯಾನರ್ ಇರುವುದಿಲ್ಲ. ಇದರ ಹಿಂದಿನ ಶಕ್ತಿ ಯಾರು, ಯಾರ ಜತೆ ಸಂಬಂಧ ಇದೆ ಎನ್ನುವುದು ತನಿಖೆಯಾಗಬೇಕು' ಎಂದರು.

ನರೇಂದ್ರ ಮೋದಿ ಅವರು ಪ್ರಧಾನಿ ಆಗುವುದನ್ನು ತಪ್ಪಿಸಲು ಷಡ್ಯಂತ್ರಗಳು ನಡೆಯುತ್ತಿವೆ. ಅಪಪ್ರಚಾರ, ಕಳ್ಳಹಣದ ಜೊತೆಗೆ ವಿದೇಶಿ ಶಕ್ತಿಗಳ ಜೊತೆಯೂ ಶಾಮೀಲಾಗಿರುವ ಸಂಶಯ ಇದೆ ಎಂದು ಹೇಳಿದರು.

ಸಂತ್ರಸ್ತೆ ಭೇಟಿಗೆ ನಿರ್ಬಂಧ

ಒಂದನೇ ಪುಟದಿಂದ...

'ಅಗತ್ಯ ಇದೆ ಎಂದಾಗ ಮಾತ್ರವೇ ಕುಟುಂಬದ ಸದಸ್ಯರು, ಶಾಸನಬದ್ಧ ಪ್ರಾಧಿಕಾರಗಳು, ಆಯೋಗಗಳು, ತನಿಖಾ ಸಂಸ್ಥೆಗಳ ಅಧಿಕೃತ ಪ್ರತಿನಿಧಿಗಳು ಸಂತ್ರಸ್ತೆಯನ್ನು ಭೇಟಿ ಮಾಡಬಹುದು' ಎಂದು ಹೇಳಿತು.

'ಸಂತ್ರಸ್ತರನ್ನು ನೋಡಲು ಜನರು ಆಸ್ಪತ್ರೆಗೆ ಭೇಟಿ ನೀಡುವುದು ವಿಶೇಷವೇನೂ ಅಲ್ಲ. ನ್ಯಾಯಾಲಯವು ಸಾಮಾನ್ಯವಾಗಿ ಯಾವುದೇ ನಾಗರಿಕನ ಚಲನೆಯ ಸ್ವಾತಂತ್ರ್ಯವನ್ನು ನಿರ್ಬಂಧಿಸಲೂ ಇಷ್ಟಪಡುವುದಿಲ್ಲ; ಆದರೆ, ಈ ಪ್ರಕರಣದ ಸಂತ್ರಸ್ತೆಗೆ ಸದ್ಯ ವೈದ್ಯಕೀಯ ಚಿಕಿತ್ಸೆ ನೀಡಲಾಗುತ್ತಿದೆ. ಆಕೆ ಅಸಹನೀಯ ಆಘಾತವನ್ನು ಈಗಾಗಲೇ ಅನುಭವಿಸಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ, ಈ ರೀತಿ ಒಬ್ಬರಾದ ಮೇಲೊಬ್ಬರು ಅವರನ್ನು ಭೇಟಿ ಮಾಡುವುದು ಸಂತ್ರಸ್ತೆಯ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು ಮತ್ತು ಆಕೆ ತೊಂದರೆಗೆ ಒಳಗಾಗಬಹುದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಖುದ್ದು ಹಾಜರಾಗಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಎಲ್ಲ ಕ್ರಮಗಳನ್ನೂ ನ್ಯಾಯಪೀಠಕ್ಕೆ ಸಾದ್ಯಂತವಾಗಿ ವಿವರಿಸಿದರು.

ಜೀವನದ ಸವಾರಿ ಮಹಾರಾಷ್ಟ್ರದ ಪುಣೆಯಿಂದ ಕಲಬುರಗಿಗೆ ಒಂಟೆಗಳೊಂದಿಗೆ ಬಂದಿರುವ ಮಾಲೀಕರು ಅವುಗಳ ಮೇಲೆ ಮಕ್ಕಳನ್ನು ಕೂರಿಸಿ ಸವಾರಿ ಮಾಡಿಸುವ ಮೂಲಕ ಬಂದ ಹಣದಿಂದ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ನಗರದ ಕಣ್ಣಿ ಮಾರುಕಟ್ಟೆ ಬಳಿ ಬೀಡು ಬಿಟ್ಟಿದ್ದ ಒಂಟೆಗಳು ಕಂಡುಬಂದಿದ್ದು ಹೀಗೆ –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಮಲದ ಗುಂಡಿಗೆ ಮಕ್ಕಳ ಇಳಿಸಿ ಸ್ವಚ್ಛತೆ

ಒಂದನೇ ಪುಟದಿಂದ...

'ಅದು ಮಲದ ಗುಂಡಿ' ಎಂದು ಅಲ್ಲಿನ ಶಿಕ್ಷಕರೊಬ್ಬರು ಖಚಿತಪಡಿಸಿದ್ದಾರೆ. 'ಅದು ಮಲದ ಗುಂಡಿ ಅಲ್ಲದಿದ್ದರೂ ಚೇಂಬರ್‌ನೊಳಗಾದರೂ ನಮ್ಮ ಮಕ್ಕಳನ್ನು ಏಕೆ ಇಳಿಸಬೇಕು' ಎಂದು ಪೋಷಕರು ಪ್ರಶ್ನಿಸಿದ್ದಾರೆ.

ಪ್ರಾಂಶುಪಾಲರು ಹಾಗೂ ಶಿಕ್ಷಕರೊಬ್ಬರ ಸಮ್ಮುಖದಲ್ಲೇ ಏಳರಿಂದ ಒಂಬತ್ತನೇ ತರಗತಿಯ ಐದಾರು ಮಕ್ಕಳನ್ನು ಮಲದ ಗುಂಡಿ ಸ್ವಚ್ಛಗೊಳಿಸಲು ಇಳಿಸಲಾಗಿದೆ. ಈ ಘಟನೆ ಮೂರ್ನಾಲ್ಕು ದಿನಗಳ ಹಿಂದೆ ನಡೆದಿರುವುದು ಖಚಿತವಾಗಿದೆ.

ವಿವಿಧ ಗ್ರಾಮಗಳಿಂದ ಬಂದಿರುವ 6ರಿಂದ 10ನೇ ತರಗತಿಯ 250 ಮಕ್ಕಳು ಈ ವಸತಿ ಶಾಲೆಯಲ್ಲಿ ಇದ್ದಾರೆ. ಪ್ರಾಂಶುಪಾಲರು, ಶಿಕ್ಷಕರು, ವಾರ್ಡನ್‌ಗೆ ಅಲ್ಲಿಯೇ ವಸತಿ ವ್ಯವಸ್ಥೆ ಇದೆ.

'ಮಲದ ಪಿಟ್‌ನೊಳಗೆ ಇಳಿಸಿ ಕಸ ತೆಗೆಸಿದರು. ನಾವು ಬಕೆಟ್‌ನಲ್ಲಿ ಕಸ ತುಂಬಿ ಕೊಟ್ಟೆವು. ಕೆಲವರು ಮೇಲಿಂದ ನೀರು ಹಾಕಿದರು. ಐದಾರು ಮಕ್ಕಳು ಇದ್ದೆವು. ವಿಪರೀತ ಹಿಂಸೆ ಕೊಡುತ್ತಾರೆ. ಇಲ್ಲಿ ಇರುವುದೇ ಬೇಡ ಅನಿಸುತ್ತಿದೆ' ಎಂದು ಮಕ್ಕಳು ವಿಡಿಯೊದಲ್ಲಿ ನೋವು ತೋಡಿಕೊಂಡಿದ್ದಾರೆ.

ಮಕ್ಕಳು ಗುಂಡಿಯೊಳಗಿರುವ ಫೋಟೊಗಳನ್ನು ಶಾಲೆಯ ಶಿಕ್ಷಕರೊಬ್ಬರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಯಾರಿಗೂ ಗೊತ್ತಾಗದಂತೆ ಮಕ್ಕಳನ್ನು ಮಾತನಾಡಿಸಿ ವಿಡಿಯೊ ಮಾಡಿದ್ದಾರೆ. ಆ ವಿಡಿಯೊ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಮಾಹಿತಿ ಬಂದ ಕೂಡಲೇ ವಸತಿ ನಿಲಯಕ್ಕೆ ತೆರಳಿ ಪರಿಶೀಲನೆ ನಡೆಸಿದ್ದೇನೆ. ಮಕ್ಕಳನ್ನು ಈ ಕೆಲಸಕ್ಕೆ ಬಳಸಿಕೊಂಡಿರುವುದು ತಪ್ಪು. ಈ ಸಂಬಂಧ ಆ ಮಕ್ಕಳಿಗೂ ಜಾಗೃತಿ ಮೂಡಿಸಿದ್ದೇವೆ' ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ನಾಗರತ್ನಾ ತಿಳಿಸಿದರು.

ಈ ವಿಷಯ ತಿಳಿಯುತ್ತಲೇ ವಸತಿ ನಿಲಯಕ್ಕೆ ಭೇಟಿ ನೀಡಿದ್ದ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಆರ್.ಶ್ರೀನಿವಾಸ್ ಅವರು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಪ್ರಾಂಶುಪಾಲರು ಹಾಗೂ ವಾರ್ಡನ್ ಸೇರಿದಂತೆ ಯಾರೂ ವಸತಿ ನಿಲಯದಲ್ಲಿ ಇರುವುದಿಲ್ಲ. ಹಿಂಸೆ ತಾಳಲಾರದೆ ಕೆಲ ಮಕ್ಕಳು ವರ್ಗಾವಣೆ ಪತ್ರ ತೆಗೆದುಕೊಂಡು ಹೋಗಿದ್ದಾರೆ' ಎಂದು ಕೆಲ ಶಿಕ್ಷಕರು ಹಾಗೂ ಪೋಷಕರು ಪತ್ರಿಕೆಗೆ ತಿಳಿಸಿದರು.

'ರಾತ್ರಿ ಲೈಟ್ ಆಫ್ ಮಾಡಿ ಬ್ಯಾಗ್ ಸಮೇತ ಹಾಸ್ಟೆಲ್ ಹೊರಗಡೆ ಮಂಡಿಯೂರಿ ಕೂರಿಸಿ ಶಿಕ್ಷೆ ಕೊಡುತ್ತಾರೆ. ಸುಸ್ತಾಗುತ್ತಿದೆ ಎಂದರೂ ಕೇಳಲ್ಲ' ಎಂದು ವಿದ್ಯಾರ್ಥಿಗಳು ದೂರು ನೀಡಿದ್ದಾರೆ. ಮಕ್ಕಳಿಗೆ ತರಗತಿಯಲ್ಲಿ ಹೊಡೆಯುತ್ತಿರುವ ದೃಶ್ಯ ಸಿ.ಸಿ.ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯೊ

> **ಕಟ್ಟಿಕೊಂಡಿದ್ದ ಕಸ ಕಡ್ಡಿ ತೆಗೆಯಲು ಚೇಂಬರ್‌ಗೆ ಮಕ್ಕಳನ್ನು ಇಳಿಸಿದ್ದಾರೆ. ಈ ಕೆಲಸವನ್ನೂ ಮಾಡಿಸದಂತೆ ಪ್ರಾಂಶುಪಾಲರು, ಶಿಕ್ಷಕರಿಗೆ ಸೂಚನೆ ನೀಡಿದ್ದೇವೆ**
> **ಆರ್.ಶ್ರೀನಿವಾಸ್,** ಜಂಟಿ ನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ, ಕೋಲಾರ

ಕುಕ್ಕೆ: 95 ಭಕ್ತರಿಂದ ಎಡೆಸ್ನಾನ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸುಮಾರು 95 ಭಕ್ತರು ಗೋವು ಸೇವಿಸಿದ ಎಲೆಯ ಮೇಲೆ ಉರುಳು ಸೇವೆ ನಡೆಸುವ ಮೂಲಕ ಎಡೆಸ್ನಾನದ ಹರಕೆ ಸಲ್ಲಿಸಿದರು.

ಧಾರ್ಮಿಕ ದತ್ತಿ ಇಲಾಖೆಯ ಶೈವಾಗಮ ಪಂಡಿತರ ಮಾರ್ಗದರ್ಶನದಂತೆ ಮಧ್ಯಾಹ್ನದ ಮಹಾಪೂಜೆ ಬಳಿಕ ದೇವಳದ ಹೊರಾಂಗಣದ ಸುತ್ತ 432 ಬಾಳೆ ಎಲೆಗಳನ್ನು ಹಾಕಿ ಅದರ ಮೇಲೆ ದೇವರ ನೈವೇದ್ಯ ಬಡಿಸಲಾಯಿತು. ದೇವಳದ ಗೋವುಗಳು ಆ ಎಲೆಗಳಲ್ಲಿದ್ದ ಅನ್ನಪ್ರಸಾದವನ್ನು ತಿಂದವು. ದರ್ಪಣತೀರ್ಥ ನದಿಯಲ್ಲಿ ಸ್ನಾನ ಮಾಡಿ ಬಂದು ನಿಂತಿದ್ದ ಭಕ್ತರು, ಸ್ವಯಂ ಪ್ರೇರಣೆಯಿಂದ ಗೋವುಗಳು ತಿಂದು ಉಳಿಸಿದ ಎಲೆಗಳ ಮೇಲೆ ಉರುಳುತ್ತ ಒಂದು ಸುತ್ತು ದೇವಾಲಯದ ಪ್ರದಕ್ಷಿಣೆ ಹಾಕಿದರು. ನಂತರ ದರ್ಪಣ ತೀರ್ಥ ನದಿಯಲ್ಲಿ ಸ್ನಾನ ಮಾಡಿ ಪ್ರಸಾದ ಭೋಜನ ಸ್ವೀಕರಿಸಿದರು.

ಕರ್ನಾಟಕ ಸರ್ಕಾರ
(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
EE/RWSS/Dvn/SMG/TE/JJM/E-Proc/2023-24/1798 Date : 14.12.2023
ಟೆಂಡರ್ ಪ್ರಕಟಣೆ (ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ ವ್ಯಾಪ್ತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. **ಇಂಡೆಂಟ್ ಸಂಖ್ಯೆ : (1) 433 Call2 (2) 588 Call2 (3) 6643 (4) 6641 (5) 2759 (6) 678 (7) 776 Call2 (8) 840 Call2 (9) 777 Call2 (10) 660 Call2 (11) 472 Call2 (12) 990 (13) 7218 (14) 7217 (15) 7137 (16) 456.**
ಟೆಂಡರ್ ವಿವರಗಳು, ಷರತ್ತುಗಳು ಮತ್ತು ತಿದ್ದುಪಡಿಗಳು ಅಥವಾ ಬದಲಾವಣೆಗಳು **https: //www.kppp.karnataka.gov.in** ಜಾಲತಾಣದಲ್ಲಿ ಲಭ್ಯವಿದ್ದು, ಅರ್ಹ ಗುತ್ತಿಗೆದಾರರು/ಬಿಡ್ಡುದಾರರು ಅಗತ್ಯ ದಾಖಲೆಗಳನ್ನು ಮತ್ತು ತಮ್ಮ ಬಿಡ್ ಅನ್ನು ಸದರಿ ಜಾಲತಾಣದಲ್ಲಿಯೇ ಸಲ್ಲಿಸುವುದು. **ಟೆಂಡರ್‌ನ ಕೆಲವು ಷರತ್ತುಗಳು** (1) ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : **20.12.2023 & 22.12.2023 ರ ಸಂಜೆ 5.30.** (2) ಏಕಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **22.12.2023 & 24.12.2023 ರ ಬೆಳಿಗ್ಗೆ 11.30.** (3) ದ್ವಿಲಕೋಟೆಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **22.12.2023 & 24.12.2023 ರ ಬೆಳಿಗ್ಗೆ 11.30.** (4) ದ್ವಿಲಕೋಟೆಯ ಆರ್ಥಿಕ ಬಿಡ್ ತೆರೆಯುವ ದಿನಾಂಕ : **24.12.2023 & 26.12.2023 ರ ಬೆಳಿಗ್ಗೆ 11.30.** (5) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ ಕಾಲಾವಧಿ : **ಏಕ ಲಕೋಟೆ & ದ್ವಿಲಕೋಟೆ 6 ತಿಂಗಳು (180 ದಿನಗಳು).**
ಸಹಿ/– ಕಾರ್ಯಪಾಲಕ ಇಂಜಿನಿಯರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.58-12
ಝೇಂಕಾರ್/2023-24

ಸಮಾಜ ಸೇವೆಯ ಮೂಲಕ ಪುತ್ರಿಯ ಕನಸು ಸಾಕಾರಗೊಳಿಸುತ್ತಿರುವ ತಾಯಿ

ಮಗಳ ನೆನಪು: ಮೇಣದ ಪ್ರತಿಮೆ ನಿರ್ಮಾಣ

• ಡಿ.ಕೆ.ಬಸವರಾಜು

ದಾವಣಗೆರೆ: ಕ್ಯಾನ್ಸರ್‌ನಿಂದಾಗಿ ಮೂವತ್ತರ ಹರೆಯದರಲ್ಲೇ ಅಸುನೀಗಿದ ಮಗಳ ನೆನಪಿಗಾಗಿ ತಾಯಿಯೊಬ್ಬರು ಮೇಣದ ಪ್ರತಿಮೆ ನಿರ್ಮಿಸಿದ್ದಾರೆ. ಸಮಾಜ ಸೇವೆಯಲ್ಲೂ ತೊಡಗಿಕೊಳ್ಳುವ ಮೂಲಕ ಮುದ್ದಿನ ಮಗಳ ಕನಸುಗಳನ್ನು ಸಾಕಾರಗೊಳಿಸುತ್ತಿದ್ದಾರೆ.

ಆ ತಾಯಿಯ ಹೆಸರು ಕಮಲಮ್ಮ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಗ್ಯಾರಹಳ್ಳಿಯವರಾದ ಇವರು ಸದ್ಯ ದಾವಣಗೆರೆಯ ಸರಸ್ವತಿನಗರದಲ್ಲಿ ನೆಲೆಸಿದ್ದಾರೆ. ನಗರದ ಸರ್ಕಾರಿ ಶಾಲೆಯೊಂದರಲ್ಲಿ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಇವರು ಮಗಳ ಆಸೆ ಈಡೇರಿಸುವುದಕ್ಕಾಗಿಯೇ ಈಗ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ.

ಕಮಲಮ್ಮನವರ ಪುತ್ರಿಯ ಹೆಸರು ಕಾವ್ಯ. ಈಕೆ ಎಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಒಂದರ್ಥದಲ್ಲಿ ಕಮಲಮ್ಮನವರಿಗೆ ಮಗಳೇ ಸರ್ವಸ್ವವಾಗಿದ್ದಳು. ಕಾವ್ಯ 12 ದಿನದ ಕೂಸಾಗಿದ್ದಾಗ ತಂದೆಯನ್ನು ಕಳೆದುಕೊಂಡಿದ್ದಳು. ಆಗಿನಿಂದಲೂ ಅಮ್ಮನ ಅಕ್ಕರೆಯಲ್ಲೇ ಬೆಳೆದ ಆಕೆಗೆ 26ನೇ ವಯಸ್ಸಿನಲ್ಲೇ ಕ್ಯಾನ್ಸರ್ ಕಾಣಿಸಿಕೊಂಡಿತ್ತು. ನಿರಂತರ ನಾಲ್ಕು ವರ್ಷ ಆಕೆ ಅನುಭವಿಸಿದ ಯಾತನೆ ಹೇಳತೀರದು. 2022ರ ಡಿಸೆಂಬರ್‌ನಲ್ಲಿ ಆಕೆ ನಿಧನಳಾದಳು.

ಮಗಳ ಮರಣದ ನಂತರ ಅಗಾಧವಾಗಿ ನೋವು ಬಾಧಿಸುತ್ತಿದ್ದರೂ ಎದೆಗುಂದದ ಕಮಲಮ್ಮ, ಆಕೆಯ ಕೊನೆಯಾಸೆ ಈಡೇರಿಸಲು ಶ್ರಮಿಸುತ್ತಿದ್ದಾರೆ.

ಮಗಳ ಆಸೆ: ಬಿ.ಇ. ವ್ಯಾಸಂಗ ಮಾಡಿದ್ದ ಕಾವ್ಯ, ಎರಡು ವರ್ಷ ಕಂಪನಿಯೊಂದರಲ್ಲಿ ಕೆಲಸ ನಿರ್ವಹಿಸಿದ್ದಳು. ದಾಂಪತ್ಯದ ಬದುಕಿಗೆ ಕಾಲಿಡುವ ಕನಸು ಕಾಣುತ್ತಿದ್ದ ಹೊತ್ತಿನಲ್ಲೇ ಕ್ಯಾನ್ಸರ್ ಬಾಧಿಸಿತು. ತಾನು ಹೆಚ್ಚು ದಿನ ಬದುಕುವುದಿಲ್ಲ ಎಂಬುದು ಆಕೆಗೆ ಗೊತ್ತಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಒಮ್ಮೆ ತಾಯಿಯನ್ನು ಹತ್ತಿರ ಕರೆದಿದ್ದ ಆಕೆ, ಯೂಟ್ಯೂಬ್‌ನಲ್ಲಿ ಮೇಣದ ಪ್ರತಿಮೆಯೊಂದನ್ನು ತೋರಿಸಿದ್ದಳು. ಅದೇ ರೀತಿ ತನ್ನ ಮೇಣದ ಪ್ರತಿಮೆ ನಿರ್ಮಿಸಿ ಜೊತೆಗೆ ಇಟ್ಟುಕೊಳ್ಳುವಂತೆ ಸೂಚಿಸಿದ್ದಳು. ತನ್ನ ಸಮಾಧಿಯ ಪಕ್ಕದಲ್ಲಿ ಉದ್ಯಾನ ನಿರ್ಮಿಸಬೇಕೆಂಬ ಇಂಗಿತವನ್ನೂ ವ್ಯಕ್ತಪಡಿಸಿದ್ದಳು.

ಮಗಳ ಮೇಣದ ಪ್ರತಿಮೆ ಜೊತೆ ಕಮಲಮ್ಮ

> **ಮಗಳೊಂದಿಗಿನ ಬಾಂಧವ್ಯ ಪದಗಳಿಗೆ ನಿಲುಕದ್ದು. ಸಮಾಜ ಸೇವೆಯ ಮೂಲಕ ಆಕೆಯ ಆಸೆಯನ್ನು ಈಡೇರಿಸುವ ಪ್ರಯತ್ನ ಮಾಡುತ್ತಿದ್ದೇನೆ**
> **ಕಮಲಮ್ಮ,** ನಿವೃತ್ತ ಮುಖ್ಯ ಶಿಕ್ಷಕಿ

ಸಮಾಜ ಸೇವೆಯ ಇಂಗಿತ

'ಮಗಳಿಗೆ ಸಮಾಜ ಸೇವೆ ಮಾಡುವ ಆಸೆ ಇತ್ತು. ಬಡವರಿಗೆ, ಅನಾಥರಿಗೆ, ವೃದ್ಧರಿಗೆ ನೆರವಾಗುವ ಇಂಗಿತ ವ್ಯಕ್ತಪಡಿಸಿದ್ದಳು. ನನ್ನ ಹಾಗೆ ಕಾಯಿಲೆಗೊಳಗಾಗಿ ಚಿಕಿತ್ಸೆಗೆ ಹಣವಿಲ್ಲದೇ ಪರದಾಡುವವರಿಗೆ ಸಹಾಯ ಮಾಡು. ಮನೆಯ ಕೆಳಗಿನ ಮಹಡಿಯಲ್ಲಿ ವೃದ್ಧಾಶ್ರಮ ಆರಂಭಿಸು ಎಂದು ಹೇಳಿದ್ದಳು. ಅದರಂತೆ ಸಮಾಜ ಸೇವೆಗೆ ಮುಂದಾಗಿದ್ದೇನೆ' ಎಂದು ಕಮಲಮ್ಮ ತಿಳಿಸಿದರು.

'ಮಗಳ ಜನ್ಮದಿನದ ಪ್ರಯುಕ್ತ ಅಕ್ಟೋಬರ್ 6ರಂದು ಎಂಸಿಸಿ 'ಎ' ಬ್ಲಾಕ್‌ನಲ್ಲಿರುವ ಅನಾಥಾಶ್ರಮದ ಮಕ್ಕಳಿಗೆ ಬ್ಯಾಗ್ ವಿತರಣೆ ಮಾಡಿ, ಸಿಹಿ ಊಟ ಹಾಕಿಸಿದೆ. ಬಾಡ ಕ್ರಾಸ್‌ನಲ್ಲಿರುವ ಪುಟ್ಟರಾಜ ಗವಾಯಿಗಳ ಪುಣ್ಯಾಶ್ರಮದ ಹೊರಗಡೆ ₹39,000 ವೆಚ್ಚದಲ್ಲಿ ಸ್ಟೀಲ್ ಗೇಟ್ ನಿರ್ಮಿಸಿಕೊಟ್ಟಿದ್ದೇನೆ. ಇನ್ನೂ ಹಲವು ಸೇವೆಗಳನ್ನು ಮಾಡುವ ಹಂಬಲವಿದೆ' ಎಂದರು.

ಮಗಳಿಗಾಗಿ ಕವನ ಸಂಕಲನ

'ಕಾವ್ಯಾಳಿಗೆ 7ನೇ ತರಗತಿಯಿಂದಲೇ ಕವನ ಬರೆಯುವ ಹವ್ಯಾಸ ಇತ್ತು, 2003–04ರಲ್ಲಿ ಸುನಾಮಿ ಕುರಿತು ಕವನ ರಚಿಸಿದ್ದಳು. ಅದು ಪತ್ರಿಕೆಯಲ್ಲೂ ಪ್ರಕಟಗೊಂಡಿತ್ತು. ಸಾಯುವವರೆಗೂ ಕವನ ಬರೆಯುತ್ತಿದ್ದಳು. ಆಕೆ ಬರೆದ ಕವನ, ಚುಟುಕುಗಳನ್ನು 'ಕಾವ್ಯ ಕನ್ನಿಕೆ' ಹೆಸರಿನ ಪುಸ್ತಕದ ರೂಪದಲ್ಲಿ ಪ್ರಕಟಿಸಿದ್ದೇನೆ' ಎಂದು ಕಮಲಮ್ಮ ಹೇಳಿದರು.

ಮಗಳ ಆಸೆಯಂತೆ ಬೆಂಗಳೂರಿನ ಶಿಲ್ಪಿ ವಿಶ್ವನಾಥ್ ಅವರಿಂದ ₹3.30 ಲಕ್ಷ ವೆಚ್ಚದಲ್ಲಿ ಮೇಣದ ಪ್ರತಿಮೆ ನಿರ್ಮಿಸಿ ಸರಸ್ವತಿನಗರದ 2ನೇ ಮೇನ್, 2ನೇ ಕ್ರಾಸ್‌ನಲ್ಲಿರುವ ತಮ್ಮ ನಿವಾಸದಲ್ಲಿ ಇಟ್ಟಿದ್ದಾರೆ. ಗೋಪನಾಳ್‌ನಲ್ಲಿ ಇರುವ ಸಮಾಧಿ ಸುತ್ತಲೂ ಉದ್ಯಾನವನ್ನೂ ನಿರ್ಮಿಸಿದ್ದಾರೆ.

'ಸಿಲಿಕಾನ್ ವಸ್ತುಗಳಿಂದ ತಯಾರಿಸಿರುವ ಈ ಪ್ರತಿಮೆ ಕಾವ್ಯಾಳ ಪಡಿಯಚ್ಚಿನಂತಿದೆ. ಉಗುರು, ಚರ್ಮ, ಮುಖ ಹಾಗೂ ಇತರ ಅಂಗಾಂಗಗಳು ಜೀವತಳೆದಂತಿವೆ. ಆಕೆ ಜೊತೆಗೇ ಇದ್ದಾಳೆ. ಮನೆಯಲ್ಲೇ ಕುಳಿತಿದ್ದಾಳೆ ಎಂಬಂತೆ ಭಾಸವಾಗುತ್ತದೆ. ಈ ಪ್ರತಿಮೆ ನಿರ್ಮಾಣಕ್ಕೆ ₹5 ಲಕ್ಷಕ್ಕಿಂತ ಹೆಚ್ಚು ಖರ್ಚಾಗುತ್ತದೆ. ಆದರೆ ನನ್ನ ಪರಿಸ್ಥಿತಿ ಅರ್ಥಮಾಡಿಕೊಂಡು ₹3.30 ಲಕ್ಷಕ್ಕೆ ಮಾಡಿಕೊಟ್ಟಿದ್ದಾರೆ. ಮಗಳು ಪ್ರತಿಮೆಯ ರೂಪದಲ್ಲಿ ಕೊನೆಯವರೆಗೂ ಜೊತೆಗೆ ಇರುತ್ತಾಳೆ ಎಂಬುದೇ ಖುಷಿ' ಎಂದು ಕಮಲಮ್ಮ ಹೇಳುತ್ತಾರೆ.

'ಸತ್ತ ಮೇಲೆ ದೇಹವನ್ನು ಆಸ್ಪತ್ರೆಗೆ ದಾನ ಮಾಡುವಂತೆ ಮಗಳು ಹೇಳಿದ್ದಳು. ಕ್ಯಾನ್ಸರ್ ಕಾರಣದಿಂದಾಗಿ ವೈದ್ಯರು ಆಕೆಯ ದೇಹ ಪಡೆಯಲು ನಿರಾಕರಿಸಿದರು. ಅವರ ಮನವೊಲಿಸಲು ಸಾಕಷ್ಟು ಪ್ರಯತ್ನಪಟ್ಟೆ. ಆದರೂ ಆಕೆಯ ಅದೊಂದು ಆಸೆ ಈಡೇರಿಸಲು ಆಗಲಿಲ್ಲ' ಎಂದು ಭಾವುಕರಾದರು.

ಲೋಕಸಭೆಯಲ್ಲಿ ಭದ್ರತಾ ಲೋಪ ● ಚುರುಕುಗೊಂಡ ತನಿಖೆ ● ಬಂಧಿತರ ಸಂಖ್ಯೆ 6ಕ್ಕೆ

ಬೆಂಕಿ ಹಚ್ಚಿಕೊಳ್ಳಲು ಯೋಜನೆ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ನಡೆದ ಭದ್ರತಾ ಉಲ್ಲಂಘನೆ ಪ್ರಕರಣದ ಆರೋಪಿಗಳು ಸಂಸತ್ ಮುಂಭಾಗ ತಮಗೆ ತಾವೇ ಬೆಂಕಿ ಹಚ್ಚಿಕೊಳ್ಳುವ ಯೋಜನೆ ರೂಪಿಸಿದ್ದರು ಎಂಬ ಅಂಶ ವಿಚಾರಣೆ ವೇಳೆ ಬಹಿರಂಗಗೊಂಡಿದೆ.

'ಲೋಕಸಭೆಯಲ್ಲಿ ಸ್ಮೋಕ್ ಕ್ಯಾನ್ (ಹೊಗೆ ಉಗುಳುವ ಡಬ್ಬಿ) ಬಳಸಿ ದಾಂದಲೆ ಎಬ್ಬಿಸುವ ಯೋಜನೆ ರೂಪಿಸುವ ಮುನ್ನ ಅವರು (ಆರೋಪಿಗಳು), ತಮ್ಮ ಸಂದೇಶವನ್ನು ಸರ್ಕಾರಕ್ಕೆ ಇನ್ನಷ್ಟು ಪರಿಣಾಮಕಾರಿಯಾಗಿ ತಲುಪಿಸುವ ನಿಟ್ಟಿನಲ್ಲಿ ಇತರ ಕೆಲವು ಯೋಜನೆಗಳ ಬಗ್ಗೆಯೂ ಚಿಂತನೆ ನಡೆಸಿದ್ದರು' ಎಂದು ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ದೆಹಲಿ ಪೊಲೀಸ್ ವಿಶೇಷ ಘಟಕದ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

'ಅಗ್ನಿ ನಿರೋಧಕ ಜೆಲ್‌ಅನ್ನು (ಫೈರ್ ಪ್ರೂಫ್) ದೇಹಕ್ಕೆ ಹಚ್ಚಿಕೊಂಡು, ತಮಗೆ ತಾವೇ ಬೆಂಕಿ ಹಚ್ಚಿಕೊಳ್ಳುವ ಸಂಚನ್ನು ಆರೋಪಿಗಳು ಹೆಣೆದಿದ್ದರು. ಆದರೆ ಕೊನೆಯ ಕ್ಷಣದಲ್ಲಿ ಆ ಯೋಜನೆ ಕೈಬಿಟ್ಟಿದ್ದರು. ಅದೇ ರೀತಿ, ಲೋಕಸಭೆಯಲ್ಲಿ ಕರಪತ್ರಗಳನ್ನು ಹಂಚುವ ಯೋಜನೆಯನ್ನೂ ಹಾಕಿಕೊಂಡಿದ್ದರು' ಎಂದು ಮಾಹಿತಿ ನೀಡಿದರು.

ಇಬ್ಬರು ಆರೋಪಿಗಳಾದ ಡಿ. ಮನೋರಂಜನ್ ಮತ್ತು ಸಾಗರ್ ಶರ್ಮಾ ಅವರು ಬುಧವಾರ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದು ದಾಂದಲೆ ಎಬ್ಬಿಸಿದ್ದರು. ಆರೋಪಿಗಳಾದ ಅಮೋಲ್ ಶಿಂಧೆ ಹಾಗೂ ನೀಲಂ ವರ್ಮಾ ಅವರು ಸಂಸತ್ ಭವನದ ಹೊರಗಡೆ ಪ್ರತಿಭಟನೆ ಮಾಡಿದ್ದರು. ಪ್ರಕರಣದ ಪ್ರಮುಖ ಸಂಚುಕೋರ ಲಲಿತ್ ಝಾ, ಪ್ರತಿಭಟನೆಯ ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು.

ತನಿಖೆ ಚುರುಕುಗೊಳಿಸಿರುವ ವಿಶೇಷ ಘಟಕದ ಅಧಿಕಾರಿಗಳು, ಎಲ್ಲೆಲ್ಲಿ ಸಂಚು ರೂಪಿಸಲಾಗಿತ್ತು ಎಂಬುದರ ಬಗ್ಗೆ ಮಾಹಿತಿ ಕಲೆಹಾಕಲು ಆರೋಪಿಗಳನ್ನು ಶುಕ್ರವಾರ ರಾತ್ರಿ ವಿವಿಧ ಸ್ಥಳಗಳಿಗೆ ಕರೆದೊಯ್ದಿದ್ದರು. ಭದ್ರತಾ ಲೋಪ ಘಟನೆಯ ಮರುಸೃಷ್ಟಿಗೆ ಪೊಲೀಸರು ಸಂಸತ್ತಿನ ಅನುಮತಿ ಪಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

ಘಟನೆಯ ಬಳಿಕ ಪರಾರಿಯಾಗಿದ್ದ ಝಾ ರಾಜಸ್ಥಾನದ ನಾಗೌರ್‌ನಲ್ಲಿ ಅಡಗಿದ್ದರು. ಪೊಲೀಸರು ಅವರನ್ನು ಅಲ್ಲಿಗೆ ಕರೆದೊಯ್ಯಲು ಸಿದ್ಧತೆ ನಡೆಸಿದ್ದಾರೆ. ತನ್ನ ಹಾಗೂ ಇತರ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ನಾಶ ಮಾಡಿದ ಸ್ಥಳಕ್ಕೂ ಅವರನ್ನು ಕರೆದೊಯ್ಯಲಾಗುವುದು ಎಂದು ಇನ್ನೊಬ್ಬ ಅಧಿಕಾರಿ ಹೇಳಿದರು.

ಮುಖ್ಯಾಂಶಗಳು

- ಕೊನೆಯ ಕ್ಷಣದಲ್ಲಿ ಯೋಜನೆಯನ್ನು ಬದಲಿಸಿದ್ದ ಆರೋಪಿಗಳು
- ಘಟನೆಯ ಮರುಸೃಷ್ಟಿ: ಸಂಸತ್ ಅನುಮತಿ ಪಡೆಯಲು ಪೊಲೀಸರ ಸಿದ್ಧತೆ

ಮಹೇಶ್ ಬಂಧನ, 7 ದಿನ ಪೊಲೀಸ್ ವಶಕ್ಕೆ

ಪ್ರಕರಣಕ್ಕೆ ಸಂಬಂಧಿಸಿದಂತೆ ಶನಿವಾರ ಬಂಧಿತರಾಗಿರುವ ಮತ್ತೊಬ್ಬ ಆರೋಪಿ ಮಹೇಶ್ ಕುಮಾವತ್ ಅವರನ್ನು ದೆಹಲಿಯ ನ್ಯಾಯಾಲಯ ಏಳು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಗುರುವಾರ ಪೊಲೀಸ್ ಠಾಣೆಯಲ್ಲಿ ಲಲಿತ್ ಝಾ ಶರಣಾಗುವ ವೇಳೆ ಮಹೇಶ್ ಕೂಡಾ ಜತೆಗಿದ್ದರು. ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದ್ದ ಪೊಲೀಸರು ಶನಿವಾರ ಬೆಳಿಗ್ಗೆ ಬಂಧಿಸಿದ್ದಾರೆ. ಇದರೊಂದಿಗೆ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಆರಕ್ಕೇರಿದೆ. ಇತರ ಆರೋಪಿಗಳ ಮೊಬೈಲ್ ಫೋನ್‌ಗಳನ್ನು ಝಾ ಜತೆ ಸೇರಿ ನಾಶಪಡಿಸಿದ ಆರೋಪ ಮಹೇಶ್ ಮೇಲಿದೆ.

'ನಮ್ಮ ಮಗ ಈ ಕೃತ್ಯ ಎಸಗಲು ಸಾಧ್ಯವಿಲ್ಲ'

ದರ್ಭಂಗಾ, ಬಿಹಾರ (ಪಿಟಿಐ): 'ನಮ್ಮ ಮಗ ಇಂತಹ ಕೃತ್ಯದಲ್ಲಿ ಭಾಗಿಯಾಗಲು ಸಾಧ್ಯವೇ ಇಲ್ಲ' ಎಂಬುದು ಪ್ರಕರಣದ ಪ್ರಮುಖ ಸಂಚುಕೋರ ಲಲಿತ್ ಝಾ ಅವರ ಪೋಷಕರ ಮಾತು. 'ಮಗನ ಬಂಧನದ ವಿಚಾರ ಬೇರೆಯವರ ಮೂಲಕ ತಿಳಿದಿದೆ. ನಮ್ಮ ಮನೆಯಲ್ಲಿ ಟಿ.ವಿ ಕೂಡಾ ಇಲ್ಲ' ಎಂದು ಝಾ ಅವರ ತಂದೆ, ಕೋಲ್ಕತ್ತದಲ್ಲಿ ಪುರೋಹಿತರಾಗಿ ಕೆಲಸ ಮಾಡುತ್ತಿರುವ ದೇವಾನಂದ ಝಾ ಹೇಳಿದ್ದಾರೆ.

'ನನ್ನ ಮಗ ಕೆಟ್ಟವನಲ್ಲ. ಇದುವರೆಗೆ ಯಾವುದೇ ದುಷ್ಕೃತ್ಯ ಎಸಗಿದವನಲ್ಲ. ಯಾವಾಗಲೂ ಇತರರಿಗೆ ಸಹಾಯ ಮಾಡಲು ಇಷ್ಟಪಡುತ್ತಾನೆ. ಮೂರು ಸಲ ರಕ್ತದಾನವನ್ನೂ ಮಾಡಿದ್ದ' ಎಂದು ಝಾ ಅವರ ತಾಯಿ ಮಂಜುಳಾ, ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ್ದಾರೆ.

ಮನೋರಂಜನ್ ಪಾಲಕರಿಗೆ ಇಲಾಖೆ ಸೂಚನೆ

ಮೈಸೂರು: 'ಲೋಕಸಭೆ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಡಿ. ಮನೋರಂಜನ್ ಅವರಿಗೆ ಸಂಬಂಧಿಸಿದ ವಸ್ತುಗಳನ್ನು ಮಾರಾಟ ಮಾಡಬಾರದು. ಬಚ್ಚಿಡಲು ಪ್ರಯತ್ನಿಸಬಾರದು ಎಂದು ಕೇಂದ್ರ ಗುಪ್ತಚರ ಇಲಾಖೆ ಅಧಿಕಾರಿಗಳು ಆತನ ಪಾಲಕರಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿ ಓದುತ್ತಿದ್ದ ಪುಸ್ತಕ, ದಿನಪತ್ರಿಕೆಗಳನ್ನು ಮಾರಾಟ ಮಾಡಬಾರದು. ಊರಿನಿಂದ ಹೊರಗೆ ತೆರಳುವ ಮುನ್ನ ಮಾಹಿತಿ ಕೊಡಬೇಕು. ಎಲ್ಲಾ ದೂರವಾಣಿ ಕರೆಗಳನ್ನೂ ಕಡ್ಡಾಯವಾಗಿ ಸ್ವೀಕರಿಸಬೇಕು. ಕೃತ್ಯಕ್ಕೆ ಸಂಬಂಧಿಸಿದಂತೆ ಯಾರಾದರೂ ವಿಚಾರಿಸಿದರೆ ಮಾಹಿತಿ ನೀಡಬೇಕು ಎಂದು ಅಧಿಕಾರಿಗಳು ದೂರವಾಣಿ ಕರೆ ಮಾಡಿ ತಿಳಿಸಿದ್ದಾರೆ' ಎನ್ನಲಾಗಿದೆ.

ವಿಜಯನಗರದ ಎರಡನೇ ಹಂತದಲ್ಲಿರುವ ಮನೆಯ ಮಹಜರು ನಡೆಸಲು ಭಾನುವಾರ ದೆಹಲಿ ಪೊಲೀಸರು ಮೈಸೂರಿಗೆ ಬರುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

> ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರು–ಕೊಡಗು ಕ್ಷೇತ್ರದ ಸಂಸದ ಪ್ರತಾಪ ಸಿಂಹ ಅವರ ಹೇಳಿಕೆಯನ್ನು ಪಡೆಯಲಾಗುವುದು
> **ದೆಹಲಿ ಪೊಲೀಸ್ ವಿಶೇಷ ಘಟಕದ ಅಧಿಕಾರಿ**

'ಭದ್ರತೆ ಉಲ್ಲಂಘನೆ: ನಿರುದ್ಯೋಗ ಕಾರಣ'

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತೆಯ ಉಲ್ಲಂಘನೆಗೆ ನಿರುದ್ಯೋಗ ಮತ್ತು ಬೆಲೆ ಏರಿಕೆ ಕಾರಣ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶನಿವಾರ ಅಭಿಪ್ರಾಯ ಪಟ್ಟಿದ್ದಾರೆ.

ಭದ್ರತೆಯ ಉಲ್ಲಂಘನೆ ಆಗಿದೆ ಎಂಬುದು ಸರಿ. ಆದರೆ ಇದು ಯಾಕೆ ಆಯಿತು ಎಂಬುದು ಪ್ರಶ್ನೆ ಎಂದು ಅವರು ಹೇಳಿದರು.

'ಈ ದೇಶದಲ್ಲಿ ಪ್ರಮುಖ ಸಮಸ್ಯೆ ಎಂದರೆ ನಿರುದ್ಯೋಗ. ಇದು ದೇಶದಾದ್ಯಂತ ವ್ಯಾಪಕವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನೀತಿಯಿಂದಾಗಿ ದೇಶದಲ್ಲಿ ಯುವಕರಿಗೆ ಉದ್ಯೋಗ ಸಿಗುತ್ತಿಲ್ಲ. ಭದ್ರತೆಯ ಉಲ್ಲಂಘನೆಯ ಹಿಂದಿನ ಕಾರಣ ನಿರುದ್ಯೋಗ ಮತ್ತು ಬೆಲೆ ಏರಿಕೆ' ಎಂದು ರಾಹುಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಸಂಸದರ ಅಮಾನತು: ಸ್ಪೀಕರ್ ಸಮರ್ಥನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯ 13 ಸಂಸದರನ್ನು ಅಮಾನತುಗೊಳಿಸಿರುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಸ್ಪೀಕರ್ ಓಂ ಬಿರ್ಲಾ, 'ಸಂಸತ್ತಿನ ಶಿಷ್ಟಾಚಾರ ಮತ್ತು ಘನತೆ'ಯನ್ನು ಎತ್ತಿಹಿಡಿಯಲು 'ಕಟ್ಟುನಿಟ್ಟಿನ ಕ್ರಮ'ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದಿದ್ದಾರೆ.

ಸಂಸತ್ತಿನ ಚಳಿಗಾಲದ ಅಧಿವೇಶನದ ಇನ್ನುಳಿದ ಅವಧಿಯ ಕಲಾಪ ಸುಗಮವಾಗಿ ನಡೆಯಲು ಸಹಕಾರ ಹಾಗೂ ಬೆಂಬಲ ಕೋರಿ ಸಂಸದರಿಗೆ ಶನಿವಾರ ಪತ್ರ ಬರೆದಿರುವ ಅವರು, 'ಸಂಸತ್ ಸಂಕೀರ್ಣದ ಭದ್ರತೆಯು ಸಂಸತ್ತಿನ ವ್ಯಾಪ್ತಿಗೆ ಬರುತ್ತದೆ' ಎಂದು ಸ್ಪಷ್ಟಪಡಿಸಿದರು. ಆ ಮೂಲಕ ಬುಧವಾರ ನಡೆದ ಭದ್ರತಾ ವೈಫಲ್ಯ ಘಟನೆಗೆ ಸರ್ಕಾರವನ್ನು ಹೊಣೆಯನ್ನಾಗಿಸಬೇಕೆಂಬ ಪ್ರತಿಪಕ್ಷಗಳ ಬೇಡಿಕೆಯನ್ನು ತಳ್ಳಿಹಾಕಿದರು.

ಲೋಕಸಭೆಯಲ್ಲಿನ ಭದ್ರತಾ ವೈಫಲ್ಯದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕೆಂದು ಪಟ್ಟು ಹಿಡಿದು ವಿರೋಧ ಪಕ್ಷಗಳು ಗದ್ದಲ ಹಾಗೂ ಪ್ರತಿಭಟನೆ ನಡೆಸಿದ್ದರಿಂದ ಶುಕ್ರವಾರ ಉಭಯ ಸದನಗಳ ಕಲಾಪ ನಡೆದಿರಲಿಲ್ಲ. ಶಾ ಅವರು ಹೇಳಿಕೆ ನೀಡದಿದ್ದರೆ ಸೋಮವಾರದ ಕಲಾಪಕ್ಕೂ ಅಡ್ಡಿಪಡಿಸುವ ಸೂಚನೆಯನ್ನು ಪ್ರತಿಪಕ್ಷಗಳು ನೀಡಿವೆ. ಹೀಗಾಗಿ ಪತ್ರ ಬರೆದು ಸಹಕಾರ ಕೋರಿದ್ದಾರೆ.

ಸಂಸದರ ಅಮಾನತು ಕ್ರಮ ಟೀಕಿಸಿದ್ದ ವಿರೋಧ ಪಕ್ಷಗಳು, ಲೋಕಸಭೆಯ ಸದನದೊಳಗೆ ಜಿಗಿದ ಇಬ್ಬರು ಆರೋಪಿಗಳಿಗೆ ಪಾಸ್ ವ್ಯವಸ್ಥೆ ಮಾಡಿಕೊಟ್ಟ ಬಿಜೆಪಿ ಸಂಸದ ಪ್ರತಾಪ ಸಿಂಹ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ ಭದ್ರತಾ ವೈಫಲ್ಯದ ವಿಷಯ ಎತ್ತಿದ್ದಕ್ಕೆ ನಮ್ಮ ಸಂಸದರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಪಿಸಿದ್ದವು.

ವಿರೋಧ ಪಕ್ಷಗಳ ಆರೋಪ ಅಲ್ಲಗಳೆದಿರುವ ಸ್ಪೀಕರ್, 'ಇದು ನಿರಾಧಾರ ಆರೋಪ. ಸಂಸದರ ಅಮಾನತು ಕ್ರಮಕ್ಕೂ ಡಿ.13ರಂದು ನಡೆದಿದ್ದ ಘಟನೆಗೂ ಯಾವುದೇ ಸಂಬಂಧವಿಲ್ಲ' ಎಂದಿದ್ದಾರೆ.

> ಸಂಸತ್ ಸಂಕೀರ್ಣದ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ
> **ಓಂ ಬಿರ್ಲಾ,** ಲೋಕಸಭಾ ಸ್ಪೀಕರ್

ರಾಜ್ಯಸಭೆ: ಛಡ್ಡಾ ಎಎಪಿ ನಾಯಕ

ನವದೆಹಲಿ (ಪಿಟಿಐ): ರಾಜ್ಯಸಭೆಯಲ್ಲಿ ಪಕ್ಷದ ಸದನ ನಾಯಕರಾಗಿ ರಾಘವ್ ಛಡ್ಡಾ ಅವರನ್ನು ನೇಮಕ ಮಾಡಿರುವುದಾಗಿ ಎಎಪಿ ತಿಳಿಸಿದೆ.

ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಂಜಯ್ ಸಿಂಗ್ ಅವರು ನ್ಯಾಯಾಂಗ ಬಂಧನದಲ್ಲಿರುವ ಕಾರಣ ಇನ್ನು ಮುಂದೆ ಛಡ್ಡಾ ಅವರು ಸದನ ನಾಯಕರಾಗಿರುತ್ತಾರೆ ಎಂದು ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರಿಗೆ ಪತ್ರ ಬರೆದು ಮಾಹಿತಿ ನೀಡಿದೆ.

ಪ್ರಾರ್ಥನೆ

ಟಿಬೆಟ್ ಧರ್ಮಗುರು ದಲೈಲಾಮಾ ಅವರು ಬಿಹಾರದ ಬೋಧಗಯಾದಲ್ಲಿರುವ ಮಹಾಬೋಧಿ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿದರು –ಪಿಟಿಐ ಚಿತ್ರ

'ದೇಶಕ್ಕಾಗಿ ದೇಣಿಗೆ': ನಾಳೆ ಚಾಲನೆ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗೆ ಸಂಪನ್ಮೂಲ ಕ್ರೋಡೀಕರಣ ಮಾಡಲು ಆನ್‌ಲೈನ್ ಮೂಲಕ ನಿಧಿ ಸಂಗ್ರಹ ಮಾಡುವ ಕಾಂಗ್ರೆಸ್‌ನ 'ದೇಶಕ್ಕಾಗಿ ದೇಣಿಗೆ' ಅಭಿಯಾನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಚಾಲನೆ ನೀಡುವರು.

ಇದಕ್ಕಾಗಿ ಎರಡು ಆನ್‌ಲೈನ್ ಚಾನೆಲ್‌ಗಳನ್ನು– donateinc.in ಮತ್ತು ಕಾಂಗ್ರೆಸ್ ವೆಬ್‌ಸೈಟ್ inc.in. ಬಳಸಲಾಗುತ್ತದೆ. ಉದ್ಘಾಟನೆ ಸಮಯದಲ್ಲಿ ದೇಣಿಗೆಯ ಲಿಂಕ್‌ಗಳು ನೇರವಾಗಿ ಲಭ್ಯವಾಗಲಿವೆ ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಖಜಾಂಚಿ ಅಜಯ್ ಮಾಕನ್ ತಿಳಿಸಿದರು.

'ಉತ್ತಮ ಭಾರತಕ್ಕೆ ದೇಣಿಗೆ ನೀಡಿ' ಎಂಬ ಉದ್ಘಾಟನಾ ಅಭಿಯಾನವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ 138 ವರ್ಷದ ಪಯಣವನ್ನು ನೆನಪಿಸುತ್ತದೆ. ಹದಿನೆಂಟು ವರ್ಷ ಮೇಲ್ಪಟ್ಟವರು ಕನಿಷ್ಠ ₹138 ನೀಡಬಹುದು ಅಥವಾ ₹1,380, ₹13,800... ಹೀಗೆ ದೇಣಿಗೆ ನೀಡಬಹುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಮುಖ ಅಂಶಗಳು

- 'ಉತ್ತಮ ಭಾರತದ' ನಿರ್ಮಾಣಕ್ಕೆ ಕಾಂಗ್ರೆಸ್‌ಗೆ ನೆರವು– ಅಭಿಯಾನದ ಉದ್ದೇಶ
- ಪಕ್ಷದ 138ನೇ ಸಂಸ್ಥಾಪನಾ ದಿನದ ಅಂಗವಾಗಿ ಇದೇ 28ರಂದು ಮಹಾರಾಷ್ಟ್ರದ ನಾಗ್ಪುರದಲ್ಲಿ ಬೃಹತ್ ರ್‍ಯಾಲಿ

CENTRAL INSTITUTE OF PETROCHEMICALS ENGINEERING AND TECHNOLOGY (CIPET)
CENTRE FOR SKILLING & TECHNICAL SUPPORT (CSTS)
Department of Chemicals & Petrochemicals, Ministry of Chemicals & Fertilizers, Government of India
No.437/A, Hebbal Industrial Area, Mysuru - 570 016. Phone: +91-821-2511903 Mobile: +91-9466146001
Email: mysore@cipet.gov.in / cipetmys1@gmail.com Website: https://www.cipet.gov.in/

Advertisement No: CIPET/MYS/ADMIN/CIPET_Contr./03 Date: 15.12.2023

ADVERTISEMENT FOR ENGAGEMENT FOR LIMITED OR FIXED PERIOD ON CONTRACT IN CIPET AS ASST. PROFESSOR & INSTRUCTOR (Skill Development)

Central Institute of Petrochemicals Engineering & Technology (CIPET) (formerly known as Central Institute of Plastics Engineering & Technology) is a premier National Institution in the field of Polymer Science & Technology with a focus on Academic, Technology Support and Research & Application Development. CIPET also offers AICTE approved Diploma, Post Diploma & Post Graduation Diploma Programs in the fields of Plastics Technology, Mould Technology, Mould Design with CAD/ CAM and Plastics Processing & Testing.

CIPET: CSTS – Mysuru is in search of dynamic, result oriented personnel on Contract basis personnel in the area of Academics & Placement as detailed below:

Sl.No.	Position	Remuneration payable per month	No. of positions
1.	**Assistant Professor** (Plastics Engineering / Mechanical Engg.)	Rs. 35,000/- to Rs. 40,000/-	02
2.	**Instructor** (Skill Development)	Rs. 25,000/- to Rs. 30,000/-	03

For detailed information on eligibility criteria, educational qualifications & experience, general terms and conditions and application form etc., please visit our website: **www.cipet.gov.in**

Applications in the prescribed form along with necessary enclosures should be sent in a sealed envelope to **The Director & Head, CIPET: CSTS – Mysuru, No.437/A, Hebbal Industrial Area, Mysuru - 570 016** by Registered Post / Speed Post. **The closing/ last date of receipt of application is 17.01.2024.** The candidate should clearly mention **"Advertisement No.: CIPET/MYS/ADMIN/CIPET_Contr./03"** and **"Name of the position applied with discipline"** in BOLD letters on top of the envelope.

Sd/-
Director & Head, CIPET:CSTS – Mysuru

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 17 ಡಿಸೆಂಬರ್ 2023

ನಾದ ಧ್ಯಾನಸ್ಥನಿಗೆ ತಾನ್‌ಸೇನ್ ಸಮ್ಮಾನ್ **11**

ಬಹುಮುಖಿ ರಾಮಯ್ಯ ನೆನಕೆ... **12**

ಅಮೀರರ ಸಂತೆಯಲ್ಲಿ ಆರು ದಿನ **13**

ಕೋಲಾರದ ಆಸುಪಾಸಿನಲ್ಲಿನ ಕೃಷ್ಣ ಮೃಗಗಳು

ಕೃಷ್ಣ ಮೃಗದ ಪಡಿಪಾಟಲು

ಕೋಲಾರಕ್ಕೆ ಸಮೀಪದಲ್ಲಿ ಕೃಷ್ಣ ಮೃಗಗಳು ಹೆಚ್ಚಾಗಿದ್ದವು. ನಗರ ವಿಸ್ತರಣೆಯಾಗುತ್ತಾ ಬಂದಂತೆ ಅವುಗಳ ಪಡಿಪಾಟಲು ಈಗ ಹೆಚ್ಚಾಗಿದೆ. ಅವುಗಳನ್ನು ಸಂರಕ್ಷಿಸಿ ವನ್ಯಧಾಮ ಮಾಡುವ ಹಳೆಯ ಕೋರಿಕೆಗೆ ಸರ್ಕಾರ ಇನ್ನೂ ಕಿವಿಗೊಟ್ಟಿಲ್ಲ.

ಚಿತ್ರ ಲೇಖನ: ಎಂ.ಆರ್. ಮಂಜುನಾಥ್

ಕೃಷ್ಣ ಮೃಗಗಳ ಸೌಂದರ್ಯಕ್ಕೆ ಮನಸೋಲದ ಜನರಿಲ್ಲ. ರಾಮಾಯಣದ ಸೀತೆಯೂ ಮಾಯಾಮೃಗಕ್ಕೆ ಆಸೆಪಟ್ಟವಳೇ. ಇವುಗಳು ಜೀವಿಸುವ ಪರಿಸರವು ಯಾವಾಗಲೂ ಸುಭಿಕ್ಷವಾಗಿರುತ್ತದೆ ಎನ್ನುವುದು ಜನರ ನಂಬಿಕೆ. ರೈತರು ಬೆಳೆಯುವ ಪೈರಿನ ಚಿಗುರುಗಳನ್ನು ಕಡಿದು ತಿಂದರೆ, ಆ ಬೆಳೆ ಸಮೃದ್ಧವಾಗುತ್ತದೆ ಎನ್ನುವ ನಂಬಿಕೆಯೂ ಉತ್ತರ ಕರ್ನಾಟಕದ ರೈತರಲ್ಲಿ ಇದೆ. ಹೀಗಾಗಿ ಇವುಗಳನ್ನು ಕೊಲ್ಲುವುದಿಲ್ಲ. ಇವುಗಳ ಮೂಲಸ್ಥಾನ ಭಾರತವೇ ಆದರೂ ನೇಪಾಳ ಹಾಗೂ ಪಾಕಿಸ್ತಾನ ಭಾಗಗಳಲ್ಲಿ ಈ ಬಂಗಾರದ ಚಿಗರಿಗಳನ್ನು (ಸೂರ್ಯರಶ್ಮಿ ಮೈಮೇಲೆ ಬಿದ್ದರೆ ಬಂಗಾರದಂತೆ ಇವು ಹೊಳೆಯುತ್ತವೆ) ಕಾಣಬಹುದು. ಹಿಂದೆ ನೂರಾರು ಸಂಖ್ಯೆಯಿಂದ ಕೂಡಿರುತ್ತಿದ್ದ ಅವುಗಳ ಗುಂಪುಗಳಲ್ಲಿ ಈಗ ಹತ್ತಿಪ್ಪತ್ತು ಕಂಡರೆ ಹೆಚ್ಚು.

ಕೋಲಾರದಿಂದ 35 ಕಿ.ಮೀ. ಹಾಗೂ ಬಂಗಾರಪೇಟೆಯಿಂದ ಕೇವಲ 12 ಕಿ.ಮೀ. ದೂರ ಸಾಗಿದರೆ ಈ ಕೃಷ್ಣ ಮೃಗಗಳನ್ನು 12 ಸಾವಿರ ಎಕರೆ ಜಾಗದಲ್ಲಿ ಕಾಣಬಹುದು. ಇವುಗಳ ವಾಸಸ್ಥಳವು 'ಭಾರತ್ ಗೋಲ್ಡ್‌ಮೈನ್ಸ್ ಲಿಮಿಟೆಡ್'ಗೆ ಸೇರಿದೆ. ಸರ್ಕಾರವು ಅರಣ್ಯ ಇಲಾಖೆಯವರಿಗೆ ಈ ಸ್ಥಳವನ್ನು ಹಸ್ತಾಂತರಿಸಿದರೆ ಸಂರಕ್ಷಣಾ ಮೀಸಲು ಪ್ರದೇಶವೆಂದು ಮಾಡಬಹುದು ಎಂದು ಮಾಹಿತಿ ಕೊಟ್ಟವರು ಡಿ.ಸಿ.ಎಫ್. ಏಡುಕೊಂಡಲು.

ಕೋಲಾರದ ಚಿನ್ನದ ಗಣಿಯವರಿಂದ ಜಾಗವನ್ನು ವಶಪಡಿಸಿಕೊಂಡು ಕೃಷ್ಣ ಮೃಗ ವನ್ಯಧಾಮ ಮಾಡಲು ಅನುಮತಿ ಕೋರಿ ಸರ್ಕಾರಕ್ಕೆ 2017ರಲ್ಲಿ ಮನವಿ ಸಲ್ಲಿಸಲಾಗಿತ್ತೆನ್ನುವ ಸಂಗತಿಯೂ ಅವರಿಂದ ತಿಳಿಯಿತು. ಆದರೆ ಇದೇ ಸ್ಥಳದಲ್ಲಿ ಬಡಾವಣೆ ನಿರ್ಮಿಸುವ ಪ್ರಸ್ತಾವ ಇರುವುದು ವಿಷಾದನೀಯ.

ಕೃಷ್ಣ ಮೃಗಗಳಲ್ಲದೆ ನವಿಲು ಸೇರಿದಂತೆ ಪಕ್ಷಿ ಸಂಕುಲವೂ ಇಲ್ಲಿದೆ. ನರಿ, ಮುಳ್ಳುಹಂದಿ, ಕಾಡುಹಂದಿ, ಉಡ, ಮುಂಗುಸಿ, ಕಾಡುಮೊಲ ಮುಂತಾದವೂ ಕಾಣಿಸುತ್ತವೆ. ಆನೆಗೊಬ್ಬಳಿ, ಜಾಲಿ, ಲಂಟಾನ ಇತ್ಯಾದಿ ಗಿಡ–ಪೊದೆಗಳು ಕೂಡ ಕಂಡುಬರುತ್ತವೆ. ಕೃಷ್ಣ ಮೃಗಗಳಿಗೆ ಇದು ಒಂದು ಉತ್ತಮ ಪರಿಸರವಾಗಿದೆ. ನಗರ ಪ್ರದೇಶದಲ್ಲಂತೂ ವನ್ಯಧಾಮ ಎಲ್ಲಿಯೂ ಕಂಡುಬರುವುದಿಲ್ಲ. ಈ ಜಾಗವನ್ನು ಅರಣ್ಯ ಇಲಾಖೆಯವರು ಅಭಿವೃದ್ಧಿ ಪಡಿಸಿದರೆ ಒಂದು ವನ್ಯಧಾಮವಾಗುತ್ತದೆ. ಪ್ರವಾಸಿಗರಿಗೆ ಅದೇ ಪಿಕ್‌ನಿಕ್ ಸ್ಪಾಟ್ ಕೂಡ ಆಗುವುದರಲ್ಲಿ ಸಂಶಯವಿಲ್ಲ.

ನಗರ ಪ್ರದೇಶ ಹೀಗೆ ವಿಸ್ತರಣೆಯಾಗುವುದರಿಂದ ಹೊಲ ಗದ್ದೆಗಳು ಮಾಯವಾಗುತ್ತಿವೆ. ಕೃಷ್ಣ ಮೃಗಗಳಿಗೆ ವಲಸೆ ಹೋಗಲು ಕೂಡ ಹತ್ತಿರದಲ್ಲಿ ಸಮರ್ಪಕ ಪರಿಸರವೇ ಇಲ್ಲ. ದಾರಿ ಕಾಣದೆ ಅವು ನಗರ ಪ್ರದೇಶದ ಕಡೆ ಬರುತ್ತಿರುವುದರಿಂದ ಬೀದಿನಾಯಿಗಳ ಹಾವಳಿಗೆ ಸಿಲುಕುತ್ತಿವೆ. ಇವುಗಳ ಸಂತತಿ ನಶಿಸಿಹೋಗುವ ಮುನ್ನ ಅರಣ್ಯ ಇಲಾಖೆ ಎಚ್ಚೆತ್ತುಕೊಳ್ಳುವ ಅಗತ್ಯವಿದೆ.

ಬೀದಿನಾಯಿಯ ಉಪಟಳ

ಮಧ್ಯ ಕರ್ನಾಟಕ ಭಾಗದ ಹರಿಹರದಿಂದ ಉತ್ತರ ಕರ್ನಾಟಕದ ಧಾರವಾಡದವರೆಗಿನ ಹಾದಿಯಲ್ಲಿ ಹೊಲಗಳಲ್ಲಿ ಹೆಚ್ಚಾಗಿ ಕೃಷ್ಣ ಮೃಗಗಳು ಕಾಣುತ್ತವೆ. ರೈತರ ಜಮೀನುಗಳಿಗೆ ಹೊಂದಿಕೊಂಡ ಕಾಡುಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಇವೆ. ಇವುಗಳು ದಿಢೀರನೆ ಎತ್ತರಕ್ಕೆ ನೆಗೆಯುವುದನ್ನು ನೋಡುವುದೇ ಕಣ್ಣಿಗೆ ಹಬ್ಬ. 80 ಸೆಂ.ಮೀ. ಎತ್ತರದವರೆಗೂ ಬೆಳೆಯಬಲ್ಲ ಇವು ಸರಾಸರಿ 40 ಕೆ.ಜಿ. ತೂಗುತ್ತವೆ. ರಾಣೆಬೆನ್ನೂರಿನಿಂದ 4 ಕಿ.ಮೀ. ದೂರದ ವನ್ಯಧಾಮದಲ್ಲಿ ಕೃಷ್ಣ ಮೃಗಗಳನ್ನು ನೋಡಿ ಆನಂದಿಸಬಹುದು.

ಅರಣ್ಯ ಇಲಾಖೆ ಎಚ್ಚೆತ್ತು 10,000 ಎಕರೆ ಕುರುಚಲು ಕಾಡಿನ ಜಾಗದಲ್ಲಿ ಇವುಗಳಿಗೆ ಮೇವಾಗಿ ಗರಿಕೆ, ಹುರುಳಿ, ಜೋಳ, ನವಣೆ, ಹೆಸರು, ಅಲಸಂದೆ, ಬಿತ್ತನೆ ಕಾರ್ಯ ಮಾಡಿ ನೀರಿನ ಟ್ಯಾಂಕ್‌ಗಳಲ್ಲಿ ಕುಡಿಯಲು ನೀರಿನ ವ್ಯವಸ್ಥೆಯನ್ನೂ ಮಾಡಿದರೆ, ಕೋಲಾರದಲ್ಲಿ ಬಂಗಾರದ ಚಿಗರಿಗಳ ಜಿಗಿತ ಇನ್ನಷ್ಟು ಹೆಚ್ಚಾಗಲಿದೆ.

ಸಂಜೆ ಬದುಕಿನವರಿಗೆ ಸುರಕ್ಷೆಯ ಬೆಳಕು



ಇ.ಎಸ್. ಸುಧೀಂದ್ರ ಪ್ರಸಾದ್

ದೊಡ್ಡದಾದ ಚೌಕಿ ಮನೆ. ಅದರೊಳಗೆ ವಿಶಾಲವಾದ ಪ್ರಾಂಗಣದಲ್ಲಿ ಆರಾಮ ಚೇರಿನಲ್ಲಿ ಕೂತು ವೃತ್ತಪತ್ರಿಕೆ ಓದುತ್ತಿರುವ ಮನೆಯ ಹಿರಿಯ. ಅದೇ ಹಳೆಯ ಗಾಂಭೀರ್ಯ ಮುಖದ ಮೇಲಿದ್ದರೂ ದೂರದಲ್ಲಿ ಆಡುತ್ತಿರುವ ಮೊಮ್ಮಕ್ಕಳನ್ನು ಕನ್ನಡಕದ ಅಂಚಿನಿಂದಲೇ ನೋಡುತ್ತಾ ಸುಖಿಸುತ್ತಿದ್ದಾರೆ. ಅನತಿ ದೂರದಲ್ಲಿ ಕೂತಿರುವ ಹಿರಿಯ ಮಹಿಳೆ, ಮನೆಗೆ ಬಂದ ಸಂಬಂಧಿಕರ ಕುಶಲೋಪರಿ ವಿಚಾರಿಸುತ್ತಿದ್ದಾರೆ. ಅಡುಗೆ ಕೋಣೆಯಲ್ಲಿರುವ ಸೊಸೆ ಚಹಾ ಮಾಡುತ್ತಿದ್ದಾರೆ. ಕಚೇರಿಗೆ ತಡವಾಗಿದೆ ಎಂದು ಗಡಿಬಿಡಿ ಮಾಡುತ್ತಲೇ ಕಡತ ಹುಡುಕುತ್ತ ಅತ್ತಿಂದಿತ್ತ, ಇತ್ತಿಂದತ್ತ ಮಗ ಓಡಾಡುತ್ತಿದ್ದಾನೆ. ಶಾಲೆಗೆ ಹೊರಡಲು ಅವರ ದೊಡ್ಡ ಮಗ ಸಜ್ಜಾಗಿದ್ದಾನೆ. ಅಣ್ಣನನ್ನು ಕಳುಹಿಸಲು ತಾನೂ ಅಣಿಯಾಗಿರುವ ಪುಟ್ಟ ತಂಗಿಯ ಸಂಭ್ರಮ. ಭಾರತೀಯ ಕುಟುಂಬ ಎಂದರೆ ಹೀಗೆ ಎನ್ನುವ ಪರಿಕಲ್ಪನೆ ಈಗಲೂ ಬಹುತೇಕರ ಮನದಲ್ಲಿ ಉಳಿದಿದೆ.

> ದಶಕಗಳ ಹಿಂದೆ ದೊಡ್ಡ ಮನೆ ಕಟ್ಟಿಸಿದ ಹಿರಿಜೀವಗಳಿಗೆ ಈಗ ಬೇಕಿರುವುದು ಮನ ಮುದಗೊಳಿಸುವ ಹೃದಯವೈಶಾಲ್ಯ. ಸೌಕರ್ಯ ಎಲ್ಲಿ ಸಲೀಸೋ ಅಲ್ಲಿಯೇ ಸುರಕ್ಷೆ. ಹೀಗಾಗಿಯೇ ದೊಡ್ಡ ಮನೆಯಿಂದ ಬೆಚ್ಚಗಿನ ಚಿಕ್ಕ ಅಪಾರ್ಟ್‌ಮೆಂಟ್‌ಗೆ 'ಡೌನ್‌ಸೈಜಿಂಗ್' ಮಾಡತೊಡಗಿದ್ದಾರೆ ಸಂಜೆ ಬದುಕಿನ ಸ್ವಾಭಿಮಾನಿಗಳು.

ಕಾಲ ಬದಲಾದಂತೆ ಈ ಚಿತ್ರಣಗಳೂ ಬದಲಾಗಿವೆ. 40 ವರ್ಷಗಳ ಹಿಂದೆ ಹಳ್ಳಿಯೊಂದರಲ್ಲಿ ಕಷ್ಟಪಟ್ಟು ಓದಿದ ವ್ಯಕ್ತಿ ಬೆಂಗಳೂರಿಗೆ ಬಂದು ಬದುಕು ಕಟ್ಟಿಕೊಂಡರು. ಇದೀಗ ಅವರ ಮಕ್ಕಳು ತಮ್ಮ ಬದುಕು ಹುಡುಕುತ್ತಾ ಮತ್ತೊಂದು ಮಹಾನಗರದಲ್ಲಿ ನೆಲೆಸಿದ್ದಾರೆ. ವಯಸ್ಸಿನಲ್ಲಿರುವಾಗ ಹುಮ್ಮಸ್ಸಿನಿಂದ ಕಟ್ಟಿಸಿದ ಕನಸಿನ ಮನೆಯೇ ಈಗ ಹೊರೆ ಎನ್ನಿಸತೊಡಗಿದೆ. ವರ್ಷಕ್ಕೊಮ್ಮೆ ಅಥವಾ ಯಾವುದೋ ಒಂದೆರೆಡು ಹಬ್ಬಗಳಿಗೆಂದು ಬಂದು ಹೋಗುವ ಮಕ್ಕಳಿಗಾಗಿ ಕಾದು ಕೂರುವ ಹಿರಿಯರಿಗೆ ಸದಾಕಾಲ ಅಷ್ಟು ದೊಡ್ಡ ಮನೆಯನ್ನು ನಿರ್ವಹಣೆ ಮಾಡುವುದು ಕಷ್ಟವಾಗಿದೆ.

ಅಕ್ಕಪಕ್ಕದಲ್ಲಿದ್ದವರು ಮನೆಯನ್ನು ಮಾರಾಟ ಮಾಡಿದ್ದಾರೆ. ಆ ಜಾಗದಲ್ಲಿ ದೊಡ್ಡ ಕಟ್ಟಡಗಳು ತಲೆಎತ್ತಿವೆ. ಅಲ್ಲಿ ಇಲ್ಲಿ ವೃದ್ಧ ದಂಪತಿಯ ಕೊಲೆ, ನಗನಾಣ್ಯ ಲೂಟಿ ಎಂಬ ಸುದ್ದಿಗಳು ಬೇರೆ. ಇವೆಲ್ಲದರಿಂದ ಮನೆಯಲ್ಲೇ ಇರುವ ಹಿರಿಯರ ಆತಂಕ ಹೆಚ್ಚಾಗಿದೆ.

'ಹೆಲ್ಪ್ ಏಜ್ ಇಂಡಿಯಾ' ಎಂಬ ಸ್ವಯಂ ಸೇವಾ ಸಂಸ್ಥೆಯೊಂದು 2014ರಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ಐಟಿ ನಗರಗಳಲ್ಲಿ ಒಂಟಿಯಾಗಿರುವ ಹಿರಿಯರ (ಒಬ್ಬೊಂಟಿಯಾಗಿ ಅಥವಾ ಸಂಗಾತಿಯೊಂದಿಗೆ) ಸಂಖ್ಯೆ ಶೇ 15ರಷ್ಟು ಎಂದು ಹೇಳಲಾಗಿತ್ತು. ಒಂಬತ್ತು ವರ್ಷಗಳ ಬಳಿಕ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿರುವ ಸಾಧ್ಯತೆ ಇದೆ. ನಂಬಿಕಸ್ಥ ಮನೆಗೆಲಸದವರು ಸಿಗುವುದು ಕಷ್ಟ. ಅವರ ಖರ್ಚು ನೋಡಿಕೊಳ್ಳುವುದು ಇಳಿವಯಸ್ಸಿನವರಿಗೆ ದುಬಾರಿಯೂ ಆಗಿದೆ.

ಬೇಕೆನ್ನುವವರಲ್ಲಿ ಹಲವು ಹಿನ್ನೆಲೆಯವರು

ವೇಗದ ಯುಗದಲ್ಲಿರುವ ಇಂದಿನ ಯುವಜನತೆಗೆ ಹಿರಿಯರ ಕಡೆಗೆ ಲಕ್ಷ್ಯ ಕೊಡುವ ವ್ಯವಧಾನ ಕಡಿಮೆಯೇ. ಹೀಗಾಗಿ ಘನತೆಯ ಬದುಕು ಸಾಗಿಸಲು ಹಿರಿಯರಿಗೆ ನೆರವಾಗುವ ಉದ್ದೇಶದಿಂದ ವಿದೇಶದಲ್ಲಿ ದಶಕಗಳ ಹಿಂದೆಯೇ ಇದ್ದ 'ಡೌನ್‌ಸೈಜಿಂಗ್' ಪರಿಕಲ್ಪನೆ ಈಗ ನಮ್ಮಲ್ಲೂ ನಿಧಾನಕ್ಕೆ ಕಾಲುಚಾಚಿಕೊಳ್ಳುತ್ತಿದೆ. ಬೆಂಗಳೂರಿನ ಮಲ್ಲೇಶ್ವರ, ಜಯನಗರ, ವಿಜಯನಗರ ಹೀಗೆ ಹಳೇ ಬಡಾವಣೆಗಳಲ್ಲಿ 4,000 ಅಥವಾ 2,400 ಚದರಡಿ ಜಾಗದಲ್ಲಿ ಮನೆ ಹೊಂದಿದ್ದವರು, ಈಗ ಅದನ್ನು ಮಾರಿಯೋ ಅಥವಾ ಭೋಗ್ಯಕ್ಕೆ ನೀಡಿಯೋ, 650ರಿಂದ 800 ಚದರಡಿಯ ಚಿಕ್ಕದಾದ ಹಾಗೂ ಚೊಕ್ಕದಾದ ಸಮುದಾಯ ಸಮುಚ್ಚಯಗಳಿಗೆ ಸ್ಥಳಾಂತರಗೊಳ್ಳುತ್ತಿದ್ದಾರೆ. ಇವರಿಗಾಗಿಯೇ ಪ್ರತಿಷ್ಠಿತ ಬಿಲ್ಡರ್‌ಗಳು 'ಸೀನಿಯರ್ ಲಿವಿಂಗ್' ನಿರ್ಮಿಸುತ್ತಿದ್ದಾರೆ. ಇದನ್ನು ಹಿರಿಯರ ಆಶ್ರಯ ತಾಣ ಎಂದಾದರೂ ಕರೆಯಬಹುದು ಅಥವಾ ಇಳಿ ವಯಸ್ಸಿನಲ್ಲಿರುವವರಿಗೆ ಹಿತವೆನಿಸುವ ಹೊಸ ವಾತಾವರಣ ಎಂದೂ ಕರೆಯಬಹುದು.

ಕುಶಲ್ ರಮೇಶ್

'ವಿದೇಶಗಳಲ್ಲಿ ನೆಲೆಸಿರುವ ಮಕ್ಕಳ ಪಾಲಕರು, ಕೇವಲ ಹೆಣ್ಣುಮಕ್ಕಳನ್ನು ಹೊಂದಿರುವ ಅನೇಕರು, ಮಕ್ಕಳ ಮದುವೆ ನಂತರ ಸ್ವತಂತ್ರವಾಗಿ ಇರಲು ಬಯಸುವವರು, ಮಕ್ಕಳೊಂದಿಗೆ ಹೊಂದಾಣಿಕೆ ಆಗದವರು, ಬಾಳ ಸಂಗಾತಿಯನ್ನು ಕಳೆದುಕೊಂಡು ಮಕ್ಕಳೊಂದಿಗೂ ಬದುಕಲು ಇಷ್ಟವಿಲ್ಲದವರು... ಹೀಗೆ ಡೌನ್‌ಸೈಜಿಂಗ್ ಬಯಸಿ ಸೀನಿಯರ್ ಲಿವಿಂಗ್‌ಗೆ ತೆರಳುವವರಲ್ಲಿ ಹಲವು ರೀತಿಯ ಹಿನ್ನೆಲೆ ಹೊಂದಿರುವವರಿದ್ದಾರೆ' ಎನ್ನುತ್ತಾರೆ 'ಮನಸ್ವಂ ಸೀನಿಯರ್ ಲಿವಿಂಗ್'ನ ಕುಶಲ್ ರಮೇಶ್.

ಪುರುಷರಿಗೆ ತಮ್ಮ ವೃತ್ತಿಯಿಂದ 60ಕ್ಕೆ ಬಿಡುಗಡೆ ಸಿಗುತ್ತದೆ. ಆದರೆ ಮಹಿಳೆಯರಿಗೆ ವಯಸ್ಸು 80 ಆದರೂ ಮನೆಗೆಲಸದಿಂದ ಬಿಡುಗಡೆ ಸಿಗದು. ಸೀನಿಯರ್ ಲಿವಿಂಗ್‌ನಲ್ಲಿ ಇಬ್ಬರೂ ಆರಾಮವಾಗಿರಬಹುದು. ಮನೆಗೆಲಸ, ಊಟೋಪಚಾರ, ತಿರುಗಾಟ, ವೈದ್ಯಕೀಯ ಆರೈಕೆ, ಪ್ರವಾಸ, ಭದ್ರತೆ ಹೀಗೆ ಎಲ್ಲವೂ ಇಲ್ಲಿ ಸಿಗುತ್ತವೆ.

ನಿರ್ದಿಷ್ಟ ಆದಾಯ ಅಗತ್ಯ

ವೃದ್ಧಾಶ್ರಮಗಳು ಈ ಮೊದಲೇ ಇದ್ದವು. ಆದರೆ ಅದಕ್ಕಿಂತ ಭಿನ್ನವಾದ 'ಸೀನಿಯರ್ ಲಿವಿಂಗ್' ಅನ್ನು ಆಯ್ಕೆ ಮಾಡಿಕೊಳ್ಳುತ್ತಿರುವ ನಗರಿಗರ ಸಂಖ್ಯೆ ಬೆಳೆಯುತ್ತಲಿದೆ. ಇದಕ್ಕೆ ಪ್ರತಿ ತಿಂಗಳೂ ನಿರ್ದಿಷ್ಟ ಆದಾಯ ಅಗತ್ಯ. ಹಾಗಿದ್ದಲ್ಲಿ ಮಧ್ಯಮ ವರ್ಗದ ಬದುಕಿನಿಂದ ಹಿಡಿದು ವಿಲಾಸಿ ಬದುಕು ನಡೆಸುವವರೆಗೆ ಸಕಲ ಸೌಕರ್ಯಗಳನ್ನೂ ನೀಡುವ ಬಹಳಷ್ಟು ತಾಣಗಳು ಬೆಂಗಳೂರಿನಂತಹ ಮಹಾನಗರಗಳಲ್ಲಿ ಸೃಷ್ಟಿಯಾಗಿವೆ.

ಅತುಲ್ಯಾ, ಪ್ರಬುದ್ಧಾಲಯ, ಪ್ರೈಮಸ್ ಹೀಗೆ ಬೆಂಗಳೂರಿನಲ್ಲಿ ಹಲವು ಬಗೆಯ ಸೀನಿಯರ್ ಆರೈಕೆ ಕೇಂದ್ರಗಳಿವೆ. ಇದರ ಮುಂದುವರಿದ ಭಾಗವಾಗಿ, ಉತ್ತರ ಭಾರತದ ದೆಹಲಿ, ರಾಜಸ್ಥಾನ, ಗುಜರಾತ್‌ನ ಹಲವು ಹಿರಿಯರು, ಬೇಸಿಗೆಯನ್ನು ಬೆಂಗಳೂರಿನಲ್ಲಿ ಕಳೆಯುವ ಸಲುವಾಗಿ ಇಲ್ಲಿನ ಸೀನಿಯರ್ ಹೋಂಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಬೇಸಿಗೆಯನ್ನು ಇಲ್ಲಿ ಕಳೆದು, ನಂತರ ಮರಳಿ ತಾವು ಇರುವಲ್ಲಿಗೆ ಹೋಗುತ್ತಾರೆ. ಇಲ್ಲಿನ ಹವೆ ಹಿಡಿಸಿದ ಕೆಲವರು, ಇಲ್ಲಿಯೇ ಕಾಯಂ ನೆಲೆಸಿರುವ ಉದಾಹರಣೆಗಳೂ ಇವೆ.

ಇಷ್ಟೆಲ್ಲ ಸೌಕರ್ಯ ಉಂಟು

'ಜಿಗಣಿ ಬಳಿ ಒಂದು ಎಕರೆಯಲ್ಲಿ 110 ಮನೆಗಳನ್ನು ನಿರ್ಮಿಸಿದ್ದೆವು. ಅದೇ ನಮ್ಮ ಮೊದಲ ಯೋಜನೆ. ಬಹಳಷ್ಟು ಜನ ಅಲ್ಲಿ ನೆಲೆಸಿದ್ದಾರೆ. ಗೋದ್ರೆಜ್ ರಾಯಲ್ ವುಡ್ಸ್‌ನಲ್ಲಿ ಇದೇ ಯೋಜನೆ ಪರಿಚಯಿಸಲಾಗುತ್ತಿದೆ. ಇಲ್ಲಿ 1,600ಕ್ಕೂ ಹೆಚ್ಚು ಮನೆಗಳಿವೆ. ಆ ಪೈಕಿ ಸುಮಾರು 200ರಷ್ಟನ್ನು ಹಿರಿಯರಿಗೆ ಮೀಸಲಿಟ್ಟಿದ್ದೇವೆ. ಕಿರಿಯರೊಂದಿಗೆ ಹಿರಿಯರು ಬೆರೆತು ಬದುಕು ಇನ್ನಷ್ಟು ಹಸಿರಾಗಿರಬೇಕು ಎಂಬುದು ನಮ್ಮ ಉದ್ದೇಶ. ಎಲ್ಲದರಲ್ಲೂ ದಿನದ 24 ಗಂಟೆಗಳ ಕಾಲ ಶುಶ್ರೂಷಕಿಯರು ಇರುತ್ತಾರೆ. ಆಂಬುಲೆನ್ಸ್ ಕೂಡ ಆವರಣದಲ್ಲೇ ಇರುತ್ತದೆ. ಔಷಧಾಲಯವಿರುತ್ತದೆ. ಅಗತ್ಯ ಬಿದ್ದರೆ ವೈದ್ಯರೂ ತಕ್ಷಣವೇ ಭೇಟಿ ನೀಡುವ ವ್ಯವಸ್ಥೆಗಳಿವೆ' ಎಂದು ಇಲ್ಲಿನ ವಾತಾವರಣವನ್ನು ಅವರು ಪರಿಚಯ ಮಾಡಿಕೊಟ್ಟರು.

ಬೆಳಿಗ್ಗೆ ಯೋಗ, ಸಂಜೆ ಭಜನೆ, ಕ್ರಿಯಾಶೀಲರಾಗಿರಲು ಒಂದಷ್ಟು ಆಟ, ಹರಟೆ, ಪ್ರವಾಸ ಈ ಎಲ್ಲವೂ ಸೀನಿಯರ್ ಲಿವಿಂಗ್‌ನಲ್ಲಿವೆ. ಅಂಚೆ ಕಚೇರಿ, ಬ್ಯಾಂಕ್, ಅಂಗಡಿ, ದೇವಾಲಯ, ಏರ್‌ಪೋರ್ಟ್ ಹೀಗೆ ನಿತ್ಯ ಹಲವೆಡೆಗೆ ಓಡಾಡುವವರಿಗೆ ಉಚಿತವಾಗಿ ವಾಹನ ವ್ಯವಸ್ಥೆ ಇರುತ್ತದೆ. ತಿಂಗಳಿಗೊಮ್ಮೆ ಸಮೀಪದ ಊರುಗಳಿಗೆ ಕಿರುಪ್ರವಾಸ, ವರ್ಷಕ್ಕೊಂದು ಹೊರ ರಾಜ್ಯ ಅಥವಾ ಹೊರದೇಶಗಳಿಗೆ ಪ್ರವಾಸಗಳನ್ನೂ ಇಂಥ ಕೇಂದ್ರಗಳು ಆಯೋಜಿಸುತ್ತವೆ.

ಬೆಂಗಳೂರಿನ ಹೊರವಲಯಗಳಲ್ಲಿ ಇಂಥ ಹಿರಿಯರ ಕೇಂದ್ರಗಳ ಸಂಖ್ಯೆ ನಿಧಾನವಾಗಿ ಬೆಳೆಯುತ್ತಿದೆ. 620 ಚದರಡಿಯಲ್ಲಿ ಹಾಲ್, ಬೆಡ್‌ರೂಂ, ಅಡುಗೆ ಕೋಣೆ ಇರುತ್ತದೆ. ಖರೀದಿಗಾದರೆ ಇದಕ್ಕೆ ₹35 ಲಕ್ಷದಿಂದ ₹60ಲಕ್ಷದವರೆಗೂ ಬೆಲೆ ಇದೆ. ಈ ದರ ಅಲ್ಲಿ ಸಿಗುವ ಸೌಕರ್ಯಗಳನ್ನು ಅವಲಂಬಿಸಿರುತ್ತದೆ. ಇಂಥ ಮನೆಗಳು ಬಾಡಿಗೆಗೂ ಲಭ್ಯ. ಎಲ್ಲಾ ಸೌಕರ್ಯಗಳನ್ನೂ ಪಡೆಯಲು ಮಾಸಿಕ ₹50 ಸಾವಿರವಾದರೂ ಬೇಕು ಎನ್ನುವುದು ಈ ಕ್ಷೇತ್ರದಲ್ಲಿರುವವರ ಮಾತು.

12ನೇ ಪುಟಕ್ಕೆ...

'ಡೌನ್‌ಸೈಜಿಂಗ್' ಬಯಸುವವರು ಇಲ್ಲಿ ಕೇಳಿ...

- ಹೋಗುವ ಮನೆ ಹೇಗಿರಬೇಕು, ವಸ್ತುಗಳ ಶೇಖರಣೆಗೆ ವ್ಯವಸ್ಥೆ, ಮಾಲೀಕತ್ವ ಇತ್ಯಾದಿ ಕುರಿತು ಜೊತೆಗೆ ನಿಂತು ನಿರ್ವಹಿಸುವ ನಂಬಿಕಸ್ತ ಆರ್ಗನೈಸರ್ ಒಬ್ಬರನ್ನು ಹೊಂದುವುದು ಸೂಕ್ತ
- ಹೊಸ ಗೂಡು ಸೇರುವ ಮೊದಲು ಉಯಿಲು ಪತ್ರ, ವೈದ್ಯಕೀಯ ದಾಖಲೆಗಳು, ವಿಮಾ ಪಾಲಿಸಿ, ನಿವೃತ್ತಿ ನಂತರದ ಯೋಜನೆಗಳು, ಬ್ಯಾಂಕ್ ಖಾತೆಗಳ ದಾಖಲೆಗಳನ್ನು ಸಮರ್ಪಕವಾಗಿ ಜೋಡಿಸಿಟ್ಟುಕೊಳ್ಳಬೇಕು. ಹೊಸ ಸ್ಥಳದಲ್ಲಿ ಅವುಗಳು ಸುರಕ್ಷಿತವಾಗಿರುವಂತೆ ಮತ್ತು ಸುಲಭವಾಗಿ ಸಿಗುವಂತೆ ಇಟ್ಟುಕೊಳ್ಳುವ ವ್ಯವಸ್ಥೆ ಇರಬೇಕು.
- ಪಾಲಕರನ್ನು 'ಡೌನ್‌ಸೈಜಿಂಗ್'ಗೆ ಕಳುಹಿಸುವ ಮೊದಲು ಹಾಗೂ ನಂತರ ಅವರೊಂದಿಗೆ ಉತ್ತಮ ಸಮಯ ಕಳೆಯಲು ಮಕ್ಕಳು ಆಗಾಗ ಬಿಡುವು ಮಾಡಿಕೊಳ್ಳುವುದು ಉತ್ತಮ
- ಭವಿಷ್ಯದ ಹಿರಿಯರು ಈಗಲೇ ಇಂಥದ್ದೊಂದು ಯೋಜನೆ ಹೊಂದುವುದೂ ಮುಖ್ಯ. ಆ ನಂತರದಲ್ಲಿ ಭಾವನಾತ್ಮಕ ಸವಾಲುಗಳು ಎದುರಾಗುವ ಮೊದಲೇ ಮಾನಸಿಕವಾಗಿ ಸಿದ್ಧರಾಗಬೇಕು.

> ಜೀವಜಲ ಪೂರೈಸಲು ಅರಬ್ ದೇಶಗಳೂ ಒಳಗೊಂಡಂತೆ ಅಭಿವೃದ್ಧಿ ಹೊಂದಿದ ದೇಶಗಳು ನಿರ್ಲವಣೀಕರಣದ ಮೊರೆಹೋಗುತ್ತಿವೆ. ಸಮುದ್ರದ ನೀರಿನ ಲವಣ ಬೇರ್ಪಡಿಸಿ ಕುಡಿಯಲು, ಕೃಷಿಗೆ ನೀರು ಬಳಸುವ ಈ ಮಾರ್ಗೋಪಾಯ ಪಾರಿಸರಿಕ ಸವಾಲುಗಳನ್ನು ಮುಂದಿಟ್ಟಿದೆ.

ಜೀವಜಲಕ್ಕಾಗಿ ಭಗೀರಥ ಯತ್ನ

ಮುನಾವರ್ ವಿ.

ಜಗತ್ತಿನ ಅತ್ಯಂತ ಒಣಭೂಮಿ ಹೊಂದಿರುವ ದೇಶಗಳ ಪೈಕಿ ಸೌದಿ ಅರೇಬಿಯಾ ಕೂಡ ಒಂದಾಗಿದೆ. ಇಲ್ಲಿ ನದಿ, ಸರೋವರ, ಕೆರೆಗಳಿಲ್ಲ. ಬೀಸುವ ಗಾಳಿಯಲ್ಲೂ ತೇವಾಂಶವಿಲ್ಲ. ಬಹಳ ಅಪರೂಪಕ್ಕೆ ಎಲ್ಲೋ ಒಂದೊಂದು ಓಯಸಿಸ್‌ಗಳು ಕಾಣಸಿಗುತ್ತವೆ. ಈ ಪರಿಸ್ಥಿತಿ ಸೌದಿ ಅರೇಬಿಯಾದಲ್ಲಿ ಮಾತ್ರವಲ್ಲ ನೆರೆಯ ಮಧ್ಯಪ್ರಾಚ್ಯ ದೇಶಗಳಲ್ಲೂ ಕಾಣುತ್ತದೆ. ಸುಮಾರು ಆರೂವರೆ ಲಕ್ಷ ಚದರ ಕಿಲೋಮೀಟರ್ ಪ್ರದೇಶದಲ್ಲಿ ವಿಶಾಲವಾಗಿ ಹರಡಿರುವ ಅರೇಬಿಯಾ ಮರುಭೂಮಿಯುದ್ದಕ್ಕೂ ಜೀವಜಲದ ಅಭಾವ ಕಂಡುಬರುತ್ತದೆ.

1971ರಲ್ಲಿ ಕೇವಲ 60 ಲಕ್ಷ ಜನಸಂಖ್ಯೆ ಇದ್ದ ಸೌದಿ ಅರೇಬಿಯಾದಲ್ಲಿ ಈಗ ಜನಸಂಖ್ಯೆ ನಾಲ್ಕು ಕೋಟಿ ದಾಟಿದೆ. ನೀರಿನ ಭದ್ರತೆ , ಅಮೂಲ್ಯ ಜಲ ಸಂಪನ್ಮೂಲಕ್ಕಾಗಿ ಅರಬ್ ದೇಶಗಳು ಒಂದು ಸಾಹಸಕ್ಕೆ ಕೈ ಹಾಕಿವೆ. ಅದೇ 'ನಿರ್ಲವಣೀಕರಣ ತಂತ್ರಜ್ಞಾನ' (desalination technology). ಸಮುದ್ರದ ನೀರಿನಿಂದ ಉಪ್ಪಿನ ಅಂಶವನ್ನು ಬೇರ್ಪಡಿಸಿ, ಕುಡಿಯಲು ಹಾಗೂ ಕೃಷಿ ಚಟುವಟಿಕೆ ನಡೆಸಲು ಯೋಗ್ಯವಾದ ನೀರನ್ನು ಪೂರೈಸುವ ಭಗೀರಥ ಪ್ರಯತ್ನ ಇದಾಗಿದೆ. ಈ ನಿರ್ಲವಣೀಕರಣ ಪ್ರಕ್ರಿಯೆಗಾಗಿ ಅರಬ್ ದೇಶಗಳು ಊಹೆಗೂ ನಿಲುಕದಷ್ಟು ಹಣ ಖರ್ಚು ಮಾಡುತ್ತಿವೆ. 2023ರ ಸೌದಿ ಸರ್ಕಾರದ ಅಧಿಕೃತ ಗೆಝೆಟಿಯರ್ ಪ್ರಕಾರ ವಾರ್ಷಿಕ 40 ಶತಕೋಟಿ ಡಾಲರ್‌ನಷ್ಟು (3.32 ಲಕ್ಷ ಕೋಟಿ ರೂಪಾಯಿಗೂ ಹೆಚ್ಚು) ಹಣವನ್ನು ಈ ತಂತ್ರಜ್ಞಾನಕ್ಕೆ ಖರ್ಚು ಮಾಡಲಾಗುತ್ತಿದೆ.

ಎರಡು ವಿಧಾನಗಳು

ಸಾಮಾನ್ಯವಾಗಿ ನಿರ್ಲವಣೀಕರಣ ಪ್ರಕ್ರಿಯೆ ಎರಡು ರೀತಿ ನಡೆಯುತ್ತದೆ. ಮೊದಲನೆಯದು, ಸಾಂಪ್ರದಾಯಿಕ ವಿಧಾನ–Thermal desalination. ಇದರಲ್ಲಿ ಸಮುದ್ರದ ನೀರನ್ನು ಹೆಚ್ಚು ಶಾಖ ಕೊಟ್ಟು ಲವಣಾಂಶಗಳನ್ನು ಬೇರ್ಪಡಿಸುತ್ತಾರೆ. ಆದರೆ, ಈ ವಿಧಾನದಿಂದ ಲಭ್ಯವಾಗುವ ನೀರಿಗಿಂತ ದಹಿಸಲು ಬೇಕಾದ ಇಂಧನವೇ ಹೆಚ್ಚು ಖರ್ಚಾಗುತ್ತದೆ. ಸಮುದ್ರದ ನೀರನ್ನು ಕಾಯಿಸಿ ಲವಣಗಳನ್ನು ಬೇರ್ಪಡಿಸಲು ಅತ್ಯಂತ ದೊಡ್ಡ ಪ್ರಮಾಣದಲ್ಲಿ ಪೆಟ್ರೋಲ್ ಅನ್ನು ಇಂಧನವನ್ನಾಗಿ ಉರಿಸಬೇಕಿದೆ. ಅರಬ್ ದೇಶಗಳಲ್ಲಿ ತೈಲ ಉತ್ಪಾದನೆ ಯಥೇಚ್ಛವಾಗಿದ್ದರೂ ಇಂಧನ ಉರಿಯುವಾಗ ನಿರಂತರವಾಗಿ ಭಾರಿ ಪ್ರಮಾಣದಲ್ಲಿ ಇಂಗಾಲದ ಡೈಆಕ್ಸೈಡ್ ಬಿಡುಗಡೆಯಾಗುತ್ತದೆ. ಇದರಿಂದ ವಾಯುಮಾಲಿನ್ಯ ಹೆಚ್ಚಾಗುತ್ತಿದೆ.

ಚೆನ್ನೈನ ನೆಮ್ಮೇಲಿಯಲ್ಲಿನ ನಿರ್ಲವಣೀಕರಣ ಘಟಕಕ್ಕೆ ನೀರು ಸಾಗುವಂತೆ ಮಾಡಿದ್ದ ವ್ಯವಸ್ಥೆ.

ನಿರ್ಲವಣೀಕರಣದ ಎರಡನೆಯ ವಿಧಾನವನ್ನು ಹಿಮ್ಮುಖ ಸೂಕ್ಷ್ಮ ಅಭಿಸಾರಣ ಎನ್ನುತ್ತಾರೆ–Reverse osmosis. ಈ ವಿಧಾನದಲ್ಲಿ ಸಮುದ್ರದ ನೀರನ್ನು ಭಾರಿ ಒತ್ತಡಲ್ಲಿ ರಭಸವಾಗಿ ಹರಿಸಿ ಸೂಕ್ಷ್ಮಾತಿಸೂಕ್ಷ್ಮ ಪರದೆಯಲ್ಲಿ ಜರಡಿ ಹಿಡಿದು, ನೀರು ಹೊರಬರುವಂತೆ ಮಾಡಿ ಉಪ್ಪಿನ ಅಂಶ ಬೇರ್ಪಡಿಸಲಾಗುತ್ತದೆ. ಹಿಮ್ಮುಖ ಸೂಕ್ಷ್ಮ ಅಭಿಸಾರಣ ವಿಧಾನದಿಂದ ಸಮುದ್ರದ ನೀರನ್ನು ನಿರ್ಲವಣೀಕರಣ ಮಾಡುವಾಗ ಗಂಭೀರ ಸಮಸ್ಯೆ ಸೃಷ್ಟಿ ಆಗುತ್ತಿದೆ. ಶುದ್ಧ ನೀರು ಬೇರ್ಪಡಿಸಿದ ನಂತರ ಉಳಿದ ನೀರು ಅತ್ಯಂತ ಹೆಚ್ಚು ಉಪ್ಪಿನ ಸಾಂದ್ರತೆ ಹೊಂದಿರುತ್ತದೆ. ಇದನ್ನು hyper saline brine ಎನ್ನುತ್ತಾರೆ. ಇದನ್ನು ಭೂಮಿಗೆ ಬಿಟ್ಟರೆ ಭೂಮಿ ಫಲವತ್ತತೆ ಕಳೆದುಕೊಂಡು ಬಂಜರಾಗುತ್ತದೆ. ಸಮುದ್ರಕ್ಕೆ ಬಿಟ್ಟರೆ ಹೆಚ್ಚು ಲವಣ ಸಾಂದ್ರ ನೀರು ಸಮುದ್ರದಲ್ಲಿನ ಜೀವ ಪರಿಸರ ವ್ಯವಸ್ಥೆಯನ್ನೇ ನಾಶಪಡಿಸುತ್ತದೆ. ಅತ್ಯಂತ ಹೆಚ್ಚಿನ ಉಪ್ಪಿನ ಅಂಶ ಇರುವ ನೀರು ಪುನಃ ಸಮುದ್ರಕ್ಕೆ ಸೇರಿದ ತಕ್ಷಣವೇ ಅದು ಅತಿಯಾದ ಸಾಂದ್ರತೆ ಕಾರಣದಿಂದ ಸಮುದ್ರದ ತಳ ಭಾಗ ತಲುಪಿ, ಆಮ್ಲಜನಕ ಕೂಡ ತಳ ಭಾಗ ಸೇರುತ್ತದೆ. ಆಗ ಅಲ್ಲಿನ ಜೀವ ಪರಿಸರ ವ್ಯವಸ್ಥೆ ನಶಿಸಿ, ಮತ್ತೊಂದು ಮೃತ ಸಮುದ್ರ (Dead sea) ರಚನೆ ಆಗುತ್ತದೆ.

ಅರೇಬಿಯನ್ ದೇಶಗಳು ಮಾತ್ರವಲ್ಲದೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಾದ ಅಮೆರಿಕ, ಜಪಾನ್, ಆಸ್ಟ್ರೇಲಿಯಾ, ಚೀನಾ, ಇಂಗ್ಲೆಂಡ್, ಈಜಿಪ್ಟ್ ಸೇರಿದಂತೆ ಜಗತ್ತಿನಾದ್ಯಂತ 177 ದೇಶಗಳು ನಿರ್ಲವಣೀಕರಣ ತಂತ್ರಜ್ಞಾನ ಬಳಸಿಕೊಂಡು ಕುಡಿಯುವ ನೀರನ್ನು ಪಡೆಯುತ್ತಿವೆ.

11ನೇ ಪುಟಕ್ಕೆ...

ನಾದ ಧ್ಯಾನಸ್ಥನಿಗೆ ತಾನ್‌ಸೇನ್ ಸಮ್ಮಾನ್

ಮಲೆನಾಡಿನ ಅಡಿಕೆ ಸಿಂಗಾರದ ಘಮಲಿನ ಮಧ್ಯೆ ಸಂಗೀತದ ಕಂಪನ್ನು ಪಸರಿಸಿದವರು ಪಂ. ಗಣಪತಿ ಭಟ್ ಹಾಸಣಗಿ ಅವರು. ಪ್ರಕೃತಿಯ ಐಸಿರಿ ನಡುವೆ ಸಂಗೀತ ಸಿರಿಯನ್ನು ಜತನವಾಗಿ ಕಾಪಿಟ್ಟುಕೊಂಡ ಈ ಕಲಾವಿದರಿಗೆ ಈಗ ಮಧ್ಯಪ್ರದೇಶ ಸರ್ಕಾರ ನೀಡುವ ಪ್ರತಿಷ್ಠಿತ ತಾನ್‌ಸೇನ್ ಸಮ್ಮಾನ್ ಪುರಸ್ಕಾರ ಒಲಿದಿದೆ. ಡಿಸೆಂಬರ್ 24ರಂದು ಗ್ವಾಲಿಯರ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಪ್ರದಾನ. ಈ ಹಿನ್ನೆಲೆಯಲ್ಲಿ ಕಿರಾಣಾ–ಗ್ವಾಲಿಯರ್ ಘರಾಣೆಯ ಪ್ರಬುದ್ಧ ಗಾಯಕ ಪಂ. ಹಾಸಣಗಿ ಅವರು 'ಭಾನುವಾರ ಪುರವಣಿ'ಯೊಂದಿಗೆ ತಮ್ಮ ಸಂತಸ, ಅನಿಸಿಕೆ ಎರಡನ್ನೂ ಹಂಚಿಕೊಂಡಿದ್ದಾರೆ.

ಸಂದರ್ಶನ: ಉಮಾ ಅನಂತ್

ಪಂಡಿತ್ ಗಣಪತಿ ಭಟ್ ಹಾಸಣಗಿ

• ಒಬ್ಬ ಕಲಾವಿದ ಎಲ್ಲ ರಾಗಗಳನ್ನು ಹಾಡಲು ಸಾಧ್ಯವಿಲ್ಲ. ಕೆಲವು ರಾಗಗಳಿಗೆ ಕೆಲವು ಸ್ವಭಾವ ಇರುತ್ತದೆ. ಮನೋಧರ್ಮವೂ ಕಲಾವಿದರಿಂದ ಕಲಾವಿದರಿಗೆ ಭಿನ್ನವಾಗಿರುತ್ತದೆ. 'ರಾಗ- ಸ್ವಭಾವ'ದ ಬಗ್ಗೆ ನಿಮ್ಮ ಅಭಿಪ್ರಾಯಗಳೇನು?

ಸಾಧನೆಯನ್ನು ಅಪೇಕ್ಷಿಸುವ ವಿದ್ಯೆ ಸಂಗೀತ. ಒಮ್ಮೆ ನಾವು ಅದನ್ನು ಕರಗತ ಮಾಡಿಕೊಂಡರೆ ಅದೇ ಮುಂದೆ ನಮ್ಮನ್ನು ಮೇಲಕ್ಕೆ ತೆಗೆದುಕೊಂಡು ಹೋಗುತ್ತದೆ. ಸಣ್ಣ ವಯಸ್ಸಿನಲ್ಲೇ ಕೃಷಿ ಹಾಗೂ ಸಂಗೀತಕ್ಕೆ ಆತುಕೊಂಡೇ ನಾನು ಇಷ್ಟು ದೂರ ಸಾಗಿ ಬಂದಿದ್ದೇನೆ. ರಾಗ ಎನ್ನುವುದು ಒಬ್ಬನ 'ವ್ಯಕ್ತಿತ್ವ' (personality) ಇದ್ದಹಾಗೆ. ನಮ್ಮ ಗಾಯನ ಶೈಲಿಯಿಂದಲೇ ನಾವು ಒಂದು 'ಐಡೆಂಟಿಟಿ' ಗಳಿಸಿಕೊಳ್ಳಬಹುದು. ನನ್ನ ದೃಷ್ಟಿಯಲ್ಲಿ ರಾಗ ಎನ್ನುವುದು ಒಬ್ಬನ ಸ್ವಭಾವ ಇದ್ದ ಹಾಗೆ. ಪರಿಚಯ ಆದವರೆಲ್ಲರೂ ಸ್ನೇಹಿತರಾಗುವುದಿಲ್ಲ. ಹಾಗೆಯೇ ರಾಗವೂ. ರಾಗದ ಬಗ್ಗೆ ತಿಳಿದುಕೊಂಡೆ ಅಂದಾಕ್ಷಣ ಅದನ್ನೇ ಹಾಡಬೇಕು ಎನ್ನುವ ನಿಯಮ ಏನೂ ಇಲ್ಲ. ನೂರಾರು ರಾಗಗಳ ಬಗ್ಗೆ ತಿಳಿದುಕೊಂಡಿದ್ದರೂ ಸಂಗೀತ ಬದುಕಿನ ಅವಧಿಯಲ್ಲಿ 20–25 ರಾಗಗಳನ್ನು ಅಷ್ಟೇ ಹಾಡ್ತೀನಿ. ಅವನ್ನೇ ಜೀವನದಲ್ಲಿ ಅಳವಡಿಸಿಕೊಂಡು ಹೋಗುವಷ್ಟು ಆಳವಾಗಿ ತೊಡಗಿಸಿಕೊಳ್ತೀನಿ. ಇದು ನನ್ನ ಸ್ವಭಾವ. ಹೀಗಾಗಿ ಒಬ್ಬ ಕಲಾವಿದ ಆತನ ಸ್ವಭಾವಕ್ಕೆ ಸರಿಹೊಂದುವ ರಾಗಗಳನ್ನು ಮತ್ತೆ ಮತ್ತೆ ಹಾಡಬೇಕಾಗುತ್ತದೆ. ಹಾಡುವ ರಾಗ ಕೇಳುಗರಲ್ಲಿ ಅನುಭೂತಿ ಮೂಡಿಸಿತೆಂದರೆ ಧನ್ಯರಾದೆವು ಎಂದೇ ಅರ್ಥ.

ಸಾಮಾನ್ಯವಾಗಿ ಕಲ್ಯಾಣ್ ಥಾಟ್, ತೋಡಿ ಥಾಟ್, ಕಾಫಿ ಥಾಟ್ ರಾಗಗಳೆಂದರೆ ನನಗೆ ಬಹಳ ಪ್ರೀತಿ. ಭೈರವ್ ರಾಗದ ಮೇಲೆ ವಿಶೇಷ ಮೋಹ. ಶಾಸ್ತ್ರೀಯ ಸಂಗೀತ ಅಲ್ಲದೆ ಸುಗಮ ಸಂಗೀತ, ದಾಸರ ಪದಗಳು, ಮೀರಾ ಭಜನ್, ಕಬೀರ್ ಭಜನ್, ವಚನಗಳನ್ನೂ ರಾಗಗಳ ಚೌಕಟ್ಟಿನೊಳಗೇ ಹಾಡ್ತೀನಿ. ಇದು ಕೇಳುಗರನ್ನು ತಲುಪುತ್ತೆ. ಮತ್ತೆ ಮತ್ತೆ ಕೇಳಬೇಕೆನಿಸುತ್ತೆ.

• ಗುರು- ಶಿಷ್ಯ ಪರಂಪರೆಯ ಸಂಗೀತದಲ್ಲಿ ಅಪಾರ ನಂಬಿಕೆ ಇಟ್ಟವರು ನೀವು. ಗುರುಕುಲ ಪದ್ಧತಿಯಲ್ಲಿ ಅನೇಕ ಶಿಷ್ಯಂದಿರನ್ನು ಬೆಳೆಸಿದವರು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಸಂಗೀತದ ಗುರು–ಶಿಷ್ಯ ಪರಂಪರೆ ಎಂಬ ಪರಿಕಲ್ಪನೆಯೇ ತೆರೆಮರೆಗೆ ಸರಿಯುತ್ತಿದೆ ಅನಿಸುತ್ತಿದೆ. ನಿಮ್ಮ ಅನಿಸಿಕೆ ಏನು?

ಗುರು–ಶಿಷ್ಯ ಪರಂಪರೆ ಎಂಬುದು ಸಂಗೀತದ ಅವಿಭಾಜ್ಯ ಅಂಗ ಎಂಬುದು ನನ್ನ ಭಾವನೆ. ಒಬ್ಬ ಸಂಗೀತಾಸಕ್ತ ಗುರುಮುಖೇನವೇ ಸಂಗೀತ ಅಭ್ಯಾಸ ಮಾಡಬೇಕು. ಆಗಲೇ ರಾಗಜ್ಞಾನ, ಲಯದ ಬಗ್ಗೆ ತಿಳಿವಳಿಕೆ, ಸಂಗೀತದ ಒಟ್ಟಾರೆ ಆಳಗಲವನ್ನು ಅರಿಯಲು ಸಾಧ್ಯ. ನಾನು ಇದೇ ಪರಂಪರೆಯಲ್ಲಿ ಅನೇಕ ಶಿಷ್ಯಂದಿರನ್ನು ತಯಾರು ಮಾಡಿದ್ದು, ಇವರೆಲ್ಲ ಈಗ ದೇಶದಾದ್ಯಂತ ಸಂಗೀತ ಕಛೇರಿ ನೀಡುತ್ತಿದ್ದಾರೆ. ಆದರೆ, ಈಗ ಜೀವನಶೈಲಿ ಬದಲಾಗಿದೆ. ಅದೇ ರೀತಿ ಸಂಗೀತ ಕಲಿಕೆಯ ಶೈಲಿಯೂ ಮಾರ್ಪಾಡಾಗಿದೆ. ಸಂಗೀತ ಕಲಿಕೆ ಸಮಯ ಬೇಡುತ್ತೆ. ಇಂದಿನ ತಾಂತ್ರಿಕ ಬದುಕಿನಲ್ಲಿ ಬೌದ್ಧಿಕ ಜ್ಞಾನ ಗಳಿಕೆ ಹಿಂದೆ ಬೀಳುತ್ತಿದೆಯಾ ಎಂಬ ಆತಂಕ ಸೃಷ್ಟಿಯಾಗಿದೆ. ಮಕ್ಕಳಿಗೆ ಪ್ರಚಾರ ಬೇಕು, ಎಕ್ಸ್‌ಪೋಷರ್ ಬೇಕು. ಆದರೆ ಇವೆಲ್ಲ ಸಂಗೀತದ ಭದ್ರ ಬುನಾದಿ ಪಡೆದ ಮೇಲೆ ಸಿಕ್ಕಿದರೆ ಒಳ್ಳೆಯದು. ಸಾವಕಾಶವಾಗಿ ಸಂಗೀತ ಕಲಿತ ಮೇಲೆ ಈ ಕ್ಷೇತ್ರದಲ್ಲಿ ಹಂತಹಂತವಾಗಿ ಮೇಲೇರಲು ಸಾಧ್ಯ. ಗುಣಮಟ್ಟದ ಸಂಗೀತ ಕೇಳುಗರಿಗೆ ನೀಡಬೇಕಾದರೆ ಪ್ರತಿಭೆ ಜೊತೆಗೆ ತಾಳ್ಮೆ, ಪರಿಶ್ರಮ, ಸಾಧನಾ, ರಿಯಾಜ್ ಎಲ್ಲವೂ ಮುಖ್ಯವಾಗುತ್ತದೆ.

• ನಿಮ್ಮ ಮನಸ್ಸಿನ ಸಂತೋಷಕ್ಕಾಗಿ, ಪ್ರತಿಫಲಾಪೇಕ್ಷೆಯಿಲ್ಲದೆ ಸಂಗೀತ ಕ್ಷೇತ್ರದಲ್ಲಿ ಹುಲುಸಾದ ವ್ಯವಸಾಯ ನಡೆಸಿದವರು ನೀವು. ಹಲವು ಪ್ರಶಸ್ತಿಗಳು ನಿಮ್ಮನ್ನು ಅರಸಿ ಗೌರವಿಸಿವೆ. ಈಗ ಬಂದಿರುವ 'ತಾನ್‌ಸೇನ್ ಸಮ್ಮಾನ್' ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?

ಪ್ರಶಸ್ತಿ ಪಡೆಯುವುದು ಒಬ್ಬ ಕಲಾವಿದನ ಜೀವನದಲ್ಲಿ ಅದ್ಭುತ ಅನುಭವ. ಕಳೆದ ಐವತ್ತು ವರ್ಷಗಳಿಂದ ಈ ಕ್ಷೇತ್ರದಲ್ಲಿ ಇದ್ದು, ನನ್ನ ಇತಿಮಿತಿಯಲ್ಲಿ ಸಂಗೀತಕ್ಕಾಗಿ ದುಡಿದಿದ್ದೇನೆ. ದೇಶ ವಿದೇಶಗಳಲ್ಲಿ ಕಛೇರಿ ನೀಡಿದ್ದೇನೆ. ಹಲವಾರು ರಾಗಗಳನ್ನು ಹಾಡಿ ರೆಕಾರ್ಡಿಂಗ್‌ಗಳನ್ನು ಹೊರತಂದಿದ್ದೇನೆ. ಸ್ವತಂತ್ರ ಕಛೇರಿ ನೀಡಲು ಸಾಮರ್ಥ್ಯ ಹೊಂದಿರುವ ಹಲವಾರು ಶಿಷ್ಯಂದಿರನ್ನು ತಯಾರು ಮಾಡಿದ್ದೇನೆ. ಇವೆಲ್ಲವನ್ನೂ ಪರಿಗಣಿಸಿ ನನ್ನನ್ನು ಈ ಪ್ರತಿಷ್ಠಿತ 'ತಾನ್‌ಸೇನ್ ಸಮ್ಮಾನ್'ಗೆ ಆಯ್ಕೆ ಮಾಡಿರುವುದು ತುಂಬ ಸಂತೋಷ.

72ರ ತರುಣ!

ಪಂ. ಗಣಪತಿ ಭಟ್ ಹಾಸಣಗಿ ಹಿಂದೂಸ್ತಾನಿ ಸಂಗೀತದ ಮಟ್ಟಿಗೆ ಎಂದೂ ಬತ್ತದ ಭಾವ ನದಿ. ಈ ನಾದ ಧ್ಯಾನಸ್ಥನಿಗೆ ವಯಸ್ಸು 72, ಸಾಧನೆಯ ಶಿಖರ. ಮಾತಿಗಿಳಿದರೆ ಹೊಮ್ಮುವ ನವೋಲ್ಲಾಸ ಸಂಗೀತದ ರಾಗ ಕೇಳಿದಷ್ಟೇ ಹಿತಕರ. ಅವರ ಕಂಠದಿಂದ ದಳದಳವಾಗಿ ಅರಳುವ ಚೀಜುಗಳು, ಸ್ವರ ತಾನ್‌ಗಳು, ಆಕಾರ್ ತಾನ್‌ಗಳನ್ನು ಕೇಳಿದರೆ ಈ ಸ್ವರಸಂಚಾರಿಯ ಬಗ್ಗೆ ಅಭಿಮಾನ, ಗೌರವ ಇಮ್ಮಡಿಸುತ್ತದೆ. ಅವರಿಗೆ ಇದೀಗ ದೇಶದ ಪ್ರತಿಷ್ಠಿತ 'ತಾನ್‌ಸೇನ್ ಸಮ್ಮಾನ್' ಗರಿ!

ಯಕ್ಷಪ್ರಸಂಗಕ್ಕೆ ಕನಕನ ರಂಗಪ್ರವೇಶ

ಎಂ.ಎನ್.ಸುಂದರರಾಜ್

ವಿದ್ವಾನ್ ದತ್ತಮೂರ್ತಿ ಭಟ್ಟ

ಯಕ್ಷಗಾನವನ್ನು ಪ್ರಯೋಗಗಳಿಗೆ ಒಡ್ಡಿ ನಾಡಿನ ಸಾಂಸ್ಕೃತಿಕ ವೀರರಾದ ಬಸವಣ್ಣ, ಅಕ್ಕಮಹಾದೇವಿ, ಕಾಲಭೈರವೇಶ್ವರ, ಬೀರಲಿಂಗೇಶ್ವರರ ಕಥನಗಳನ್ನು ಪ್ರಸಂಗಗಳಲ್ಲಿ ಅಳವಡಿಸಿದ್ದವರು ಶಿವಮೊಗ್ಗದ ನಾಟ್ಯಶ್ರೀ ಕಲಾತಂಡದ ಸೂತ್ರಧಾರ ವಿದ್ವಾನ್ ದತ್ತಮೂರ್ತಿ ಭಟ್ಟರು. ಈಗ ಮತ್ತೊಂದು ಪ್ರಯೋಗಕ್ಕೆ ಮುಂದಾಗಿ ದಾಸ ಶ್ರೇಷ್ಠ ಕನಕದಾಸರನ್ನು ಯಕ್ಷರಂಗಕ್ಕೆ ಕರೆತಂದಿದ್ದಾರೆ.

ಕನಕರ ಆಶಯಗಳನ್ನು ನಾಡಿನಾದ್ಯಂತ ಪಸರಿಸಲು ಸಿದ್ಧರಾಗಿರುವ ದತ್ತಮೂರ್ತಿ ಭಟ್ಟರು ಕನಕ ಜಯಂತಿಯ ದಿನ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಕನಕದಾಸರ ಚರಿತೆಯ ಮೊದಲ ಯಕ್ಷ ಪ್ರಯೋಗ ಸಾದರಪಡಿಸಿದರು. ಇದು ಕನಕರ ಅನುಯಾಯಿಗಳು, ಯಕ್ಷಗಾನ ಪ್ರಿಯರ ಮೆಚ್ಚುಗೆಗೂ ಪಾತ್ರವಾಯಿತು.

ಶಿವಮೊಗ್ಗದ ಡಿವಿಎಸ್ ಕಾಲೇಜಿನ ಸಂಸ್ಕೃತ ಉಪನ್ಯಾಸಕ ದತ್ತಮೂರ್ತಿ ಭಟ್ಟರಿಗೆ ಯಕ್ಷಗಾನದ ಬಗ್ಗೆ ಅತೀವ ಆಸಕ್ತಿ. ಅದರ ಫಲವಾಗಿ 25 ವರ್ಷಗಳ ಹಿಂದೆ ಹುಟ್ಟಿಕೊಂಡದ್ದು ನಾಟ್ಯಶ್ರೀ ಕಲಾತಂಡ. ಅದಕ್ಕೀಗ ರಜತ ಸಂಭ್ರಮ. ಈ ಹೊತ್ತಿನಲ್ಲಿ ಕನಕದಾಸರ ಕಥನವನ್ನು ಯಕ್ಷರಂಗಕ್ಕೆ ಕರೆತರುವ ಸಾರ್ಥಕ ಕಾರ್ಯ ನಡೆದಿದೆ. ಆರಂಭದ ದಿನಗಳಲ್ಲಿ ಪೌರಾಣಿಕ ಪ್ರಸಂಗಗಳ ಸಪ್ತಾಹ ಆರಂಭಿಸಿ ಮನೆಮಾತಾಗಿದ್ದ ನಾಟ್ಯಶ್ರೀ ಸಂಸ್ಥೆ ನಂತರ ತನ್ನನ್ನು ಪ್ರಯೋಗಗಳಿಗೆ ತೆರೆದುಕೊಂಡಿತ್ತು. ಅದರ ಫಲವಾಗಿ ನಾಡಿನ ಸಾಂಸ್ಕೃತಿಕ ವೀರರು ಪ್ರಸಂಗದ ಹಾದಿಯಲ್ಲಿ ಸಾಗಿಬಂದಿದ್ದರು.

ಅದೇ ಹಾದಿಯಲ್ಲಿ ಕನಕದಾಸರ ಚರಿತೆ ಕೂಡ ಯಕ್ಷಪ್ರಿಯರ ಗಮನ ಸೆಳೆಯಿತು. ಯುದ್ಧದಲ್ಲಿ ಹೋರಾಟ ಮಾಡಿ ಸೋತ ತಿಮ್ಮಪ್ಪ 'ಬದುಕಿದೆನು ಬದುಕಿದೆನು' ಎನ್ನುವ ಪದ್ಯದೊಡನೆ ರಂಗ ಪ್ರವೇಶಿಸಿದಾಗ ಭಟ್ಟರ ಅಭಿನಯ ವೇಷಭೂಷಣ, ಭಾವಾಭಿವ್ಯಕ್ತಿ, ಧಾರಾಕಾರವಾಗಿ ಸುರಿಯುವ ಕಣ್ಣೀರು ನಿಜ ಕನಕನನ್ನು ನೆನಪಿಸಿತು. ವ್ಯಾಸತೀರ್ಥರೊಂದಿಗೆ ಸಂವಾದ, ಹನುಮಜ್ಜನಲ್ಲಿ ತಂದೆಯ ಪ್ರೀತಿ, ಪತ್ನಿ ಶ್ರೀವಧುವಿನ ಆಶಯದಂತೆ ಮೋಹನ ತರಂಗಿಣಿ ಕಾವ್ಯ ರಚನೆ, ಉಡುಪಿಗೆ ಬಂದಾಗ ಶ್ರೀಕೃಷ್ಣನ ದರುಶನಕ್ಕೆ ಹಾತೊರೆಯುವ ಕನಕರ ಭಕ್ತಿಯ ಪರಾಕಾಷ್ಠೆ, ಕಾಗಿನೆಲೆಯಲ್ಲಿ ಕಳೆದ ಕೊನೆಯ ದಿನಗಳು ನೋಡುಗರನ್ನು ಹಿಡಿದಿಟ್ಟಿತು. ಉಡುಪಿಯಲ್ಲಿ ಶ್ರೀ ಕೃಷ್ಣ ಮೈದೋರಿದ ಆ ಕ್ಷಣ ಭಾಗವತ ಕೊಳಗಿ ಅವರ ಭಕ್ತಿ ಮಾಧುರ್ಯದ ಪದ್ಯ ಹಾಗೂ ಕನಕರ ತನ್ಮಯತೆ ಜೀವನದ ಸಾಫಲ್ಯತೆ ನೋಡುಗರ ಭಾವಕೋಶಕ್ಕೆ ಕನಕ–ಕೃಷ್ಣರ ಮುಖಾಮುಖಿಯನ್ನು ಸ್ಥಾಯಿಯಾಗಿಸುತ್ತದೆ.

ಪ್ರಸಂಗಕ್ಕೆ ಬರುವ ಶ್ರೀವಧು, ಕೃಷ್ಣದೇವರಾಯ, ಆದಿಲ್‌ಶಾಹಿ ಸುಲ್ತಾನ, ವ್ಯಾಸತೀರ್ಥರು, ಶ್ರೀಕೃಷ್ಣನ ಪಾತ್ರಗಳ ನಿರ್ವಹಿಸಿದ ಕಲಾವಿದರು ಪಾತ್ರಕ್ಕೆ ಕಳೆತಂದರು.

ಪೌರಾಣಿಕ ಸಂಗತಿಗಳನ್ನು ಪ್ರಸಂಗಕ್ಕೆ ತಂದಷ್ಟು ಸುಲಭವಾಗಿ ಚಾರಿತ್ರಿಕ ವೀರರ ಪಾತ್ರಗಳನ್ನು ತರಲು ಆಗುವುದಿಲ್ಲ. ಇಲ್ಲಿ ಪ್ರಯೋಜನಕ್ಕಿಂತ ಪರಿಣಾಮಕ್ಕೆ ಹೆಚ್ಚು ಒತ್ತು ಕೊಡಬೇಕಿದೆ. ತಾತ್ವಿಕತೆಗೆ ಒಳಪಟ್ಟು ಮೂಲ ಆಶಯಗಳಿಗೆ ಎಲ್ಲಿಯೂ ಧಕ್ಕೆಯಾಗದೇ ಯಕ್ಷಗಾನದಂತಹ ಕಲೆಗೆ ಅಪಚಾರವಾಗದೇ ಪ್ರೇಕ್ಷಕರನ್ನು ತಲುಪುವುದು ಅಷ್ಟು ಸುಲಭವಲ್ಲ. ಆಯಾ ಜಾತಿ–ಜನಾಂಗದ ದೇವರ ಮಹಾತ್ಮೆಯನ್ನು ಅವರ ಸಂಪ್ರದಾಯ ಪರಂಪರೆಯನ್ನು ಎತ್ತಿಹಿಡಿದು, ಸಮಾಜಕ್ಕೊಂದು ಸಂದೇಶ ನೀಡುವ ಈ ಕಾಯಕ ಸಾಮಾನ್ಯವಾದದ್ದು ಅಲ್ಲ. ಇಲ್ಲಿ ಬರುವ ಸವಾಲುಗಳಿಗೆ, ಸಮಸ್ಯೆಗಳಿಗೆ ಉತ್ತರವನ್ನು ಕೊಡಬೇಕಾದ ಗುರುತರ ಜವಾಬ್ದಾರಿ ಹೊತ್ತುಕೊಂಡೇ ಭಟ್ಟರು ಪ್ರಸಂಗವನ್ನು ಮುನ್ನಡೆಸಿದ್ದಾರೆ.

ಕನಕದಾಸರು, ಬಸವಣ್ಣ ಮಾತ್ರವಲ್ಲದೇ ಗವಿ ಗಂಗಾಧರೇಶ್ವರರು, ಅಕ್ಕನ ಪ್ರಸಂಗದಲ್ಲಿ ಕೌಶಿಕ ಮಹಾರಾಜ, ಬೀರಲಿಂಗೇಶ್ವರ ಪಾತ್ರಗಳಿಗೆ ಜೀವ ತುಂಬುವ ದತ್ತಮೂರ್ತಿ ಭಟ್ಟರು, ಈಗ ಯಕ್ಷ ಬಸವ, ಗಾನ ಬೈರವ, ದಾಸ ಕನಕ, ಶರಣೆ ಅಕ್ಕ, ದೇವ ಬೀರಪ್ಪನ ಕಥನದೊಂದಿಗೆ ಬೀದರ್‌ನಿಂದ ಚಾಮರಾಜ ನಗರದವರೆಗೂ ಯಕ್ಷ ಭಾವೈಕ್ಯ ಯಾತ್ರೆ ಹೊರಡುವ ಆಶಯ ಹೊಂದಿದ್ದಾರೆ.

ನಾಟ್ಯಶ್ರೀ ಕಲಾ ಸಂಘದಲ್ಲಿ ಈಗ 16 ಮಂದಿ ಕಲಾವಿದರು ಇದ್ದಾರೆ. ವೃತ್ತಿ ರಂಗವನ್ನು ಬಿಟ್ಟು ಹವ್ಯಾಸಿ ರಂಗದಲ್ಲಿ ಸಾಕಾರಗೊಳ್ಳುತ್ತಿರುವ ಕಲಾವಿದರನ್ನು ಇಟ್ಟುಕೊಂಡು ಭಟ್ಟರು ಮೇಳ ರೂಪಿಸಿದ್ದಾರೆ. ಈ ಎಲ್ಲ ಯಶಸ್ಸುಗಳ ಹಿಂದೆ ಭಟ್ಟರೇ ಹೇಳುವಂತೆ 'ನಾನಷ್ಟೇ ಕಾರಣವಲ್ಲ. ನನ್ನ ಕಲಾ ತಂಡದ ಶ್ರೇಷ್ಠ ಭಾಗವತರಾದ ಕೊಳಗಿ ಕೇಶವ ಹೆಗಡೆ, ಸುರೇಶ ಶೆಟ್ಟಿ, ಹಿಮ್ಮೇಳದವರು, ಮುಮ್ಮೇಳದ ಕಲಾವಿದರಾದ ಅಶೋಕ ಭಟ್, ಪ್ರಭಾಕರ ಹೆಗಡೆ, ಸಂಜಯ ಬೆಳೆಯೂರು, ಸದಾಶಿವ ಭಟ್, ಶ್ರೀಧರ ಹೆಗಡೆ ಚಪ್ಪರದಮನೆ, ವೆಂಕಟೇಶ ಹೆಗಡೆ, ಇಟಗಿ ಮಹಾಬಲೇಶ್ವರ, ಪ್ರಣವಭಟ್ ಮುಂತಾದ ಹಿರಿಕಿರಿಯ ಕಲಾವಿದರು ಇದ್ದಾರೆ' ಅನ್ನುತ್ತಾರೆ. ಆಗಾಗ ಪೌರಾಣಿಕ ಪ್ರಸಂಗಗಳ ಪ್ರದರ್ಶನಕ್ಕೆ ಅತಿಥಿ ಕಲಾವಿದರನ್ನು ಆಮಂತ್ರಿಸಿ ಪ್ರದರ್ಶನ ನೀಡುತ್ತಾರೆ.

> ದತ್ತಮೂರ್ತಿ ಭಟ್ಟರು ಕನಕ ಜಯಂತಿಯ ದಿನ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಕನಕದಾಸರ ಚರಿತೆಯ ಮೊದಲ ಯಕ್ಷ ಪ್ರಯೋಗ ಸಾದರಪಡಿಸಿದರು. ಈ ಪ್ರಯೋಗ ಸಹೃದಯರ ಮೆಚ್ಚುಗೆಗೆ ಪಾತ್ರವಾಯಿತು.

ಯಕ್ಷಗಾನ ಸೀಮೋಲ್ಲಂಘನೆಯ ಶ್ರೇಯ...

ಯಕ್ಷಗಾನ ವಲಯದ ವಿಸ್ತಾರ ವ್ಯಾಪ್ತಿಯಲ್ಲಿ ಅಪಾರ ಪ್ರೇಕ್ಷಕ ವಲಯ ಇದ್ದರೂ ಅದನ್ನು ನಿಜಾರ್ಥದಲ್ಲಿ ದತ್ತಮೂರ್ತಿ ಭಟ್ಟರು ಸೀಮೋಲ್ಲಂಘನೆಗೊಳಿಸಿದ್ದಾರೆ. ಈ ಮೊದಲು ಅವರು ವಚನ ವೈಭವವನ್ನು ಹಿಮ್ಮೇಳದೊಂದಿಗೆ ಸಮ್ಮಿಳಿತಗೊಳಿಸಿದ್ದ ಫಲವಾಗಿ ಬಸವೇಶ್ವರ ಚರಿತ್ರೆ ಯಕ್ಷಗಾನ ಪ್ರಸಂಗವಾಗಿ ಬದಲಾಗಿತ್ತು. ಅದು ಇಲ್ಲಿಯವರೆಗೆ 350ಕ್ಕೂ ಹೆಚ್ಚು ಪ್ರಯೋಗಗಳ ಕಂಡಿದೆ. ಆದಿಚುಂಚನಗಿರಿ ಮಠದ ಪ್ರಸನ್ನನಾಥ ಸ್ವಾಮೀಜಿ ಆಶಯದಂತೆ 2015ರಲ್ಲಿ ಕಾಲಭೈರವೇಶ್ವರ ಮಹಾತ್ಮೆಯನ್ನು ಪ್ರಸಂಗಕ್ಕೆ ಅಳವಡಿಸಲಾಗಿತ್ತು. ನಾಥ ಪರಂಪರೆ ಹಾಗೂ ಒಕ್ಕಲಿಗರ ಸಂಸ್ಕೃತಿಯ ರೂಪಕ ಆದಿಚುಂಚನಗಿರಿ ಕ್ಷೇತ್ರ ಮಹಾತ್ಮೆ ಪ್ರಸಂಗ ಇಲ್ಲಿಯವರೆಗೆ 97 ಪ್ರಯೋಗಗಳ ಕಂಡಿದೆ. ಈಗ ಭಟ್ಟರು ಇನ್ನೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ದಿವಂಗತ ಎಂ.ಎ.ಹೆಗಡೆ ಅವರು ಪ್ರಸಂಗಕ್ಕಾಗಿ ಬರೆದಿದ್ದ ಕನಕದಾಸರ ಚರಿತ್ರೆಯನ್ನು ಯಕ್ಷಗಾನದ ಆವರಣದೊಳಗೆ ಅನಾವರಣಗೊಳಿಸಿದ್ದಾರೆ. ಕನಕರ ಬದುಕಿನ ಘಟನೆಗಳು ಹಾಗೂ ದಾಸ ಸಾಹಿತ್ಯವನ್ನು ಯಕ್ಷ ಪ್ರಸಂಗದ ಮೂಲಕ ಜನರೆದುರು ತಂದು ಸಮಾಜಕ್ಕೊಂದು ಸ್ವಾಸ್ಥ್ಯ ಸಂದೇಶ ನೀಡಿದ್ದಾರೆ.

ವ್ಯಾಸತೀರ್ಥರೊಂದಿಗೆ ಕನಕರ ಸಂವಾದ

ಜೀವಜಲಕ್ಕಾಗಿ...

10ನೇ ಪುಟದಿಂದ...

ಪ್ರಸ್ತುತ 18,000ಕ್ಕೂ ಹೆಚ್ಚಿನ ನಿರ್ಲವಣೀಕರಣ ಘಟಕಗಳು ಪ್ರತಿನಿತ್ಯ ಸುಮಾರು ಒಂಬತ್ತೂವರೆ ಕೋಟಿ ಕ್ಯೂಬಿಕ್ ಮೀಟರ್‌ನಷ್ಟು ಕುಡಿಯುವ ನೀರು ತಯಾರಿಸುತ್ತಿವೆ. ಈ ತಂತ್ರಜ್ಞಾನ ಘಟಕಗಳಿಂದ ವಾರ್ಷಿಕ 7.6 ಕೋಟಿ ಟನ್‌ನಷ್ಟು ಕಾರ್ಬನ್ ಡೈ ಆಕ್ಸೈಡ್ ಹೊರಬರುತ್ತಿದೆ. ಇದು ಹೀಗೆಯೇ ಮುಂದುವರಿದರೆ 2040ರ ಹೊತ್ತಿಗೆ ಕಾರ್ಬನ್ ಡೈ ಆಕ್ಸೈಡ್‌ನ ಪ್ರಮಾಣ ಮೂರು ಪಟ್ಟು ಹೆಚ್ಚಾಗಲಿದೆ ಎಂದು ಪರಿಸರ ತಜ್ಞರು ಎಚ್ಚರಿಕೆ ನೀಡಿದ್ದಾರೆ. ಇದು ನಿಜಕ್ಕೂ ಆಘಾತಕಾರಿ ಅಂಶ.

ವಿಶ್ವದಲ್ಲೇ ಸೌದಿ ಅರೇಬಿಯಾ ದೇಶ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನಿರ್ಲವಣೀಕರಣ ಘಟಕಗಳನ್ನು ಹೊಂದಿದೆ. ಸೌದಿ ಅರೇಬಿಯಾದ ಅಲ್-ಜುಬೆಲ್ ಪ್ರದೇಶದಲ್ಲಿರುವ ವಿಶ್ವದ ಅತ್ಯಂತ ದೊಡ್ಡ ನಿರ್ಲವಣೀಕರಣ ಘಟಕದಿಂದ ಪ್ರತಿದಿನ ರಾಜಧಾನಿ ರಿಯಾದ್‌ಗೆ 14 ಲಕ್ಷ ಕ್ಯೂಬಿಕ್ ಮೀಟರ್‌ನಷ್ಟು ಕುಡಿಯುವ ನೀರನ್ನು ತಯಾರಿಸಿ ಪೂರೈಸಲಾಗುತ್ತಿದೆ.

'ನಿಯೋಮ್' ಎಂಬ ಹೈಟೆಕ್ ನಗರ

ಭವಿಷ್ಯದ ಅತ್ಯಾಧುನಿಕ ತಂತ್ರಜ್ಞಾನದ ಹೈಟೆಕ್ ನಗರ 'ನಿಯೋಮ್' ನಿರ್ಮಿಸಲು ಸೌದಿ ಅರೇಬಿಯಾ ಈಗಾಗಲೇ 500 ಶತಕೋಟಿ ಡಾಲರ್‌ನಷ್ಟು ಹಣ ಖರ್ಚು ಮಾಡಿದೆ. ಆದರೆ, ಅಲ್ಲಿ ವಾಸ ಮಾಡಲಿರುವ 10 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಸಲು ಮತ್ತೊಂದು ಬೃಹತ್ ನಿರ್ಲವಣೀಕರಣ ಘಟಕವನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸಿದೆ. ಆದರೆ, ಇದು ರಿವರ್ಸ್ ಆಸ್ಮೋಸಿಸ್ ಅಥವಾ ಉಷ್ಣ ಘಟಕವಲ್ಲ. ಸೌರ ಶಕ್ತಿ ಬಳಸಿ ಸಮುದ್ರದ ನೀರನ್ನು ಗಾಜಿನ ದೊಡ್ಡ ದೊಡ್ಡ ಪೈಪುಗಳ ಮೂಲಕ ಸಾಗಿಸಿ ಬೃಹತ್ ಗಾತ್ರದ ಗಾಜಿನ ಹೊಂಡದಲ್ಲಿ ಬಿಟ್ಟು, ನೀರು ಸೂರ್ಯನ ಕಿರಣಗಳಿಂದ ಕುದಿಯುವ ಹಾಗೆ ಮಾಡಿ ದೊಡ್ಡ ಪೈಪುಗಳ ಮೂಲಕ ಬಿಸಿ ನೀರು ಹಬೆ ರೂಪದಲ್ಲಿ ಬೇರೆ ಕಡೆ ಸಂಗ್ರಹಗೊಳ್ಳುವ ಯೋಜನೆ ಇದು. ಹೆಚ್ಚು ಲವಣಯುಕ್ತ ನೀರನ್ನು ಎಲ್ಲಿ ಬಿಡಬೇಕು ಎನ್ನುವ ಬಗ್ಗೆ ಸ್ಪಷ್ಟ ನಿರ್ಧಾರ ಪ್ರಕಟಿಸಿಲ್ಲ.

ಸಾಂದರ್ಭಿಕ ಚಿತ್ರ

ಭಾರತದಲ್ಲೂ ನಿರ್ಲವಣೀಕರಣ

ಗಂಭೀರ ಪ್ರಮಾಣದ ಮಾಲಿನ್ಯ ಸಮಸ್ಯೆಗಳನ್ನು ಹುಟ್ಟು ಹಾಕುತ್ತಿರುವ ನಿರ್ಲವಣೀಕರಣ ಘಟಕಗಳ ಸಂಖ್ಯೆ ಪ್ರತಿವರ್ಷ ಹೆಚ್ಚಾಗುತ್ತಿದೆ. 2000ನೇ ಇಸವಿಯಿಂದ ಇದುವರೆಗೂ ನಿರ್ಲವಣೀಕರಣ ಘಟಕಗಳ ಸಂಖ್ಯೆ ದುಪ್ಪಟ್ಟಾಗಿದೆ. ಜಗತ್ತಿನಾದ್ಯಂತ ಮೂರು ಕೋಟಿ ಜನರು ನಿರ್ಲವಣೀಕರಣ ಘಟಕದಿಂದ ಕುಡಿಯುವ ನೀರನ್ನು ಪಡೆಯುತ್ತಿದ್ದಾರೆ. ಭಾರತದಲ್ಲೂ ಲಕ್ಷ ದ್ವೀಪ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಗುಜರಾತ್, ತಮಿಳುನಾಡು ಹಾಗೂ ಮಹಾರಾಷ್ಟ್ರದ ಕರಾವಳಿ ತೀರ ಪ್ರದೇಶಗಳಲ್ಲಿ ನಿರ್ಲವಣೀಕರಣ ಘಟಕಗಳು ತಲೆಎತ್ತಿವೆ. ಚೆನ್ನೈ ನಗರಕ್ಕೆ ಪ್ರತಿದಿನ 63 ಲಕ್ಷ ಲೀಟರ್‌ನಷ್ಟು ಕುಡಿಯುವ ನೀರು ಪೂರೈಕೆ ಆಗುತ್ತಿದೆ. ಮುಂಬೈ ಮಹಾನಗರಕ್ಕೂ ನಿರ್ಲವಣೀಕರಣ ಘಟಕದಿಂದ ಕುಡಿಯುವ ನೀರು ಪೂರೈಸಲು ಯೋಜನೆ ಸಿದ್ಧವಾಗುತ್ತಿದೆ.

ಏನೇ ಇರಲಿ, ಹೊಸ ಹೊಸ ಸಂಶೋಧನೆಗಳು ನಾಗರಿಕತೆಯ ಉಳಿವಿಗಾಗಿ ಪ್ರಯತ್ನಿಸಬೇಕು. ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು, ಮರುಭೂಮಿಯಲ್ಲಿ ಹೆಚ್ಚು ಹೆಚ್ಚು ಅರಣ್ಯೀಕರಣ ಮಾಡುವ ಪ್ರಕ್ರಿಯೆಗೆ ಒತ್ತು ಕೊಡಬೇಕು. ನಿರ್ಲವಣೀಕರಣ ವಿಧಾನವು ಜೀವಜಲವನ್ನು ಪೂರೈಸುತ್ತಿದೆಯಾದರೂ, ಪರಿಸರಕ್ಕೆ ತಂದೊಡ್ಡುತ್ತಿರುವ ಅಪಾಯ ಬೇರೆಯದೇ ಸವಾಲನ್ನು ಮುಂದಿಡುತ್ತಿದೆ.

ಮುನ್ನೋಟ 17-12-2023 ರಿಂದ 23-12-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಉಪಾಧ್ಯಾಯರುಗಳಿಗೆ ಉತ್ತಮ ಗೌರವ ದೊರೆಯುತ್ತದೆ. ಹಣದ ಒಳಹರಿವು ಆದ್ಯತೆಯನ್ನು ಪೂರೈಸುವಷ್ಟು ಇರುತ್ತದೆ. ಹಿರಿಯರೊಡನೆ ಮಾತನಾಡುವಾಗ ವ್ಯಾವಹಾರಿಕತೆಯನ್ನು ಪ್ರದರ್ಶಿಸುವಿರಿ. ಸಂಸಾರದಲ್ಲಿ ಸುಖವಿದ್ದರೂ ಸಂಗಾತಿಯ ಕಿರಿಕಿರಿಗಳು ಇರುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಉತ್ತಮ ಯಶಸ್ಸು ಇರುತ್ತದೆ. ದೀರ್ಘಕಾಲೀನ ಕಾಯಿಲೆಗಳಿರುವವರು ಎಚ್ಚರ ವಹಿಸುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಶ್ರಮ ಪಟ್ಟು ಕೆಲಸಗಳನ್ನು ಆರಂಭಿಸುವಿರಿ. ಹಣದ ಒಳಹರಿವು ಸಾಮಾನ್ಯಗತಿಯಲ್ಲಿರುತ್ತದೆ. ಸರ್ಕಾರಿ ಸಂಸ್ಥೆಗಳಿಂದ ಸಿಗಬೇಕಿದ್ದ ಸಾಲ ಸೌಲಭ್ಯಗಳು ನಿಧಾನವಾಗಬಹುದು. ಸಂಗೀತಗಾರರಿಗೆ ಹೆಚ್ಚಿನ ಆದ್ಯತೆ ದೊರೆಯುತ್ತದೆ. ಅನಿರೀಕ್ಷಿತ ಸರ್ಕಾರಿ ತಗಾದೆಗಳಿಂದ ಸ್ವಲ್ಪ ವಿಚಲಿತರಾಗುವಿರಿ. ಮೂತ್ರ ಸಂಬಂಧಿ ಕಾಯಿಲೆ ಇರುವವರು ಎಚ್ಚರ ವಹಿಸುವುದು ಒಳ್ಳೆಯದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸರ್ಕಾರಿ ಅಧಿಕಾರಿಗಳಿಗೆ ಉನ್ನತ ಸ್ಥಾನಮಾನ ಸಿಗುವ ಸಾಧ್ಯತೆ ಇದೆ. ಹಣದ ಒಳಹರಿವು ಉತ್ತಮವಾಗಿರುತ್ತದೆ. ಲಲಿತ ಕಲೆಯನ್ನು ಹೇಳಿಕೊಡುವವರಿಗೆ ಬೇಡಿಕೆ ಹೆಚ್ಚುತ್ತದೆ. ನಿಮ್ಮ ನಡವಳಿಕೆಯ ಮೇಲೆ ನಿಮ್ಮ ಸಂಗಾತಿಯ ಪ್ರಭಾವ ಹೆಚ್ಚುತ್ತದೆ. ಕೃಷಿಭೂಮಿಯನ್ನು ಕೊಂಡುಕೊಳ್ಳುವ ಯೋಗವಿದೆ. ಹೆಂಗಸರು ನಡೆಸುವ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಇಡೀ ವಾರ ಸಂಗಾತಿ ನಿಮ್ಮನ್ನು ಸಂತೋಷವಾಗಿಡಲು ಪ್ರಯತ್ನಿಸುವರು. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಆಲಸಿ ನಡವಳಿಕೆಯು ನಿಮ್ಮಲ್ಲಿ ಇರುತ್ತದೆ. ದೈವ ಕಾರ್ಯಗಳಿಗಾಗಿ ಹೆಚ್ಚು ಶ್ರಮವಹಿಸುವಿರಿ. ಸಂಸಾರದಲ್ಲಿ ಸಾಕಷ್ಟು ಸುಖವಿರುತ್ತದೆ. ಒಡವೆಯನ್ನು ಮಾರಾಟ ಮಾಡುವವರಿಗೆ ಅಭಿವೃದ್ಧಿ ಇದೆ. ಕೃಷಿಗೆ ಸಂಬಂಧಪಟ್ಟ ವಿದ್ಯೆಯನ್ನು ಓದುತ್ತಿರುವವರಿಗೆ ಹೆಚ್ಚಿನ ಯಶಸ್ಸು ದೊರಕುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಅತಿ ಶ್ರೀಮಂತರಂತೆ ತೋರಿಸಿಕೊಳ್ಳಲು ಹಾಗೂ ತುಂಬಾ ಅಲಂಕಾರಿಕವಾಗಿ ಕಾಣಲು ಯತ್ನಿಸುವಿರಿ. ಮಾತಿನಲ್ಲಿ ಸೌಮ್ಯತೆ ಇದ್ದರೂ ಬಹಳ ಹರಿತವಾಗಿರುತ್ತದೆ. ಸಹೋದರಿಯರಿಂದ ಹೆಚ್ಚು ಸಹಕಾರ ಸಿಗುತ್ತದೆ. ಕೃಷಿಭೂಮಿಯನ್ನು ಈಗ ಕೊಳ್ಳಬಹುದು. ಶೀತಬಾಧೆ ಇರುವವರು ಹೆಚ್ಚು ಎಚ್ಚರವಹಿಸಬೇಕು. ಸಂಗಾತಿಯೊಡನೆ ಕಾವೇರಿದ ಮಾತುಗಳಾಗಬಹುದು. ಕುಟುಂಬದಲ್ಲಿ ನಿಮ್ಮ ಮಾತಿಗೆ ಹೆಚ್ಚು ಬೆಲೆ ಬರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಸಾಧಿಸುವ ಛಲ ಸ್ವಲ್ಪ ಕಡಿಮೆಯಾಗಬಹುದು. ನಿಮ್ಮ ಕೆಲಸ ಕಾರ್ಯಗಳಿಂದ ಬಂಧುಗಳನ್ನು ಎದುರು ಹಾಕಿಕೊಳ್ಳುವಿರಿ. ಸರ್ಕಾರಿ ಪ್ರಾಯೋಜಿತ ಅಥವಾ ಸಂಸ್ಥೆಗಳಿಂದ ನಿವೇಶನ ಒದಗಬಹುದು. ಮಕ್ಕಳ ನಡವಳಿಕೆಯಿಂದ ಕೆಲವು ಸಂಘರ್ಷಗಳಾಗಬಹುದು. ಯಾವುದೋ ಹಳೆಯ ನೋವುಗಳು ಈಗ ನಿಮ್ಮನ್ನು ಕಾಡಬಹುದು. ಸಂಗಾತಿಯ ತದ್ವಿರುದ್ಧ ನಡವಳಿಕೆ ಆತಂಕ ಹುಟ್ಟಿಸುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಕೆಲವರ ಅತಿಯಾದ ಅಧಿಕಾರ ಅವರ ಅಧಿಕಾರಕ್ಕೆ ಸಂಚಕಾರ ತರುತ್ತದೆ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ಹೈನುಗಾರಿಕೆ ಮಾಡುವವರಿಗೆ ಸುಲಭ ಸಾಲ ದೊರೆಯುವುದರ ಜೊತೆಗೆ ಸಹಾಯ ಧನಗಳು ಸಿಗುತ್ತವೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗಬಹುದು. ಹೊಟ್ಟೆಯಲ್ಲಿ ಅಥವಾ ಮೂಳೆಯಲ್ಲಿ ತೊಂದರೆಗಳು ಕಾಣಿಸುತ್ತವೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಶೌರ್ಯ ನಿಮ್ಮಲ್ಲಿ ಮನೆ ಮಾಡಿರುತ್ತದೆ. ಮಾತಿನಲ್ಲಿ ಬಿಗಿ ಹಿಡಿತವಿದ್ದು ಅಧಿಕಾರಯುತವಾಗಿ ಮಾತನಾಡುವಿರಿ. ಧನ ಆದಾಯವು ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಬರುತ್ತದೆ. ಜಾಣ್ಮೆಯಿಂದ ಮಾತನಾಡಿ ವ್ಯವಹಾರವನ್ನು ಕುದುರಿಸಿಕೊಳ್ಳುವಿರಿ. ಬಹಳ ಚುರುಕಾಗಿ ಕೆಲಸಗಳನ್ನು ಮಾಡುವಿರಿ. ನಿಮ್ಮ ತಾಯಿಯಿಂದ ನಿಮಗೆ ಹೆಚ್ಚಿನ ಸಹಕಾರ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸರ್ಕಾರಿ ವೈದ್ಯರುಗಳಿಗೆ ಸಾಕಷ್ಟು ಗೌರವ ದೊರೆಯುತ್ತದೆ. ನೀವು ಸಮಾಜಕ್ಕೆ ಗೌರವ ಕೊಡುವಿರಿ ಹಾಗೂ ಸಮಾಜದಿಂದ ಗೌರವ ಪಡೆಯುವಿರಿ. ಶತ್ರುಗಳನ್ನು ಮಣಿಸುವ ನಿಮ್ಮ ತಂತ್ರಕ್ಕೆ ಎಲ್ಲರೂ ಬೆರಗಾಗುವರು. ಆಸ್ತಿ ವಿಚಾರಗಳಲ್ಲಿ ಹೊಸ ಸಮಸ್ಯೆಗಳು ಮೂಡಬಹುದು. ವಿದೇಶದಲ್ಲಿರುವವರು ಸ್ಥಿರಾಸ್ತಿ ಮಾಡಿಕೊಳ್ಳಲು ಕಾಲ ಪಕ್ವವಾಗಿದೆ. ವಾಯು ಪ್ರಕೋಪ ಸ್ವಲ್ಪಮಟ್ಟಿಗೆ ಕಾಡಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಾರದ ಆರಂಭದಲ್ಲಿ ಬಹಳ ಸಂತೋಷವಿರುತ್ತದೆ. ಮಾತನಾಡುವಾಗ ಎದುರಿಗೆ ಇರುವವರನ್ನು ಗಮನಿಸಿ ಜಾಣ್ಮೆಯಿಂದ ಮಾತನಾಡುವುದು ಒಳ್ಳೆಯದು. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಕಮಿಷನ್ ಹಣ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಮಂದಗತಿಯ ಪ್ರಗತಿ ಇರುತ್ತದೆ. ಜೀರ್ಣಕ್ರಿಯೆಯಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು. ಕಣ್ಣಿನ ಕುರಿತು ಎಚ್ಚರವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸ್ಥಿರ ಮನಸ್ಸಿನಿಂದ ಕೆಲಸ ಮಾಡುವಿರಿ. ವಿದೇಶಿ ಆಮದು ಮತ್ತು ರಫ್ತು ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ. ಹಿರಿಯರಿಗೆ ಮಠಮಾನ್ಯಗಳ ಸಂಪರ್ಕ ಹೆಚ್ಚಾಗುತ್ತದೆ. ಗಣಿತ ಮತ್ತು ಜೀವಶಾಸ್ತ್ರದ ವಿಷಯಗಳನ್ನು ಅಭ್ಯಾಸ ಮಾಡುತ್ತಿರುವವರಿಗೆ ಹೆಚ್ಚು ಯಶಸ್ಸು ಇರುತ್ತದೆ. ಶೀತಬಾಧೆ ಮತ್ತು ಶ್ವಾಸಕೋಶದ ತೊಂದರೆ ಇರುವವರು ಮುನ್ನೆಚ್ಚರಿಕೆಯನ್ನು ತೆಗೆದು ಕೊಳ್ಳುವುದು ಉತ್ತಮ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ಹೊರನೋಟ ಮತ್ತು ಒಳನೋಟಕ್ಕೆ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ನಿಮ್ಮ ನಡವಳಿಕೆಗಳಿಂದ ಬಂಧುಗಳನ್ನು ಎದುರು ಹಾಕಿಕೊಳ್ಳುವಿರಿ. ವೃತ್ತಿಯಲ್ಲಿ ಹಿರಿಯರ ಸಹಾಯದಿಂದ ಸೂಕ್ತ ಸ್ಥಾನ ಸಿಗಬಹುದು. ಕೃಷಿ ಮತ್ತು ಹೈನುಗಾರಿಕೆಯನ್ನು ಓದುತ್ತಿರುವವರಿಗೆ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಕೆಲವರಿಗೆ ಇದ್ದಕ್ಕಿದ್ದಂತೆ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು.

ಪದಬಂಧ 2820



ಮೇಲಿನಿಂದ ಕೆಳಕ್ಕೆ

1. ಬೊಗಸೆ ಚಾಚಿದ ಬಾಲೆ 3
2. ಸಾಗರದ ಅಂಚು 5
3. ಮರಗಳಿಂದ ತುಂಬಿ ಹೋದ ಅಡವಿ 5
4. ಹವಿಸ್ಸನ್ನು ಆಹಾರವಾಗಿ ಸ್ವೀಕರಿಸುವ ಯಜ್ಞ 3
6. ನೋಡಲು ಚಂದದ ಸೌಂದರ್ಯವತಿ 4
8. ಇಲಿಗಳ ವಾಸಸ್ಥಾನದಿಂದ ಹರಿವ ನಾರಾಯಣನ ರಾಗ 4
9. ದುಷ್ಟ ಬುದ್ದಿಗೆ ಹೆಸರಾದ ಪ್ರಾಣಿ 2
10. ವಿರಳವಾದ ಜನ್ಮ 3
12. ಆಂಗ್ಲ ಹಾಸ್ಯದ ಜೊತೆ ಮನ್ಮಥ ಸೇರಿದ್ದಾನೆ 4
13. ಅಧಮನ ಕೊನೆ ಅಡಗಿಸುತ್ತದೆ 2
14. ಕ್ರಮವಾಗಿ ಮೂರು ಲೋಕಗಳನ್ನು ಗೆದ್ದವ 4
15. ಸ್ಫೂರ್ತಿಯ ಉತ್ತೇಜಕ ಬಲ 5
16. ಶ್ರೀಗಂಧದ ಕಂಪನ್ನು ಬೀರುವ ಕನ್ನಡ ಚಿತ್ರೋದ್ಯಮವೆಂಬ ಕಾನನ 5
18. ದಳಕ್ಕೆ ಸೇರಿದ ಉತ್ತರಭಾರತದ ಕುಲನಾಮ 3
20. ಸಂಸಾರಕ್ಕೆ ಬದ್ಧ 3

ಎಡದಿಂದ ಬಲಕ್ಕೆ

1. ಅಂಕದಲ್ಲಿ ಬಂದು ಕೊನೆಗಾಣಿಸುವವ 3
3. ಒಂದು ರೀತಿಯಲ್ಲಿ ಹಲವು ಬಗೆ 3
5. ಶಿವನ ಕೈವಾದ್ಯ 3
6. ಬೆರಳಿನ ಹಾರ ಹಾಕಿಕೊಂಡವ ಬುದ್ಧನಿಗೆ ಶರಣಾದ 5
7. ಏಳು ಬಣ್ಣದ ಮದನನ ಕಮಾನು 5
9. ಪಟ್ಟಣದ ಮಂದಿ 5
11. ಹಣ ಒಡವೆಗಳನ್ನು ಭದ್ರಗೋಳಿಸುವ ಪೆಟ್ಟಿಗೆ 3
13. ಧರಿಸುವ ಧಾತ್ರಿ 3
15. ಕಾವ್ಯಗಳಲ್ಲಿ ಪ್ರೀತಿಯ ಬೆಳಕನ್ನು ಚೆಲ್ಲುವ ಶಶಿ 5
17. ಇದರಿಂದ ನೋಡಿದರೆ ಎಲ್ಲವೂ ಸ್ಪಷ್ಟವಾಗಿ ಕಾಣುತ್ತದೆ 5
19. ಹರಿವ ಹೊಳೆಗಳ ಸಮ್ಮಿಲನ 5
21. ಹಿಂದು ಮುಂದಾದ ಕಾಡಿನ ಒಡೆಯ 3
22. ಜೀವನದಲ್ಲಿ ನಿರಾಸಕ್ತಿ ಜಿಗುಪ್ಸೆ 3
23. ಮಕ್ಕಳು ಮತ್ತು ಸಸಿಗಳನ್ನು ಪೋಷಿಸಿ ಬೆಳೆಸುವ ಆಂಗ್ಲಶಾಲೆ 3

ಪದಬಂಧ ಉತ್ತರ -2819

ಮೇಲಿಂದ ಕೆಳಕ್ಕೆ

1.ಪ್ರಸಾರ 2.ತಿರುಮಲೇಶ 3.ಹಾಲುಕುಡಿಕೆ 4.ಮತಾಂಧ 7.ಹದಿಹರೆಯ 9.ವದನ 13.ಕುಟಿಲತಂತ್ರ 14.ಸಕ್ರಮ 15.ನತಮಸ್ತಕ 16.ಸಮಯಪ್ರಜ್ಞೆ 19.ಹಾಸನ 21.ಸಸ್ತನಿ

ಎಡದಿಂದ ಬಲಕ್ಕೆ

1. ಪ್ರಜಾಪತಿ 3.ಹಾದಿಗ್ರಾಮ 5.ರುಮಾಲು 6.ಬರಹ 8.ಕುಲಬಾಂಧವ 10.ಲೇವಡಿ 11.ಹತಾಶ 12.ಕೆಡುಕುತನ 14.ಸಹಾಯಧನ 16.ಸಲಿಲ 17.ತತ್ಸಮ 18.ಮಹಾಮಹಿಮ 20.ತ್ರಸರ 22.ಸವಿಪ್ರ 23.ನಪುಂಸಕ 24.ಜ್ಞೆದಾಷೇನಿ

ಬಹುಮುಖಿ ರಾಮಯ್ಯ ನೆನಕೆ...



ಯತಿ ಸಿದ್ಧಕಟ್ಟೆ ಕಣ್ಣಲ್ಲಿ ಮತ್ತಿಕೆರೆ ಸಂಪಂಗಪ್ಪ ರಾಮಯ್ಯ

ಗಾಣಧಾಳು ಶ್ರೀಕಂಠ

ವೃತ್ತಿ ಅನುಭವದಿಂದ ದೇಶಕ್ಕೆ ಗುಣಮಟ್ಟದ ಎಂಜಿನಿಯರ್‌ಗಳ ಅಗತ್ಯ ಇರುವುದನ್ನು ಅರಿತು 'ಎಂಜಿನಿಯರಿಂಗ್ ಕಾಲೇಜು' ಆರಂಭಿಸಿದರು. ಅವರ ಕುಟುಂಬದ ಸಾವಿನ ನೋವು ಬೃಹತ್ ಆಸ್ಪತ್ರೆ ತೆರೆಯಲು ಪ್ರೇರೇಪಿಸಿತು. ಕಂಟ್ರಾಕ್ಟರ್ ಆಗಿ ಅಣೆಕಟ್ಟುಗಳನ್ನು ಕಟ್ಟುತ್ತಾ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಾ ಸಮಾಜ ಕಟ್ಟುವ ಕೆಲಸದಲ್ಲೂ ತೊಡಗಿಕೊಂಡರು. ಪ್ರತಿ ಹಂತದಲ್ಲೂ ಕನಸು ಕಾಣುತ್ತಾ, ಆ ಪ್ರತಿ ಕನಸನ್ನೂ ನನಸಾಗಿಸುತ್ತಾ ಸಾಗಿದವರು ಎಂ.ಎಸ್. ರಾಮಯ್ಯ.

ರಾಮಯ್ಯ ಅವರು ಹುಟ್ಟಿದ್ದು 1922ರ ಏಪ್ರಿಲ್ 20ರಂದು, ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ. ಶೈಕ್ಷಣಿಕ ಜೀವನ ಆರಂಭವಾಗಿದ್ದು ಬೆಂಗಳೂರಿನ ಮತ್ತಿಕೆರೆಯಲ್ಲಿ. ಹಾಗಾಗಿ, ಅವರ ಹೆಸರಿನೊಂದಿಗೆ ಮತ್ತಿಕೆರೆ ಸೇರಿದೆ. ತಂದೆ ಸಂಪಂಗಪ್ಪ, ತಾಯಿ ನರಸಮ್ಮ, ಅವರ ಎಲ್ಲ ವಿದ್ಯಾಭ್ಯಾಸವೂ ಬೆಂಗಳೂರಿನಲ್ಲೇ. ಎಂ.ಎಸ್. ರಾಮಯ್ಯ ಅವರಿಗೆ ಇಬ್ಬರು ಪತ್ನಿಯರು, ಹತ್ತು ಮಕ್ಕಳು.

ತಾತ ಗಾರೆ ರಾಮಯ್ಯ ಮತ್ತು ತಂದೆ ಸಂಪಂಗಪ್ಪ ಕಟ್ಟಡ ಕಾರ್ಮಿಕರು. ಬಾಲ್ಯದಲ್ಲಿ ಬಡತನವಿದ್ದ ಕಾರಣ ಹೆಚ್ಚು ಓದಲಿಲ್ಲ. ಔಪಚಾರಿಕ ಶಿಕ್ಷಣದೊಂದಿಗೆ 14ನೇ ವಯಸ್ಸಿಗೆ ತಂದೆ–ತಾತನ 'ಗಾರೆ' ಕೆಲಸ ಮುಂದುವರಿಸಿದರು! ಮಧ್ಯೆ, ಕೃಷಿ ಮಾಡಿದರು, ಇಟ್ಟಿಗೆ ತಯಾರಿಸಿ, ಮಿಲಿಟರಿ ಕ್ಯಾಂಪ್‌ಗೆ ಮಾರಾಟ ಮಾಡಿದರು. ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡಿದರು. ನಂತರ ಸಿವಿಲ್ ಕಂಟ್ರಾಕ್ಟರ್ ಆದರು. ಕರ್ನಾಟಕ, ಮಹಾರಾಷ್ಟ್ರ ಮತ್ತು ಬಿಹಾರದ ಅಣೆಕಟ್ಟುಗಳ ನಿರ್ಮಾಣದಲ್ಲಿ ತೊಡಗಿದರು. ಪ್ರಧಾನಿ ಜವಾಹರಲಾಲ್ ನೆಹರೂ ಅವರ 'ಆಧುನಿಕ ಭಾರತದ ನಿರ್ಮಾತೃಗಳ' ತಂಡ ಸೇರಿ ದೇಶ ಕಟ್ಟುವ ಕೆಲಸದಲ್ಲಿ ತೊಡಗಿಸಿಕೊಂಡರು. ಗೈಡೂ ಇಲ್ಲದೆ, ಗಾಡ್‌ಫಾದರೂ ಇಲ್ಲದೇ ಬೆಳೆದ ರಾಮಯ್ಯ, ಬದುಕಿನಲ್ಲಿ ಎದುರಾದ ಸವಾಲುಗಳನ್ನು ದಿಟ್ಟತನದಿಂದ ಎದುರಿಸುತ್ತಾ ಕೆಲವೇ ವರ್ಷಗಳಲ್ಲಿ ಒಬ್ಬ ಯಶಸ್ವಿ ಸಿವಿಲ್ ಗುತ್ತಿಗೆದಾರರಾಗಿ ಖ್ಯಾತಿ ಗಳಿಸಿದರು.

ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಯಾದದ್ದು...

ನೀರಾವರಿ ಯೋಜನೆಗಳಲ್ಲಿ ಕೆಲಸ ಮಾಡುತ್ತಾ, ಪ್ರಾಯೋಗಿಕ ಅನುಭವ ಹೊಂದಿದ್ದ ರಾಮಯ್ಯ, ದೇಶಕ್ಕೆ ಉತ್ತಮ ಎಂಜಿನಿಯರ್‌ಗಳ ಅಗತ್ಯ ಹಾಗೂ ಅಂಥ ಎಂಜಿನಿಯರ್‌ಗಳನ್ನು ತಯಾರಿಸುವ ಕಾಲೇಜಿನ ಅಗತ್ಯವನ್ನು ಅರಿತಿದ್ದರು. ಇದೇ ಸಮಯದಲ್ಲಿ ಅಂದಿನ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ, ವಿಧಾನಸೌಧದಲ್ಲಿ ನಡೆದ ಸಭೆಯೊಂದರಲ್ಲಿ ರಾಜ್ಯದಲ್ಲಿ ಎಂಜಿನಿಯರ್‌ಗಳ ಕೊರತೆಯನ್ನು ಪ್ರಸ್ತಾಪಿಸಿದರು. ಸಭೆಯಲ್ಲಿದ್ದ ರಾಮಯ್ಯ ಅವರಿಗೆ 'ನೀವೇ ಏಕೆ ಎಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಬಾರದು' ಎಂದು ಕೇಳಿದರು. ಈ ಬೆಳವಣಿಗೆಯ ಬೆನ್ನಲ್ಲೇ ರಾಮಯ್ಯ ಅವರು ₹25 ಸಾವಿರ ಕಾರ್ಪಸ್ ನಿಧಿಯೊಂದಿಗೆ 1962ರಲ್ಲಿ ಗೋಕುಲ ಶಿಕ್ಷಣ ಪ್ರತಿಷ್ಠಾನ ಟ್ರಸ್ಟ್ ಆರಂಭಿಸಿ, ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಕಾಲೇಜನ್ನೂ ಪ್ರಾರಂಭಿಸಿದರು. ಅಷ್ಟೇ ಅಲ್ಲ, ಎಂಜಿನಿಯರಿಂಗ್ ಪದವಿ ಮುಗಿಸಿದವರಿಗೆ ಸಮೀಪದಲ್ಲೇ ಉದ್ಯೋಗವೂ ಸಿಗಬೇಕೆಂಬ ಉದ್ದೇಶದೊಂದಿಗೆ ಕಾಲೇಜು ಆಸುಪಾಸಿನಲ್ಲೇ 'ರಾಮಯ್ಯ ಇಂಡಸ್ಟ್ರಿಯಲ್ ಲೇಔಟ್' ಮಾಡಿ, ವಿವಿಧ ಕೈಗಾರಿಕೆಗಳಿಗೆ ಅವಕಾಶ ನೀಡಿದರು. ಇದು ರಾಮಯ್ಯ ಅವರಲ್ಲಿದ್ದ ದೂರದೃಷ್ಟಿಗೊಂದು ಉದಾಹರಣೆ.

> ಎಂ.ಎಸ್. ರಾಮಯ್ಯ ಅವರ ಜನ್ಮ ಶತಮಾನೋತ್ಸವ ವರ್ಷ ಇದು. ಕಂಟ್ರಾಕ್ಟರ್ ಆಗಿದ್ದ ಅವರು ಬಹುಮುಖಿ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ ಅತ್ಯಪರೂಪ.

ಅವರ ಕುಟುಂಬದಲ್ಲಿ ಕೆಲವು ದುರದೃಷ್ಟಕರ ಸಾವುಗಳಾದವು. ಇದರಿಂದ ಆಸ್ಪತ್ರೆ ಆರಂಭಿಸಬೇಕು ಎನಿಸಿತು. ಪರಿಣಾಮವಾಗಿ 1979ರಲ್ಲಿ, ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜು ಸ್ಥಾಪನೆಗೊಂಡಿತು. ಇದಾದ ನಂತರ, ವೈದ್ಯಕೀಯ, ದಂತ ವೈದ್ಯ, ನರ್ಸಿಂಗ್, ಫಾರ್ಮಸಿ, ಫಿಸಿಯೋಥೆರಪಿ, ಆಯುರ್ವೇದ, ಆರೋಗ್ಯ ರಕ್ಷಣೆ, ಕ್ಲಿನಿಕಲ್ ಸಂಶೋಧನೆ, ಸಾರ್ವಜನಿಕ ನೀತಿ, ಕಾನೂನು ಮತ್ತು ನಿರ್ವಹಣೆಯ ಕ್ಷೇತ್ರಗಳಲ್ಲಿ ಶಿಕ್ಷಣ ಸಂಸ್ಥೆಗಳ ಬೃಹತ್ ವಿದ್ಯಾ ಸಂಸ್ಥೆಗಳ ಸಂಕೀರ್ಣವನ್ನೇ ಆರಂಭಿಸಿದರು. ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಪ್ರಸ್ತುತ ಮೂರು ಲಕ್ಷಕ್ಕೂ ಹೆಚ್ಚು ರೋಗಿಗಳಿಗೆ ಸೇವೆ ದೊರೆಯುತ್ತಿದೆ ಮತ್ತು ವರ್ಷಕ್ಕೆ 11,000 ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳು ನಡೆಯುತ್ತಿವೆ.

ಪತ್ರಿಕೆ, ಸಾಹಿತ್ಯ ಪ್ರೀತಿ

ರಾಮಯ್ಯ ಅವರಿಗೆ ಸಾಹಿತ್ಯ, ಕಲೆ, ಸಂಸ್ಕೃತಿ, ಪತ್ರಿಕೋದ್ಯಮ ಹೀಗೆ ಹಲವು ಕ್ಷೇತ್ರಗಳಲ್ಲಿ ಆಸಕ್ತಿ ಇತ್ತು. ಎಂಜಿನಿಯರಿಂಗ್ ಕಾಲೇಜು ಆರಂಭದ ನಡುವೆಯೇ, 1950ರ ದಶಕದಲ್ಲಿ 'ಗೋಕುಲ' ಎಂಬ ಕನ್ನಡ ವಾರಪತ್ರಿಕೆ ಮತ್ತು 'ಕೈಲಾಸ' ಎಂಬ ಮಾಸಿಕ ಪತ್ರಿಕೆಯನ್ನು ಆರಂಭಿಸಿದರು. ಅಂದಿನ ಪತ್ರಿಕಾರಂಗದ ದಿಗ್ಗಜರಾಗಿದ್ದ ಖಾದ್ರಿ ಶಾಮಣ್ಣ ಮತ್ತು ಸೀತಾರಾಮ ಶಾಸ್ತ್ರಿ ಅವರನ್ನು ಕ್ರಮವಾಗಿ 'ಗೋಕುಲ' ಮತ್ತು 'ಕೈಲಾಸ' ಪತ್ರಿಕೆಗಳ ಸಂಪಾದಕರನ್ನಾಗಿಸಿದರು. ಸಾಹಿತಿಗಳಾಗಿದ್ದ ದ.ರಾ. ಬೇಂದ್ರೆ, ಜಿ.ಪಿ.ರಾಜರತ್ನಂ, ಚೆನ್ನವೀರ ಕಣವಿ, ದಾಶರಥಿ ದೀಕ್ಷಿತ್, ನವರತ್ನರಾಮ್ ಮತ್ತಿತರರು ರಾಮಯ್ಯನವರ ಪತ್ರಿಕೆಗಳಿಗೆ ಲೇಖನ ಬರೆಯಲು ಆರಂಭಿಸಿದರು. ಪ್ರಕಟಣೆಗಳು ಹೆಚ್ಚಿನ ವಿಶ್ವಾಸಾರ್ಹತೆ ಗಳಿಸಿದವು.

ವಿದ್ವಾಂಸರು, ಸಾಹಿತಿಗಳು, ಮಾಧ್ಯಮದವರ ಬಗ್ಗೆ ಅಪಾರ ಗೌರವಿಟ್ಟುಕೊಂಡಿದ್ದರು ರಾಮಯ್ಯ. ಎಸ್.ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ, ದೇವರಾಜ ಅರಸು ಅವರಂತಹ ರಾಜಕೀಯ ದಿಗ್ಗಜರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಒಮ್ಮೆ ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರು ರಾಮಯ್ಯ ಅವರನ್ನು ಖ್ಯಾತ ಪತ್ರಕರ್ತ, 'ತಾಯಿನಾಡು' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಪಿ.ಆರ್.ರಾಮಯ್ಯ ಅವರ ಬಳಿ ಕರೆದೊಯ್ದರು. ಹೀಗೇ ಚರ್ಚೆಯ ನಡುವೆ, ಪತ್ರಿಕೆ ಆರ್ಥಿಕ ಸಂಕಷ್ಟದಲ್ಲಿರುವ ವಿಷಯ ಪ್ರಸ್ತಾಪವಾಯಿತು. 'ನೀವೇ ಏಕೆ ಪತ್ರಿಕೆ ವಹಿಸಿಕೊಂಡು ನಡೆಸಬಾರದು' ಎಂದು ಕೆಂಗಲ್ ಹನುಮಂತಯ್ಯ ಅವರು ರಾಮಯ್ಯ ಅವರನ್ನು ಕೇಳಿದರು. ಆ ಕ್ಷಣಕ್ಕೆ ದಿಗ್ಭ್ರಮೆಗೊಂಡರೂ, ಕೆಂಗಲ್ ಅವರ ಮಾತನ್ನು ತಿರಸ್ಕರಿಸದೇ, ಪತ್ರಿಕೆ ಜವಾಬ್ದಾರಿ ವಹಿಸಿಕೊಂಡರು. ಪ್ರಕಟಣೆ ಮೇಲಿದ್ದ ಎಲ್ಲ ಸಾಲಗಳನ್ನೂ ತೀರಿಸಿದರು. ಜ.1,1957ರಂದು 'ತಾಯಿನಾಡು' ಪತ್ರಿಕೆಯ ಮಾಲೀಕರಾಗಿ, ಪತ್ರಿಕೋದ್ಯಮಿಯಾದರು.

ರಾಮಯ್ಯ ಅವರ ಸಾಹಿತ್ಯ ಪ್ರೀತಿ, ಪತ್ರಿಕೆಗಳ ಜೊತೆಗೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸುವವರೆಗೂ ವಿಸ್ತರಿಸಿತ್ತು. ತಮ್ಮ ಧಾರ್ಮಿಕ ಸೇವಾ ತಾಣ ಚಿಂತಾಮಣಿ ತಾಲ್ಲೂಕು ಕೈವಾರದಲ್ಲಿ 1990ರಲ್ಲಿ ಕೈವಾರದಲ್ಲಿ ನಡೆದ 54ನೇ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿದ್ದರು. ಅವರೇ ಸತ್ಕಾರಕೂಟ ಸಮಿತಿಯ ಅಧ್ಯಕ್ಷರಾಗಿದ್ದರು. ಸಮ್ಮೇಳನಕ್ಕೆ 88ರ ಹರೆಯದ ಎ.ಎನ್. ಮೂರ್ತಿರಾಯರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಈ ಸಮ್ಮೇಳನ ದೊಡ್ಡ ಯಶಸ್ಸು ಕಂಡಿತು. ಕೈವಾರ ತಾತಯ್ಯ ಅವರ ವಿಚಾರಗಳನ್ನು ವಿಶ್ವದಾದ್ಯಂತ ಪಸರಿಸಲು ಈ ಸಮ್ಮೇಳನ ನೆರವಾಯಿತು.

(ಪೂರಕ ಮಾಹಿತಿ: ರಾಮಕೃಷ್ಣ ಉಪಾಧ್ಯ ಅವರ ಎಂ.ಎಸ್. ರಾಮಯ್ಯ ಆತ್ಮಕಥೆ 'ರಾಮಯ್ಯಾನಮ್')

ಕೈವಾರ ಕ್ಷೇತ್ರದ ರೂವಾರಿ

ಧಾರ್ಮಿಕ, ಅಧ್ಯಾತ್ಮ ಕ್ಷೇತ್ರದಲ್ಲೂ ತೊಡಗಿಸಿಕೊಂಡಿದ್ದ ರಾಮಯ್ಯ ಅವರು, ಕೈವಾರ ಕ್ಷೇತ್ರವನ್ನು ಪ್ರಸಿದ್ಧ ಅಧ್ಯಾತ್ಮ ಪ್ರವಾಸಿ ತಾಣವನ್ನಾಗಿಸಿದ್ದಾರೆ. ಕಾಲಜ್ಞಾನಿ ತಾತಯ್ಯನವರ ವಿಚಾರಗಳನ್ನು ಎಲ್ಲೆಡೆಗೆ ತಲುಪಿಸುವ ಪ್ರಯತ್ನ ಮಾಡಿದ್ದರು. ಇವತ್ತಿಗೂ ಕೈವಾರದಲ್ಲಿ ಅವರ ಧಾರ್ಮಿಕ ಸಂಸ್ಥೆಗಳ ಪೋಷಣಾ ಕಾರ್ಯಗಳೂ ಹೆಸರಾಗಿವೆ. ರಾಮಯ್ಯ ಅವರ ಪುತ್ರರು, ತಂದೆಯವರ ಸಾಮಾಜಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಸೇವಾ ಕಾರ್ಯಗಳನ್ನು ಮುನ್ನಡೆಸುತ್ತಿದ್ದಾರೆ. ರಾಮಯ್ಯ ಅವರು ಓದಿದ್ದು ಕಡಿಮೆಯಾದರೂ, ಸಾಮಾಜಿಕ ಸೇವೆಯೊಂದಿಗೆ ಸಮಾಜದ ವಿವಿಧ ಸ್ತರಗಳಿಗೆ ಕೊಡುಗೆ ನೀಡಿದ್ದಾರೆ. ವಿವಿಧ ಕ್ಷೇತ್ರಗಳ ಸೇವೆಯನ್ನು ಗುರುತಿಸಿ, ಹಲವು ವಿಶ್ವವಿದ್ಯಾಲಯಗಳು ಎಂ. ಎಸ್. ರಾಮಯ್ಯನವರಿಗೆ ಡಾಕ್ಟರೇಟ್ ನೀಡಿದ್ದವು. ಅನೇಕ ಪ್ರಶಸ್ತಿಗಳೂ ಸಂದಿದ್ದವು. ದಣಿವರಿಯದೇ ಸೇವೆಗೈದ ರಾಮಯ್ಯನವರು, 1997ರ ಡಿಸೆಂಬರ್ 25ರಂದು ನಿಧನರಾದರು. ಇದು ಎಂ.ಎಸ್. ರಾಮಯ್ಯನವರ ಜನ್ಮಶತಮಾನೋತ್ಸವ ವರ್ಷ. ಅವರಿಲ್ಲದ ಈ ಹೊತ್ತಿನಲ್ಲಿ, ಸಮಾಜಕ್ಕೆ ಕೊಟ್ಟು ಹೋಗಿರುವ ಕೊಡುಗೆಗಳು, ಅವರನ್ನು ಜೀವಂತವಾಗಿಟ್ಟಿವೆ.

ಪರಂಪರೆ ಮೀರಿದ ರಚನಾ ಕ್ರಮ

ಎಚ್.ಎಸ್.ವೆಂಕಟೇಶ ಮೂರ್ತಿ

ಒಂದು ಭಾಷೆಯ ಪದಪ್ರಯೋಗದಲ್ಲಾಗುವ ಸರಿ-ತಪ್ಪುಗಳ ವಿವೇಚನೆ, ಪದಗಳ ಹುಟ್ಟು ಬೆಳವಣಿಗೆ, ಹೊಸ ರೂಪಧಾರಣೆಗಳ ಇತಿಹಾಸ ಮತ್ತು ಶಬ್ದ ಪ್ರಯೋಗದ ಪರಿಷ್ಕೃತ ಚಿಂತನೆಯನ್ನು ಗುರಿಯಾಗಿ ಇಟ್ಟುಕೊಂಡು ರಚಿಸಲಾಗಿರುವ ಕೃತಿ 'ಸರಿಗನ್ನಡಂ ಗೆಲ್ಗೆ'. ಕನ್ನಡದ ಬೆರಗನ್ನು ಕುರಿತ 600 ಸ್ವಾರಸ್ಯಕರ ಕಿರು ಟಿಪ್ಪಣಿಗಳನ್ನು ಈ ಪುಸ್ತಕ ಒಳಗೊಂಡಿದೆ. ಪಾ.ವೆಂ. ಆಚಾರ್ಯ, ಜಿ. ವೆಂಕಟಸುಬ್ಬಯ್ಯ, ಚಿ.ಮೂ. ಮೊದಲಾದ ಭಾಷಾಜಿಜ್ಞಾಸುಗಳ ಪೂರ್ವ ಪರಂಪರೆಯನ್ನು ಪ್ರಸ್ತುತ ಕೃತಿ ಅಧಿಕೃತವಾಗಿ ಮುಂದುವರೆಸುತ್ತಿದೆ. ಆದರೆ ಈ ಕೃತಿ ಪೂರ್ವಿಕರ ಈ ಬಗೆಯ ಕೃತಿಗಳಿಗಿಂತ ಭಿನ್ನವಾಗಿರುವುದು ಇದರ ರಚನಾ ಕ್ರಮದಲ್ಲಿ. ನುಡಿ ಜಾಣ್ಮೆ, ತಿಳಿ ತಮಾಷೆ, ಲಾಲಿತ್ಯಗಳಿಂದ ಈ ಪುಸ್ತಕ ಕೇವಲ ಪಾಂಡಿತ್ಯದ ಫಲವೆನ್ನಿಸದೆ ಅಸಾಮಾನ್ಯವಾದ ಓದಿಸಿಕೊಳ್ಳುವ ಗುಣವನ್ನು ಪಡೆದುಕೊಂಡಿದೆ.

ಕೆಲವು ಉದಾಹರಣೆಗಳನ್ನು ಗಮನಿಸಿ: 1. ಮಾಣಿ ಅಂದರೆ ಹೋಟೆಲ್ ಸರ್ವರ್. ಆದರೆ ಮಂಗಳೂರು ಕಡೆ ಮನೆಯ ಗಂಡು ಹುಡುಗರನ್ನು ಮಾಣಿ ಅಂತ ಕರೆಯುತ್ತಾರೆ. ಅದು ಬಂದಿರೋದು ಸಂಸ್ಕೃತದ ಮಾಣವ ಅನ್ನುವ ಪದದಿಂದ. ಅದರ ಅರ್ಥ ಹುಡುಗ ಅಂತ ಅಷ್ಟೆ. 2. ಕನ್ನಡದ ಬಗ್ಗೆ ಯಾವಾಗಲೂ ಮಾತಾಡುತ್ತೇವೆ... ಕನ್ನಡಕದಲ್ಲಿ ಕನ್ನಡ ಯಾಕೆ ಬಂತು? .... ಅದು ಕನ್ನಡಕ ಅಲ್ಲ; ಕಣ್ಣಡಕ! ದೃಷ್ಟಿಯನ್ನು ನಿಚ್ಚಳಗೊಳಿಸಿಕೊಳ್ಳಲು ಕಣ್ಣುಗಳಿಗೆ ಅಳವಡಿಸೊ ಸಾಧನ. ಕಣ್ಣಡಕ ಇದ್ದದ್ದು ಕನ್ನಡಕ ಆಗಿದೆ. 3. ಸಂಸ್ಕೃತದಲ್ಲಿ ವಹ್ ಎಂದರೆ ಹೊತ್ತುಕೊಂಡು ಹೋಗುವುದು. ನಮ್ಮನ್ನು ಹೊತ್ತುಕೊಂಡು ಹೋಗುವ ವಾಹನ ಬಂದದ್ದು ಅದರಿಂದಲೇ.... 4. ಬವಣೆ ಬಂದಿರೋದು ಸಂಸ್ಕೃತದ ಭ್ರಮಣೆ ಪದದಿಂದ. 5. ಮಿಡ್ ಟರ್ಮ್ ಅನ್ನುವುದನ್ನು ಮಧ್ಯಂತರ ಮಾಡಿಕೊಂಡಿದ್ದೇವೆ. ಆದರೆ ಇಲ್ಲೂ ಮಧ್ಯಾಂತರವೇ ಸರಿ. ವ್ಯಾಕರಣದ ಪ್ರಕಾರ ತಪ್ಪಾದರೂ ಮಧ್ಯಂತರ ಎನ್ನುವ ಪದ ಈಗ ನಿಘಂಟಿನಲ್ಲಿ ಇದೆ. ಬಳಕೆಯಿಂದಾಗಿ ಅದು ಒಪ್ಪಿತವಾಗಿ ಹೋಗಿದೆ.

ಆಧುನಿಕ ಭಾಷಾ ವಿಜ್ಞಾನಿಗಳು ಹೇಳುವುದು ಇದನ್ನೇ. ಭಾಷೆಯಲ್ಲಿ ಇದೇ ಸರಿ, ಇದು ತಪ್ಪು ಎನ್ನುವಂತಿಲ್ಲ. ಬಳಕೆಯೇ ಪದಪ್ರಯೋಗದ ಔಚಿತ್ಯವನ್ನು ನಿರ್ಧರಿಸುತ್ತದೆ. ಈ ಅಭಿಪ್ರಾಯ 'ಸರಿಗನ್ನಡಂ ಗೆಲ್ಗೆ' ಕೃತಿಕಾರರಿಗೂ ಮಾನ್ಯವೇ. ಆದರೂ ನಮ್ಮ ಭಾಷೆಯ ಅಧಿಕೃತತೆಯ ಬಗ್ಗೆ ಅರಿವನ್ನು ವೃದ್ಧಿಸಿಕೊಳ್ಳುವುದು ಉಚಿತ ಎನ್ನುವ ನಂಬಿಕೆಯೊಂದಿಗೆ ಅಪಾರ ಈ ಕೃತಿಯನ್ನು ರಚಿಸಿದ್ದಾರೆ. ಪದಗಳ ಮೂಲವನ್ನು ಶೋಧಿಸುವಲ್ಲಿ ತಮ್ಮ ವ್ಯುತ್ಪತ್ತಿಯನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಶಬ್ದಾರ್ಥ, ಶಬ್ದ ಮೂಲ, ಶಬ್ದ ಸ್ವರೂಪ ನಿರ್ಣಯದಲ್ಲಿ ವಿಶೇಷವಾದ ಎಚ್ಚರವನ್ನು ತೋರಿಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಕೃತಿಯು ಪಾಂಡಿತ್ಯ ಜಡವಾಗದಂತೆ, ಸುಲಲಿತವಾದ ತಮಾಷೆಯ ಶೈಲಿಯನ್ನು ಉದ್ದಕ್ಕೂ ಬಳಸಿಕೊಂಡಿದ್ದಾರೆ. ಎಚ್.ಎಸ್. ಬಿಳಿಗಿರಿ ಅವರು ಕೇಶಿರಾಜನ ಕೃತಿಗೆ ಬರೆದ ವ್ಯಾಖ್ಯೆಯಲ್ಲಿ ಈ ಗುಣವನ್ನು ನಾನು ಕಂಡಿದ್ದೇನೆ. ಇಂಥ ನಿತ್ಯಾಭ್ಯಾಸದ ಕೃತಿಯನ್ನು ಬರೆದ ಅಪಾರ, ಅವರಿಗೆ ಕುಮ್ಮಕ್ಕು ನೀಡಿದ ಅವರ ಗೆಳೆಯರು, ಪರಿಶುದ್ಧವಾಗಿ ಪ್ರಕಟಿಸಿದ ಛಂದ ಪುಸ್ತಕದ ಪ್ರಕಾಶಕರು ಇವರನ್ನು ಎಷ್ಟು ಶ್ಲಾಘಿಸಿದರೂ ಕಮ್ಮಿಯೇ. ಮೈ ಮತ್ತು ಮನ ಕೊಡವಿಕೊಂಡು ಈ ಪುಸ್ತಕ ರಚಿಸಿರುವ ಅಪಾರ ಅವರಿಗೆ ಅಭಿನಂದನೆ ಹೇಳಲೇಬೇಕು.



ಸರಿಗನ್ನಡಂ ಗೆಲ್ಗೆ
ಲೇ: ಅಪಾರ
ಪ್ರ: ಛಂದ ಪುಸ್ತಕ, ಬೆಂಗಳೂರು
ಸಂ: 9844422782
ಪು: 322 ₹390

ಒಳನೋಟ

ಸಾಮಾಜಿಕ ಪಲ್ಲಟ ಹಿಡಿದಿಡುವ ಯತ್ನ

ಕಾಂತಾವರದಲ್ಲಿಯೇ ನೆಲೆಗೊಂಡು ಕನ್ನಡದ ಕೆಲಸವನ್ನು ಮಾಡುತ್ತಿರುವ ಹಿರಿಯ ಸಾಹಿತಿ ನಾ. ಮೊಗಸಾಲೆ ಅವರ ಹೊಸ ಕಾದಂಬರಿ 'ಭಾರತ ಕಥಾ'. ಕಥೆ, ಕಾದಂಬರಿ, ಕವನ, ಲೇಖನಸಂಗ್ರಹ, ರಾಜಕೀಯ ವಿಶ್ಲೇಷಣೆ, ಸಂಘಟನೆ ಹೀಗೆ ಹಲವು ಕವಲುಗಳಲ್ಲಿ ತಮ್ಮ ಸೃಜನಶೀಲತೆಯನ್ನು ವಿನಿಯೋಗಿಸುತ್ತಿರುವ ಮೊಗಸಾಲೆ ಅವರ ರಾಜಕೀಯ ಪ್ರಜ್ಞೆ 'ಭಾರತ ಕಥಾ'ದಲ್ಲಿ ಬಹುಸ್ಪಷ್ಟವಾಗಿ, ಅಷ್ಟೇ ಸಾಂದ್ರವಾಗಿ ಹರಳುಗಟ್ಟಿದೆ.

ಸೀತಾಪುರವೆಂಬ ಊರಿನಲ್ಲಿ ನಡೆಯುವ ಸಮಾಜೋ-ರಾಜಕೀಯ ಪಲ್ಲಟಗಳು, ಅದರ ಹಿಂದಿನ ಕಾರಣಗಳು, ಅದರ ಪರಿಣಾಮದಲ್ಲಿ ಜನಸಮುದಾಯದ ಗ್ರಹಿಕೆ, ದೃಷ್ಟಿಕೋನಗಳಲ್ಲಿ ಉಂಟಾಗುವ ಪರಿಣಾಮಗಳೇ ಈ ಕಾದಂಬರಿಯ ಕೇಂದ್ರ.

ಊರಿನ ಗಣ್ಯ ದುಗ್ಗಪ್ಪ ಹೆಗ್ಡೆ, ತಮ್ಮ ಪೂರ್ವಜರು ಕಟ್ಟಿರುವ ಶಾಲೆಯನ್ನು ಅಧಿಕಾರಕೇಂದ್ರದ ಅಡಿಯಲ್ಲಿಯೇ ಇಟ್ಟುಕೊಳ್ಳಲು ಹವಣಿಸುವ ತಿಮ್ಮಪ್ಪಯ್ಯ ಮೇಷ್ಟ್ರು, ಬಂಡೆದ್ದು ಬೆಳೆಯುವ, ಆ ಬೆಳವಣಿಗೆಯಲ್ಲಿಯೇ ತನ್ನೊಳಗಿನ ಇವಿಲ್ ಅನ್ನೂ ಬೆಳೆಯಿಸುತ್ತ ಹೋಗುವ ಭಾಸ್ಕರ ಹೆಗ್ಡೆ, ಊರಿನ ಕ್ಷೇಮವನ್ನೇ ಬಯಸುವ, ಅದಕ್ಕಾಗಿ ಶ್ರಮಿಸುವ ಕುಪ್ಪಣ್ಣಯ್ಯ, ಎಲ್ಲಿಂದಲೋ ಬಂದು ಇಲ್ಲಿ ಬೇರೂರುತ್ತಿರುವ ಡಾಕ್ಟರ್ ಎಸ್.ಎನ್. ಭಟ್ಟ ಇವರ ಮೂಲಕವೇ ಊರಗಾಥೆ ಬೆಳೆಯುತ್ತ ಹೋಗುತ್ತದೆ.

ಸೀತಾಪುರದ ಶಾಲೆಯಲ್ಲಿ ಬ್ರಾಹ್ಮಣರದ್ದೇ ಪ್ರಾಬಲ್ಯವಿದೆ. ಅದಕ್ಕೆ ನಮ್ಮ ಜಾತಿಯ ಶಿಕ್ಷಕರನ್ನೂ ನೇಮಿಸಬೇಕು ಎಂಬ ಭಾಸ್ಕರ ಹೆಗ್ಡೆಯ ಆಗ್ರಹದೊಂದಿಗೆ ಊರಿನ ರಾಜಕೀಯದ ಕಥನ ಆರಂಭಗೊಳ್ಳುತ್ತದೆ. ನಂತರ ರಾಜಕೀಯವಾಗಿ ಬೆಳೆಯುತ್ತ, ಬೆಳೆಯಲು ಅಡ್ಡದಾರಿ ಹಿಡಿಯಲೂ ಹಿಂಜರಿಯದ, ಎದುರಾಳಿಗಳನ್ನು ಮಟ್ಟಹಾಕಲು ಹಿಂಜರಿಯದೇ ನುಗ್ಗುವ ಭಾಸ್ಕರ ಹೆಗ್ಡೆ ಮತ್ತು ಕುಪ್ಪಣ್ಣಯ್ಯ ಅವರ ನಡುವಿನ ಸಂಘರ್ಷ ಒಂದು ಹಂತದಲ್ಲಿ ಒಳಿತು-ಕೆಡುಕಿನ ನಡುವಿನ ಸಂಘರ್ಷವಾಗಿಯೂ ಕಾಣಿಸುತ್ತದೆ. ಆದರೆ ಸೂಕ್ಷ್ಮವಾಗಿ ಗಮನಿಸಿದರೆ, ಈ ಭಾಸ್ಕರನಲ್ಲಿಯೂ ಒಳಿತಿನ ಎಳೆ ಇಲ್ಲದಿಲ್ಲ; ಕುಪ್ಪಣ್ಣಯ್ಯನವರಲ್ಲಿಯೂ ಸಣ್ಣತನಗಳು ತಪ್ಪಿಸಿಕೊಂಡಿಲ್ಲ. ಈ ಕಾದಂಬರಿಯ ಪಾತ್ರಗಳು ಮನುಷ್ಯನೊಳಗೇ ಇರುವ ಒಳಿತು ಕೆಡುಕಿನ ಮಿಶ್ರಣವನ್ನು ಕಾಣಿಸುತ್ತ, ಅಂಥದ್ದೇ ಮಿಶ್ರಣದಲ್ಲಿ ನಮ್ಮ ಸಾಮಾಜಿಕ, ರಾಜಕೀಯ ವ್ಯವಸ್ಥೆಯೂ ಕಟ್ಟಿಕೊಂಡಿದ್ದನ್ನು ನಮಗೆ ಕಾಣಿಸಲು ಪ್ರಯತ್ನಿಸುವಂತೆ ತೋರುತ್ತದೆ. ಸತ್ಯದ ಪರವಾದ ಸಾತ್ವಿಕ ಹೋರಾಟಕ್ಕೆ ಗೆಲುವು-ಸೋಲಿನ ಹಂಗಿಲ್ಲ. ಮತ್ತು ಆ ಹೋರಾಟಕ್ಕೆ ನಿಂತವನು ತಾನು ನಿಂತ ನೆಲವನ್ನು ಪರಕೀಯ ಎಂದು ಕಾಣುವುದಿಲ್ಲ. ಪಂಚಾಯಿತಿ ಎಲೆಕ್ಷನ್‌ನಲ್ಲಿ ಅಧಿಕಾರ ಪಡೆಯುವ ಆರ್ಭಟದ ನಡುವೆಯೇ, ಕುಪ್ಪಣ್ಣಯ್ಯನವರು ರೇಷನ್ ವಿತರಿಸುವ ಅಧಿಕಾರನ್ನು ಅವನಿಂದ ತಪ್ಪಿಸುವ ಎಳೆಯೂ ಇದೆ. ಕಾದಂಬರಿಯ ಅಂತ್ಯವೂ ಅಷ್ಟೇ ಆಶಾದಾಯಕವಾಗಿದೆ. ಕುಪ್ಪಣ್ಣಯ್ಯ ಅವರ ಮೊಮ್ಮಗ, 'ನಾನು ಇಲ್ಲೇ ಇರುವುದು, ಈ ಅಜ್ಜನ ಜೊತೆ. ನೀವು ಬೇಕಾದರೆ ನಾಳೆ ಬೆಂಗಳೂರಿಗೆ ಹೋಗಿ ನಾನು ಬರುವುದಿಲ್ಲ' ಎನ್ನುತ್ತಾನೆ. 'ಬೆಂಗಳೂರಿಗೆ ಬನ್ನಿ' ಎಂಬ ಮಗನ ಆಹ್ವಾನವನ್ನು ಕುಪ್ಪಣ್ಣಯ್ಯ ಅವರು ನಯವಾಗಿಯೇ ತಿರಸ್ಕರಿಸುತ್ತಾರೆ. ಇದೊಂದು ಆಶಾವಾದದ ಅಂತ್ಯವಾಗಿದೆ.



ಭಾರತ ಕಥಾ
ಲೇ: ಡಾ. ನಾ. ಮೊಗಸಾಲೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಸಂ: 94481 10034
ಪು: 240 ₹260

ಪರಿಚಯ

ಹಿರಿಯರ ಆಶ್ರಯ ತಾಣದಲ್ಲಿರುವ ಈಜುಕೊಳ

ಸಂಜೆ ಬದುಕಿನವರಿಗೆ...

10ನೇ ಪುಟದಿಂದ...

ಇಂಥ ಸೀನಿಯರ್ ಲಿವಿಂಗ್ ಆಯ್ದುಕೊಂಡವರು ದಾವಣಗೆರೆ ಮೂಲದವರು ಹಿರಿಯ ದಂಪತಿ ರಾಜಾರಾಮ್ ಹಾಗೂ ಲತಾ (ಹೆಸರು ಬದಲಿಸಲಾಗಿದೆ). ಇತ್ತೀಚೆಗೆ ಲತಾ ಅವರ ಮೆದುಳಿನಲ್ಲಿ ರಕ್ತ ಹೆಪ್ಪುಗಟ್ಟಿ ಆಸ್ಪತ್ರೆಗೆ ದಾಖಲಾಗಿದ್ದರು. ಬೆಂಗಳೂರಿನಲ್ಲಿ ನೆಲೆಸಿರುವ ಇಬ್ಬರು ಗಂಡುಮಕ್ಕಳು ಬಂದು, ಅವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಲು ನಿರ್ಧರಿಸಿದರು. ಆದರೆ ಸ್ವತಂತ್ರ ಬದುಕು ನಡೆಸಬೇಕು ಎಂದು ಬಯಸಿದ ಈ ಹಿರಿಯರು, ಸೀನಿಯರ್ ಲಿವಿಂಗ್ ಆಯ್ಕೆ ಮಾಡಿಕೊಂಡರು. 'ಅಲ್ಲಿದ್ದ ಮನೆ ಮಾರಿ, ಬಂದ ಹಣದಲ್ಲಿ ಇದನ್ನು ಖರೀದಿಸಿದ್ದೇವೆ. ಉಳಿದದ್ದನ್ನು ನಿರ್ವಹಣೆಗೆ ಬಳಸಿಕೊಳ್ಳುತ್ತಿದ್ದೇವೆ. ಅಲ್ಲಿ ಮಕ್ಕಳೂ ಅವರ ಜೀವನ ನಡೆಸುತ್ತಿದ್ದಾರೆ. ಇಲ್ಲಿ ನಮಗೂ ಸಮಯ ಕಳೆಯುತ್ತಿದೆ. ಆಗಾಗ ಅವರು ಇಲ್ಲಿಗೆ, ನಾವು ಅಲ್ಲಿಗೆ ಹೋಗಿ ಬರುತ್ತಿರುತ್ತೇವೆ' ಎಂದು ದಂಪತಿ ಖುಷಿ ಹಂಚಿಕೊಂಡರು.

ಅಗತ್ಯಕ್ಕೆ ತಕ್ಕಂತೆ ವಿಂಗಡಣೆ

ಇಂಥ ಸಮುಚ್ಚಯಗಳಲ್ಲಿ ವಾಸಿಸುವವರ ದೈಹಿಕ ಸಾಮರ್ಥ್ಯ ಹಾಗೂ ಆರೋಗ್ಯಕ್ಕೆ ತಕ್ಕಂತೆ ಅಪಾರ್ಟ್‌ಮೆಂಟ್‌ಗಳನ್ನು ವಿಂಗಡಿಸಿರುತ್ತಾರೆ.

ಸ್ವತಂತ್ರವಾಗಿ ಬದುಕು ನಡೆಸಬಲ್ಲ ಹಿರಿಯರ ವಿಭಾಗದಲ್ಲಿ ಸಹಾಯಕರ ಅಗತ್ಯ ಇರುವುದಿಲ್ಲ. ಶಸ್ತ್ರಚಿಕಿತ್ಸೆಗೆ ಒಳಗಾಗಿ ಅಲ್ಪ ದಿನಗಳ ವಿಶ್ರಾಂತಿ ಅಗತ್ಯ ಇರುವವರು ನೆರವನ್ನು ಪಡೆಯಬಹುದು. ಇಲ್ಲಿ ಆಗಾಗ ಶುಶ್ರೂಷಕರು ಬಂದು ಆರೈಕೆ ಮಾಡುತ್ತಾರೆ. ನಿರಂತರವಾಗಿ ವೈದ್ಯಕೀಯ ನೆರವು ಅಗತ್ಯ ಇರುವವರಿಗೆ ದಿನದ ಬಹುಪಾಲು ಶುಶ್ರೂಷಕರು, ಸಹಾಯಕರು ಇದ್ದೇ ಇರುತ್ತಾರೆ. ವೈದ್ಯರಿಂದ ತಪಾಸಣೆಯೂ ನಡೆಯುತ್ತಿರುತ್ತದೆ. ಈ ಕೊನೆಯ ವಿಭಾಗಕ್ಕೆ ಒಂದು ಇಡೀ ಯೋಜನೆಯ ಶೇ 10ರಷ್ಟು ಮಾತ್ರ ಮೀಸಲಿರುತ್ತದೆ.

ಕೆಲವೊಮ್ಮೆ ದೈಹಿಕವಾಗಿ ಸಮರ್ಥರಾಗಿದ್ದರೂ, ಮರೆಗುಳಿತನ ಅಥವಾ ಗೀಳು ರೋಗದ ಸಮಸ್ಯೆಯಿಂದ ಕೆಲವರು ಬಳಲುತ್ತಿರುತ್ತಾರೆ. ಇಂಥವರನ್ನು ಈ ಮೊದಲು ನಿಮ್ಹಾನ್ಸ್‌ಗೆ ದಾಖಲಿಸಲಾಗುತ್ತಿತ್ತು. ಆದರೆ ಈಗ ಇವರಿಗಾಗಿಯೂ 'ವಿಲಾಸಿ ಸೀನಿಯರ್ ಹೋಂಗಳು' ತಲೆಎತ್ತಿವೆ.

ಹುಟ್ಟು ಹೇಗಾದರೂ ಇರಲಿ, ಆದರೆ ಜೀವನದ ಕೊನೆಯ ಹಂತದವರೆಗೂ ಬದುಕು ಘನತೆಯಿಂದಿರಬೇಕು ಎಂದೇ ಪ್ರತಿಯೊಬ್ಬರೂ ಬಯಸುತ್ತಾರೆ. ಅದಕ್ಕೆ ಇಂತಹ ವಸತಿ ಸಮುಚ್ಚಯಗಳು ಆಶಾದೀಪಗಳಂತಿವೆ.

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ

ಮೂಲ: ಉಣ್ಣಿ ಆರ್
ಕನ್ನಡಕ್ಕೆ: ಸುನೈಫ
ಅವರ
ಬಾದುಷಾ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ಮಮತಾ ಅರಸೀಕೆರೆ
ಅವರ
ಕಾತರಿಕೆಯೊಂದು ಹಂಬಲವಾಗಿ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ನಲ್ಮಗು

ನಲ್ಮಗು (ನಾ). ಸುಂದರವಾದ ಮಗು; ಅಂದವಾದ ಶಿಶು.
ನಲ್ಮಕ್ಕಳು (ಬಹುವಚನ)

(ನಲ್ + ಮಗು)

ಕುವೆಂಪು ಅವರು ಕೋಸಲ ದೇಶದ ಚಕ್ರವರ್ತಿ ದಶರಥನ ಸರಯೂ ನದಿ ದಡದಲ್ಲಿರುವ ಅಯೋಧ್ಯೆಯ ಸಮೃದ್ಧಿ, ಸೊಬಗು ರವಿವಂಶದ ಅರಸರಿಗೆ ಕೀರ್ತಿಯ ಕಿರೀಟವಿಡುವಂತಿತ್ತು ಎಂದು ವರ್ಣಿಸಿದ್ದಾರೆ. ಅದು ಹೆದ್ದಾರಿಯ ಸಾಲುಮರಗಳಿಂದ, ನಿತ್ಯ ಮಳೆಗರೆವ ಹೂವಿನ ಉದುರುಗಳಿಂದ, ಸುಂದರ ಸುಸಂಸ್ಕೃತ ಲತಾಂಗಿಯರ ರಂಗವಲ್ಲಿಯ ಲಲಿತ ಕಲೆಯಿಂದ ಶೋಭಿಸುತ್ತಿತ್ತು. ಅದು ಹಕ್ಕಿಗಳನ್ನು ಅಣಕಿಸುವ ಕೊರಳ ಇಂಚರದ ನಲ್ಮಕ್ಕಳಿಂದ ಸ್ವರ್ಗದ ಊರನ್ನೆ ಸೂರೆಗೊಂಡಂತಿತ್ತು ಎಂದು ಚಿತ್ರಿಸಿದ್ದಾರೆ. ಅವರು ಹೊಸದಾಗಿ ಹೆಣೆದು ಪ್ರಯೋಗಿಸಿರುವ ಪದ 'ನಲ್ಮಕ್ಕಳು' ಕನ್ನಡದ ಒಲ್ಮೆ. ಅದು ಮಕ್ಕಳ ಆನಂದ ಪ್ರೀತಿ ಸೌಂದರ್ಯದ ಮನೋಹರ ಕಾವ್ಯಾಭಿವ್ಯಕ್ತಿ.

ಕೊರಳಿಂಚರದಿ
ಪಕ್ಕಿಗಳನಣಕಿಸುವ ನಲ್ಮಕ್ಕಳಿಂದಮಾ
ಸಗ್ಗದೂರನೆ ಸೂರೆಗೊಂಡಂತೆ ಮೆರೆದುದಯ್
ನಿಚ್ಚಿ ಸೊಗದಾವಾಸದೋಲ್, ಚಕ್ರವರ್ತಿಯದಕ್ಕೆ
ದಶರಥಂ.

ಗಿಳಿವಿಂಡಕ್ಷತೆ

ಕುವೆಂಪು ಅವರು ಭಾದ್ರಪದದಲ್ಲಿ ಗೌರಿ ಗಣೇಶರು 'ಶ್ರಾವಣ ನೀರದ ನೀಲ ರಥದಲಿ' ಆಗಮಿಸುವ ಸಂಭ್ರಮವನ್ನು ಪ್ರಕೃತಿಯ ಪ್ರತಿಮೆಗಳಿಂದ ಅನನ್ಯವಾಗಿ ವರ್ಣಿಸಿದ್ದಾರೆ. ಬನ ದೇವಿಯು ಆ ಮುಗಿಲಿನ ತೇರಿಗೆ ಬೆಳ್ಳಕ್ಕಿಯ ಸಾಲಿನ ಹೂ ಮಾಲೆಯ ತೋರಣ ಕಟ್ಟಿದ್ದಾಳೆ. ಕೊಕ್ಕಿನ ಕುಂಕುಮ ಬೆರೆಸಿದ ಹಸುರಿನ ಗಿಳಿವಿಂಡಿನ ಅಕ್ಷತೆ ಎರಚಿದ್ದಾಳೆ ಎಂದು ನವನವೀನ ಪ್ರತಿಮೆಗಳಲ್ಲಿ ಚಿತ್ರಿಸಿದ್ದಾರೆ. ಅವರ ಪ್ರತಿಭಾ ದೃಷ್ಟಿಗೆ ಗಿಳಿಗಳ ಗುಂಪುಗಳ ಇಳಿದಾಟ 'ಗಿಳಿವಿಂಡಕ್ಷತೆ'ಯಾಗಿ ಗೋಚರಿಸಿದೆ.

'ಕೊಕ್ಕಿನ ಕುಂಕುಮ ವೆರಸಿದ ಪಸುರಿನ
ಗಿಳಿವಿಂಡಕ್ಷತೆ;
ತಳಿವಳು ಬನದೇವಿ,
ಹೊಸ ಅತಿಥಿಯನೋವಿ.'
(ಗಣೇಶ ಗಾಥೆ- ಅಗ್ನಿಹಂಸ)

ಮೊದಲ ಓದು

ಮಕ್ಕಳನ್ನು ಸೆಳೆಯುವ ಮೀನಿನ ಬುಟ್ಟಿ

ಮಕ್ಕಳ ಸಾಹಿತ್ಯ ಲೋಕ ಈಗ ಸಮೃದ್ಧವಾಗುತ್ತಿದೆ. ಸಾಲು ಸಾಲು ಹೊತ್ತಿಗೆಗಳು ಈ ಲೋಕಕ್ಕೆ ಸೇರ್ಪಡೆಯಾಗುತ್ತಿದ್ದು, ಮಕ್ಕಳನ್ನು ಆಕರ್ಷಿಸುವಂತಹ ವಿಷಯ, ಚಿತ್ರಕಲೆಯುಳ್ಳ ಕಥಾ ಪುಸ್ತಕಗಳ ಹೊಸ ಪ್ರಪಂಚವೇ ಸೃಷ್ಟಿಯಾಗಿದೆ. ಇದಕ್ಕೆ ಹೊಸ ಸೇರ್ಪಡೆ 'ಮೀನಿನ ಬುಟ್ಟಿ'.

ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವ ಕಿರಣ್ ಮಂಜುನಾಥ್, ಮಕ್ಕಳಿಗಾಗಿ ಮೀನಿನ ಪ್ರಪಂಚ ಪರಿಚಯಿಸುವ, ಒಡನಾಟದ ಸಂತೋಷವನ್ನು ಹರಡುವ ಪುಟ್ಟ ಕೃತಿ ಹೊರತಂದಿದ್ದಾರೆ. ಇಲ್ಲಿ ಚಿತ್ರಕಲೆಗೆ ಆದ್ಯತೆ. ಮಕ್ಕಳಿಗೆ ಅರ್ಥವಾಗುವಂತೆ ಪುಟ್ಟ ವಾಕ್ಯಗಳಲ್ಲಿ ಕಥೆ ಹೇಳಿದ್ದಾರೆ ಕಿರಣ್. ಚಿತ್ರಕಲೆಯ ಮೂಲಕ ಮಕ್ಕಳಿಗೆ ಕಥೆಯನ್ನು ಹೇಳಲು ಇಚ್ಛಿಸುವ ನಿಹಾರಿಕಾ ಶೆಣೈ ಅವರ ಚಿತ್ರಕಲೆಯ ಸೊಬಗನ್ನು ಇಲ್ಲಿ ಕಾಣಬಹುದು. 'ಮೀನಿನ ಬುಟ್ಟಿ'ಯನ್ನು ನೆಪವಾಗಿಟ್ಟುಕೊಂಡು ಒಡನಾಟದ ಖುಷಿಯನ್ನು ಕಿರಣ್ ಇಲ್ಲಿ ಹರಡಿದ್ದಾರೆ. ಆನ್‌ಲೈನ್‌ನಲ್ಲೇ ಮೀನು ಆರ್ಡರ್ ಮಾಡುವ ಈ ಸಂದರ್ಭದಲ್ಲಿ, ಆ ಕಾಲದಲ್ಲಿದ್ದ 'ಮೀನಮ್ಮ'ನಂತಹ ಹಲವು ಮಹಿಳೆಯರೊಂದಿಗೆ ಊರಿನ ಜನರಿಗಿದ್ದ ಒಡನಾಟವನ್ನು ಕಿರಣ್ ಇಲ್ಲಿ ಮೆಲುಕು ಹಾಕಿದ್ದಾರೆ. ಹಳ್ಳಿಗಳಲ್ಲಿ ಆಕೆಯೊಂದಿಗಿಷ್ಟು ಹರಟೆ, ವ್ಯಾಪಾರ ನಡೆಯುತ್ತಿದ್ದ ಘಟನೆಗಳು ಮಕ್ಕಳಿಗೆ ಕಥೆ ಓದುತ್ತಾ ನೆನಪಾಗಬಹುದು. ಮಕ್ಕಳಿಗೂ ಮೀನಿನ ಒಂದು ಹೊಸ ಪ್ರಪಂಚ ತೆರೆದಿಡಬಹುದು.

ಮೀನಿನ ಬುಟ್ಟಿ
ಕಥೆ: ಕಿರಣ್ ಮಂಜುನಾಥ್
ಚಿತ್ರಗಳು: ನಿಹಾರಿಕ ಶೆಣೈ
ಪ್ರ: ಮೊಗ್ಗು–ಋತುಮಾನ ಪುಸ್ತಕ
ಸಂ:9480035877
ಪು: 32 ₹175

ಸಾವಯವ ಕೃಷಿಯ ವೈಜ್ಞಾನಿಕ ಕೈಪಿಡಿ

ಸಾವಯವ ಕೃಷಿ ಕುರಿತ ವೈಜ್ಞಾನಿಕ ಹಾಗೂ ಅನುಭವದ ಮಾಹಿತಿಯ ಕಣಜವಾಗಿರುವ ಕೃತಿ ಪ್ರೊ. ಎಸ್. ಎಸ್. ಕಟಗಿಹಳ್ಳಿ ಮಠ ಅವರ 'ಸಾವಯವ ಕೃಷಿ ಒಂದು ಅಧ್ಯಯನ'. ಕೃಷಿ ವಿಜ್ಞಾನಿ, ಕೀಟಶಾಸ್ತ್ರಜ್ಞರು, ಸಸ್ಯ ವಿಜ್ಞಾನಿಯೂ ಆಗಿದ್ದ ಲೇಖಕರು, ರೈತರಾಗಿ ಹಾಗೂ ವಿಜ್ಞಾನಿಯಾಗಿಯೂ ಸಾವಯವ ಕೃಷಿಯನ್ನು ಗಮನಿಸಿ, ಮಾಹಿತಿಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಕೃಷಿ ಕುಟುಂಬದಿಂದ ಬಂದ ಶತಾಯುಷಿ ಪ್ರೊ.ಎಸ್.ಎಸ್. ಕಟಗಿಹಳ್ಳಿಮಠರು, ತಮ್ಮ ಕುಟುಂಬದವರು ಅನುಸರಿಸುತ್ತಿದ್ದ ಸಾಯವ ಕೃಷಿ ಪದ್ಧತಿಯ ಮಾಹಿತಿಯನ್ನು ವಿವರಿಸುತ್ತಾ, ಆ ಪದ್ಧತಿಯ ಮೇಲೆ ವಿಜ್ಞಾನದ ಬೆಳಕು ಚೆಲ್ಲಿದ್ದಾರೆ.

ಕೃತಿಯಲ್ಲಿ ಸಾವಯವ ಕೃಷಿಯ ಪೀಠಿಕೆಯಿಂದ ಆರಂಭವಾಗಿ, ಮಣ್ಣಿನ ಉತ್ಪತ್ತಿ, ಫಲವತ್ತತೆ, ಸಸ್ಯ ಪೋಷಕಾಂಶಗಳು, ಸಾವಯವ ಗೊಬ್ಬರಗಳು, ಜಲ ಸರಂಕ್ಷಣೆ ಮತ್ತು ಸಾವಯವ ಕೃಷಿಯ ನಡುವಿನ ಸಂಬಂಧ, ಬೆಳಕು–ಗಾಳಿ ಹಾಗೂ ಕೃಷಿ ಸಂಬಂಧಗಳು, ಬೆಳೆಗಳ ಯೋಜನಾ ಪದ್ಧತಿ, ಅರಣ್ಯ ಕೃಷಿ ಮತ್ತು ಪರಿಸರ ಸಂರಕ್ಷಣೆ, ಬೆಳೆ ಸಂರಕ್ಷಣೆ ವಿಧಾನಗಳು.. ಹೀಗೆ ಹನ್ನೊಂದು ಅಧ್ಯಾಯಗಳಲ್ಲಿ ಮಾಹಿತಿಯನ್ನು ವಿಂಗಡಿಸಿದ್ದಾರೆ.

ಮಾಹಿತಿಗೆ ಪೂರಕವಾಗಿ ಕೋಷ್ಟಕಗಳಿವೆ. ಕೃಷಿ ವಲಯಗಳ ವಿವರಣೆ, ಕೆರೆ–ಕಟ್ಟೆಗಳ ಇತಿಹಾಸದ ಮಾಹಿತಿ, ಮೇವಿನ ಬೆಳೆ, ಔಷಧೀಯ ಸಸ್ಯಗಳು.. ಹೀಗೆ ಸಾವಯವ ಕೃಷಿಗೆ ಪೂರಕವಾಗಿ ಅಗತ್ಯವಿರುವ ಹಲವು ಮಾಹಿತಿಗಳು ಈ ಕೃತಿಯಲ್ಲಿವೆ. ಗ್ರಾಮೀಣ ಭಾಗದ ಕೃಷಿ ವಿಸ್ತರಣಾ ಕಾರ್ಯಕರ್ತರಿಗೆ ಆಕರ ಗ್ರಂಥವಾಗಿ, ರೈತಸಮುದಾಯಕ್ಕೆ ಮಾರ್ಗದರ್ಶಕ ಕೈಪಿಡಿಯಾಗುವ ಕೃತಿ ಇದು.

ಸಾವಯವ ಕೃಷಿ ಒಂದು ಅಧ್ಯಯನ
ಲೇ: ಪ್ರೊ.ಎಸ್. ಎಸ್. ಕಟಗಿಹಳ್ಳಿಮಠ
ಪ್ರ: ಭಾರತೀಯ ವಿದ್ಯಾಭವನ
ಸಂ: 080–22267303
ಪು: 384 ₹300

ಅಮೀರರ ಸಂತೆಯಲ್ಲಿ 6 ದಿನ

ದುಬೈ ಪ್ರವಾಸಕ್ಕೆ ಬಹುಸಂಖ್ಯಾತರು ಹಾಕುವ ಚೌಕಟ್ಟೇ ಬೇರೆ. ಬರಹಗಾರರೊಬ್ಬರು ತಮ್ಮ ಆರು ದಿನಗಳ ಅಲ್ಲಿನ ಪ್ರವಾಸದ ಅನುಭವಗಳನ್ನು ಲಹರಿಯಾಗಿ ಇಲ್ಲಿ ಕಟ್ಟಿದ್ದಾರೆ.

ಪ್ರವಾಸ

ಈರಪ್ಪ ಎಂ. ಕಂಬಳಿ

'ಝುಮ್ಮಾ ಗಿರಾರೇ ಬರೇಲಿ ಕೆ ಬಾಜಾರ್ ಮೇ ಹಾಯ್, ಹಮ್ ದೋನೋಂ ಕಿ ತಕರಾರ್ ಮೇ'

ಝುಮ್ಮಾ ಹೋಗಲಿ, ನಮಗೆ ಗೊತ್ತಾಗದ ಹಾಗೇ, ಜಾಗತೀಕರಣದ ಮಾರುಕಟ್ಟೆಯಲ್ಲಿ ಹರಾಜಿಗೆ ಬಿದ್ದ ಸರಕುಗಳಂತೆ ನಮಗೆ ನಾವೇ ಕಳೆದುಕೊಳ್ಳುತ್ತಿರುವ ಅನುಭವ. ಇತ್ತೀಚೆಗೆ ಶಿವಶಂಕರ ಎಂಬೊ ನನ್ನ 'ಪರಮಾಪ್ತ' ದುಬೈಗೆ ಬರ್ತೀರೇನ್ರೀ ಅಂದಿದ್ದೇ ತಡ, ದಿಮ್ಮಿ ರಂಗನಂತೆ ಹೊರಟು ನಿಂತಿದ್ದೆ. ವಿಪರೀತ ಕಾಡುತ್ತಿರುವ, ನನ್ನ ಅಪ್ಪನ ಕಾಲದ ಆ ಸಿನಿಮಾ ಹಾಡಿನಿಂದಲೇ ಈ ಬರಹ ಆರಂಭಿಸಿದ್ದೇನೆ. ಎಷ್ಟೇ ಆದರೂ ಅದು ಕೂಡ ಕಾಡುವ ಗುಣವಿರುವ, ಎಲ್ಲ ಕಾಲಕ್ಕೂ ಸಲ್ಲುವ 'ಹಳೆಯ ಒಡವೆ' ಬಲ್ಲಿರಾ.

ಅಂದಹಾಗೆ, ತೆರಿಗೆ ಮುಕ್ತ ದೇಶವೆಂಬ ಕಾರಣಕ್ಕೆ ಚಿನ್ನದ ಗುಪ್ತ ಸಾಗಣೆಗಾಗಿ ದೇಹದ ಇಡಬಾರದ ಜಾಗಗಳಲ್ಲಿ ಇಟ್ಟುಕೊಂಡು ಬಂದು ಸ್ವದೇಶದಲ್ಲಿ ಸಿಕ್ಕಿಬೀಳುವ ಲಫಂಗರ ಆ ನಗೆಪಾಟಲು! ದುಬೈಗೆ ಹೊರಟ ವಾಸನೆ ಬಡಿಯುತ್ತಲೇ 'ಯಲ್ಲೋ ಮೆಟಲ್ ಯಾ ಲಿಕ್ಕರ್ ಬಾಟಲ್' ಬೇಕೆಂದು ಅಲವತ್ತುಕೊಳ್ಳುವ ಬಂಧುಮಿತ್ರರ ಬಗ್ಗೆ ಯೋಚಿಸುತ್ತಾ ಜೋಂಪು ಹತ್ತಿ, ಕಣ್ಣು ಬಿಡುವ ಹೊತ್ತಿಗಾಗಲೇ ಬೆಳಕು ಹರಿದು ಎಮಿರೇಟ್ಸ್ ನೆಲದಲ್ಲಿಳಿದು ನಿಂತಿದ್ದೆವು, ಇದೆಂಥಾ ಸೋಜಿಗ.

ಬರಹಗಾರರಾದ ನಮಗೆ ಕುತೂಹಲದ ಕ್ಯಾಮೆರಾ ಕಣ್ಣೂ ಸಾಮಾನ್ಯ ಜನರ ನಡುವೆ ನಿಸ್ಸಂಕೋಚವಾಗಿ ಬೆರೆಯುವ ಅಲೆಮಾರಿತನವೂ ಇರಬೇಕು. ಹಾಗಿದ್ದಾಗಲೇ ಬದುಕಿನ ಪರಮ ಸತ್ಯಗಳನ್ನು, ಪ್ರಪಂಚದ ಕಣ್ಕಟ್ಟುಗಳನ್ನು ಹೆಕ್ಕಲು ಸುಲಭ ಸಾಧ್ಯವಾಗುವುದು.

ನಿಸರ್ಗವು ಮಹಾ ಉದಾರಿ. ಏನೂ ಬೆಳೆಯದ ಅರಬ್ ಮರಳುಗಾಡಿನಲ್ಲಿ ಸಾತ್ವಿಕ(ಟಾನಿಕ್) ಅನ್ನಬಹುದಾದ ಉತ್ತತ್ತಿ (ಖರ್ಜೂರ)ಮರಗಳು; ಭೂಮಿಯಾಳದಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಭಾರಿ ನಿಧಿ. ಇದೆಂಥಾ ಅಚ್ಚರಿ. 'It's beauty that testifies to the spirit of human possibility' - ಇದು ಖ್ಯಾತ ಪ್ರವಾಸೀ ಕೇಂದ್ರವಾದ ದುಬೈ ಬಗ್ಗೆ ಅರಬ್ ಸಂಯುಕ್ತ ಸಂಸ್ಥಾನಗಳ(ಯುಎಇ) ಘೋಷವಾಕ್ಯ. ಹೌದು, ಹುಲ್ಲು ಕಡ್ಡಿಯೂ ಬೆಳೆಯಲಾರದ ಮರುಭೂಮಿಯನ್ನು ಸುಂದರವಾದ ಹಸಿರು ಸ್ವರ್ಗವನ್ನಾಗಿಸಲು ಪಣ ತೊಟ್ಟವರಂತೆ ಅಲ್ಲಿನ ಮರಳುಗಾಡಿಗೆ ಹಸಿರುಡಿಸುವ ಇವರ ಛಲ ಮೆಚ್ಚಬೇಕು. ಇಲ್ಲಿನ 'ಮಿರ್‍ಯಾಕಲ್ ಗಾರ್ಡನ್' ಅದಕ್ಕೆ ನಿದರ್ಶನ.

ಮಾನವ ಸಾಮರ್ಥ್ಯದಲ್ಲಿ ಅಡಗಿದ ಆ ಮಹಾನ್ ಕರ್ತೃತ್ವ ಶಕ್ತಿಯನ್ನು ಸಾಬೀತುಪಡಿಸುವ ತೆರದಲ್ಲಿ ಭಾರಿ ಸೌಂದರ್ಯ ಮೆರೆಯುತ್ತಿರುವ 'ದುಬೈ - ಅಬುಧಾಬಿ' ಅವಳೀ ನಗರದ ಆ ಅಭಿವೃದ್ಧಿಯ ಹಿಂದಿರುವ ಸಾಹಸ, ಅದರಿಂದ ದಕ್ಕಿದ ಆ ಶ್ರೇಯಸ್ಸು ಅಲ್ಲಿನ ಮುಸ್ಲಿಂ ದೊರೆಗಳಿಗೆ ಸಲ್ಲಬೇಕು. ಅದರ ಸಾಕ್ಷಾತ್ ದರ್ಶನವಾಗಬೇಕೆಂದರೆ ಒಮ್ಮೆ ಆ ನಗರಗಳಿಗೆ ಖುದ್ದು ಭೇಟಿ ಕೊಡಬೇಕು. ಈ ಪ್ರತಿಷ್ಠಿತ ದೇಶದ ಹೆಸರು UAE (ಯುನೈಟೆಡ್ ಅರಬ್ ಎಮಿರೇಟ್ಸ್) ಅನ್ನುವಲ್ಲಿನ ಆ ಎಮಿರೇಟ್ಸ್ ಅಂದರೇನೆ ಕನ್ನಡದಲ್ಲಿ 'ಅಮೀರರು'- ಸಾಹುಕಾರರು ಎಂದು ಅರ್ಥ. ಅಂಥ ಅಮೀರರ ನೆಲದಲ್ಲಿ ಅಚಾನಕ್ಕಾಗಿ ಆರು ದಿನ ಕಳೆದ ಬಂದ ಅನುಭವ ಇಲ್ಲಿದೆ.

ಬಿಗಿ ಕಾನೂನು

ದುಬೈನಲ್ಲಿ ಕಾನೂನು ಬಿಗಿ ಇದ್ದದ್ದಕ್ಕೇನೋ, ಯಾರೂ ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡುವುದಿಲ್ಲ. ಅಚ್ಚುಕಟ್ಟಾದ ವಿಶಾಲ ರಸ್ತೆಗಳಲ್ಲಿ ಗಂಟೆಗೆ ಅರವತ್ತು ಕಿ.ಮೀ.ಗಿಂತ ಕಡಿಮೆಯಾಗಲಿ ನೂರು ಕಿ.ಮೀ.ಗೆ ಮೀರಿದಂತೆಯಾಗಲಿ ವಾಹನ ಚಲಾಯಿಸುವಂತಿಲ್ಲವಂತೆ. ಎಡಗಡೆ ಆಸನದ ವಾಹನ ಚಾಲನೆ. ಅಪಘಾತ ಕಡಿಮೆ. ಕಂಡೂ ಕಾಣದಂತೆ ಪೋಲೀಸ್ ವಾಹನ ಎಲ್ಲೋ ಒಂದು ಕಡೆ ನಿಂತಿರುತ್ತದೆ. ಮುಗಿಲು ಮುಟ್ಟುವಂತಿರುವ ಕಟ್ಟಡದ ಮೇಲಿಂದ ನೋಡಿದರೆ ಶಿಸ್ತುಬದ್ಧ ವೇಗದಲ್ಲಿ ಸಂಚರಿಸುತ್ತಿರುವ ವಾಹನಗಳು ಇರುವೆಯಂತೆ ಸಾಲುಗಟ್ಟಿದ ದೃಶ್ಯ ಮನಮೋಹಕ.

ರಸ್ತೆ ದಾಟುತ್ತಿದ್ದ ಪಾದಚಾರಿಗಳನ್ನು ಕಂಡರೆ ಅಷ್ಟು ದೂರದಲ್ಲಿರುವಾಗಲೇ ವಾಹನಗಳು ನಿಂತು ಪಾದಚಾರಿಗಳಿಗೆ ಗೌರವ ನೀಡಿದಂತೆ ದಾಟಲು ಸಹಕರಿಸುತ್ತವೆ. ನನಗಿದು ಮೆಚ್ಚಬೇಕಾದ ಅನುಭವ. ಹೊರಗಡೆ ಜನರ ಓಡಾಟ ಮೊದಲೇ ಅಪರೂಪ. ಅದಕ್ಕೆ ರಣಗುಡುವ ಬಿಸಿಲೂ ಒಂದು ಕಾರಣವಾಗಿರಬೇಕು. ಕಚೇರಿ, ಮನೆ, ಚಲಿಸುವ ಕಾರುಗಳಿರಲಿ ತಣ್ಣಗಿನ ವಾತಾಯನ ವ್ಯವಸ್ಥೆ ಇಲ್ಲಿ ಅನಿವಾರ್ಯ. ನಮ್ಮ ಬೆಂಗಳೂರಿನಲ್ಲಾದರೆ ಲಂಗು ಲಗಾಮಿಲ್ಲದ ವಾಹನಗಳು ಸಾವೇ ಬಳಿಸಾರಿ ಭುಜ ಸವರಿಕೊಂಡು ಹೋದಂತೆ ಧಾವಿಸುತ್ತವೆ.

ದುಬೈ ಫ್ರೇಮ್



ಮರುಭೂಮಿಯ ಹಡಗು ಎಂದೇ ಜನಜನಿತವಾದ ಒಂಟೆ

ಬೃಹತ್ ಇಮಾರತ್

ಅಬುಧಾಬಿ ನಗರದಲ್ಲಿನ 'ಶೇಖ್ ಝಾಯೆದ್ ಮಸೀದಿ' ಅತ್ಯದ್ಭುತ ಕಟ್ಟಡ ವಿನ್ಯಾಸದಿಂದಾಗಿ ವಿಶ್ವದ ಕಣ್ಣು ಕುಕ್ಕುವಂತಿದೆ. ಅರಬ್ ಸಂಯುಕ್ತ ಸಂಸ್ಥಾನದ ಸಂಸ್ಥಾಪಕ-ಪ್ರಥಮ ಅಧ್ಯಕ್ಷ ಶೇಖ್ ಝಾಯೆದ್ ಬಿನ್ ಸುಲ್ತಾನ್ ಅಲ್ ನಹ್ಯಾಂರ ಸ್ಮಾರಕವಾಗಿ ಕಟ್ಟಲಾಗಿರುವ ಈ ಬೃಹತ್ ಇಮಾರತ್ ಅನ್ನು ಭಾರತವೂ ಸೇರಿದಂತೆ ವಿಶ್ವದ ಅನೇಕ ದೇಶಗಳಿಂದ ಸರಕುಗಳನ್ನು ಆಮದು ಮಾಡಿಕೊಂಡು ನಿರ್ಮಿಸಲಾಗಿದೆಯಂತೆ. ಅಲ್ಲಿ ಮಾರಾಟಕ್ಕಿದ್ದ ಕೈಪಿಡಿಯಲ್ಲಿನ ಉಲ್ಲೇಖ- 'Here seemingly Indian influenced, from different angles and in different lights a variety of aesthetics can stand out.'

ಈ ಭವ್ಯ ಕಟ್ಟಡ ವಿನ್ಯಾಸದಲ್ಲಿ ವಿಶೇಷ ಪ್ರತಿಭೆಯಿರುವ ವಿಶ್ವ ವಿಖ್ಯಾತ ಎಂಜಿನಿಯರುಗಳನ್ನೆಲ್ಲ ಬಳಸಿಕೊಂಡು ಕಟ್ಟಲಾಗಿರುವ ನಾನಾ ಬಗೆಯ 'ಇಮಾರತ್' ಅಂದರೆ ಭವ್ಯವಾದ ಸುಂದರ ಕಟ್ಟಡ ಸಂಕೀರ್ಣವನ್ನು ಗಂಟೆಗಟ್ಟಲೆ ನಿಂತು ನೋಡುವುದೇ ಕಣ್ಣಿಗೆ ಹಬ್ಬ. ಒಂದು ಕಾಲದಲ್ಲಿ ಪ್ಯಾರಿಸ್‌ನ ಐಫೆಲ್ ಗೋಪುರವೇ ವಿಶ್ವದ ಆಕರ್ಷಣೆಯಾಗಿತ್ತು. ಈಗ ದುಬೈನ 2,717 ಅಡಿ ಎತ್ತರದಿಂದ ಆಕಾಶ ತಿವಿಯುವ ವಿಶ್ವದ ನಂಬರ್ ಒನ್ ಗೋಪುರ 'ಬುರ್ಜ್ ಖಲೀಫಾ' ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ದುಬೈನ 'ದಿ ಪಾಮ್ ಜುಮೇರಾಹ್' ಕಟ್ಟಡದ ಮೇಲಿಂದ ಒಂದು ಪಕ್ಷಿನೋಟ ಹರಿಸಿದರೆ ತಾಳೆ ಮರದ ಜಾತಿಗೆ ಸೇರಿದ ಖರ್ಜೂರ್ ಮರದ ವಿನ್ಯಾಸದಲ್ಲಿ ಸಮುದ್ರದಲ್ಲಿ ಕಟ್ಟಿದ ಬಡಾವಣೆ; ರಸ್ತೆಗಳಲ್ಲಿ ವೇಗವಾಗಿ ಇರುವೆಗಳಂತೆ ಶಿಸ್ತುಬದ್ಧವಾಗಿ ಸಂಚರಿಸುತ್ತಿರುವ ವಾಹನಗಳು. ವಾಹ್, ಕ್ಯಾ ಬಾತ್ ಹೈ. ಹಾಗೆಯೇ ಅಷ್ಟು ದೂರದಿಂದಲೇ ಕೈ ಮಾಡಿ ಕರೆಯುವ ವಿಶಿಷ್ಟ ವಿನ್ಯಾಸದ ಆಕರ್ಷಕ ಕಟ್ಟಡ 'ದುಬೈ ಫ್ರೇಮ್' ಕೂಡ ಮತ್ತೊಂದು ಅಚ್ಚರಿ.



ಬುರ್ಜ್ ಖಲೀಫಾದ ವಿಹಂಗಮ ನೋಟ

ಶೇಖ್ ಝಾಯೆದ್ ಮಸೀದಿ ಪ್ರವೇಶದಲ್ಲಿ ಮಾತ್ರ ವಿದೇಶೀ ಮಹಿಳಾ ಪ್ರವಾಸಿಗರಿಗೂ- ಅವರು ಯಾವುದೇ ಧರ್ಮಕ್ಕೆ ಸೇರಿರಲಿ, ತಲೆ ಮುಚ್ಚುವ 'ಡ್ರೆಸ್ ಕೋಡ್' ಅನುಸರಿಸಬೇಕೆನ್ನುವ ತಾಕೀತು. ಆದರೆ ಅದೇ ಅಬುಧಾಬಿಯ ಮರಳುಗಾಡಿನ ಹೋಟೆಲ್ ಮೇಜವಾನಿಯಲ್ಲಿ ಮತ್ತು ಹಡಗಿನ ಡಿನ್ನರ್‌ನಲ್ಲಿ ಊಟದ ಕೊನೆಗೆ ಪ್ರವಾಸಿಗರನ್ನು ತೃಪ್ತಿಪಡಿಸಲೆಂದೇ ಒಂದೆರಡು ಐಟಂ ಸಾಂಗ್ ಹಾಕಿ ಹೆಣ್ಣಿನ ಅರೆಬೆತ್ತಲೆ ನೃತ್ಯ ಪ್ರದರ್ಶನಕ್ಕೆ ಅವಕಾಶ ಇತ್ತಿರುವುದು ಅಚ್ಚರಿ ಹುಟ್ಟಿಸುತ್ತದೆ.

ಸೂಕ್ಷ್ಮವಾಗಿ ಗಮನಿಸಿದರೆ, ಇದರ ಹಿಂದೆ ಆಧುನಿಕ ಮಾಲ್ ಸಂಸ್ಕೃತಿಯನ್ನು ಉತ್ತೇಜಿಸುವ; ಅಂತರಂಗದಲ್ಲಿ ವ್ಯಾಪಾರೀ ಕೇಂದ್ರವನ್ನು ಬಚ್ಚಿಟ್ಟುಕೊಂಡ 'ವಿಶ್ವವಿಖ್ಯಾತ ಪ್ರವಾಸೀ ತಾಣ'ವನ್ನಾಗಿ ರೂಪಿಸುವ ಜರ್ಬು ಇದರ ಹಿಂದಿರುವುದು ನೂರಕ್ಕೆ ನೂರು ಸತ್ಯ. ಅದಕ್ಕಾಗಿಯೇ ಆ ಮೂಲಕ ಹಾದು ಹೋಗುವ ವಿಮಾನಗಳನ್ನು ಇಲ್ಲಿ ಇಳಿಸಿ ಇಲ್ಲಿನ ಮಾಲ್‌ಗಳಲ್ಲಿ ಶಾಪಿಂಗ್ ಮಾಡಲು ಅವಕಾಶ ಕೊಟ್ಟಂತೆ ಮೂರು ನಾಲ್ಕು ತಾಸು ತಂಗುವ ಏರ್ಪಾಟು ಕೂಡ ಇದೆಯಂತೆ.

ಹೆಂಗಸರ ಫೋಟೊ ಕೆಳಗೆ ಕ್ಯೂಆರ್ ಕೋಡ್!

ಹೀಗೇ ಒಮ್ಮೆ ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗಬೇಕಾದರೆ, ಹೆಂಗಸರ ಅರೆಬೆತ್ತಲೆ ಫೋಟೋಗಳ ಕೆಳಗೆ ಮೊಬೈಲ್ ಸಂಖ್ಯೆ, ಕ್ಯೂಆರ್ ಕೋಡ್ ಮುದ್ರಿಸಿದ್ದ ಅವನ್ನು ವಿಸಿಟಿಂಗ್ ಕಾರ್ಡುಗಳಂತೆ ಯಾರೊ ಬೇಕೆಂತಲೇ ರಸ್ತೆಯುದ್ದಕ್ಕೂ ಉದ್ದೇಶ ಪೂರ್ವಕವಾಗಿ ಹಾಕಿಕೊಂಡು ಹೋದದ್ದು ಕಣ್ಣಿಗೆ ಬಿತ್ತು. ಕೆಟ್ಟ ಕುತೂಹಲದಿಂದ ಬಗ್ಗಿ ಕೆಲವನ್ನು ಎತ್ತಿಕೊಂಡೆ. ಅದು ಆಧುನಿಕ ವೇಶ್ಯಾವಾಟಿಕೆ ದಂಧೆಯಲ್ಲಿ ಅನುಸರಿಸುವ ಕ್ರಮವೆಂದು ತಕ್ಷಣ ಹೊಳೆದಿತ್ತು.

ಅಲ್ಲಿರುವಾಗಲೇ ಇಸ್ರೇಲು, ಗಾಜಾ ಪಟ್ಟಿಯ ಆಸ್ಪತ್ರೆಯ ಮೇಲೆ ಬಾಂಬ್ ಹಾಕಿ ಸಾವಿರಾರು ಮಂದಿ - ಮಕ್ಕಳನ್ನು ಕೊಂದ ಸುದ್ದಿ ಕೇಳಿ, ಮತ್ತೆ ಮನುಷ್ಯ ಮನುಷ್ಯನನ್ನು ಬೇಟೆಯಾಡಲು ತೊಡಗಿದನೇ ಎಂದು ಗಾಬರಿಯಾಗಿತ್ತು.

ಪ್ರಕೃತಿಯಲ್ಲಿ ಒಂದನ್ನೊಂದು ಹೋಲುವಂತಹ ಅದೇ ಜಾತಿಯ ಬೇರೆ ಬೇರೆ ಸಸ್ಯಪ್ರಬೇಧಗಳಿರುತ್ತವೆಂದು ಸಸ್ಯಶಾಸ್ತ್ರ ಹೇಳುತ್ತದೆ. ಬಾಲ್ಯದಲ್ಲಿ ನಮ್ಮ ಬರದ ನಾಡಿನಲ್ಲಿ ಬೆಳೆಯುತ್ತಿದ್ದ ಈಚಲಹಣ್ಣು/ಚಳ್ಳೆಹಣ್ಣು ತಿಂದು ಬೆಳೆದವನು, ಈಗ ಇಲ್ಲಿ ದೊರೆಯುವ ವಿಶ್ವದರ್ಜೆಯ ಶ್ರೇಷ್ಠ ಗುಣಮಟ್ಟದ(ಪ್ರೀಮಿಯಂ ಕ್ವಾಲಿಟಿ) ಖರ್ಜೂರಕ್ಕಾಗಿ ಹುಡುಕಿದೆ. ಕಡೆಗೂ ಅದು ಸಿಕ್ಕಾಗ, ಹಿಂದೆ ಮುಂದೆ ನೋಡದೆ ಟ್ರ್ಯಾವಲ್ ಕಾರ್ಡ್ ನೀಡಿ ಧಿರಂ ಕರೆನ್ಸಿಯಲ್ಲಿ ಕೊಂಡು ತಂದು, ಇಂಡಿಯಾದ ರುಪಾಯಿಗೆ ಲೆಕ್ಕಾಚಾರ ಮಾಡಿದಾಗ, ಒಂದು ತುಂಡು ಖರ್ಜೂರಕ್ಕೆ ಅದರ ಬೆಲೆ ಇಪ್ಪತ್ತೆಂಟು ರುಪಾಯಿ ಆಗಿತ್ತು.

ಅಲ್ಲಿನ ಪ್ರತಿಷ್ಠಿತ ಲುಲು ಮಾಲ್‌ನಲ್ಲಿ ನಿತ್ಯ ಇಂಡಿಯಾದಿಂದ ರಫ್ತಾಗುವ ಖಾರಾ ಮಿಕ್ಸ್‌ಚರ್ ನೋಡಿ ಹೆಮ್ಮೆ ಪಟ್ಟೆ.

ದುಬೈಗೆ ಪರೋಕ್ಷವಾಗಿ 'ದುಬಾರಿ' ಎಂದು ಕರೆದರೂ ಆಗುತ್ತದೆ. ಜೋಬಿನ ತುಂಬಾ ಅಲ್ಲಲ್ಲ, ಬ್ಯಾಗಿನ ತುಂಬ ದುಡ್ಡು ಒಯ್ದು ನಾಲ್ಕು ದಿನ ಇದ್ದು ಅಲ್ಲಿನ ಅಚ್ಚರಿಗಳನ್ನು ನೋಡಿ ಅನುಭವಿಸಿ, ಅಪರೂಪದ ಸರಕುಗಳನ್ನು ಹೊತ್ತು ಬರುವ ಪ್ರವಾಸಿಗರಿಗಷ್ಟೆ ಸರಿ. ತಿಂಗಳಾನುಗಟ್ಟಲೆ ಇರಬೇಕೆಂದರೆ ಅದೂ ಸ್ಟೀರಿಯೋ ಟೈಪ್ಡ್ ಆಗಿ ಬೋರ್ ಹೊಡೆಸಿ, ಆದಷ್ಟು ಬೇಗ ಅಲ್ಲಿಂದ ಬಿಡಿಸಿಕೊಂಡು ಸ್ವದೇಶಕ್ಕೆ ಬಂದುಬಿಡಬೇಕೆನ್ನಿಸುವುದೂ ನಿಜ. ಆದರೆ, ನಮ್ಮ ದೇಶದ 'ನೀತಿ ನಿರೂಪಕರು' ಮಾತ್ರ ಪದೇ ಪದೇ ದುಬೈಗೆ ಬಂದು ಹೋಗುವ ಪರಿಪಾಠ ಇಟ್ಟುಕೊಂಡಿದ್ದಾರಲ್ಲ, ಯಾತಕ್ಕೆ ಎಂಬುದು ಪ್ರವಾಸದುದ್ದಕ್ಕೂ ನನ್ನನ್ನು ಕಾಡಿದ ಯಕ್ಷ ಪ್ರಶ್ನೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಿಗ್ಗ ಚುಕ್ಕ ಕ್ರೀಡಾಸ್ಥಳ ಕಥೆಯ — ಚೆಂಡಾಟ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗಾಲ್ಫ್ ಆಡಲೆಂದು ಗುಂಡ ಗಾಲ್ಫ್ ಕ್ಲಬ್‌ಗೆ ಹೋಗಿದ್ದ. ಚೆಂಡನ್ನು ನೆಲದ ಮೇಲಿಟ್ಟು ಜೋರಾಗಿ ಹೊಡೆದ. ಚೆಂಡು ಆಕಾಶದೆತ್ತರಕ್ಕೆ ಹಾರಿ ನೆಲಕ್ಕೆ ಬಿದ್ದು ಗುರಿಯತ್ತ ಉರುಳತೊಡಗಿತು. ಅದನ್ನು ಗಮನಿಸಿದ ಗುಂಡನೂ ಅತ್ತ ಹೆಜ್ಜೆಹಾಕಿದ. ಆದರೆ ಚೆಂಡು ಉರುಳುವುದನ್ನು ಅಲ್ಲೇ ಇದ್ದ ನಾಯಿಯೊಂದು ಗಮನಿಸಿತು. ಚೆಂಡಿನ ಹಿಂದೆಯೇ ಓಡಿದ ನಾಯಿ ಚೆಂಡನ್ನು ಬಾಯಲ್ಲಿ ಕಚ್ಚಿ ಹಿಡಿದು ಗುಂಡನ ಕಡೆ ಓಡತೊಡಗಿತು. ಬೆದರಿದ ಗುಂಡ ತಾನೂ ಅಲ್ಲಿಂದ ಕಾಲ್ಕಿತ್ತ.

ಟು ಇನ್ ಒನ್ ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ನರ | ಸಲು | ಹರಿ

ಬರಿ | ಜಗ | ತರ

ಅಕ್ಷರ ಪಟ್ಟಿ

ಶ | ಹ | ಗೀ | ಣಿ | ತ್ತು | ಕ

ದು | ಲ | ಗೆ | ವಾ | ಮೀ | ಅಂ

ಮೋ G ನ (ENGLISH)

ಇಲ್ಲಿ ಕೊಟ್ಟಿರುವ ವ್ಯಂಜನಾಕ್ಷರಕ್ಕೆ ಇನ್ನೆರಡು ಸ್ವರಾಕ್ಷರ ಸೇರಿಸಿ ಮೂರು ಅಕ್ಷರದ ಇಂಗ್ಲಿಷ್ ಪದಗಳನ್ನು ರಚಿಸಿ

ಅಕ್ಷರ ಪಟ್ಟಿ

I	U
E	E
A	E
E	E
A	E
E	A
E	O
A	A
O	E
I	E
I	A
O	E

1		C	
2		M	
3			L
4	P		
5	S		
6	T		
7			T
8			K
9			L
10	B		
11	B		
12		T	

ಜಾಣಪದ ಆಟ

ನಮ್ಮ ಕನ್ನಡ ಭಾಷಾ ಪ್ರಯೋಗದಲ್ಲಿ ಒಂದು ಶಬ್ದಕ್ಕೆ ಕೊನೆಗೆ ಆಟ ಎಂಬ ಪದ ಸೇರಿಸಿ ಹೇಳುವುದುಂಟು. ಉದಾ: ಹೋರಾಟ, ಹಾರಾಟ, ಜಂಜಾಟ ಇಂತಹ ಹನ್ನೆರಡು ಪದಗಳನ್ನು ಅಕ್ಷರ ಪಟ್ಟಿಯಿಂದ ಅಕ್ಷರ ಆರಿಸಿ, ಜೋಡಿಸಿ ರಚಿಸಬಲ್ಲಿರಾ?

ಅಕ್ಷರ ಪಟ್ಟಿ

ಮಾ	ಂಟಾ
ಕಾ	ಚ್ಚಾ
ಕ	ರಾ
ಚೀ	ಂಡಾ
ಲ್ಲಾ	ಚ್ಚಾ
ಕು	ಂಟಾ
ಹೊ	ಜ
ತು	ದಾ
ಗ್ಗಾ	ರಾ
ಪು	ಯ್ದಾ
ಹು	ಕಾ
ಡಾ	ಚೆ

1			ಟ
2			ಟ
3			ಟ
4			ಟ
5			ಟ
6			ಟ
7			ಟ
8			ಟ
9			ಟ
10			ಟ
11			ಟ
12			ಟ

ಚಿಲಿಪಿಲಿ-ಚೆಲ್ಲಾಪಿಲ್ಲಿ

ಇಲ್ಲಿ ಕೊಟ್ಟಿರುವ ಪಡೆನುಡಿಗಳ ಅಕ್ಷರಗಳು ಚೆಲ್ಲಾಪಿಲ್ಲಿಯಾಗಿ ಅರ್ಥ ಕಳೆದುಕೊಂಡಿವೆ. ನೀವು ಮರುಜೋಡಿಸಿ ಅರ್ಥಬದ್ಧ ಪಡೆನುಡಿಗಳ ವಾಕ್ಯ ಮಾಡಿ.

1.ಗೆಕಾಬುಳುಲಿಹೇದ್ದಿ
= ____________

2.ಡುಮೂಮೇನಲೆಬೆಳಿರಗಿ
= ____________

3.ರಿತೆರ್ಚುಡುಖಮಾನಂನೀ
= ____________

4.ಗುತಬಿಲೆಯಾಸಿ
= ____________



ಪದ ಒಗಟು

ನಾನೊಂದು ಎರಡಕ್ಷರದ ಪಕ್ಷಿ. ಮೊದಲನೇ ಅಕ್ಷರ ಹಿಂದಿಯಲ್ಲಿದ್ದರೆ, ಎರಡನೇ ಅಕ್ಷರ ಕನ್ನಡದಲ್ಲಿರುವೆ. ಮೊದಲನೇ ಅಕ್ಷರದ ಅರ್ಥವೇ ಎರಡನೇ ಅಕ್ಷರವಾದರೆ, ನನ್ನ ಹೆಸರೇನು?

ಹುಡುಕಾಟ

ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಲ್ಲಿ ಒಂದು ವಸ್ತುವಿನ ಹೆಸರನ್ನು ಕ್ರಮಾಕ್ಷರಗಳಲ್ಲಿ ಹುಡುಕಿ. ಸುಳಿವು: ಬೆಂಗಳೂರಿನಲ್ಲಿ ಈಗ ಇದರದೇ ಜಾತ್ರೆ

1. ಕಾಕನಕೋಟೆ 2. ಬಡವರ ಬಂಧು
3. ಅಲೆಮನೆ 4. ಆಕಾಶ್ 5. ತಾಯಿದೇವರು

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಬಿಸಲುಕು 2.ಮನವಿಲು 3.ಚಿಂಗಾರಿಗೆ 4.ಸಾಹಸನ 5.ವಿರಾಗಿಣಿ 6.ತವರುಣ

ಜಾಣಪದ ಆಟ: 1.ಪಂಚಾಯತಿ 2.ಪಂಚಾಕ್ಷರಿ 3.ಪಂಚಾಮೃತ 4.ಪಂಚರತ್ನ 5.ಪಂಚಕನ್ಯೆ 6.ಪಂಚಲೋಹ 7.ಪಂಚಭಕ್ಷ್ಯ 8.ಪಂಚಕಜ್ಜಾಯ 9.ಪಂಚಮವೇದ 10.ಪಂಚೇಂದ್ರಿಯ

ಗಣಿತದಲ್ಲಿ ಗರ್ದಿಗಮ್ಮತ್ತು: ಚಿನ್ಮಯನಿಗೆ-5, ಅಭಿನವನಿಗೆ-7

It is Not fun without U: 1.BUT 2.BUN 3.CUT 4.GUN 5.MUD 6.NUT 7.OUT 8.PUT 9.RUB 10.TUB

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಗೋವರ್ಧನ್ ಕೆ.ಎಂ.
ದಾವಣಗೆರೆ



ಸಮೃದ್ಧ ಬೆಟಗೇರಿ
ಕೊಪ್ಪಳ

ಸೃಜನಾ ಟಿ.ಆರ್.
ಹೊಸಪೇಟೆ

ಅಶ್ವಜೀತ ಭಾವಿದೊಡ್ಡಿ
ಧಾರವಾಡ

ಸಾಧ್ವಿ ಡಿ.
ವಿಜಯಪುರ

ಪ್ರವೀಣ ಅರವಳ್ಳಿ
ಹೂವಿನಹಡಗಲಿ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹600
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹604

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ಕಚ್ಚಾ)	₹1640 (1640)
ಸೋಯಾ (ಕಚ್ಚಾ)	₹905 (905)
ಸೂರ್ಯಕಾಂತಿ (ಕಚ್ಚಾ)	₹920(920)
ಪಾಮೋಲಿನ್	₹820 (821)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹250-440
ದ್ವಿತಳಿ (ಬಿ.ವಿ)	₹220-587

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ನಿಷೇಧಕ್ಕೆ ವಿರೋಧ: ಕೇಂದ್ರ ಸರ್ಕಾರದಿಂದ ಪರಿಷ್ಕೃತ ಆದೇಶ ಪ್ರಕಟ

ಎಥೆನಾಲ್: ಕಬ್ಬಿನ ಹಾಲು ಬಳಕೆಗೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ಎಥೆನಾಲ್ ತಯಾರಿಕೆಗೆ ಕಬ್ಬಿನ ಹಾಲು ಹಾಗೂ ಮೊಲಾಸಿಸ್-ಬಿ (ಕಾಕಂಬಿ) ಬಳಕೆಗೆ ಅನುಮತಿ ನೀಡಿ ಕೇಂದ್ರ ಆಹಾರ ಸಚಿವಾಲಯವು ಪರಿಷ್ಕೃತ ಆದೇಶ ಹೊರಡಿಸಿದೆ.

ಅಲ್ಲದೇ, ಎಥೆನಾಲ್ ಉತ್ಪಾದನೆಯ ಉದ್ದೇಶಕ್ಕಾಗಿ ಸಕ್ಕರೆ ಬಳಕೆಯ ಮಿತಿಯನ್ನು 2023-24ನೇ ಸಾಲಿನ ಪೂರಕ ವರ್ಷದಲ್ಲಿ 17 ಲಕ್ಷ ಟನ್‌ಗಳಿಗಷ್ಟೇ ಸೀಮಿತಗೊಳಿಸಿದೆ.

ಎಥೆನಾಲ್ ಉತ್ಪಾದನೆಗೆ ಕಬ್ಬಿನ ಹಾಲು ಮತ್ತು ಕಾಕಂಬಿ ಬಳಕೆಗೆ ನಿಷೇಧ ಹೇರಿ ಹಿಂದಿನ ವಾರ ಕೇಂದ್ರ ಸರ್ಕಾರವು ಆದೇಶ ಹೊರಡಿಸಿತ್ತು. ಇದಕ್ಕೆ ಸಕ್ಕರೆ ಕಾರ್ಖಾನೆಗಳಿಂದ ಆಕ್ಷೇಪ ವ್ಯಕ್ತವಾಗಿತ್ತು. ಇದರಿಂದ ಎಚ್ಚೆತ್ತುಕೊಂಡಿರುವ ಸರ್ಕಾರವು ಪರಿಷ್ಕೃತ ಆದೇಶ ಹೊರಡಿಸಿದೆ.

ಹಾಗಾಗಿ, 2023-24ನೇ ಸಾಲಿಗೆ ತೈಲ ಮಾರಾಟ ಸಂಸ್ಥೆಗಳು ಕಬ್ಬಿನ ಉಪ ಉತ್ಪನ್ನಗಳಿಂದ ತಯಾರಿಸಿದ ಎಥೆನಾಲ್ ಪೂರೈಕೆಗೆ ಸಂಬಂಧಿಸಿದಂತೆ ಸಕ್ಕರೆ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳಿಗೆ ಪರಿಷ್ಕೃತ ಬೇಡಿಕೆ ಸಲ್ಲಿಸಲಿವೆ ಎಂದು ಹೇಳಿದೆ.

ಅಲ್ಲದೇ, ತೈಲ ಮಾರಾಟ ಸಂಸ್ಥೆಗಳು ಈ ಬಗ್ಗೆ ಆಹಾರ ಸಚಿವಾಲಯಕ್ಕೂ ಪರಿಷ್ಕೃತ ಒಪ್ಪಂದದ ಬಗ್ಗೆ ಕೋರಿಕೆ ಸಲ್ಲಿಸಲಿವೆ. ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕವಷ್ಟೇ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳು ಎಷ್ಟು ಪ್ರಮಾಣದಲ್ಲಿ ಎಥೆನಾಲ್ ಪೂರೈಸಬೇಕು ಎಂಬುದು ಸ್ಪಷ್ಟವಾಗಲಿದೆ ಎಂದು ವಿವರಿಸಿದೆ.

ಸಕ್ಕರೆ ಉತ್ಪಾದನೆ 33 ದಶಲಕ್ಷ ಟನ್‌ಗೆ ಇಳಿಕೆ?

ಸಕ್ಕರೆ ಕಾರ್ಖಾನೆಗಳಿಂದ ವಿರೋಧ ವ್ಯಕ್ತವಾಗಿದ್ದರಿಂದ ಶುಕ್ರವಾರ ನಡೆದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೇಂದ್ರ ಆಹಾರ ಸಚಿವಾಲಯದ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ಆದರೆ, ಕೇಂದ್ರದಿಂದ ನಿಷೇಧದ ಆದೇಶ ಹೊರಬೀಳುವುದಕ್ಕೂ ಮೊದಲೇ 6 ಲಕ್ಷ ಟನ್‌ನಷ್ಟು ಸಕ್ಕರೆಯನ್ನು ಎಥೆನಾಲ್ ತಯಾರಿಕೆಗೆ ಬಳಸಲಾಗಿದೆ ಎಂದು ಹೇಳಲಾಗಿದೆ.

ದೇಶದಲ್ಲಿ ಕಳೆದ ಋತುವಿನಲ್ಲಿ 37.3 ದಶಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆ ಯಾಗಿತ್ತು. 2023-24ನೇ ಸಾಲಿನ ಪೂರಕ ವರ್ಷದಲ್ಲಿ (ಅಕ್ಟೋಬರ್-ಸೆಪ್ಟೆಂಬರ್) ಇದು 32.2ರಿಂದ 33 ದಶಲಕ್ಷ ಟನ್‌ಗೆ ಇಳಿಕೆಯಾಗುವ ಸಾಧ್ಯತೆ ಇದೆ ಎಂದು ಸರ್ಕಾರ ಅಂದಾಜಿಸಿದೆ.

ಸಾಧಕ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ

ಸರಕು ಸಾಗಣೆ ಗುರಿ ಸಾಧನೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ಸಾಲಿನಡಿ ದೇಶದ ಸರಕು ಸಾಗಣೆ ವಲಯಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ 13 ಸಾಧಕ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಕರ್ನಾಟಕವು ಸ್ಥಾನ ಪಡೆದಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಈ ಸರಕು ಸಾಗಣೆ ಸಾಧನೆ ಸೂಚ್ಯಂಕವನ್ನು ಶನಿವಾರ ಬಿಡುಗಡೆ ಮಾಡಿದೆ. ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು ಈ ವರದಿ ಸಿದ್ಧಪಡಿಸಿದೆ.

ಕಳೆದ ಸಾಲಿನಡಿ ಸಾಧಕ ರಾಜ್ಯಗಳ ಪಟ್ಟಿಯಿಂದ ಹೊರಗೆ ಉಳಿದಿದ್ದ ಸಿಕ್ಕಿಂ ಹಾಗೂ ತ್ರಿಪುರ ಈ ಬಾರಿ ಸ್ಥಾನ ಗಿಟ್ಟಿಸಿಕೊಂಡಿವೆ. ಉಳಿದಂತೆ ಆಂಧ್ರಪ್ರದೇಶ, ತಮಿಳುನಾಡು, ಗುಜರಾತ್, ಅಸ್ಸಾಂ, ಪಂಜಾಬ್, ತೆಲಂಗಾಣ, ಹರಿಯಾಣ, ಉತ್ತರ ಪ್ರದೇಶ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಚಂಡೀಗಢ ಈ ಪಟ್ಟಿಯಲ್ಲಿವೆ ಎಂದು ವರದಿ ತಿಳಿಸಿದೆ.

ಈ ಸೂಚ್ಯಂಕವು ದೇಶದ ವ್ಯಾಪಾರ ರಫ್ತು ಹಾಗೂ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸಲು ಅಗತ್ಯವಾದ ಸರಕು ಸಾಗಣೆ ಸೇವೆಯ ಸೂಚಕವಾಗಿದೆ.

ಕಳೆದ ಸಾಲಿನಡಿ ಸಾಧಕ ರಾಜ್ಯಗಳ ಪಟ್ಟಿಯಲ್ಲಿ 15 ರಾಜ್ಯಗಳಿದ್ದವು. ಆದರೆ, ಈ ವಲಯದಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸದಿದ್ದರಿಂದ ಈ ಬಾರಿ ಹಿಮಾಚಲಪ್ರದೇಶ ಹಾಗೂ ಉತ್ತರಾಖಂಡ ಹೊರಗುಳಿದಿವೆ. ಸರಕು ಸಾಗಣೆ ವಲಯದಲ್ಲಿ ವೇಗವಾಗಿ ಬೆಳವಣಿಗೆ ಸಾಧಿಸುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಕೇರಳ, ಮಹಾರಾಷ್ಟ್ರ, ರಾಜಸ್ಥಾನ, ಉತ್ತರಾಖಂಡ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಪುದುಚೇರಿ ಸ್ಥಾನ ಪಡೆದಿವೆ.

ಆಕಾಂಕ್ಷಿ ರಾಜ್ಯಗಳ ಪಟ್ಟಿಯಲ್ಲಿ ಗೋವಾ, ಒಡಿಶಾ, ಪಶ್ಚಿಮ ಬಂಗಾಳ, ಬಿಹಾರ, ಛತ್ತೀಸಗಢ, ಹಿಮಾಚಲ-ಪ್ರದೇಶ, ಜಾರ್ಖಂಡ್, ಮಣಿಪುರ, ಮೇಘಾಲಯ, ಮಿಜೋರಾಂ, ಕೇಂದ್ರಾಡಳಿತ ಪ್ರದೇಶಗಳಾದ ದಮನ್ ಮತ್ತು ಡಿಯೂ, ದಾದ್ರಾ ಮತ್ತು ನಗರ್ ಹವೇಲಿ, ಜಮ್ಮು ಮತ್ತು ಕಾಶ್ಮೀರ, ಲಡಾಕ್ ಸೇರಿವೆ ಎಂದು ವರದಿ ತಿಳಿಸಿದೆ.

ಮಾನದಂಡ ಏನು?

ಸರಕು ಸಾಗಣೆ ಸೇವಾ ಜಾಲದಲ್ಲಿ ಎದುರಾದ ಸಮಸ್ಯೆಗಳು ಮತ್ತು ಆ ರಾಜ್ಯಗಳಲ್ಲಿನ ಸರಕು ಸಾಗಣೆ ವ್ಯವಸ್ಥೆಯನ್ನು ಮಾನದಂಡವಾಗಿ ಪರಿಗಣಿಸಿ ಈ ವರದಿ ಸಿದ್ಧಪಡಿಸಲಾಗಿದೆ.

ರಾಜ್ಯಗಳಲ್ಲಿ ಸರಕು ಸಾಗಣೆ ಸೇವೆಯ ಸುಧಾರಣೆ, ದೇಶದ ವ್ಯಾಪಾರಕ್ಕೆ ಹೆಚ್ಚಿನ ಉತ್ತೇಜನ ನೀಡಿಕೆ ಹಾಗೂ ಸಾರಿಗೆ ವೆಚ್ಚ ಕಡಿತ ಮಾಡುವುದು ಈ ಸೂಚ್ಯಂಕದ ಮೂಲ ಧ್ಯೇಯವಾಗಿದೆ.

'ಜಾಗತಿಕ ಮಟ್ಟದಲ್ಲಿ 2047ರ ವೇಳೆಗೆ ಭಾರತದ ಆರ್ಥಿಕತೆಯನ್ನು ಸದೃಢಗೊಳಿಸುವ ನಿಟ್ಟಿನಲ್ಲಿ ಸರಕು ಸಾಗಣೆ ವಲಯದ ಪಾತ್ರ ನಿರ್ಣಾಯಕವಾಗಿದೆ' ಎಂದು ವರದಿ ಬಿಡುಗಡೆಗೊಳಿಸಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಸರಕು ಸಾಗಣೆ ವೆಚ್ಚ ಕಡಿತಗೊಳಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದೆ

ಪೀಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಚೇತರಿಕೆ ಹಾದಿಯಲ್ಲಿ ಲಂಕಾ ಆರ್ಥಿಕತೆ

ಕೊಲಂಬೊ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಸುಳಿಗೆ ಸಿಲುಕಿ ಜರ್ಜರಿತವಾಗಿರುವ ದ್ವೀಪರಾಷ್ಟ್ರ ಶ್ರೀಲಂಕಾದಲ್ಲಿ ಆರ್ಥಿಕತೆಯು ಧನಾತ್ಮಕ ಬೆಳವಣಿಗೆ ದಾಖಲಿಸಿದೆ ಎಂದು ಅಲ್ಲಿನ ಸರ್ಕಾರದ ಅಂಕಿ-ಅಂಶಗಳು ದೃಢಪಡಿಸಿವೆ.

'ಜಿಡಿಪಿ ಬೆಳವಣಿಗೆ ದರವು ಪ್ರಸಕ್ತ ಹಣಕಾಸು ವರ್ಷದ ತ್ರೈಮಾಸಿಕ ಅವಧಿಯಲ್ಲಿ ಶೇ 1.6ರಷ್ಟದಾಗಿದೆ. ಇದು ಚೇತರಿಕೆ ಹಾದಿಯ ಆಶಾದಾಯಕ ಬೆಳವಣಿಗೆಯಾಗಿದೆ' ಎಂದು ಗಣತಿ ಮತ್ತು ಸಾಂಖ್ಯಿಕ (ಡಿಸಿಎಸ್) ಇಲಾಖೆಯು ಶುಕ್ರವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ವಿವರಿಸಲಾಗಿದೆ.

2021ನೇ ಸಾಲಿನ ನಾಲ್ಕನೇ ತ್ರೈಮಾಸಿಕದಿಂದ ಶ್ರೀಲಂಕಾದ ಆರ್ಥಿಕತೆಯು ಋಣಾತ್ಮಕ ಹಾದಿ ಹಿಡಿದಿತ್ತು. 2022ರ ಏಪ್ರಿಲ್‌ನಲ್ಲಿ ಜಿಡಿಪಿಯು ಶೇ (–) 8ರಷ್ಟು ದಾಖಲಾಗಿದೆ ಎಂದು ಸರ್ಕಾರ ಘೋಷಿಸಿತ್ತು.

ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿರುವ ದ್ವೀಪ ರಾಷ್ಟ್ರದ ನೆರವಿಗೆ ಧಾವಿಸಿದ್ದ ಅಂತರರಾಷ್ಟ್ರೀಯ ಹಣಕಾಸು ನಿಧಿಯು (ಐಎಂಎಫ್) ಈ ವಾರದ ಆರಂಭದಲ್ಲಿ ₹24 ಸಾವಿರ ಕೋಟಿ ನೆರವು ಪ್ರಕಟಿಸಿತ್ತು. 2024ನೇ ಹಣಕಾಸು ವರ್ಷದಲ್ಲಿ ಆರ್ಥಿಕ ಬೆಳವಣಿಗೆಯು ಮತ್ತಷ್ಟು ವೃದ್ಧಿಯಾಗಲಿದೆ ಎಂದು ಶ್ರೀಲಂಕಾ ಸರ್ಕಾರ ವಿಶ್ವಾಸ ವ್ಯಕ್ತಪಡಿಸಿದೆ.

ಮುಂಬೈ ಧಾರಣೆ

ಶೇಂಗಾ

16-12-2023

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಸೋಯಾ ಕಚ್ಚಾ	860 (865)
ಪಾಮ್ ವಾರದ ಡೆಲಿವರಿ	822 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (865)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಐಎಎನ್‌ಎಸ್ ಅರ್ಧದಷ್ಟು ಷೇರು ಅದಾನಿ ಪಾಲು

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಸುದ್ದಿಸಂಸ್ಥೆಯಾದ ಐಎಎನ್‌ಎಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನಲ್ಲಿ ಅತಿಹೆಚ್ಚು ಷೇರುಗಳ ಮೇಲೆ ಒಡೆತನ ಸ್ಥಾಪಿಸಿದೆ.

'ಮಾಧ್ಯಮಗಳ ಉಸ್ತುವಾರಿ ಹೊತ್ತಿರುವ ತನ್ನ ಅಂಗಸಂಸ್ಥೆಯಾದ ಎಎಂಜಿ ಮೀಡಿಯಾ ನೆಟ್‌ವರ್ಕ್ಸ್ ಲಿಮಿಟೆಡ್ (ಎಎಂಎನ್‌ಎಲ್) ಐಎಎನ್‌ಎಸ್‌ನಲ್ಲಿನ ಶೇ 50.50ರಷ್ಟು ಷೇರುಗಳನ್ನು ಖರೀದಿಸಿದೆ' ಎಂದು ಅದಾನಿ ಸಮೂಹ ಹೇಳಿದೆ. ಆದರೆ, ಈ ಖರೀದಿಗೆ ಎಷ್ಟು ಮೊತ್ತ ಭರಿಸಲಾಗಿದೆ ಎಂಬುದನ್ನು ಬಹಿರಂಗಪಡಿಸಿಲ್ಲ.

ಕಳೆದ ವರ್ಷದ ಮಾರ್ಚ್‌ನಲ್ಲಿ ಕ್ವಿಂಟಿಲಿಯನ್ ಬ್ಯುಸಿನೆಸ್ ಮೀಡಿಯವನ್ನು ಸ್ವಾಧೀನಪಡಿಸಿಕೊಳ್ಳುವ ಮೂಲಕ ಉದ್ಯಮಿ ಅದಾನಿ, ತಮ್ಮ ಉದ್ಯಮವನ್ನು ಮಾಧ್ಯಮ ಕ್ಷೇತ್ರಕ್ಕೂ ವಿಸ್ತರಿಸಿದ್ದರು. ಬಳಿಕ ಅದೇ ವರ್ಷದ ಡಿಸೆಂಬರ್‌ನಲ್ಲಿ ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನಲ್ಲಿ (ಎನ್‌ಡಿಟಿವಿ) ಶೇ 65ರಷ್ಟು ಷೇರುಗಳನ್ನು ತನ್ನದಾಗಿಸಿಕೊಂಡಿದ್ದರು.

2022ರ ಏಪ್ರಿಲ್‌ನಿಂದ 2023ರ ಮಾರ್ಚ್‌ವರೆಗಿನ ಆರ್ಥಿಕ ವರ್ಷದಲ್ಲಿ ಐಎಎನ್‌ಎಸ್ ಒಟ್ಟು ₹11.86 ಕೋಟಿ ಲಾಭಗಳಿಸಿದೆ.

'ಐಎಎನ್‌ಎಸ್ ಮತ್ತು ಅದರ ಷೇರುದಾರ ಸಂದೀಪ್ ಬಾಮ್‌ಜಾಯ್ ಜತೆಗೆ ಎಎಂಎನ್‌ಎಲ್ ಒಪ್ಪಂದಕ್ಕೆ ಸಹಿ ಹಾಕಿದೆ. ಇನ್ನು ಮುಂದೆ ಈ ಸುದ್ದಿಸಂಸ್ಥೆಯ ಕಾರ್ಯ ನಿರ್ವಹಣೆಯು ಎಎಂಎನ್‌ಎಲ್‌ಗೆ ಒಳಪಟ್ಟಿದೆ. ನಿರ್ದೇಶಕರ ನೇಮಕದ ಹಕ್ಕನ್ನೂ ಹೊಂದಿದೆ' ಎಂದು ಅದಾನಿ ಗ್ರೂಪ್ ತಿಳಿಸಿದೆ.

ಮಾಲ್ಟಾ ಹಡಗು ಪಾರು ಮಾಡಿದ ಭಾರತೀಯ ಯುದ್ಧ ನೌಕೆ

ನವದೆಹಲಿ (ಪಿಟಿಐ): ಅರಬ್ಬಿ ಸಮುದ್ರದಲ್ಲಿ ಕಡಲ್ಗಳ್ಳರಿಂದ ಅಪಹರಣದ ಅಪಾಯ ಎದುರಿಸಿದ್ದ 18 ಸಿಬ್ಬಂದಿಯುಳ್ಳ ಮಾಲ್ಟಾ ದೇಶದ ಹಡಗಿನ ತುರ್ತು ಕರೆಗೆ ತ್ವರಿತವಾಗಿ ಸ್ಪಂದಿಸಿ, ಹಡಗನ್ನು ಪಾರು ಮಾಡಲಾಗಿದೆ ಎಂದು ಭಾರತೀಯ ನೌಕಾಪಡೆಯು ಶನಿವಾರ ಹೇಳಿದೆ.

ನೌಕಾಪಡೆಯ ಕಡಲ ಗಸ್ತು ವಿಮಾನ ಮತ್ತು ಆಡೆನ್ ಕೊಲ್ಲಿಯಲ್ಲಿ ಕಡಲ್ಗಳ್ಳತನ ನಿಗ್ರಹ ಗಸ್ತಿನಲ್ಲಿ ತೊಡಗಿರುವ ಯುದ್ಧನೌಕೆಗೆ ಮಾಲ್ಟಾದ ಎಂವಿ ರುಯೆನ್ ಹಡಗಿನಿಂದ ಅಪಾಯದಲ್ಲಿರುವ ಬಗ್ಗೆ ತುರ್ತು ಕರೆ ಬಂದಿತ್ತು. ತಕ್ಷಣವೇ ಆ ಹಡಗನ್ನು ಪತ್ತೆ ಹಚ್ಚಿ ಅದರ ನೆರವಿಗೆ ಧಾವಿಸಲಾಯಿತು ಎಂದು ಅದು ಹೇಳಿದೆ.

ಗುರುವಾರ ಅಪಹರಣ ಯತ್ನ ವರದಿಯಾಗಿದ್ದು, ಭಾರತೀಯ ನೌಕಾಪಡೆಯು ಶುಕ್ರವಾರ ಮುಂಜಾನೆ ಘಟನೆ ನಡೆದ ಪ್ರದೇಶಕ್ಕೆ ತನ್ನ ಯುದ್ಧ ನೌಕೆಯ ಗಸ್ತು ವಿಮಾನವನ್ನು ಕಳುಹಿಸಿತು.

ವಿಮಾನವು, ಹಡಗಿನ ಮೇಲೆ ಹಾರಾಟ ನಡೆಸಿ, ಹಡಗಿನ ಚಲನೆಯನ್ನು ನಿರಂತರ ಮೇಲ್ವಿಚಾರಣೆ ಮಾಡುತ್ತಿದೆ. ಆ ಹಡಗು ಈಗ ಸೊಮಾಲಿಯಾದ ಕರಾವಳಿಯತ್ತ ಸಾಗುತ್ತಿದೆ ಎಂದು ನೌಕಾಪಡೆಯ ಅಧಿಕಾರಿಗಳು ತಿಳಿಸಿದ್ದಾರೆ.

ಆಡೆನ್ ಕೊಲ್ಲಿಯಲ್ಲಿ ಅಪ ಹರಣದ ಅಪಾಯ ಎದುರಿಸಿದ್ದ ಮಾಲ್ಟಾದ ಎಂವಿ ರುಯೆನ್ ಹಡಗನ್ನು ಭಾರತೀಯ ನೌಕಾಪಡೆ ರಕ್ಷಿಸಿತು —ಪಿಟಿಐ ಚಿತ್ರ

ಮಧ್ಯಪ್ರದೇಶ: ಜೀತು ಪಟ್ವಾರಿ ಕಾಂಗ್ರೆಸ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ನವದೆಹಲಿ: ಈಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ್ದ ಕಾಂಗ್ರೆಸ್, ಮಧ್ಯಪ್ರದೇಶ ಮತ್ತು ಛತ್ತೀಸಗಢದಲ್ಲಿ 'ನಾಯಕತ್ವ ಬದಲಾವಣೆ' ಪ್ರಕ್ರಿಯೆಗೆ ಶನಿವಾರ ಚಾಲನೆ ನೀಡಿದೆ.

ಮಧ್ಯಪ್ರದೇಶದ ಕಾಂಗ್ರೆಸ್ ಅಧ್ಯಕ್ಷ ಸ್ಥಾನದಿಂದ ಕಮಲ್‌ನಾಥ್ ಅವರನ್ನು ಕೆಳಗಿಳಿಸಿ, ಜೀತು ಪಟ್ವಾರಿ (50 ವರ್ಷ) ಅವರಿಗೆ ಜವಾಬ್ದಾರಿ ನೀಡಿದೆ. ಛತ್ತೀಸಗಢದಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಒಬಿಸಿ ಮುಖಂಡ ಚರಣ್ ದಾಸ್ ಮಹಾಂತ್ (69 ವರ್ಷ) ಅವರನ್ನು ನೇಮಕ ಮಾಡಿದೆ. ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಕಡೆಗಣಿಸಿದೆ.

ಕೊಲಿಜಿಯಂನ 81 ಪ್ರಸ್ತಾವಗಳ ಪರಿಶೀಲನೆ

ನವದೆಹಲಿ (ಪಿಟಿಐ): 'ನ್ಯಾಯಮೂರ್ತಿಗಳ ನೇಮಕಕ್ಕಾಗಿ ಹೈಕೋರ್ಟ್‌ಗಳ ಕೊಲಿಜಿಯಂಗಳು ಕಳುಹಿಸಿರುವ 123 ಪ್ರಸ್ತಾವಗಳಲ್ಲಿ 81 ವಿವಿಧ ಹಂತದಲ್ಲಿ ಪರಿಶೀಲನೆಯಲ್ಲಿವೆ' ಎಂದು ಕೇಂದ್ರ ಶುಕ್ರವಾರ ಲೋಕಸಭೆಗೆ ಮಾಹಿತಿ ನೀಡಿತು.

2023ರ ಡಿಸೆಂಬರ್ 12ರಂದು ಇದ್ದಂತೆ ಇತರೆ 42 ಪ್ರಸ್ತಾವಗಳು ಸುಪ್ರೀಂ ಕೋರ್ಟ್‌ನ ಕೊಲಿಜಿಯಂನ ಪರಿಶೀಲನೆಯಲ್ಲಿವೆ ಎಂದು ಕಾನೂನು ಸಚಿವ ಅರ್ಜುನ್ ಮೇಘವಾಲ್ ಅವರು ಲಿಖಿತ ಉತ್ತರದಲ್ಲಿ ಮಾಹಿತಿ ನೀಡಿದ್ದಾರೆ.

ವಿವಿಧ ಹೈಕೋರ್ಟ್‌ಗಳಲ್ಲಿ 201 ನ್ಯಾಯಮೂರ್ತಿಗಳ ಹುದ್ದೆಗಳು ಖಾಲಿ ಇದ್ದು, ಇವುಗಳ ಸಂಬಂಧ ಹೈಕೋರ್ಟ್ ಕೊಲಿಜಿಯಂನಿಂದ ಇನ್ನೂ ಶಿಫಾರಸು ಬರಬೇಕಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಕಾನೂನು ಸಚಿವಾಲಯದ ವೆಬ್‌ಸೈಟ್‌ನ ಅನುಸಾರ ಡಿಸೆಂಬರ್ 1ರಲ್ಲಿ ಇದ್ದಂತೆ 25 ಹೈಕೋರ್ಟ್‌ಗಳಲ್ಲಿ ಮಂಜೂರಾದ ನ್ಯಾಯಮೂರ್ತಿಗಳ ಒಟ್ಟು ಹುದ್ದೆಗಳು 1,114. ಇವುಗಳಲ್ಲಿ 324 ಸ್ಥಾನಗಳು ಖಾಲಿ ಇವೆ.

ಪ್ರಸ್ತುತ ನಿಯಮಗಳ ಅನುಸಾರ, ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಖಾಲಿ ಹುದ್ದೆಗಳ ಭರ್ತಿಗೆ ಪ್ರಸ್ತಾವ ಕಳುಹಿಸುತ್ತಾರೆ. ಹೈಕೋರ್ಟ್ ಕೊಲಿಜಿಯಂ ಶಿಫಾರಸು ಮಾಡುವ ಹೆಸರುಗಳನ್ನು ಕೇಂದ್ರ ಸರ್ಕಾರದ ಅಭಿಪ್ರಾಯದೊಂದಿಗೆ ಸುಪ್ರೀಂ ಕೋರ್ಟ್ ಕೊಲಿಜಿಯಂನ ಪರಿಗಣನೆಗೆ ಕಳುಹಿಸಲಾಗುತ್ತದೆ. ಈ ಪೈಕಿ ಸುಪ್ರೀಂ ಕೋರ್ಟ್ ಕೊಲಿಜಿಯಂ ಕೆಲವು ಹೆಸರುಗಳಿಗೆ ಶಿಫಾರಸು ಮಾಡಲಿದ್ದು, ಉಳಿದವನ್ನು ಮರಳಿ ಹೈಕೋರ್ಟ್‌ಗಳ ಕೊಲಿಜಿಯಂಗಳಿಗೆ ಕಳುಹಿಸಲಾಗುತ್ತದೆ.

ಶಿಫಾರಸುಗಳನ್ನು ಆಧರಿಸಿ ಕೇಂದ್ರ ಕ್ರಮವಹಿಸಲಿದ್ದು, ರಾಷ್ಟ್ರಪತಿ ನೇಮಕ ಮಾಡುತ್ತಾರೆ. ಕೆಲವು ಹೆಸರುಗಳನ್ನು ಮರಳಿ ಪರಿಗಣಿಸಲು ಕೊಲಿಜಿಯಂಗೆ ಹಿಂದಿರುಗಿಸಬಹುದಾಗಿದೆ.

ಪ್ರತಿಭಟನೆ: ವಿ.ವಿಯಲ್ಲೇ ರಾಜ್ಯಪಾಲರ ವಾಸ್ತವ್ಯ

ಮಣಪ್ಪುರಂ (ಪಿಟಿಐ): ಎಸ್‌ಎಫ್‌ಐ ಕಾರ್ಯಕರ್ತರ ತೀವ್ರ ಪ್ರತಿಭಟನೆಯ ನಡುವೆಯೇ ಕೇರಳ ರಾಜ್ಯಪಾಲ ಆರೀಫ್ ಮೊಹಮ್ಮದ್ ಖಾನ್ ಅವರು ಕ್ಯಾಲಿಕಟ್ ವಿಶ್ವವಿದ್ಯಾಲಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶನಿವಾರ ಸಂಜೆ ವಿಶ್ವವಿದ್ಯಾಲಯಕ್ಕೆ ಬಂದರು.



ಆರೀಫ್

ರಾಜ್ಯಪಾಲರು ವಿ.ವಿಗೆ ಬರುವುದಾಗಿ ತಿಳಿಸಿದ ಬೆನ್ನಲ್ಲೇ ವಿ.ವಿಯ ಸುತ್ತ ಜಮಾಯಿಸಿದ ಎಸ್‌ಎಫ್‌ಐ ಕಾರ್ಯಕರ್ತರು ತೀವ್ರ ಪ್ರತಿಭಟನೆ ನಡೆಸಿದರು. 'ಗೋ ಬ್ಯಾಕ್' ಎನ್ನುವ ಘೋಷಣೆಯೊಂದಿಗೆ ರಾಜ್ಯಪಾಲರನ್ನು ತಡೆಯಲು ತಯಾರಿ ನಡೆಸಿದ್ದರು. ಪೊಲೀಸ್ ಬಿಗಿ ಭದ್ರತೆಯೊಂದಿಗೆ ವಿ.ವಿಗೆ ಬಂದ ರಾಜ್ಯಪಾಲರು ಅಲ್ಲಿನ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದರು.

ವಿ.ವಿಯ ಒಳಗೆ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯಪಾಲರು, 'ನನಗೆ ಯಾರ ಭಯವೂ ಇಲ್ಲ. ಹೊರಗಿರುವವರೆಲ್ಲ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಕಳುಹಿಸಿರುವ ರೌಡಿಗಳು. ನನಗೆ ಯಾವುದೇ ಪ್ರತಿಭಟನೆ ಕಾಣಲಿಲ್ಲ' ಎಂದು ವ್ಯಂಗ್ಯವಾಡಿದರು.

'ಒಂದು ವೇಳೆ ಅವರು ನನ್ನ ಕಾರಿನ ಬಳಿ ಬಂದರೆ ತಕ್ಷಣ ನಾನು ಕಾರಿನಿಂದ ಇಳಿದು ಬಿಡುತ್ತೇನೆ. ಕಾರಿನ ಮೇಲೆ ದಾಳಿ ಮಾಡುವ ಬದಲು, ಅವರಿಗೆ ಧೈರ್ಯ ಇದ್ದರೆ ನನ್ನ ಮೆಲೆ ದಾಳಿ ಮಾಡಲಿ. ಅವರ ಬೆದರಿಕೆಗಳಿಗೆ ನಾನು ಹೆದರುವುದಿಲ್ಲ' ಎಂದು ರಾಜ್ಯಪಾಲರು ಶನಿವಾರ ನವದೆಹಲಿಯಲ್ಲಿ ಎಚ್ಚರಿಕೆ ನೀಡಿದ್ದರು.

ರಾಜ್ಯಪಾಲರು ಕೋಯಿಕ್ಕೋಡ್ ಸರ್ಕಾರಿ ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಬೇಕಾಗಿತ್ತು. ಆದರೆ, ಎಸ್‌ಎಫ್‌ಐ ಸಂಘಟನೆ ರಾಜ್ಯಪಾಲರನ್ನು ಕ್ಯಾಲಿಕಟ್ ವಿಶ್ವವಿದ್ಯಾಲಯ ಪ್ರವೇಶಿಸಲು ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದ ಕಾರಣ ವಿಶ್ವವಿದ್ಯಾಲಯದಲ್ಲೇ ವಾಸ್ತವ್ಯ ಹೂಡುವುದಾಗಿ ರಾಜ್ಯಪಾಲರು ಶನಿವಾರ ಮಧ್ಯಾಹ್ನವೇ ತಿಳಿಸಿದ್ದರು.

ಆಕ್ಷೇಪಾರ್ಹ ಹೇಳಿಕೆ ರಾಹುಲ್ ಗಾಂಧಿಗೆ ಸಮನ್ಸ್

ಸುಲ್ತಾನ್‌ಪುರ (ಉತ್ತರಪ್ರದೇಶ): ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ದಾಖಲಿಸಲಾಗಿರುವ ಪ್ರಕರಣಕ್ಕೆ ಸಂಬಂಧಿಸಿ ಜನವರಿ 6ರಂದು ವಿಚಾರಣೆಗೆ ಹಾಜರಾಗುವಂತೆ ಇಲ್ಲಿನ ಜನಪ್ರತಿನಿಧಿಗಳ ನ್ಯಾಯಾಲಯವು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಶನಿವಾರ ಸಮನ್ಸ್ ಜಾರಿ ಮಾಡಿದೆ.

ಬಿಜೆಪಿ ಮುಖಂಡ ವಿಜಯ್ ಮಿಶ್ರಾ ಅವರು 2018ರ ಆಗಸ್ಟ್ 4ರಂದು ರಾಹುಲ್ ಗಾಂಧಿ ಅವರ ವಿರುದ್ಧ ಪ್ರಕರಣ ದಾಖಲಿಸಿದ್ದರು.

ವಿಚಾರಣೆಗೆ ಶನಿವಾರ ಹಾಜರಾಗುವಂತೆ ನ್ಯಾಯಾ ಲಯವು ರಾಹುಲ್ ಗಾಂಧಿ ಅವರಿಗೆ ಈ ಹಿಂದೆ ನಿರ್ದೇಶನವನ್ನು ನೀಡಿತ್ತು.

ಆದರೆ ಅವರು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ಮಿಶ್ರಾ ಪರ ವಕೀಲರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ.

ಉತ್ತರ ಪ್ರದೇಶದ ಹನುಮಗಂಜ್ ನಿವಾಸಿಯಾಗಿರುವ ಮಿಶ್ರಾ ಅವರು ಸಹಕಾರಿ ಬ್ಯಾಂಕ್‌ನ ಮಾಜಿ ಅಧ್ಯಕ್ಷರಾಗಿದ್ದಾರೆ.

ದೇಶದ ಸಣ್ಣ ನಗರಗಳ ಮೂಲಸೌಕರ್ಯಕ್ಕೆ ಒತ್ತು

ನವದೆಹಲಿ(ಪಿಟಿಐ): ಭಾರತವನ್ನು 2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ಸಂಕಲ್ಪವನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಸಣ್ಣ ನಗರಗಳು ಮಹತ್ವದ ಪಾತ್ರವನ್ನು ವಹಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಹೇಳಿದ್ದಾರೆ.

'ವಿಕಸಿತ ಭಾರತ ಸಂಕಲ್ಪ ಯಾತ್ರೆ'ಯ ಅಂಗವಾಗಿ ಫಲಾನುಭವಿಗಳ ಜೊತೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದ ಅವರು, ಸಣ್ಣ ನಗರಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಮತ್ತು ಅಲ್ಲಿನ ಜನರ ಜೀವನ ಮಟ್ಟ ಸುಧಾರಣೆಗಾಗಿ ಕೇಂದ್ರ ಸರ್ಕಾರವು ಕಾರ್ಯಪ್ರವೃತ್ತವಾಗಿದೆ ಎಂದಿದ್ದಾರೆ.

ಆಯುಷ್ಮಾನ್ ಭಾರತ ಆರೋಗ್ಯ ವಿಮೆಯ ಫಲಾನುಭವಿಗಳು ಸೇರಿದಂತೆ ನಗರದಲ್ಲಿ ವಾಸಿಸುವ ಕುಟುಂಬಗಳಿಗಾಗಿ ಕೇಂದ್ರ ಸರ್ಕಾರವು ಹಣ ಉಳಿತಾಯ ಮಾಡಲು ಬದ್ಧವಾಗಿದೆ ಎಂದೂ ವಿವರಿಸಿದ್ದಾರೆ.

'ಹಣವನ್ನು ಉಳಿತಾಯ ಮಾಡಲು ಜನರಿಗೆ ಸಹಾಯ ಮಾಡುವುದು ನಮ್ಮ ಕಾರ್ಯಸೂಚಿ' ಎಂದಿದ್ದಾರೆ.

ಅಭಿವೃದ್ಧಿ ಸಮಿತಿ ಮುಖ್ಯಸ್ಥರಿಂದ ಘೋಷಣೆ

ಅಯೋಧ್ಯೆ ಮಸೀದಿಗೆ ಮುಂದಿನ ವರ್ಷ ಅಡಿಗಲ್ಲು

ಮುಂಬೈ (ಪಿಟಿಐ): ಅಯೋಧ್ಯೆಯಲ್ಲಿ ನಿರ್ಮಾಣವಾಗಲಿರುವ ಮೊಹಮ್ಮದ್ ಬಿನ್ ಅಬ್ದುಲ್ಲಾ ಮಸೀದಿಗೆ ಮುಂದಿನ ವರ್ಷ ಶಂಕುಸ್ಥಾಪನೆ ನೆರವೇರಿಸುವ ಸಾಧ್ಯತೆ ಇದೆ. ಈ ಕಾರ್ಯಕ್ರಮಕ್ಕೆ ಸಂತರು, ಪೀರರು ಮತ್ತು ಧರ್ಮ-ಗುರುಗಳನ್ನು ಆಹ್ವಾನಿಸಲಾಗುವುದು ಎಂದು ಅಯೋಧ್ಯೆ ಮಸೀದಿ ಅಭಿವೃದ್ಧಿ ಸಮಿತಿ ಮುಖ್ಯಸ್ಥ ಹಾಜಿ ಅರ್ಫತ್ ಶೇಖ್ ಶುಕ್ರವಾರ ಮಾಹಿತಿ ನೀಡಿದರು.

ಅಯೋಧ್ಯೆಯಲ್ಲಿ ನಿರ್ಮಾಣ ವಾಗಲಿರುವ ಮಸೀದಿಯ ಪ್ರತಿಕೃತಿ —ಪಿಟಿಐ ಚಿತ್ರ

'ಮಸೀದಿ ನಿರ್ಮಾಣದ ಹೊಣೆಯನ್ನು ಇಂಡೊ-ಇಸ್ಲಾಮಿಕ್ ಕಲ್ಚರಲ್ ಫೌಂಡೇಷನ್ (ಐಐಸಿಎಫ್) ಹೊತ್ತಿದೆ. ನಿರ್ಮಾಣ ಕಾರ್ಯವು ಮುಂದಿನ 5-6 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಕಾಮಗಾರಿ ಪೂರ್ಣಗೊಂಡ ನಂತರ ಉದ್ಘಾಟನೆಗೆ ಮೆಕ್ಕಾ ಮಸೀದಿಯಲ್ಲಿ ನಮಾಜ್‌ನ ನೇತೃತ್ವ ವಹಿಸುವ ಇಮಾಮ್-ಇ-ಹರಮ್ ಅವರೂ ಸೇರಿದಂತೆ ಎಲ್ಲಾ ದೇಶಗಳ ಪ್ರಮುಖ ಧರ್ಮಗುರುಗಳನ್ನು ಆಹ್ವಾನಿಸಲಾಗುವುದು' ಎಂದು ಶೇಖ್ ಹೇಳಿದರು.

'ಅಯೋಧ್ಯೆಯಿಂದ 25 ಕಿ.ಮೀ ದೂರದ ಧನ್ನಿಪುರದಲ್ಲಿ ಮಸೀದಿ ನಿರ್ಮಿಸಲಾಗುವುದು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ರಾಜ್ಯ ಸರ್ಕಾರ ಅದಕ್ಕಾಗಿ ನಿವೇಶನ ನೀಡಿದೆ. ಮಸೀದಿಯು ಐತಿಹಾಸಿಕ ತಾಜ್‌ಮಹಲ್‌ಗಿಂತ ಸುಂದರವಾಗಿರಲಿದೆ' ಎಂದು ತಿಳಿಸಿದರು.

ಮಸೀದಿ ಜೊತೆಗೆ ಕಾಲೇಜು ಮತ್ತು ಎರಡು ಸುಸಜ್ಜಿತ ಆಸ್ಪತ್ರೆಗಳನ್ನು ನಿರ್ಮಿಸಲಾಗುವುದು. ಮಸೀದಿಗೆ ಭೇಟಿ ನೀಡುವ ವಿವಿಧ ಧರ್ಮಗಳಲ್ಲಿ ನಂಬಿಕೆಯುಳ್ಳ ಜನರಿಗಾಗಿ ಶಾಕಾಹಾರಿ ಸಮುದಾಯ ಕೇಂದ್ರ ತೆರೆಯಲಾಗುವುದು ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹೊಸತು	42500-45500
ಹಳತು	42500-45500
ಕೋಕ	15000-27500
ಕಾರ್ಕಳ	
ಹೊಸತು	25000-36500
ಹಳತು	30000-46000
ಪುತ್ತೂರು	
ಕೋಕ	11000-25000
ಹೊಸತು	27000-36500
ಶಿರಸಿ	
ಬೆಟ್ಟೆ	37999-42609
ಬಿಳಿಗೋಟು	34609-36989
ಚಾಲಿ	37129-39399
ಕೆಂಪುಗೋಟು	35899-35899
ರಾಶಿ	45899-47699

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಬೋರೇಗೌಡ. ಬಿ.
ಇವರು ದಿನಾಂಕ: 16.12.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬದವರಿಗೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ. ಗಂಗಾಧರ್ ರವರು
ಜನನ: 30.06.1950 • ಮರಣ: 17.12.2021

ನಿಧನ

ಶ್ರೀ ಎಂ. ಸೋಮಶೇಖರ್
ನಿಧನ: 16-12-2023

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
email: dhclassifieds@deccanherald.co.in
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ | ಬಿಲ್ಡರ್ ಎಸೆನ್ಷಿಯಲ್ | ವೈವಾಹಿಕ

Wanted
REQUIRED NURSES & CARE GIVERS FOR HOMECARE IN BENGALURU
Salary upto 60,000/- per month
+919886187449, 7892996578

WANTED FOR Bank Loan Collection Field Executive 2 Wheeler Must, Good Salary + Attractive Incentive. 10th, 12th Pass/ Any Degree. 8762900934/ 8867443657

Accounts & Finance
WANTED EXPERIENCED Accountant Preferable for Ladies in and Around Vijayanagar, Bangalore. Contact 9591050749, 9632383697, 080-41158379

Engg/ Production Technical
REQD. DEGREE / Diploma Engineers 2- 3 years Industrial Selling Experience. 4 Vacancies Bangalore & Chennai. WhatsApp Resume 9840211599

General

WANTED COMMUNITY worker at Electronic city-Phase 1 for repuated NGO contact immediately: 8310071645

Hospital & Medical Jobs
IK HOSPITAL (Alipur-Gauribidanur) is Recruiting Gynaecologist, Duty Doctors (Female), OT & Staff Nurses. For details contact: 9036064018.

Water Proofing
ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್
General
South
URGENT requirement of plot area of 2600 SFT for my client only in Kuvempu Nagara for construction of residential house. Budget is 2 Crores. Agents excuse. 9363362196.

ರಿಯಲ್ ಎಸ್ಟೇಟ್ ಸೆಲ್ಲಿಂಗ್
Residential/ Commercial
East
KYALASANAHALLI,NEAR EXPRESS Highway, Biocon, 3003sft,East Facing, plot 28 At JP Lakeview,Jigini hobli, Anekal for sale.ph:09484171154/0789 3860416

ವ್ಯಾಪಾರ
Business to Business
Business

ಭವಿಷ್ಯ
Astrology

Matrimonial Bureaus
ಸುಮಧ್ವ ಮ್ಯಾಟ್ರಿಮೋನಿ SUMADHWA MATRIMONY

79759 50334 / 90427 29165

ಪ್ರವಾಸ
Travel
Pilgrimage Tours

ಪ್ರಜಾವಾಣಿ ಕ್ಲಾಸಿಫೈಡ್ಸ್
ರಿಯಲ್ ಎಸ್ಟೇಟ್
www.dhclassifieds.com
+91 9900428036 | +91 9731810277 | +91 9845114560 | +91 9901641752 | +91 9886213331 | 080- 45557163/164

ಟೆಸ್ಟ್ ಕ್ರಿಕೆಟ್: ದೀಪ್ತಿ ಶರ್ಮಾ ಆಲ್‌ರೌಂಡ್ ಆಟ; ಪೂಜಾಗೆ ಮೂರು ವಿಕೆಟ್

ಭಾರತ ಮಹಿಳೆಯರ ಚಾರಿತ್ರಿಕ ಜಯ

ನವಿ ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ಮಹಿಳಾ ಕ್ರಿಕೆಟ್ ತಂಡವು ಇಂಗ್ಲೆಂಡ್ ವಿರುದ್ಧದ ಏಕೈಕ ಟೆಸ್ಟ್‌ನಲ್ಲಿ ಚಾರಿತ್ರಿಕ ಜಯ ಸಾಧಿಸಿತು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಪಂದ್ಯ ಮೂರನೇ ದಿನವಾದ ಶನಿವಾರ ಆತಿಥೇಯ ತಂಡವು 347 ರನ್‌ಗಳಿಂದ ಜಯಿಸಿತು. ಮಹಿಳಾ ಟೆಸ್ಟ್ ಇತಿಹಾಸದಲ್ಲಿಯೇ ಇದು ಅತಿ ದೊಡ್ಡ ಅಂತರದ ಗೆಲುವಿನ ದಾಖಲೆಯಾಗಿದೆ. 1998ರಲ್ಲಿ ಶ್ರೀಲಂಕಾ ತಂಡವು ಪಾಕಿಸ್ತಾನ ಎದುರು 309 ರನ್‌ಗಳಿಂದ ಜಯಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಅಲ್ಲದೇ ಭಾರತ ತವರು ನೆಲದಲ್ಲಿ ಇಂಗ್ಲೆಂಡ್ ವಿರುದ್ಧ ಜಯಿಸಿದ ಮೊದಲ ಪಂದ್ಯವೂ ಹೌದು.

ಮೊದಲ ಇನಿಂಗ್ಸ್‌ನಲ್ಲಿ ಏಳು ರನ್‌ಗಳನ್ನು ಕೊಟ್ಟು ಐದು ವಿಕೆಟ್ ಗಳಿಸಿದ್ದ ಸ್ಪಿನ್ನರ್ ದೀಪ್ತಿ ಶರ್ಮಾ, ಎರಡನೇ ಇನಿಂಗ್ಸ್‌ನಲ್ಲಿಯೂ ನಾಲ್ಕು ವಿಕೆಟ್ ಕಬಳಿಸಿದರು. ಅವರಿಗೆ ಪೂಜಾ (23ಕ್ಕೆ3) ಉತ್ತಮ ಜೊತೆ ನೀಡಿದರು.

ಪ್ರವಾಸಿ ಬಳಗವು ಎರಡನೇ ಇನಿಂಗ್ಸ್‌ನಲ್ಲಿ 479 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿತು ಆದರೆ 27.3 ಓವರ್‌ಗಳಲ್ಲಿ 131 ರನ್ ಗಳಿಸಿ ಆಲೌಟ್ ಆಯಿತು.

ಮೊದಲ ಇನಿಂಗ್ಸ್‌ನಲ್ಲಿ ಭಾರತ ತಂಡವು 428 ರನ್ ಗಳಿಸಿತ್ತು. ಆದರೆ ಎರಡನೇ ದಿನದಾಟದಲ್ಲಿ ಇಂಗ್ಲೆಂಡ್ ತಂಡವು138 ರನ್ ಗಳಿಸಿತ್ತು.

ಇಂಗ್ಲೆಂಡ್ ಎದುರು ಟೆಸ್ಟ್ ಪಂದ್ಯ ಜಯಿಸಿದ ಭಾರತ ತಂಡದ ಆಟಗಾರ್ತಿಯರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಶುಭಾ, ಜೆಮಿಮಾ, ರೇಣುಕಾಸಿಂಗ್ ಅವರಿಗೆ ಇದು ಪದಾರ್ಪಣೆ ಪಂದ್ಯ
- 25 ವರ್ಷಗಳ ಹಿಂದಿನ ದಾಖಲೆ ಮುರಿದ ಭಾರತ ತಂಡ
- ಒಟ್ಟು ಒಂಬತ್ತು ವಿಕೆಟ್ ಗಳಿಸಿದ ದೀಪ್ತಿ ಶರ್ಮಾ

ಭಾರತವು ಎರಡನೇ ಇನಿಂಗ್ಸ್‌ನಲ್ಲಿ ಶುಕ್ರವಾರ ದಿನದಾಟದ ಅಂತ್ಯಕ್ಕೆ 6 ವಿಕೆಟ್‌ಗಳಿಗೆ 186 ರನ್ ಗಳಿಸಿತ್ತು. ಶನಿವಾರ ಬೆಳಿಗ್ಗೆ ಡಿಕ್ಲೇರ್

> ಈ ಐತಿಹಾಸಿಕ ಜಯವು ಭಾರತದ ಆಟಗಾರ್ತಿಯರ ಮನೋಬಲ ಹೆಚ್ಚಿಸಿದೆ. ಗೆಲುವಿನ ರುಚಿ ಹತ್ತಿದೆ. ಮುಂದಿನ ಸಾಧನೆಗಳಿಗೆ ಇದು ನೆರವಾಗಲಿದೆ.
>
> –ಅಮೋಲ್ ಮುಜುಂದಾರ್, ಭಾರತ ತಂಡದ ಮುಖ್ಯ ಕೋಚ್

ಮಾಡಿಕೊಂಡಿತು. ಆತಿಥೇಯ ಸ್ಪಿನ್ನರ್‌ಗಳ ಮುಂದೆ ಊಟದ ವಿರಾಮದ ಹೊತ್ತಿಗೆ ಹೀಥರ್ ನೈಟ್ ಬಳಗವು ಶರಣಾಯಿತು. ನೈಟ್ (21 ರನ್) ಅವರು ತಂಡದ ಗರಿಷ್ಠ ವೈಯಕ್ತಿಕ ಸ್ಕೋರರ್ ಆದರು.

ಈ ಅವಧಿಯಲ್ಲಿ ಭಾರತವು ಎರಡು

> ಟೆಸ್ಟ್ ಕ್ರಿಕೆಟ್‌ನಲ್ಲಿ ನನಗೆ ಅನುಭವದ ಕೊರತೆ ಇದೆ. ಆದರೆ ಈ ಪಂದ್ಯಗಳಲ್ಲಿ ನಿರ್ಧಾರ ಕೈಗೊಳ್ಳಲು ಕೋಚ್ ಅಮೋಲ್ ಅವರ ಮಾರ್ಗದರ್ಶನ ನೆರವಾಯಿತು.
>
> –ಹರ್ಮನ್‌ಪ್ರೀತ್ ಕೌರ್, ಭಾರತ ತಂಡದ ನಾಯಕಿ

ಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಅವಕಾಶಗಳನ್ನು ವ್ಯರ್ಥ ಮಾಡಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 104.3 ಓವರ್‌ಗಳಲ್ಲಿ 428, ಇಂಗ್ಲೆಂಡ್:35.3 ಓವರ್‌ಗಳಲ್ಲಿ 136. ಎರಡನೇ ಇನಿಂಗ್ಸ್: ಭಾರತ: 42 ಓವರ್‌ಗಳಲ್ಲಿ 6ಕ್ಕೆ186 ಡಿಕ್ಲೇರ್ಡ್. ಇಂಗ್ಲೆಂಡ್: 27.3 ಓವರ್‌ಗಳಲ್ಲಿ 131 (ಹೀಥರ್ ನೈಟ್ 21, ಶಾರ್ಲೊಟ್ ಡೀನ್ ಔಟಾಗದೆ 20, ಪೂಜಾ ವಸ್ತ್ರಕರ್ 23ಕ್ಕೆ3, ದೀಪ್ತಿ ಶರ್ಮಾ 32ಕ್ಕೆ4, ರಾಜೇಶ್ವರಿ ಗಾಯಕವಾಡ 20ಕ್ಕೆ2) ಫಲಿತಾಂಶ: ಭಾರತಕ್ಕೆ 347 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ದೀಪ್ತಿ ಶರ್ಮಾ.

ಶುಭಾಗೆ ಗಾಯ

ಈ ಪಂದ್ಯದ ಮೂಲಕ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಮೈಸೂರಿನ ಶುಭಾ ಸತೀಶ್ ಗಾಯಗೊಂಡಿದ್ದಾರೆ. ಅವರ ಕೈಬೆರಳಿನ ಮೂಳೆ ಮುರಿದಿದ್ದು ಪಂದ್ಯದ ಎರಡು ಮತ್ತು ಮೂರನೇ ದಿನದಾಟದಲ್ಲಿ ಅವರು ಕಣಕ್ಕಿಳಿಯಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿ ಅವರು ಅರ್ಧಶತಕ ದಾಖಲಿಸಿದ್ದರು. ಶುಕ್ರವಾರ ದಿನದಾಟಕ್ಕೂ ಮುನ್ನ ಅಭ್ಯಾಸ ನಡೆಸುವ ವೇಳೆ ಅವರ ಕೈಬೆರಳಿಗೆ ಪೆಟ್ಟಾಗಿತ್ತು. ಇದರಿಂದಾಗಿ ಅವರು ಮುಂದಿನ ವಾರ ನಡೆಯಲಿರುವ ಆಸ್ಟ್ರೇಲಿಯಾ ಎದುರಿನ ಏಕೈಕ ಟೆಸ್ಟ್ ಪಂದ್ಯದಲ್ಲಿ ಆಡುವುದು ಅನುಮಾನವಾಗಿದೆ. ಈ ಕುರಿತು ಬಿಸಿಸಿಐ ಇನ್ನೂ ವಿವರಗಳನ್ನು ನೀಡಿಲ್ಲ.

ಕೈಗಳಿಲ್ಲದ ಶೀತಲ್‌ಗೆ ಆರ್ಚರಿ ಸ್ವರ್ಣ

ನವದೆಹಲಿ (ಪಿಟಿಐ): ಕೈಗಳಿಲ್ಲದ ಆರ್ಚರ್ (ಬಿಲ್ಗಾರ್ತಿ) ಶೀತಲ್ ದೇವಿ ಅಮೋಘ ರೀತಿಯಲ್ಲಿ ಯಶಸ್ಸಿನ ಓಟ ಮುಂದುವರಿಸಿ, ಮೊದಲ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನ ಕಾಂಪೌಂಡ್ ಓಪನ್ ವಿಭಾಗದಲ್ಲಿ ಶನಿವಾರ ಚಿನ್ನದ ಪದಕ ಗೆದ್ದು ಸಂಭ್ರಮಿಸಿದರು.

ಇಲ್ಲಿನ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ನಡೆದ ಸ್ಪರ್ಧೆಯಲ್ಲಿ ಶೀತಲ್ ಹಾದಿ ಸುಲಭದ್ದಾಗಿರಲಿಲ್ಲ. ಉತ್ತರ ಪ್ರದೇಶದ ಜ್ಯೋತಿ ಬಲಿಯಾನ್ ಅವರ ನಿಕಟ ಪೈಪೋಟಿಯನ್ನು ಎದುರಿಸಿದ ಶೀತಲ್ 141 ಸ್ಕೋರ್ ನೊಡನೆ ಅಗ್ರಸ್ಥಾನ ಪಡೆದರು. ಜ್ಯೋತಿ (138) ಬೆಳ್ಳಿಯ ಪದಕ ತಮ್ಮದಾಗಿಸಿಕೊಂಡರು. ಹರಿಯಾಣದ ಸರಿತಾ (137) ಅವರಿಗೆ ಕಂಚಿನ ಪದಕ ದಕ್ಕಿತು.

ಕಾಲುಗಳಿಂದ ಬಾಣಗಳ ಪ್ರಯೋಗ ಮಾಡುವ ಜಮ್ಮು ಮತ್ತು ಕಾಶ್ಮೀರದ ಈ ಸ್ಪರ್ಧಿಯಿಂದ ಕೌಶಲದ ಜೊತೆ ಗಟ್ಟಿ ಮನೋಬಲ ಕಂಡುಬಂತು.

ಪ್ಯಾ ರಾ ಲಿ ೦ ಪಿ ಯ ನ್ನ ರಾ ದ ಹರ್ವಿಂದರ್ ಸಿಂಗ್ (ಹರಿಯಾಣ) ಮತ್ತು ವಿವೇಕ್ ಚಿಕರಾ (ಉತ್ತರ ಪ್ರದೇಶ) ರಿಕರ್ವ್ ಆರ್ಚರಿ ವಿಭಾಗದಲ್ಲಿ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿಯ ಪದಕ ಜಯಿಸಿದರು.

ರುದ್ರಾಂಶ್ ಖಂಡೇಲ್ವಾಲ್ (ರಾಜಸ್ತಾನ) ಉತ್ತಮ ಫಾರ್ಮ್ ಮುಂದುವರಿಸಿ ಡಾ.ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆದ ಪುರುಷರ 50 ಮೀ. ಪಿಸ್ತೂಲ್ (ಎಸ್‌ಎಚ್‌1 ವಿಭಾಗ) ಸ್ಪರ್ಧೆಯಲ್ಲಿ 223.4 ಸ್ಕೋರ್‌ನೊಡನೆ ಚಿನ್ನ ಗೆದ್ದರು. ಈ ಸ್ಪರ್ಧೆಯಲ್ಲಿ ವಿಶ್ವದಾಖಲೆ ಹೊಂದಿರುವ ಖಂಡೇಲ್ವಾಲ್, ಹರಿಯಾಣದ ಸಿಂಗರಾಜ್ (216.4) ಅವರನ್ನು ಹಿಂದೆ ಹಾಕಿದರು.

ನವದೆಹಲಿಯಲ್ಲಿ ಶನಿವಾರ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಆರ್ಚರಿ ಸ್ಪರ್ಧಿ ಶೀತಲ್ ದೇವಿ ಅವರು ತಮ್ಮ ಕೋಚ್ ಅಭಿಲಾಷಾ ಚೌಧರಿ ಅವರೊಂದಿಗೆ ಪೋಸ್ ನೀಡಿದರು. ಪಿಟಿಐ ಚಿತ್ರ

ಜೊಕೊವಿಚ್, ಸಬಲೆಂಕಾಗೆ ಐಟಿಎಫ್ ಗೌರವ

ಲಂಡನ್ (ಎಪಿ): ನೊವಾಕ್ ಜೊಕೊವಿಚ್ ಮತ್ತು ಅರಿನಾ ಸಬಲೆಂಕಾ ಅವರಿಗೆ ಅಂತರರಾಷ್ಟ್ರೀಯ ಟೆನಿಸ್ ಫೆಡರೇಶನ್‌ನ 2023ರ ಐಟಿಎಫ್ ವಿಶ್ವ ಚಾಂಪಿಯನ್ ಗೌರವ ನೀಡಲಾಗಿದೆ. ಇವರು ಈ ಋತುವಿನ ಎಲ್ಲಾ ನಾಲ್ಕು ಗ್ರ್ಯಾಂಡ್‌ಸ್ಲಾಮ್ ಪಂದ್ಯಾವಳಿಗಳಲ್ಲಿ ಕನಿಷ್ಠ ಸೆಮಿಫೈನಲ್ ತಲುಪಿದ ಏಕೈಕ ಸಿಂಗಲ್ಸ್ ಆಟಗಾರರು.

ದಾಖಲೆಯ ಎಂಟನೇ ಬಾರಿಗೆ ಎಟಿಪಿ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದ ಜೊಕೊವಿಚ್, ಆಸ್ಟ್ರೇಲಿಯನ್ ಓಪನ್, ಫ್ರೆಂಚ್ ಓಪನ್ ಮತ್ತು ಯುಎಸ್ ಓಪನ್ ಪ್ರಶಸ್ತಿ ಗೆಲ್ಲುವ ಮೂಲಕ ಪ್ರಶಸ್ತಿಗಳ ಸಂಖ್ಯೆಯನ್ನು ದಾಖಲೆ 24ಕ್ಕೆ ಏರಿಸಿದ್ದಾರೆ.

ಮೊದಲ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಆಸ್ಟ್ರೇಲಿಯನ್ ಓಪನ್ ಗೆದ್ದ ನಂತರ ಸಬಲೆಂಕಾ ಅವರು ಪ್ರಥಮ ಬಾರಿಗೆ ಈ ಗೌರವ ಪಡೆದರು.

ಹರಿಯಾಣಕ್ಕೆ ವಿಜಯ್ ಹಜಾರೆ ಟ್ರೋಫಿ

ರಾಜ್‌ಕೋಟ್ (ಪಿಟಿಐ): ವೇಗಿ ಹರ್ಷಲ್ ಪಟೇಲ್ ಅವರ ನಿಖರ ದಾಳಿಯ ನೆರವಿನಿಂದ ಹರಿಯಾಣ ತಂಡವು ಶನಿವಾರ 30 ರನ್‌ಗಳಿಂದ ರಾಜಸ್ಥಾನ ವಿರುದ್ಧ ಗೆದ್ದು ವಿಜಯ್ ಹಜಾರೆ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

288 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ರಾಜಸ್ಥಾನ ತಂಡದ ಆರಂಭಿಕ ಬ್ಯಾಟರ್ ಅಭಿಜಿತ್ ತೋಮರ್ (106; 129ಎ) ಶತಕ ಬಾರಿಸಿದರು. ಕುನಾಲಸಿಂಗ್ (79; 65ಎ) ಅರ್ಧಶತಕ ಗಳಿಸಿದರು. ಆದರೂ ತಂಡವು 48 ಓವರ್‌ಗಳಲ್ಲಿ 257 ರನ್ ಗಳಿಸಿ ಸೋತಿತು. ಹರಿಯಾಣ ತಂಡದ ಹರ್ಷಲ್ ಮತ್ತು ಸುಮಿತ್ ಕುಮಾರ್ ತಲಾ ಮೂರು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಹರಿಯಾಣ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 287 (ಅಂಕಿತ್ ಕುಮಾರ್ 88, ಅಶೋಕ್ ಮನೇರಿಯಾ 70, ರೋಹಿತ್ ಪ್ರಮೋದ್ ಶರ್ಮಾ 20, ನಿಶಾಂತ್ ಸಿಂಧು 29, ರಾಹುಲ್ ತೆವಾಟಿಯಾ 24, ಸುಮಿತ್ ಕುಮಾರ್ ಔಟಾಗದೆ 28, ಅರಾಫತ್ ಖಾನ್ 59ಕ್ಕೆ2, ಅನಿಕೇತ್ ಚೌಧರಿ 49ಕ್ಕೆ4) ರಾಜಸ್ಥಾನ: 48 ಓವರ್‌ಗಳಲ್ಲಿ 257 (ಅಭಿಜಿತ್ ತೋಮರ್ 106, ಕರಣ್ ಲಂಬಾ 20, ಕುನಾಲ್ ಸಿಂಗ್ ರಾಥೋಡ್ 79, ಅನ್ಷುಲ್ ಕಾಂಬೋಜ್ 34ಕ್ಕೆ2, ಸುಮಿತ್ ಕುಮಾರ್ 34ಕ್ಕೆ3, ಹರ್ಷಲ್ ಪಟೇಲ್ 47ಕ್ಕೆ3, ರಾಹುಲ್ ತೆವಾಟಿಯಾ 50ಕ್ಕೆ2) ಫಲಿತಾಂಶ: ಹರಿಯಾಣ ತಂಡಕ್ಕೆ 30 ರನ್‌ಗಳ ಜಯ ಮತ್ತು ಪ್ರಶಸ್ತಿ: ಪಂದ್ಯ ಹಾಗೂ ಸರಣಿಶ್ರೇಷ್ಠ: ಸುಮಿತ್ ಕುಮಾರ್

ಮೊದಲ ಟೆಸ್ಟ್: ಆಸ್ಟ್ರೇಲಿಯಾ ಹಿಡಿತ

ಪರ್ತ್ (ಎಪಿ): ಎರಡನೇ ಇನಿಂಗ್ಸ್‌ನಲ್ಲಿ ಎರಡು ವಿಕೆಟ್‌ಗಳನ್ನು ಬೇಗ ಕಳೆದುಕೊಂಡರೂ, ಆಸ್ಟ್ರೇಲಿಯಾ ತಂಡದವರು ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ ಪಾಕಿಸ್ತಾನ ತಂಡದ ವಿರುದ್ಧ ಬಿಗಿ ಹಿಡಿತ ಸಾಧಿಸುವಲ್ಲಿ ಯಸ್ವಿಯಾಗಿದ್ದಾರೆ. ಮೊದಲ ಇನಿಂಗ್ಸ್‌ನಲ್ಲಿ 216 ರನ್‌ಗಳ ಮುನ್ನಡೆ ಪಡೆದ ಆತಿಥೇಯರು ದಿನದ ಕೊನೆಗೆ ಆ ಮುನ್ನಡೆಯನ್ನು 300 ರನ್‌ಗಳಿಗೆ ಹೆಚ್ಚಿಸಿದರು.

ದಿನದಾಟ ಮುಗಿದಾಗ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 84 ರನ್ ಗಳಿಸಿದೆ. ಇದಕ್ಕೆ ಮೊದಲು ಆಸ್ಟ್ರೇಲಿಯಾದ 487 ರನ್‌ಗಳ ಮೊದಲ ಇನಿಂಗ್ಸ್‌ಗೆ ಉತ್ತರವಾಗಿ ಪಾಕಿಸ್ತಾನ 271 ರನ್‌ಗಳಿಗೆ ಆಲೌಟ್ ಆಯಿತು. ಆದರೆ ಆಸ್ಟ್ರೇಲಿಯಾ ಫಾಲೋಆನ್ ಹೇರದಿರಲು ನಿರ್ಧರಿಸಿತು. ಅನುಭವಿ ಸ್ಟೀವನ್ ಸ್ಮಿತ್ 43 ಮತ್ತು ಉಸ್ಮಾನ್ ಖ್ವಾಜಾ 34 ರನ್ ಗಳಿಸಿ ಆಟ ಕಾದಿರಿಸಿದರು. ಶಹೀನ್ ಶಾ ಅಫ್ರಿದಿ ಬೌಲಿಂಗ್‌ನಲ್ಲಿ ಸ್ಟೀವ್ ಸ್ಮಿತ್ ಅವರ ಭುಜಕ್ಕೆ ಚೆಂಡು ಬಡಿದ ಕಾರಣ ಅವರಿಗೆ ಮೈದಾನದಲ್ಲಿ ತುರ್ತು ಚಿಕಿತ್ಸೆ ನೀಡಬೇಕಾಯಿತು. ಪಾಕಿಸ್ತಾನ, 1995ರಿಂದೀಚೆ ಆಸ್ಟ್ರೇಲಿಯಾ ನೆಲದಲ್ಲಿ ಒಂದೂ ಟೆಸ್ಟ್ ಗೆದ್ದಿಲ್ಲ.

ಸ್ಕೋರುಗಳು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 487, ಪಾಕಿಸ್ತಾನ: 101.5 ಓವರುಗಳಲ್ಲಿ 271 (ಇಮಾಮ್ ಉಲ್ ಹಕ್ 62, ಸಾದ್ ಶಕೀಲ್ 28, ಆಘಾ ಸಲ್ಮಾನ್ ಔಟಾಗದೇ 28; ಕಮಿನ್ಸ್ 35ಕ್ಕೆ2, ನೇಥನ್ ಲಯನ್ 66ಕ್ಕೆ3); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 33 ಓವರುಗಳಲ್ಲಿ 2 ವಿಕೆಟ್‌ಗೆ 84 (ಖ್ವಾಜಾ ಔಟಾಗದೇ 34, ಸ್ಮಿತ್ ಔಟಾಗದೇ 43; ಖುರ್ರಂ ಶೆಹಜಾದ್ 19ಕ್ಕೆ2)

ಕನ್ನಡಿಗ ರಾಹುಲ್‌ಗೆ ನಾಯಕತ್ವದ 'ಪರೀಕ್ಷೆ'

ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ಮೊದಲ ಏಕದಿನ ಪಂದ್ಯ ಇಂದು

ಜೋಹಾನ್ಸ್‌ಬರ್ಗ್ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ದಕ್ಷಿಣ ಆಫ್ರಿಕಾ ವಿರುದ್ಧ ನಡೆಯಲಿರುವ ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಈ ಸರಣಿಯ ಮೊದಲ ಪಂದ್ಯವು ಭಾನುವಾರ ವಾಂಡರರ್ಸ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಹೋದ ತಿಂಗಳು ನಡೆದ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ನಂತರ ತಂಡವು ಆಡುತ್ತಿರುವ ಮೊದಲ ಏಕದಿನ ಪಂದ್ಯ ಇದಾಗಿದೆ.

ಅಹಮದಾಬಾದ್‌ನಲ್ಲಿ ನಡೆದಿದ್ದ ವಿಶ್ವಕಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ಎದುರು ಭಾರತ ಸೋತಿತ್ತು. ಅದರ ನಂತರ ರಾಹುಲ್ ಕೂಡ ವಿಶ್ರಾಂತಿಗೆ ತೆರಳಿದ್ದರು. ಆ ಟೂರ್ನಿಯಲ್ಲಿ ರಾಹುಲ್ ವಿಕೆಟ್‌ಕೀಪಿಂಗ್‌ನಲ್ಲಿ ಉತ್ತಮ ಸಾಧನೆ ಮಾಡಿದ್ದರು. ಅಲ್ಲದೇ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ನಲ್ಲಿಯೂ ಮಿಂಚಿದ್ದರು.

ಮುಂದಿನ ವರ್ಷ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿ ನಡೆಯಲಿದೆ. ಆದ್ದರಿಂದ ಈಗ ಏಕದಿನ ಕ್ರಿಕೆಟ್ ಸರಣಿ ಆಯೋಜಿಸಿರುವುದರ ಬಗ್ಗೆ ಟೀಕೆಗಳೂ ವ್ಯಕ್ತವಾಗಿವೆ. ಆದರೆ 2025ರಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುವ ತಂಡ ಕಟ್ಟಲು ಈಗಿನಿಂದಲೇ ತಯಾರಿ ಮಾಡಲು ಈ ಸರಣಿ ಮುಖ್ಯ ಎಂದೂ ಹೇಳಲಾಗಿದೆ.

ತಮ್ಮ ವೃತ್ತಿಜೀವನದ ಸಂಧ್ಯಾಕಾಲದಲ್ಲಿರುವ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಸೀಮಿತ ಓವರ್‌ಗಳ ಕ್ರಿಕೆಟ್‌ನಿಂದ

ಕೆ.ಎಲ್. ರಾಹುಲ್

ನಿಧಾನಕ್ಕೆ ನೇಪಥ್ಯಕ್ಕೆ ಸರಿಯುತ್ತಿದ್ದಾರೆ. ಆದ್ದರಿಂದಲೇ ಅವರು ಕಳೆದ ಎರಡು ಟಿ20 ಸರಣಿಯಲ್ಲಿ ಆಡಿರಲಿಲ್ಲ. ಈ ಏಕದಿನ ಸರಣಿಯಲ್ಲಿ ಆಡುತ್ತಿಲ್ಲ. ಭವಿಷ್ಯದಲ್ಲಿ ಅವರ ಸ್ಥಾನಗಳನ್ನು ತುಂಬುವ ಸಮರ್ಥ ಯುವ ಆಟಗಾರರ ಹುಡುಕಾಟವೂ ಈಗ ಆರಂಭವಾಗಿದೆ.

ರಾಹುಲ್, ಶ್ರೇಯಸ್ ಅಯ್ಯರ್, ಋತುರಾಜ್ ಗಾಯಕವಾಡ್ ಸೇರಿದಂತೆ ಕೆಲವು ಆಟಗಾರರು ಈ ಪೈಪೋಟಿಯಲ್ಲಿದ್ದಾರೆ. ಈ ಸರಣಿಯಲ್ಲಿ ಭಾರತವು ಜಯಿಸಿದರೆ, ರಾಹುಲ್ ಭವಿಷ್ಯದ ನಾಯಕನಾಗುವ ಅವಕಾಶದ ಬಾಗಿಲು ತೆರೆಯಲಿದೆ. ಈ ಹಿಂದೆಯೂ ಕೆಲವು ಪಂದ್ಯಗಳಲ್ಲಿ ನಾಯಕತ್ವ ವಹಿಸಿದ ಅನುಭವ ಅವರಿಗೆ ಇದೆ.

ಈಚೆಗೆ ಮುಗಿದ ದಕ್ಷಿಣ ಆಫ್ರಿಕಾ ಎದುರಿನ ಟಿ20 ಸರಣಿಯಲ್ಲಿ ಭಾರತವು 1–1ರ ಸಮಬಲ ಸಾಧಿಸಿತ್ತು. ರಿಂಕು ಸಿಂಗ್ ತಮ್ಮ ಅಬ್ಬರದ ಬ್ಯಾಟಿಂಗ್ ಮೂಲಕ ಗಮನ ಸೆಳೆದಿದ್ದರು. ಅವರು ಮತ್ತು ತಿಲಕ್ ವರ್ಮಾ ಈ ಸರಣಿಯಲ್ಲಿಯೂ ಸ್ಥಾನ ಪಡೆದಿದ್ದಾರೆ. ಕೇರಳದ ಸಂಜು ಸ್ಯಾಮ್ಸನ್ ಎರಡನೇ ವಿಕೆಟ್‌ಕೀಪರ್ ಆಗಿದ್ದಾರೆ.

ಆತಿಥೇಯ ತಂಡವು ತವರಿನಲ್ಲಿ ಸರಣಿ ಜಯದ ಛಲದಲ್ಲಿದೆ. ಏಡನ್ ಮರ್ಕರಂ ನಾಯಕತ್ವದ ತಂಡದಲ್ಲಿ ಸ್ಪಿನ್ನರ್ ಕೇಶವ್ ಮಹಾರಾಜ, ತಬ್ರೇಜ್ ಶಂಶಿ, ಬ್ಯಾಟರ್‌ಗಳಾದ ಹೆನ್ರಿಚ್ ಕ್ಲಾಸನ್, ರೀಜಾ ಹೆನ್ರಿಕ್ಸ್ ಮತ್ತು ಡೇವಿಡ್ ಮಿಲ್ಲರ್ ಅವರು ಪಂದ್ಯ ಗೆಲ್ಲಿಸಬಲ್ಲ ಸಮರ್ಥ ಆಟಗಾರರಾಗಿದ್ದಾರೆ. ಈ ತಂಡದಲ್ಲಿಯೂ ಕೆಲವು ಯುವ ಆಟಗಾರರು ತಮ್ಮ ಪ್ರತಿಭೆ ಮೆರಯಲು ಸಿದ್ಧರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಮೊಹಮ್ಮದ್ ಶಮಿ ಅಲಭ್ಯ

ಮುಂಬೈ (ಪಿಟಿಐ): ವೇಗಿ ಮೊಹಮ್ಮದ್ ಶಮಿ ಮತ್ತು ದೀಪಕ್ ಚಾಹರ್ ಅವರು ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಸರಣಿಗೆ ಅಲಭ್ಯರಾಗಿದ್ದಾರೆ.

ಸರಣಿಯಲ್ಲಿ ಎರಡು ಟೆಸ್ಟ್ ಪಂದ್ಯಗಳು ನಡೆಯಲಿವೆ. ಪಾದದ ಗಾಯಕ್ಕೆ ಚಿಕಿತ್ಸೆ ಪಡೆಯುತ್ತಿರುವ ಶಮಿ, ವಿಶ್ರಾಂತಿಯಲ್ಲಿದ್ದಾರೆ. ಅವರು ಈಗಲೇ ಆಡಲು ಫಿಟ್ ಆಗಿಲ್ಲವೆಂದು ತಂಡದ ವೈದ್ಯರು ಹೇಳಿದ್ದಾರೆ. ಹೋದ ತಿಂಗಳು ಮುಗಿದ ವಿಶ್ವಕಪ್ ಟೂರ್ನಿಯಲ್ಲಿ ಶಮಿ ಅಮೋಘ ಬೌಲಿಂಗ್ ಮಾಡಿದ್ದರು.

ಹಿಂದೆ ಸರಿದ ದೀಪಕ್: ಮಧ್ಯಮವೇಗಿ ದೀಪಕ್ ಚಾಹರ್ ಅವರು ಏಕದಿನ ಸರಣಿಗೆ ಅಲಭ್ಯರಾಗಿದ್ದಾರೆ.

ತಮ್ಮ ಕುಟುಂಬದಲ್ಲಿ ತುರ್ತು ವೈದ್ಯಕೀಯ ಪರಿಸ್ಥಿತಿ ಇರುವುದರಿಂದ ತಾವು ಸರಣಿಯಲ್ಲಿ ಆಡುವುದಿಲ್ಲವೆಂದು ದೀಪಕ್ ಬಿಸಿಸಿಐಗೆ ಮಾಹಿತಿ ನೀಡಿದ್ದಾರೆ.

ಅವರ ಬದಲಿಗೆ ಆಕಾಶ್ ದೀಪ್ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

ಕೋಚ್ ದ್ರಾವಿಡ್ ಟೆಸ್ಟ್ ಸಿದ್ಧತೆ

ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ನೆರವು ಸಿಬ್ಬಂದಿಯು ಟೆಸ್ಟ್ ಸರಣಿಯಲ್ಲಿ ಆಡುವ ತಂಡದೊಂದಿಗೆ ಕಾರ್ಯನಿರ್ವಹಿಸುವರು. ಏಕದಿನ ಸರಣಿಯಲ್ಲಿ ಆಡುವ ತಂಡಕ್ಕೆ ಅವರ ಮಾರ್ಗದರ್ಶನ ಲಭ್ಯವಿಲ್ಲ.

ದ್ರಾವಿಡ್, ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್, ಬೌಲಿಂಗ್ ಕೋಚ್ ಪಾರಸ್ ಮಾಂಬ್ರೆ ಹಾಗೂ ಫೀಲ್ಡಿಂಗ್ ಕೋಚ್ ಟಿ ದಿಲೀಪ್ ಅವರು ಟೆಸ್ಟ್ ತಂಡಕ್ಕೆ ಮಾರ್ಗದರ್ಶನ ನೀಡುವರು.

ಏಕದಿನ ತಂಡಕ್ಕೆ 'ಎ' ತಂಡದ ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್, ಬೌಲಿಂಗ್ ಕೋಚ್ ರಾಜೀವ್ ದತ್ತಾ ಮತ್ತು ಫೀಲ್ಡಿಂಗ್ ತರಬೇತುದಾರ ಅಜಯ್ ರಾತ್ರಾ ಕಾರ್ಯನಿರ್ವಹಿಸುವರು.

ಬ್ಯಾಡ್ಮಿಂಟನ್: ಫೈನಲ್‌ಗೆ ಆಯುಷ್

ಕಟಕ್ (ಪಿಟಿಐ): ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಆಯುಷ್ ಶೆಟ್ಟಿ ಶನಿವಾರ ನಡೆದ ರೋಚಕ ಪಂದ್ಯದಲ್ಲಿ ಇಂಡೊನೇಷ್ಯಾದ ಅಲ್ವಿ ಫರ್ಹಾನ್ ಅವರನ್ನು ಸೋಲಿಸಿ ಒಡಿಶಾ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ತಲುಪಿದರು. ಅವರು ಫೈನಲ್‌ನಲ್ಲಿ ಸ್ವದೇಶದ ಸತೀಶ್ ಕುಮಾರ್ ಕರುಣಾಕರನ್ ಅವರನ್ನು ಎದುರಿಸಲಿದ್ದಾರೆ.

73 ನಿಮಿಷಗಳ ಪಂದ್ಯದಲ್ಲಿ ಆಯುಷ್ ಹಿನ್ನಡೆಯಿಂದ ಚೇತರಿಸಿಕೊಂಡು 19–21, 21–14, 22–20 ರಲ್ಲಿ ಅಲ್ವಿ ಅವರನ್ನು ಹಿಮ್ಮೆಟ್ಟಿಸಿದರು. ಮೊದಲ ಸಲ ಸೂಪರ್ 100 ಟೂರ್ನಿಯೊಂದರ ಫೈನಲ್ ತಲುಪಿದಂತಾಯಿತು. ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು ಸಾಣೂರಿನ ಆಟಗಾರ ಆಯುಷ್ ಕೆಲ ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

22 ವರ್ಷದ ಸತೀಶ್ 21–14, 21–14ರಲ್ಲಿ ಸ್ವದೇಶದ ಆಟಗಾರ, ಹಾಲಿ ಚಾಂಪಿಯನ್ ಕಿರಣ್ ಜಾರ್ಜ್ ಅವರನ್ನು ಸೋಲಿಸಿದರು. ಈ ಸೆಮಿಫೈನಲ್ ಪಂದ್ಯ 41 ನಿಮಿಷ ನಡೆಯಿತು.

ಮೆಸ್ಸಿ ಜರ್ಸಿಗೆ ದಾಖಲೆ ಮೊತ್ತ

ನ್ಯೂಯಾರ್ಕ್ (ಎಪಿ): ಕಳೆದ ವರ್ಷ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿ ವೇಳೆ ಅರ್ಜೆಂಟೀನಾದ ಸೂಪರ್‌ಸ್ಟಾರ್ ಲಯೊನೆಲ್ ಮೆಸ್ಸಿ ಧರಿಸಿದ್ದ ಆರು ಜರ್ಸಿಗಳನ್ನು ಹರಾಜು ಮಾಡಲಾಗಿದ್ದು, ಅವು ಗುರುವಾರ ₹64.77 ಕೋಟಿ (7.8 ದಶಲಕ್ಷ ಡಾಲರ್) ಮೊತ್ತಕ್ಕೆ ಮಾರಾಟವಾಗಿವೆ ಎಂದು ಹರಾಜು ಸಂಸ್ಥೆ 'ಸೊದೆಬಿ' ತಿಳಿಸಿದೆ.

36 ವರ್ಷದ ಮೆಸ್ಸಿ ನಾಯಕತ್ವದ ಅರ್ಜೆಂಟೀನಾ ತಂಡ ವಿಶ್ವಕಪ್ ಫೈನಲ್‌ನಲ್ಲಿ ಫ್ರಾನ್ಸ್ ತಂಡವನ್ನು ಸೋಲಿಸಿ ಮೂರನೇ ಬಾರಿ ಚಾಂಪಿಯನ್ ಆಗಿತ್ತು.

ಇದು ಈ ವರ್ಷ ಕ್ರೀಡಾ ಸ್ಮರಣಿಕೆ ಹರಾಜಿನಲ್ಲಿ ಗಳಿಸಿದ ಅತಿ ಹೆಚ್ಚಿನ ಮೊತ್ತವಾಗಿದೆ ಎಂದು ಸೊದೆಬಿ ವಿವರ ನೀಡಿದೆ. ಆದರೆ ಬಿಡ್‌ನಲ್ಲಿ ವಿಜೇತನಾದ ವ್ಯಕ್ತಿಯ ಮಾಹಿತಿಯನ್ನು ಬಿಡುಗಡೆ ಮಾಡಿಲ್ಲ.

ರಣಜಿ: ಮೈಸೂರು, ಹುಬ್ಬಳ್ಳಿಯಲ್ಲಿ ಪಂದ್ಯ

ಬೆಂಗಳೂರು: ಕರ್ನಾಟಕವು ಜನವರಿ 5ರಿಂದ ಆರಂಭವಾಗಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಪಂಜಾಬ್ ತಂಡದ ಎದುರು ಆಡಲಿದೆ. ಮೊದಲ ಪಂದ್ಯವು ಬೆಂಗಳೂರಿನಲ್ಲಿ ಪಂಜಾಬ್ ವಿರುದ್ಧ ಆಡಲಿದೆ. ಮೈಸೂರು ಮತ್ತು ಹುಬ್ಬಳ್ಳಿಯಲ್ಲಿಯೂ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ. ಕಳೆದ ಋತುವಿನಲ್ಲಿ ಬೆಂಗಳೂರಿನಲ್ಲಿ ಮಾತ್ರ ಪಂದ್ಯಗಳು ನಡೆದಿದ್ದವು. ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್‌ನಲ್ಲಿ ಶನಿವಾರ ಪ್ರಕಟವಾಗಿರುವ ವೇಳಾಪಟ್ಟಿಯ ಪ್ರಕಾರ ಕರ್ನಾಟಕ ತಂಡವು ಲೀಗ್ ಹಂತದಲ್ಲಿ ಏಳು ಪಂದ್ಯಗಳನ್ನು ಆಡಲಿದೆ.

ಕರ್ನಾಟಕದ ಪಂದ್ಯಗಳು

ಎದುರಾಳಿ	ದಿನಾಂಕ	ತಾಣ
ಪಂಜಾಬ್	ಜ.5-8	ಬೆಂಗಳೂರು
ಗುಜರಾತ್	ಜ.12-15	ಅಹಮದಾಬಾದ್
ಗೋವಾ	ಜ.19-22	ಮೈಸೂರು
ತ್ರಿಪುರಾ	ಜ. 26-29	ಅಗರ್ತಲಾ
ರೈಲ್ವೆಸ್	ಫೆ.2-5	ಸೂರತ್
ತಮಿಳುನಾಡು	ಫೆ.9-12	ಚೆನ್ನೈ
ಚಂಡೀಗಡ	ಫೆ.16-19	ಹುಬ್ಬಳ್ಳಿ

ಪುಣೇರಿ ಪಲ್ಟನ್‌ಗೆ ಸುಲಭ ಜಯ

ಪುಣೆ: ರೈಡರ್ ಮೋಹಿತ್ ಗೋಯತ್ ಮತ್ತು ನಾಯಕ ಅಸ್ಲಂ ಮುಸ್ತಾಫಾ ಅವರ ಸರ್ವಾಂಗೀಣ ಆಟದ ಪ್ರದರ್ಶನದಿಂದ ಆತಿಥೇಯ ಪುಣೇರಿ ಪಲ್ಟನ್ ತಂಡ, ಪ್ರೊ ಕಬಡ್ಡಿ ಲೀಗ್‌ನ (ಪಿಕೆಎಲ್) ಏಕಪಕ್ಷೀಯ ಪಂದ್ಯದಲ್ಲಿ ಶನಿವಾರ ಬೆಂಗಾಲ್ ವಾರಿಯರ್ಸ್ ತಂಡವನ್ನು 30 ಪಾಯಿಂಟ್‌ಗಳಿದ (49–19) ಸೋಲಿಸಿ ಜಯದ ಹಳಿಗೆ ಮರಳಿತು.

ಇದು ಬೆಂಗಾಲ್ ವಾರಿಯರ್ಸ್‌ಗೆ ಮೊದಲ ಸೋಲು.

ಬಾಲೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ನಡೆದ ಪಂದ್ಯದಲ್ಲಿ ರೈಡರ್ ಗೋಯತ್ 9 ರೈಡ್ ಪಾಯಿಂಟ್ ಮತ್ತು 3 ಟ್ಯಾಕಲ್‌ಗಳ ನೆರವಿನಿಂದ 12 ಪಾಯಿಂಟ್ಸ್ ಕಲೆಹಾಕಿದರು. ಅಸ್ಲಂ ಐದು ರೈಡ್ ಪಾಯಿಂಟ್ ಮತ್ತು ಐದು ಕ್ಯಾಚಿಂಗ್‌ಗಳೊಂದಿಗೆ ಮಿಂಚಿದರು.

ಮೊಹಮ್ಮದ್‌ರೇಜಾ ಚಿಯೆನ್ನಾ ಮತ್ತು ಗೌರವ್ ಖಾತ್ರಿ ಅವರನ್ನೊಳಗೊಂಡ ರಕ್ಷಣಾ ವಿಭಾಗ ಬಲಿಷ್ಠವಾಗಿದ್ದು ಇಬ್ಬರೂ ಒಟ್ಟು 10 ಪಾಯಿಂಟ್‌ಗಳಿಗೆ ಕಾರಣರಾದರು. ಒಟ್ಟಾರೆ 24 ಟ್ಯಾಕಲ್ ಪಾಯಿಂಟ್ಸ್ ಗಳಿಸಿದ್ದು, ಪಿಕೆಲ್‌ನಲ್ಲಿ ದಾಖಲೆ ಎನಿಸಿತು. ಪುಣೆ ತಂಡಕ್ಕೆ ನಾಲ್ಕು ಪಂದ್ಯಗಳಲ್ಲಿ ಇದು ಮೂರನೇ ಗೆಲುವಾಗಿದೆ.

ವಾರಿಯರ್ಸ್ ಪರ ಪ್ರಮುಖ ರೈಡರ್ ಮಣಿಂದರ್ ಸಿಂಗ್ ಏಳು ಪಾಯಿಂಟ್ಸ್ ಗಳಿಸಿದರು. ಅಗ್ರಸ್ಥಾನದಲ್ಲಿರುವ ಬೆಂಗಾಲ್ ವಾರಿಯರ್ಸ್‌ಗೆ ಆಡಿದ ಐದು ಪಂದ್ಯಗಳಲ್ಲಿ ಮೂರು ಗೆದ್ದು, ಈ ಪಂದ್ಯ ಸೋತಿದೆ. ಒಂದು ಪಂದ್ಯ (ಜೈಪುರ ಪಿಂಕ್ ಪ್ಯಾಂಥರ್ಸ್ ವಿರುದ್ಧ) ಟೈ ಮಾಡಿಕೊಂಡಿದೆ.

ದಬಾಂಗ್ ಡೆಲ್ಲಿಗೆ ಜಯ: ದಬಾಂಗ್ ಡೆಲ್ಲಿ ಕೆ.ಸಿ. ತಂಡ ಇನ್ನೊಂದು ಪಂದ್ಯದಲ್ಲಿ 51–40 ಪಾಯಿಂಟ್‌ಗಳಿಂದ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿತು. ವಿಜೇತರ ಪರ ರೈಡರ್‌ಗಳಾದ ಆಶು ಮಲಿಕ್ ಮತ್ತು ನಾಯಕ ನವೀನ್ ಕುಮಾರ್ ಕ್ರಮವಾಗಿ 16 ಮತ್ತು 14 ಪಾಯಿಂಟ್ಸ್ ಗಳಿಸಿದರು.

ಟೈಟನ್ಸ್ ಪರ ನಾಯಕ ಪವನ್ ಶೆರಾವತ್ 14 ರೈಡಿಂಗ್ ಪಾಯಿಂಟ್ಸ್ ಕಲೆಹಾಕಿದರು. ಆದರೆ ಅವರಿಗೆ ಉತ್ತಮ ಬೆಂಬಲ ದೊರೆಯಲಿಲ್ಲ.

ತೆಲುಗು ಟೈಟನ್ಸ್ ಆಡಿದ ಎಲ್ಲಾ ಐದು ಪಂದ್ಯಗಳಲ್ಲಿ ಸೋತು ಕೊನೆಯ ಸ್ಥಾನದಲ್ಲಿದೆ.

ಭಾನುವಾರದ ಪಂದ್ಯಗಳು: ಪಟ್ನಾ ಪೈರೆಟ್ಸ್– ಜೈಪುರ ಪಿಂಕ್‌ಪ್ಯಾಂಥರ್ಸ್ (ರಾತ್ರಿ 8.00 ಗಂಟೆ), ಯು ಮುಂಬಾ–ತಮಿಳು ತಲೈವಾಸ್ (9.00)

ಐಡಬ್ಲ್ಯುಎಲ್: ತವರಿನಲ್ಲಿ ಗೆದ್ದ ಕಿಕ್‌ಸ್ಟಾರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಶನಿವಾರ ನಡೆದ ಇಂಡಿಯನ್ ವುಮೆನ್ಸ್ ಲೀಗ್ (ಐಡಬ್ಲ್ಯುಎಲ್) ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಅಶೋಕನಗರದ ಕರ್ನಾಟಕ ಫುಟ್‌ಬಾಲ್ ಕ್ರೀಡಾಂಗಣ ದಲ್ಲಿ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು 3–1ರಿಂದ ಈಸ್ಟ್ ಬೆಂಗಾಲ್ ತಂಡ ವಿರುದ್ಧ ಗೆದ್ದಿತು.

ಕಿಕ್ ಸ್ಟಾರ್ಟ್ ತಂಡದ ಕರಿಷ್ಮಾ ಶಿರ್ವೊಳ್ಕರ್ (41ನೇ ನಿ, 69ನಿ, 90ನಿ) ಹ್ಯಾಟ್ರಿಕ್ ಸಾಧಿಸಿದರು. ಈಸ್ಟ್ ಬೆಂಗಾಲ್ ತಂಡದ ಸುಲಂಜನಾ ರೌಲ್ (86ನಿ) ಗೋಲು ಗಳಿಸಿದರು.

ಐಎಸ್‌ಎಲ್: ಜಾವಿ ಗೋಲು, ಬಿಎಫ್‌ಸಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆನಾಲ್ಟಿಯಲ್ಲಿ ಗೋಲು ಗಳಿಸಿದ ಜಾವಿ ಹರ್ನಾಂಡೇಜ್ ಕಾಲ್ಚಳಕದಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಜೆಮ್ಶೆಡ್‌ಪುರ್ ಫುಟ್‌ಬಾಲ್ ಕ್ಲಬ್ ಎದುರು ಜಯಿಸಿತು.

ಕಂಠೀರವ ಕ್ರೀಡಾಂಗಣ ದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಜಾವಿ 44ನೇ ನಿಮಿಷದಲ್ಲಿ ಗಳಿಸಿದ ಗೋಲಿನಿಂದ ಬಿಎಫ್‌ಸಿ ತಂಡವು 1–0ಯಿಂದ ಗೆದ್ದಿತು.

ಬಿಎಫ್‌ಸಿಯು 4–3–1–2ರ ಲೈನ್ ಅಪ್‌ನೊಂದಿಗೆ ಕಣಕ್ಕಿಳಿಯಿತು. ಶಿವಶಕ್ತಿ ನಾರಾಯಣನ್ ಮತ್ತು ಸುನೀಲ್ ಚೆಟ್ರಿ ಅವರು ಮುಂಚೂಣಿಯಲ್ಲಿದ್ದರು. ಮಿಡ್‌ಫೀಲ್ಡರ್ ಜಾವಿ ಆರಂಭದಿಂದಲೂ ಚುರುಕಾಗಿ ಆಡಿದರು.

ಬೆಂಗಳೂರು ಎಫ್‌ಸಿ ತಂಡದ ಜಾವಿ ಹರ್ನಾಂಡೇಜ್ ಗೋಲು ಗಳಿಸುವತ್ತ ಸಾಗಿದರು –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

ಬಿಎಫ್‌ಸಿಯ ರಕ್ಷಣಾಪಡೆಯು ಮುಖ್ಯ ಕೋಚ್ ಜೆರಾರ್ಡ್ ಝರ್‌ಗೋಜಾ ಅವರ ಯೋಜನೆಯನ್ನು ಅಚ್ಚುಕಟ್ಟಾಗಿ ಜಾರಿಗೊಳಿಸಿತು.

ಸೆಂಟರ್ ಬ್ಯಾಕ್‌ನಲ್ಲಿದ್ದ ಅಲೆಕ್ಸಾಂಡರ್ ಜೊವಾನೊವಿಚ್ ಮತ್ತು ಸ್ಲಾವಕೊ ದಾಮಜನೋವಿಚ್ ಲಾಂಗ್ ಪಾಸ್‌ಗಳ ಮೂಲಕ ಎದುರಾಳಿಗಳ ಅವಕಾಶಗಳನ್ನು ತಪ್ಪಿಸಿದರು. ನಾರಾಯಣನ್ ಮತ್ತು ಚೆಟ್ರಿ ಚುರುಕಾದ ಮತ್ತು ಚುಟುಕಾದ ಪಾಸ್‌ಗಳ ಮೂಲಕ ಒತ್ತಡ ಹೇರಿದರು.

ಜೆಎಫ್‌ಸಿ ತಂಡವು ಬಹುತೇಕ ಎಲ್ಲ ಹಂತಗಳಲ್ಲಿಯೂ ಬಿಎಫ್‌ಸಿಯ ವೇಗಕ್ಕೆ ಸರಿಸಾಟಿಯಾಗಿ ಆಡುವಲ್ಲಿ ಎಡವಿತು.

ಬಿಎಫ್‌ಸಿ ತಂಡಕ್ಕೆ ಇದು ಈ ಋತುವಿನಲ್ಲಿ ಎರಡನೇ ಜಯವಾಗಿದೆ. ಇದುವರೆಗೆ ಒಟ್ಟು 11 ಪಂದ್ಯ ಆಡಿರುವ ತಂಡವು ಐದರಲ್ಲಿ ಸೋತು, ನಾಲ್ಕರಲ್ಲಿ ಡ್ರಾ ಮಾಡಿಕೊಂಡಿದೆ.

ಪಕ್ಷೇತರ ಅಭ್ಯರ್ಥಿಯಾಗಿ ಪುಟಿನ್ ಕಣಕ್ಕೆ?

ಮಾಸ್ಕೊ (ರಾಯಿಟರ್ಸ್): ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಮುಂದಿನ ವರ್ಷ ಮಾರ್ಚ್ ತಿಂಗಳಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದಾರೆ ಎಂದು ಅವರ ಬೆಂಬಲಿಗರ ಹೇಳಿಕೆಯನ್ನು ಉಲ್ಲೇಖಿಸಿ ರಷ್ಯಾ ಮಾಧ್ಯಮಗಳು ಶನಿವಾರ ವರದಿ ಮಾಡಿವೆ.

ಸುಮಾರು 700 ರಾಜಕಾರಣಿಗಳು, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದ ಗಣ್ಯರನ್ನು ಒಳಗೊಂಡ ಗುಂಪು ಶನಿವಾರ ಮಾಸ್ಕೊದಲ್ಲಿ ಸಭೆ ನಡೆಸಿ, ಪುಟಿನ್ ಅವರನ್ನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಸುವ ತೀರ್ಮಾನವನ್ನು ಸರ್ವಾನುಮತದಿಂದ ಬೆಂಬಲಿಸಿತು ಎಂದು ವರದಿಯಲ್ಲಿ ಹೇಳಲಾಗಿದೆ.

'ಆಡಳಿತಾರೂಢ ಯುನೈಟೆಡ್ ರಷ್ಯಾ (ಯುಆರ್) ಪಕ್ಷದ ಸಂಪೂರ್ಣ ಬೆಂಬಲವಿದ್ದರೂ, ಪಕ್ಷೇತರ ಅಭ್ಯರ್ಥಿಯಾಗಿ ಪುಟಿನ್ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ' ಎಂದು ಪಕ್ಷದ ಹಿರಿಯ ನಾಯಕ ಆ್ಯಂಡ್ರೆ ಟುರ್ಚಾಂಕ್ ತಿಳಿಸಿದ್ದಾರೆ.

ಪುಟಿನ್, ಕಳೆದ ಎರಡು ದಶಕಗಳಿಂದ ಅಧ್ಯಕ್ಷ ಅಥವಾ ಪ್ರಧಾನಿಯಾಗಿ ಅಧಿಕಾರದಲ್ಲಿದ್ದಾರೆ.

ಗಾಜಾ: ಇಂಟರ್‌ನೆಟ್, ಮೊಬೈಲ್ ಸಂಪರ್ಕ ನಿರ್ಬಂಧ

ರಫಾ (ಗಾಜಾ ಪಟ್ಟಿ) (ಎಪಿ): ಇಸ್ರೇಲ್ ಸೇನೆ ಮುತ್ತಿಗೆ ಹಾಕಿರುವ ಗಾಜಾ ಪಟ್ಟಿಯಲ್ಲಿ ಮೊಬೈಲ್ ಮತ್ತು ಇಂಟರ್‌ನೆಟ್ ಸಂಪರ್ಕವನ್ನು ದೀರ್ಘಾವಧಿಗೆ ನಿರ್ಬಂಧಿಸಿರುವುದರಿಂದ ಯುದ್ಧಪೀಡಿತ ಪ್ರದೇಶದಲ್ಲಿ ಜನರ ಪರಿಸ್ಥಿತಿ ಶನಿವಾರ ಮತ್ತಷ್ಟು ಬಿಗಡಾಯಿಸುವಂತೆ ಮಾಡಿತು.

ಯುದ್ಧಪೀಡಿತ ಗಾಜಾ ಪಟ್ಟಿಯಲ್ಲಿ ಪರಿಹಾರ ಕಾರ್ಯಕ್ಕೆ ಅಡ್ಡಿಯಾಗಿದ್ದು, ಆಹಾರ ಪದಾರ್ಥಗಳು ಸಿಗದೆ ಜನರು ಹಸಿವಿನಿಂದ ಬಳಲುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಲಾರಂಭಿಸಿದೆ ಎಂದು ವಿಶ್ವಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ದಕ್ಷಿಣದಲ್ಲಿ ದೂರಸಂಪರ್ಕ ಜಾಲದ ಮಾರ್ಗಗಳಿಗೆ ಹಾನಿಯಾದ ಕಾರಣ ಗಾಜಾದಲ್ಲಿ ಸಂವಹನಕ್ಕೆ ತೀವ್ರ ಅಡಚಣೆಯಾಗಿದೆ ಎಂದು ವಿಶ್ವಸಂಸ್ಥೆಯ ಮಾನವೀಯ ವ್ಯವಹಾರಗಳ ವಿಭಾಗ ಹೇಳಿದೆ.

ಇಂಟರ್‌ನೆಟ್ ಮತ್ತು ದೂರವಾಣಿ ಸಂಪರ್ಕಗಳು ಗುರುವಾರ ಸಂಜೆಯೇ ಸ್ಥಗಿತಗೊಂಡವು. ಶನಿವಾರ ಬೆಳಿಗ್ಗೆಯಾದರೂ ಅವು ಸಕ್ರಿಯಗೊಳ್ಳಲಿಲ್ಲ ಎಂದು ಇಂಟರ್‌ನೆಟ್ ಬಳಕೆದಾರರು ಹೇಳಿದ್ದಾರೆ.

ಗಾಜಾಪಟ್ಟಿಯ ರಫಾದ ಖಾನ್ ಯೂನಿಸ್ ನಗರದ ಮೇಲೆ ಇಸ್ರೇಲ್ ಸೇನೆ ಶನಿವಾರ ನಡೆಸಿದ ಬಾಂಬ್ ದಾಳಿಯ ವೇಳೆ ದಟ್ಟ ಹೊಗೆ ಕವಿದಿತ್ತು – ಎಎಫ್‌ಪಿ ಚಿತ್ರ

ಯುದ್ಧ ಆರಂಭದಿಂದ ಈವರೆಗೆ ಇಂಟರ್‌ನೆಟ್ ಸಂಪರ್ಕವನ್ನು ಇಷ್ಟೊಂದು ದೀರ್ಘಾವಧಿಗೆ ನಿರ್ಬಂಧಿಸಿರುವುದು ಇದೇ ಮೊದಲು ಎಂದು ಸ್ಥಳೀಯರು ದೂರಿದ್ದಾರೆ.

ಧ್ವಂಸಗೊಂಡ ಗಾಜಾ ನಗರ ಮತ್ತು ನಗರ ಸಮೀಪದ ನಿರಾಶ್ರಿತರ ಜಬಾಲಿಯಾ ಶಿಬಿರದ ಮೇಲೆ ಇಸ್ರೇಲ್ ಪಡೆಗಳು ಶುಕ್ರವಾರ ರಾತ್ರಿಯಿಂದ ಬಾಂಬ್ ದಾಳಿ ನಡೆಸಿವೆ.

ಟ್ಯಾಂಕ್‌ಗಳಿಂದ ಶೆಲ್ ದಾಳಿ ನಡೆದ ಹಾಗೂ ಗುಂಡಿನ ಚಕಮಕಿಯ ಶಬ್ದ ಕೇಳಿಸಿತು ಎಂದು ಸ್ಥಳೀಯ ನಿವಾಸಿಗಳು ಹೇಳಿದ್ದಾರೆ.

ಮೂವರು ಒತ್ತೆಯಾಳುಗಳ ಹತ್ಯೆ

ಭೂ ದಾಳಿಯ ವೇಳೆ ತಪ್ಪು ಗ್ರಹಿಕೆಯಿಂದ ಮೂವರು ಇಸ್ರೇಲಿ ಒತ್ತೆಯಾಳುಗಳ ಮೇಲೆ ಶುಕ್ರವಾರ ಯೋಧರು ಗುಂಡು ಹಾರಿಸಿ ಹತ್ಯೆ ಮಾಡಿದ್ದಾರೆ ಎಂದು ಇಸ್ರೇಲ್ ಸೇನೆಯ ಪ್ರಧಾನ ವಕ್ತಾರ ರಿಯರ್ ಆಡಮ್ ಡೇನಿಯಲ್ ಹಗಾರಿ ತಿಳಿಸಿದ್ದಾರೆ.

ಇತ್ತೀಚೆಗೆ ಇಸ್ರೇಲ್ ಸೈನಿಕರು ಮತ್ತು ಹಮಾಸ್ ಬಂಡುಕೋರರ ನಡುವೆ ತೀವ್ರ ಹೋರಾಟ ನಡೆಯುತ್ತಿರುವ ಗಾಜಾ ನಗರದ ಶಿಜೈಯಾಹ್ ಪ್ರದೇಶದಲ್ಲಿ ಇಸ್ರೇಲಿ ಪಡೆಗಳು ತಪ್ಪಾಗಿ ಮೂವರು ಇಸ್ರೇಲಿ ಒತ್ತೆಯಾಳುಗಳ ಮೇಲೆ ಗುಂಡು ಹಾರಿಸಿದರು. ಮೃತಪಟ್ಟ ಮೂವರಲ್ಲಿ 20 ವರ್ಷದ ಒಬ್ಬ ಯುವಕ ಸೇರಿದ್ದಾನೆ ಎಂದು ಅವರು ಹೇಳಿದ್ದಾರೆ.

ಇದೇ ವೇಳೆ ನೂರಾರು ಮಂದಿ ಇಸ್ರೇಲ್ ನಾಗರಿಕರು, ಒತ್ತೆಯಾಳುಗಳ ಸುರಕ್ಷಿತ ವಾಪಸಾತಿಗೆ ಒತ್ತಾಯಿಸಿ ಟೆಲ್ ಅವಿವ್‌ನಲ್ಲಿ ಪ್ರಮುಖ ಹೆದ್ದಾರಿಯಲ್ಲಿ ಸಂಚಾರ ತಡೆದು, ಪ್ರತಿಭಟನೆ ನಡೆಸಿದರು.

ಪ್ಯಾಲೆಸ್ಟೀನ್ ಪತ್ರಕರ್ತ ಸಾವು: ಇಸ್ರೇಲ್ ಸೇನೆ ನಡೆಸಿದ ವೈಮಾನಿಕ ಮತ್ತು ಡ್ರೋನ್ ದಾಳಿಯಲ್ಲಿ ಪ್ಯಾಲೆಸ್ಟೀನ್‌ನ ಒಬ್ಬ ಪತ್ರಕರ್ತರು ಸತ್ತಿದ್ದು, ಮತ್ತೊಬ್ಬ ಪತ್ರಕರ್ತ ಗಾಯಗೊಂಡಿದ್ದಾರೆ. ಈ ಇಬ್ಬರೂ ಅಲ್ ಜಝೀರಾ ಟೆಲಿವಿಷನ್ ನೆಟ್‌ವರ್ಕ್‌ನಲ್ಲಿ ಕೆಲಸ ಮಾಡುತ್ತಿದ್ದರು.

ಪಾಕ್ ಸಾರ್ವತ್ರಿಕ ಚುನಾವಣೆ ಫೆ.8ಕ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಚುನಾವಣಾ ಆಯೋಗವು ಬಹು ನಿರೀಕ್ಷಿತ ಸಾರ್ವತ್ರಿಕ ಚುನಾವಣೆಯ ದಿನಾಂಕವನ್ನು ಫೆಬ್ರುವರಿ 8ಕ್ಕೆ ನಿಗದಿಪಡಿಸಿ ವೇಳಾಪಟ್ಟಿ ಪ್ರಕಟಿಸಿದೆ.

ಚುನಾವಣಾ ವಿಳಂಬಕ್ಕೆ ಕಾರಣವಾಗಿದ್ದ ಲಾಹೋರ್ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದು ಮಾಡಿದ ಕೆಲವೇ ಗಂಟೆಗಳಲ್ಲಿ ಆಯೋಗ ಶುಕ್ರವಾರ ರಾತ್ರಿ ಈ ನಿರ್ಧಾರ ಪ್ರಕಟಿಸಿದೆ.

ಚುನಾವಣೆಯ ಮೇಲ್ವಿಚಾರಣೆಗೆ ಸರ್ಕಾರಿ ಅಧಿಕಾರಿಗಳನ್ನು ನೇಮಕ ಮಾಡಿದ್ದ ಆದೇಶವನ್ನು ಲಾಹೋರ್ ಹೈಕೋರ್ಟ್ ಅಮಾನತುಗೊಳಿಸಿತ್ತು. ಬಂಧಿತ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಈ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಚುನಾವಣಾ ಆಯೋಗ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

ಭಾರತಕ್ಕೆ ತಪ್ಪಿದ ಕಂಚು

ಕ್ವಾಲಾಲಂಪುರ (ಪಿಟಿಐ): ಭಾರತ ತಂಡ, ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಕಂಚಿನ ಪದಕಕ್ಕಾಗಿ ಶನಿವಾರ ನಡೆದ ಪಂದ್ಯದಲ್ಲಿ 1-3 ಗೋಲುಗಳಿಂದ ಸ್ಪೇನ್‌ಗೆ ಮಣಿಯಿತು.

ನಿಕೋಲಸ್ ಅಲ್ವಾರೆಜ್ (25 ಮತ್ತು 51ನೇ ನಿಮಿಷ) ಮತ್ತು ಪೆಟ್ಟಾಮೆ ಪಾವ್ (40ನೇ ನಿಮಿಷ) ಗಳಿಸಿದ ಗೋಲುಗಳ ನೆರವಿನಿಂದ ಸ್ಪೇನ್ ಕಂಚಿನ ಪದಕ ಜಯಿಸಿತು. ಭಾರತದ ಸುನಿಲ್ ಜೋಜೊ (28ನೇ ನಿಮಿಷ) ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಿದರು. ಗುಂಪು ಹಂತದಲ್ಲಿ ಯುರೋಪಿಯನ್ ತಂಡದ ವಿರುದ್ಧ 1-4 ಗೋಲುಗಳಿಂದ ಸೋತಿದ್ದ ಭಾರತವು ಈ ಆವೃತ್ತಿಯ ಪಂದ್ಯಾವಳಿಯಲ್ಲಿ ಸ್ಪೇನ್ ವಿರುದ್ಧ ಎರಡನೇ ಸೋಲು ಅನುಭವಿಸಿದೆ. ಭುವನೇಶ್ವರದಲ್ಲಿ ನಡೆದ 2021 ರ ಪಂದ್ಯಾವಳಿಯ ಆವೃತ್ತಿಯಲ್ಲೂ ಭಾರತ ನಾಲ್ಕನೇ ಸ್ಥಾನ ಪಡೆದಿತ್ತು.